ಬುಧವಾರ, ಮೇ 13, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸಾಯಿ ಸುದರ್ಶನ್ ಮಿಂಚು



ಗುಜರಾತ್ ಟೈಟನ್ಸ್ ತಂಡದ ಎಡಗೈ ಬ್ಯಾಟರ್ ಸಾಯಿ ಸುದರ್ಶನ್ ಅವರು ಮಂಗಳವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಅರ್ಧಶತಕ (61; 44ಎ, 4x5, 6x2) ಗಳಿಸಿ ಮಿಂಚಿದರು

ಪ್ರತಿಭಟನೆ



ನಾಲ್ಕು ಕಾರ್ಮಿಕ ಸಂಹಿತೆಗಳ ಜಾರಿಗೆ ಕೇಂದ್ರ ಸರ್ಕಾರ ಅಧಿಸೂಚನೆ ಹೊರಡಿಸಿರುವುದನ್ನು ಖಂಡಿಸಿ ಸಿಐಟಿಯು ವತಿಯಿಂದ ಕಲಬುರಗಿಯಲ್ಲಿ ಪ್ರತಿಭಟನೆ ನಡೆಯಿತು

ಕಾವೇರಿ 5ನೇ ಹಂತ: ನೀರಿದ್ದರೂ ಬಳಸುವವರಿಲ್ಲ

110 ಹಳ್ಳಿಗಳಲ್ಲಿ ಜಾಲ ಬಲಪಡಿಸಿದರೂ ಸಂಪರ್ಕ ಪಡೆದವರು ಕಡಿಮೆ • ಜಲಮಂಡಳಿಯ ಜಾಗೃತಿಗೂ ಸ್ಪಂದಿಸದ ಜನ

• ಉಮೇಶ ಭಟ್ಟ ಪಿ.ಎಚ್

ಬೆಂಗಳೂರು: ನಗರದ ಹೊರ ವಲಯದಲ್ಲಿರುವ 110 ಹಳ್ಳಿಗಳಿಗೆ ಕುಡಿಯುವ ನೀರು ಪೂರೈಸಲು ರೂಪಿಸಿರುವ ಕಾವೇರಿ 5ನೇ ಹಂತದ ಯೋಜನೆಗೆ ಸುಮಾರು ಒಂದೂವರೆ ವರ್ಷದ ಹಿಂದೆಯೇ ಚಾಲನೆ ನೀಡಲಾಗಿದೆ. ಆದರೆ, ನೀರಿನ ಸಂಪರ್ಕ ಪಡೆಯಲು ಸಾರ್ವಜನಿಕರು ಮುಂದೆ ಬರುತ್ತಿಲ್ಲ.

18 ವರ್ಷದ ಹಿಂದೆಯೇ ಈ ಹಳ್ಳಿಗಳನ್ನು ಜಿಬಿಎ (ಹಿಂದಿನ ಬಿಬಿಎಂಪಿ) ವ್ಯಾಪ್ತಿಗೆ ಸೇರಿಸಿ ಕಾವೇರಿ ನೀರು ಪೂರೈಸಲು ಅನುಮತಿ ನೀಡಲಾಗಿದೆ. 5ನೇ ಹಂತದ ಯೋಜನೆಯಡಿ ಒಟ್ಟು 2.50 ಲಕ್ಷ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲು ಜಲಮಂಡಳಿ ಉದ್ದೇಶಿಸಿತ್ತು. ಆದರೆ, ಇದುವರೆಗೆ 90 ಸಾವಿರ ಮನೆಗಳಿಗೆ ಸಂಪರ್ಕ ಕಲ್ಪಿಸಿದ್ದು ಶೇ 35ರಷ್ಟು ಗುರಿ ಸಾಧನೆಯಾಗಿದೆ.

ಈ ಯೋಜನೆಯಡಿ ನಿತ್ಯ 775 ಎಂಎಲ್‌ಡಿ ನೀರು ಬಳಕೆಗೆ ಅವಕಾಶವಿದೆ. ಆದರೆ, 250 ಎಂಎಲ್‌ಡಿ ನೀರು ಮಾತ್ರ ಬಳಕೆಯಾಗುತ್ತಿದೆ. ಶೇ 90ಕ್ಕೂ ಅಧಿಕ ಪೈಪ್‌ಲೈನ್ ಕಾಮಗಾರಿ ಮುಗಿದಿದ್ದು, ಕೆಲವು ಕಡೆ ಮೂರು ತಿಂಗಳ ಹಿಂದೆ ನೀರು ಪೂರೈಕೆ ಶುರುವಾಗಿದೆ. ಇನ್ನಷ್ಟು ಕಡೆ ಆರಂಭವಾಗಬೇಕಿದೆ. ಕೆಲವು ಹಳ್ಳಿಗಳಲ್ಲಿ ಪೈಪ್‌ಲೈನ್ ಅಳವಡಿಸಿ ನೀರು ಹರಿಸುವ ಪ್ರಯೋಗ ಮುಂದುವರಿದಿದೆ.

ಜನರ ಹಿಂದೇಟು: ಮಹದೇವಪುರ, ಬೆಂಗಳೂರು ದಕ್ಷಿಣ, ಯಶವಂತಪುರ, ಬ್ಯಾಟರಾಯನಪುರ, ದಾಸರಹಳ್ಳಿ, ಯಲಹಂಕ, ಕೃಷ್ಣರಾಜಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕೆಲವು ಅಪ್ಪಟ ಹಳ್ಳಿಗಳಿವೆ. ಅವುಗಳ ಸುತ್ತಮುತ್ತ ಬೆಳೆದಿರುವ ಬಡಾವಣೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳನ್ನು ಗುರಿಯಾಗಿಟ್ಟುಕೊಂಡು ಸಂಪರ್ಕ ನೀಡಲಾಗುತ್ತಿದೆ.

ಬಹುತೇಕ ಕಡೆ ಮನೆ ಮುಂದೆಯೇ ಕಾವೇರಿ ನೀರಿನ ಸಂಪರ್ಕ ಹೋಗಿದೆ. ಸಂಪರ್ಕ ಪಡೆದ ಮನೆಗಳನ್ನು ಬಿಟ್ಟರೆ ಇತರೆಡೆ ನೀರು ಹರಿಯದಂತೆ ಮುಚ್ಚಳಗಳನ್ನು ಹಾಕಲಾಗಿದೆ. ಅನಧಿಕೃತವಾಗಿ ಬಳಸುವವರ ಮೇಲೂ ನಿಗಾ ವಹಿಸಲಾಗುತ್ತಿದೆ. ಎಲ್ಲಿಯೂ ಕೊಳವೆ ಬಾವಿ ನೀರು ಬಂದ್ ಮಾಡಿಲ್ಲ. ಆದರೆ, ಕಾವೇರಿ ನೀರಿನ ಸಂಪರ್ಕ ಪಡೆಯದೇ ಇದ್ದರೆ, ಮುಂದೆ ಕೊಳವೆ ಬಾವಿಯ ನೀರನ್ನು ಸ್ಥಗಿತಗೊಳಿಸುವ ಎಚ್ಚರಿಕೆ ನೀಡಲಾಗಿದೆ.

ಮಂಡಳಿಯು ನಿರಂತರವಾಗಿ ಪ್ರಯತ್ನ ಮಾಡಿದರೂ, ಜನರು ಹೊಸ ಸಂಪರ್ಕ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಇದಕ್ಕಾಗಿ ಒಂದೆರಡು ಲಕ್ಷ ಹೊಂದಿಸುವುದು ಹೇಗೆ ಎನ್ನುವ ಆತಂಕ ಹಳ್ಳಿಯ ಜನರನ್ನು ಕಾಡುತ್ತಿದೆ.

ಈ ಹಿಂದೆ ನೀಡಿದ್ದ ಬೋರ್‌ವೆಲ್ ವ್ಯವಸ್ಥೆಯಿದ್ದು, ವಾರದಲ್ಲಿ ಎರಡು ದಿನ ನೀರು ಬರುತ್ತಿದೆ. ಬಂದಾಗ ತುಂಬಿಸಿ ಇಟ್ಟುಕೊಳ್ಳೋಣ. ಅಗತ್ಯ ಬಿದ್ದರೆ ಟ್ಯಾಂಕರ್ ನೀರು ಅವಲಂಬಿಸಿದರಾಯಿತು ಎನ್ನುವ ಮನೋಭಾವ ಗೊಲ್ಲರಹಟ್ಟಿ, ಹೆರೋಹಳ್ಳಿ, ಸಿಂಗಸಂದ್ರ, ಬೇಗೂರು, ಹೊಂಗಸಂದ್ರ, ಮಂಗಮ್ಮನಪಾಳ್ಯ, ರೂಪೇನ ಅಗ್ರಹಾರ, ಕೆಂಪಾಪುರ ಸೇರಿದಂತೆ ಹಲವು ಗ್ರಾಮಗಳ ಜನರಲ್ಲಿ ಇದೆ.

‘ಜಲಮಂಡಳಿ ಪಶ್ಚಿಮ ವಲಯ ವ್ಯಾಪ್ತಿಯ ಅಂದ್ರಹಳ್ಳಿಯಲ್ಲಿ ಹೊಸ ಪೈಪ್‌ಲೈನ್ ಹಾಕಿ ವರ್ಷದ ನಂತರ ಪಿವಿಸಿ ಪೈಪ್ ಅಳವಡಿಸಲಾಗಿದೆ. ಎರಡು ಬಾರಿ ಪೈಪ್ ಹಾಕಿ ಖರ್ಚು ಮಾಡಲಾಗುತ್ತಿದೆ. ಇದರಿಂದ ನಮಗಿನ್ನೂ ಕಾವೇರಿ ನೀರು ಬಂದಿಲ್ಲ’ ಎಂದು ಸ್ಥಳೀಯರು ಆರೋಪಿಸಿದರು.

5 ರಿಂದ 10 ಮನೆಗಳಿರುವ ಸಣ್ಣ ಅಪಾರ್ಟ್‌ಮೆಂಟ್‌ನವರು ಬೋರ್‌ವೆಲ್ ನೀರಿನ ಮೇಲೆ ಅವಲಂಬಿತರಾಗಿದ್ದಾರೆ. ಅಲ್ಲದೆ ಸಂಚಾರಿ ಕಾವೇರಿ ನೀರಿನ ಟ್ಯಾಂಕರ್ ಸೌಲಭ್ಯ ಪಡೆಯುತ್ತಿದ್ದಾರೆ.

ಕೆಲವೆಡೆ ಸುಧಾರಣೆ: ಮಹದೇವಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವರ್ತೂರು, ಬೆಳ್ಳಂದೂರು, ವೈಟ್‌ಫೀಲ್ಡ್, ದಾಸರಹಳ್ಳಿ ಕ್ಷೇತ್ರ ವ್ಯಾಪ್ತಿಯ ಶೆಟ್ಟಿಹಳ್ಳಿ, ಸಿಡೇದಹಳ್ಳಿ, ಲಕ್ಷ್ಮೀಪುರ ಭಾಗದಲ್ಲಿ ನೀರಿನ ಸಂಪರ್ಕ ಪಡೆಯಲಾಗಿದೆ.

ಕೆಂಗೇರಿ, ಉಲ್ಲಾಳ ಇತ್ಯಾದಿ ಕಡೆ ಯೋಜನೆ ಜಾರಿಯಾದ ಮೇಲೆ ನೀರಿನ ಸಮಸ್ಯೆ ಕಡಿಮೆಯಾಗಿದೆ. ಬ್ಯಾಡರಹಳ್ಳಿ, ಗೊಲ್ಲರಹಟ್ಟಿ ಭಾಗದಲ್ಲಿ ನೀರಿನ ಸಂಪರ್ಕ ಪಡೆಯುವಂತೆ ಮನವೊಲಿಸುವ ಕಾರ್ಯ ನಡೆದಿದೆ.

‘ನಾವು 18 ವರ್ಷದಿಂದ ಇಲ್ಲಿ ನೆಲಸಿದ್ದರೂ, ಒಂದೂವರೆ ವರ್ಷದಿಂದ ಮಾತ್ರ ಕಾವೇರಿ ನೀರು ಸಿಗುತ್ತಿದೆ. ಕಳೆದ ಬೇಸಿಗೆಯಲ್ಲಿ ಸಮಸ್ಯೆಯಾಗಿರಲಿಲ್ಲ. ವಾರದಲ್ಲಿ ಮೂರು ದಿನವಾದರೂ ನೀರು ಸಿಗುತ್ತಿದೆ ಎನ್ನುವ ಸಮಾಧಾನವಿದೆ’ ಎಂದು ಹೆಸರಘಟ್ಟ ಸಮೀಪದ ಸಿಡೇದಹಳ್ಳಿ ನಿವಾಸಿ ಪಿ.ಆರ್.ಅನನ್ಯ ತಿಳಿಸಿದರು.

ಜಲಜಾಗೃತಿ ನಿರಂತರ: ಶುದ್ಧ ಕಾವೇರಿ ನೀರು ಬಳಕೆಯಿಂದ ಆಗುವ ಲಾಭ, ನೀರಿನ ಸಂಪರ್ಕ ಪಡೆಯುವುದರಿಂದ ಆಗುವ ಆರ್ಥಿಕ ಬದಲಾವಣೆ, ಇಎಂಐ ಸೌಲಭ್ಯ ಇತ್ಯಾದಿಗಳ ಬಗ್ಗೆ 100ಕ್ಕೂ ಹೆಚ್ಚು ಹಳ್ಳಿಗಳಲ್ಲಿ ವಿಶೇಷ ಶಿಬಿರಗಳನ್ನು ಆಯೋಜಿಸಿ, ಜನರಿಗೆ ಮನವರಿಕೆ ಮಾಡಿಕೊಡಲಾಗುತ್ತಿದೆ.

ಹೆಚ್ಚಾಗಿ ಸಂಪರ್ಕ ಬಾಕಿ ಇರುವ ಪ್ರದೇಶಗಳನ್ನು ಗುರುತಿಸಿ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಅಂದ್ರಹಳ್ಳಿ ಭಾಗದಲ್ಲಿ ಸಂಪರ್ಕ ಪ್ರಮಾಣ ಕಡಿಮೆ ಇರುವುದರಿಂದ ಅಲ್ಲಿಯೂ ಕಚೇರಿ ಸ್ಥಾಪಿಸಲಾಗಿದೆ.

‘ಜಲಮಂಡಳಿ ಅಧ್ಯಕ್ಷರು ಬೇಸಿಗೆಯಲ್ಲೇ ಹೆಚ್ಚು ಸಂಪರ್ಕ ನೀಡುವಂತೆ ಸೂಚಿಸಿದ್ದರು. ಆದಷ್ಟು ಬೇಗನೇ ಯೋಜನೆ ಪೂರ್ಣಗೊಳಿಸುವ ಗುರಿ ಇಟ್ಟುಕೊಂಡಿದ್ದರೂ ಜನರ ಮನವೊಲಿಸುವುದು ಕಷ್ಟ. ಉಚಿತ ನೀರಿನ ಸೌಲಭ್ಯ ಪಡೆಯುತ್ತಿರುವವರು, ಮನೆಯಲ್ಲಿ ಬೋರ್‌ವೆಲ್ ಇದ್ದವರು ಸಂಪರ್ಕ ಪಡೆಯಲು ಒಪ್ಪುತ್ತಿಲ್ಲ’ ಎಂದು ಮಂಡಳಿಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.



ದಾಸರಹಳ್ಳಿ ಕ್ಷೇತ್ರದ ಆರು ಹಳ್ಳಿಗಳಲ್ಲಿ ಸಂಪರ್ಕ ನೀಡಿದ್ದು ಹೆಚ್ಚಿನ ಜನ ಕಾವೇರಿ ನೀರು ಬಳಸುತ್ತಿದ್ದಾರೆ. ನಮಗೆ ಮೂರು ವರ್ಷದ ಹಿಂದೆ ನಿತ್ಯ 100 ದೂರು ನೀರಿಗಾಗಿ ಬರುತ್ತಿದ್ದವು. ಈ ಬೇಸಿಗೆಯಲ್ಲಿ ಅದು ಬಹುತೇಕ ಕಡಿಮೆಯಾಗಿದೆ
ಮುನಿರಾಜು, ದಾಸರಹಳ್ಳಿ ಕ್ಷೇತ್ರದ ಶಾಸಕ



ಅಂದ್ರಹಳ್ಳಿಯಲ್ಲಿ ಕಾವೇರಿ 5ನೇ ಹಂತದ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ
ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.



ಕಾವೇರಿ ನೀರನ್ನು ಈವರೆಗೂ ಕುಡಿದಿರಲಿಲ್ಲ. ಮೂರು ತಿಂಗಳ ಹಿಂದೆ ಸಂಪರ್ಕ ಕೊಟ್ಟು ಶನಿವಾರ, ಭಾನುವಾರ ನೀರು ಕೊಡುತ್ತಿದ್ದಾರೆ. ಮೀಟರ್ ಅಳವಡಿಸಿಲ್ಲ. ಜಲಮಂಡಳಿ ಶುಲ್ಕ ಪಾವತಿಸಲು ಸಿದ್ಧರಿದ್ದೇವೆ
ಅನಿಲ್, ಖಾಸಗಿ ಉದ್ಯೋಗಿ ಅಂದ್ರಹಳ್ಳಿ



2 ವರ್ಷದಿಂದ ನೀರಿನ ಸಮಸ್ಯೆ ಹೆಚ್ಚಾಗಿತ್ತು. ಈಗ ಶೇ 80ರಷ್ಟು ಮಂದಿ ಕಾವೇರಿ ಸಂಪರ್ಕ ಪಡೆದಿದ್ದಾರೆ. ಉಳಿದವರಿಗೂ ಸಂಪರ್ಕ ಪಡೆಯಲು ಮನವಿ ಮಾಡಲಾಗುತ್ತಿದೆ.
ಮಲ್ಲೇಶ, ಮುಖಂಡ, ಬ್ಯಾಡರಹಳ್ಳಿ



110 ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ನೀಡುವ ಯೋಜನೆ ಪ್ರಗತಿಯಲ್ಲಿದೆ. ಸಂಪರ್ಕ ಪಡೆಯಲು ಹಿಂದೇಟು ಹಾಕುತ್ತಿರುವವರ ಮನವೊಲಿಸಲು ಮಂಡಳಿ ಹಲವು ಯೋಜನೆಗಳನ್ನು ಪ್ರಕಟಿಸಿದೆ
ಡಾ.ರಾಮಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ



ಯಶವಂತಪುರ ಕ್ಷೇತ್ರ ವ್ಯಾಪ್ತಿಯ 19 ಹಳ್ಳಿಗಳಿಗೆ ಕಾವೇರಿ ನೀರು ಸಂಪರ್ಕ ಕಲ್ಪಿಸಲಾಗಿದ್ದು, ಸಂಪರ್ಕ ಪಡೆಯುವವರ ಸಂಖ್ಯೆ ಹೆಚ್ಚಿಸಬೇಕಿದೆ. ಈ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುತ್ತಿದ್ದೇವೆ
ಎಸ್.ಟಿ.ಸೋಮಶೇಖರ್, ಶಾಸಕ

ಕೆಲವೆಡೆ ವಿಳಂಬ

ಮಹದೇವಪುರ ಕ್ಷೇತ್ರದ ಕಾಡುಗೋಡಿ ಬಳಿ ಅರಣ್ಯ ಪ್ರದೇಶದಲ್ಲಿ ಪೈಪ್‌ಲೈನ್ ಅಳವಡಿಸಬೇಕಾಗಿದ್ದು, ಅನುಮತಿ ನೀಡುವುದು ವಿಳಂಬವಾದ ಕಾರಣ 4 ಹಳ್ಳಿಗಳಲ್ಲಿ ಯೋಜನೆ ಜಾರಿಯಾಗಿಲ್ಲ.

ಚೊಕ್ಕನಹಳ್ಳಿ ಭಾಗದಲ್ಲಿ ರೈತರ ಭೂಮಿಯಲ್ಲಿ ಪೈಪ್‌ಲೈನ್ ಹೋಗಬೇಕಾಗಿದ್ದರಿಂದ ಭೂ ಮಾಲೀಕರೊಬ್ಬರು ನ್ಯಾಯಾಲಯದ ಮೊರೆ ಹೋಗಿದ್ದರು. ನ್ಯಾಯಾಲಯವು ಯೋಜನೆಗೆ ಅನುಮತಿ ನೀಡಿದ್ದು, ಕಾಮಗಾರಿ ಶುರುವಾಗಿದೆ.


ಸುದ್ದಿ 2 ನಿಮಿಷ

ಬಿಡದಿ ಟೌನ್‌ಶಿಪ್–ಡಿನೋಟಿಫೈ ಮಾಡುವುದಿಲ್ಲ: ಡಿಕೆಶಿ

ಬೆಂಗಳೂರು: ‘ಬಿಡದಿ ಟೌನ್‌ಶಿಪ್‌ಗಾಗಿ ಮಾಡಿರುವ ಭೂಸ್ವಾಧೀನವನ್ನು ಯಾವ ಕಾರಣಕ್ಕೂ ಡಿನೋಟಿಫೈ ಮಾಡುವುದಿಲ್ಲ’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪುನರುಚ್ಚರಿಸಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಹತ್ತಿಪ್ಪತ್ತು ಜನರನ್ನು ಹೊರತುಪಡಿಸಿ, ಅಲ್ಲಿ ಯಾರೂ ಕೃಷಿ ಮಾಡುತ್ತಿಲ್ಲ. ನಾವು ನೀಡುತ್ತಿರುವಷ್ಟು ಪರಿಹಾರವನ್ನು ದೇಶದಲ್ಲಿ ಯಾವ ಸರ್ಕಾರವೂ ನೀಡುತ್ತಿಲ್ಲ. ದುಪ್ಪಟ್ಟು ಪರಿಹಾರ ನೀಡಲು ಅವಕಾಶ ಇಲ್ಲದಿದ್ದರೂ, ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ ತೀರ್ಮಾನ ತೆಗೆದುಕೊಂಡಿದ್ದೇವೆ’ ಎಂದರು.

‘ಈಗಾಗಲೇ ಟೆಂಡರ್ ಕರೆಯಲಾಗಿದೆ. ವಿರೋಧ ಮಾಡುತ್ತಿರುವವರಿಗೆ ಈ ಪರಿಹಾರ ಇಷ್ಟವಿಲ್ಲದಿದ್ದರೆ ಹಳೇ ಕಾನೂನು ಪ್ರಕಾರ ನ್ಯಾಯಾಲಯದಲ್ಲಿ ಠೇವಣಿ ಇರಿಸಿ, ಕೆಲಸ ಆರಂಭಿಸುತ್ತೇವೆ. ಮೊದಲ ಹಂತದಲ್ಲಿ ಶೇ 78ರಷ್ಟು ಜನ ಒಪ್ಪಿಗೆ ನೀಡಿ ಪರಿಹಾರ ಪಡೆದಿದ್ದಾರೆ. ಉಳಿದವರು ಒಪ್ಪಿಗೆ ನೀಡುತ್ತಿದ್ದಂತೆ ಕೆಲಸ ಪ್ರಾರಂಭವಾಗಲಿದೆ’ ಎಂದು ಹೇಳಿದರು.



‘ನನ್ನದೇ ಸಂಬಂಧಿಯೊಬ್ಬರಿಗೆ ಮುಂಬೈನಲ್ಲಿ ಗರಿಷ್ಠ ಶೇ 12ರಷ್ಟು ಮಾತ್ರ ಪರಿಹಾರ ನೀಡಿದ್ದಾರೆ. ಆದರೆ ನಾವು, ಭೂಮಾಲೀಕರಿಗೆ ಪರಿಹಾರವಾಗಿ ರಸ್ತೆ ಪಕ್ಕದಲ್ಲಿಯೇ ಶೇ 35ರಷ್ಟು ವಾಣಿಜ್ಯ ಭೂಮಿ, ವಸತಿ ಪ್ರದೇಶದಲ್ಲಿ ಶೇ 40ರಷ್ಟು ಜಮೀನು ಸೇರಿ ಅನೇಕ ಅನುಕೂಲಗಳನ್ನು ಕಲ್ಪಿಸುತ್ತಿದ್ದೇವೆ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಆರು ಪಂಚಾಯಿತಿಗಳಿಗೆ ಕೇಂದ್ರ ಪ್ರಶಸ್ತಿ

ಬೆಂಗಳೂರು: ರಾಷ್ಟ್ರೀಯ ಪಂಚಾಯಿತಿ ಪ್ರಶಸ್ತಿ–2025 ಪ್ರಕಟಗೊಂಡಿದ್ದು, ರಾಜ್ಯದ ಆರು ಗ್ರಾಮ ಪಂಚಾಯಿತಿಗಳು ಕೇಂದ್ರದ ನಗದು ಪುರಸ್ಕಾರಕ್ಕೆ ಪಾತ್ರವಾಗಿವೆ.

ಕರ್ನಾಟಕವೂ ಸೇರಿ ದೇಶದ 42 ಗ್ರಾಮ ಪಂಚಾಯಿತಿಗಳು ಪ್ರಶಸ್ತಿಗೆ ಭಾಜನವಾಗಿವೆ. ಕರ್ನಾಟಕ ಅತಿ ಹೆಚ್ಚು ಪ್ರಶಸ್ತಿಗಳನ್ನು ಪಡೆದ ಹೆಗ್ಗಳಿಕೆಗೆ ಪಾತ್ರವಾಗಿದೆ. ಬಡತನ ಮುಕ್ತ ಮತ್ತು ಸುಧಾರಿತ ಜೀವನೋಪಾಯ ವಿಭಾಗದ ಪ್ರಥಮ ಪ್ರಶಸ್ತಿಯು ಹೆಬ್ರಿಯ ಮುದ್ರಾಡಿ ಗ್ರಾಮ ಪಂಚಾಯಿತಿಗೆ ಸಂದಿದೆ. ಪ್ರಶಸ್ತಿಯ ಮೊತ್ತ ₹1 ಕೋಟಿ.

ಆರೋಗ್ಯಕರ ಪಂಚಾಯಿತಿ ವಿಭಾಗದಲ್ಲಿ ಉಡುಪಿ ಜಿಲ್ಲೆಯ ಕುಂದಾಪುರದ ವಂಡ್ಸೆ, ಮಕ್ಕಳಸ್ನೇಹಿ ಪಂಚಾಯಿತಿ ವಿಭಾಗದಲ್ಲಿ ಬೆಂಗಳೂರು ನಗರ ಜಿಲ್ಲೆಯ ಹಾಲನಾಯಕನಹಳ್ಳಿ, ನೀರು ಸಮೃದ್ಧ ಪಂಚಾಯಿತಿ ವಿಭಾಗದಲ್ಲಿ ಉಡುಪಿ ಜಿಲ್ಲೆಯ ಮಡಮಕ್ಕಿ ಪಂಚಾಯಿತಿಗಳಿಗೆ ದ್ವಿತೀಯ ಪ್ರಶಸ್ತಿಗಳು ದೊರೆತಿದ್ದು, ತಲಾ ₹75 ಲಕ್ಷ ನಗದು ಪುರಸ್ಕಾರಕ್ಕೆ ಪಾತ್ರವಾಗಿವೆ.

ಮೂಲಸೌಕರ್ಯದಲ್ಲಿ ಸ್ವಾವಲಂಬಿ ಪಂಚಾಯಿತಿ ವಿಭಾಗದಲ್ಲಿ ಉಡುಪಿ ಜಿಲ್ಲೆಯ ಕಾರ್ಕಳದ ಸಾಣೂರು ಗ್ರಾಮ ಪಂಚಾಯಿತಿ, ಸಾಮಾಜಿಕವಾಗಿ ನ್ಯಾಯಯುತ ಮತ್ತು ಸುರಕ್ಷಿತ ವಿಭಾಗದಲ್ಲಿ ಕುಂದಾಪುರದ ಹಕ್ಲಾಡಿ ಗ್ರಾಮ ಪಂಚಾಯಿತಿಗಳಿಗೆ ತೃತೀಯ ಪ್ರಶಸ್ತಿ ಲಭಿಸಿದ್ದು, ತಲಾ ₹25 ಲಕ್ಷ ನಗದು ಬಹುಮಾನ ಪಡೆದಿವೆ. ಆರು ಪ್ರಶಸ್ತಿಗಳಲ್ಲಿ ಉಡುಪಿ ಜಿಲ್ಲೆ ಐದು ಪ್ರಶಸ್ತಿಗಳನ್ನು ಮುಡಿಗೇರಿಸಿಕೊಂಡಿದೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ ನೀಡಿದ್ದಾರೆ.

ಚಿಟಿಕೆ ಸುದ್ದಿ

‘ಸಂತ್ರಸ್ತೆಗೆ ನ್ಯಾಯ ಸಿಗುವವರೆಗೆ ಹೋರಾಟ’

ಬೆಂಗಳೂರು: ಪುತ್ತೂರಿನಲ್ಲಿ ನಡೆದ ಅತ್ಯಾಚಾರ ಪ್ರಕರಣದ ಸಂತ್ರಸ್ತೆಗೆ ಮತ್ತು ಅವರ ಮಗುವಿನ ಜೀವನೋಪಾಯಕ್ಕೆ ಆರ್ಥಿಕ ನೆರವು ನೀಡಬೇಕು. ಈ ಪ್ರಕರಣದಲ್ಲಿ ಸಂತ್ರಸ್ತೆಗೆ ನ್ಯಾಯ ಸಿಗುವವರೆಗೂ ಹೋರಾಟ ನಡೆಸಲಾಗುವುದು ಎಂದು ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾದ ಅಧ್ಯಕ್ಷ ಕೆ.ಪಿ. ನಂಜುಂಡಿ ಹೇಳಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಸಂತ್ರಸ್ತೆ ಯು ವಿಶ್ವಕರ್ಮ ಸಮುದಾಯಕ್ಕೆ ಸೇರಿದ್ದು, ನಾವು ಯಾರೂ ಅವರ ಸಂಬಂಧಿಗಳಲ್ಲ. ಸಮಾಜದಲ್ಲಿ ಇಂತಹ ಅನ್ಯಾಯಗಳು ನಡೆದಾಗ ನೋಡಿಕೊಂಡು ಸುಮ್ಮನೆ ಕುಳಿತುಕೊಳ್ಳಲಾಗುವುದಿಲ್ಲ’ ಎಂದರು.

ಮಧುಗಿರಿಯ ಅಭಯಹಸ್ತ ಆದಿಲಕ್ಷ್ಮಿ ಸಂಸ್ಥಾನ ನಿಠ್ಠರಹಳ್ಳಿ ಮಠದ ನೀಲಕಂಠ ಸ್ವಾಮೀಜಿ, ಹಿಂದುಳಿದ ಮಠಾಧೀಶರ ಮಹಾಸಭಾದ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ದೊಡ್ಡೇಂದ್ರ ಸ್ವಾಮೀಜಿ, ಗಣೇಶ ಸ್ವಾಮೀಜಿ ಇದ್ದರು.

‘ವಂಚನೆ ಪ್ರಕರಣ ಸಿಬಿಐಗೆ ವಹಿಸಿ’

ಬೆಂಗಳೂರು: ‘ಗಿರವಿ ಇರಿಸಿಕೊಂಡ ಚಿನ್ನಾಭರಣ ವಾಪಸ್ ನೀಡದೆ ಗ್ರಾಹಕರಿಗೆ ಲಕ್ಷಾಂತರ ರೂಪಾಯಿ ವಂಚಿಸಿರುವ ಆರೋಪದ ಮೇಲೆ ಬಂಧಿತರಾಗಿರುವ ‘ಡಿಜಿಎಫ್ ಗೋಲ್ಡ್ ಆ್ಯಂಡ್ ಡೈಮಂಡ್’ ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ಅವರ ಪ್ರಕರಣವನ್ನು ಸಿಬಿಐಗೆ ವಹಿಸಬೇಕು’ ಎಂದು ಜೆಡಿಯು ಉಪಾಧ್ಯಕ್ಷ ಶಿವರಾಮ್ ಕೆ.ವಿ. ಆಗ್ರಹಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ‘ಈ ಪ್ರಕರಣದಲ್ಲಿ ಹಲವಾರು ರಾಜಕಾರಣಿಗಳು, ಪೊಲೀಸ್ ಇಲಾಖೆ ಸಿಬ್ಬಂದಿ ಭಾಗವಹಿಸಿದ್ದಾರೆ. ಆದ್ದರಿಂದ ಈ ಪ್ರಕರಣದ ತನಿಖೆ ಸಿಬಿಐಗೆ ವಹಿಸಬೇಕು. ನೊಂದ ಸಾವಿರಾರು ಗ್ರಾಹಕರಿಗೆ ನ್ಯಾಯ ಒದಗಿಸಬೇಕು’ ಎಂದರು.



ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಭೇಟಿ ಮಾಡಿದ ವಿಧಾನ ಪರಿಷತ್ ಸದಸ್ಯರು

ಸಚಿವ ಸ್ಥಾನಕ್ಕೆ ಪರಿಷತ್ ಸದಸ್ಯರ ಲಾಬಿ

ನವದೆಹಲಿ : ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸ್ಥಾನಕ್ಕಾಗಿ ವಿಧಾನ ಪರಿಷತ್ ಸದಸ್ಯರು ರಾಷ್ಟ್ರ ರಾಜಧಾನಿಯಲ್ಲಿ ಲಾಬಿ ನಡೆಸಿದರು.

ಪರಿಷತ್ ಸದಸ್ಯರಾದ ಪುಟ್ಟಣ್ಣ, ಮಧು ಜಿ. ಮಾದೇಗೌಡ, ಬಸನಗೌಡ ಬಾದರ್ಲಿ, ಚಂದ್ರಶೇಖರ್ ಪಾಟೀಲ, ಡಿ.ಟಿ. ಶ್ರೀನಿವಾಸ್ ಅವರು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ ಅವರನ್ನು ಮಂಗಳವಾರ ಭೇಟಿ ಮಾಡಿ ಈ ಬಗ್ಗೆ ಮಾತುಕತೆ ನಡೆಸಿದರು.

ಶೀಘ್ರವಾಗಿ ಸಚಿವ ಸಂಪುಟ ಪುನರ್ ರಚನೆ ಮಾಡಬೇಕು. ಪರಿಷತ್ ಸದಸ್ಯರಿಗೂ ಆದ್ಯತೆ ನೀಡಬೇಕು. ವಿಧಾನ ಪರಿಷತ್‌ನ ಕನಿಷ್ಠ ಐದು ಸದಸ್ಯರಿಗೆ ಸಂಪುಟದಲ್ಲಿ ಸ್ಥಾನ ನೀಡಬೇಕು ಎಂದು ಒತ್ತಾಯಿಸಿದರು.

ನಾಯಕತ್ವ ಗೊಂದಲವನ್ನು ಶೀಘ್ರ ಬಗೆಹರಿಸುವಂತೆ ಮನವಿ ಮಾಡಿದರು. ಅಲ್ಲದೇ, ನಿಗಮ ಮಂಡಳಿಯಲ್ಲಿ ಕಾರ್ಯಕರ್ತರಿಗೆ ಅದ್ಯತೆ ನೀಡಬೇಕು ಎಂದು ಕೋರಿದರು.

ಬ್ಲ್ಯೂ ಡೈಮಂಡ್‌ಗೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಘಟಿತ ಆಟವಾಡಿದ ಬ್ಲ್ಯೂ ಡೈಮಂಡ್ ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸಿ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ (ಉತ್ತರ ವಲಯ) ಪಂದ್ಯದಲ್ಲಿ ಮಂಗಳವಾರ 8–0ಯಿಂದ ಪಯೊನೀರ್ ಎಫ್‌ಸಿ ಬೆಂಗಳೂರು ತಂಡವನ್ನು ಏಕಪಕ್ಷೀಯವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಡಿ ಗುಂಪಿನ ಪಂದ್ಯದಲ್ಲಿ ಬ್ಲ್ಯೂ ಡೈಮಂಡ್ ತಂಡದ ಮಣಿಮಾರನ್ (8ನೇ ಹಾಗೂ 22ನೇ ನಿ.), ಬಾಬು (13ನೇ ಹಾಗೂ 24ನೇ ನಿ.) ಮತ್ತು ಸೆಲ್ವ (35ನೇ ಹಾಗೂ 50ನೇ ನಿ.) ತಲಾ ಎರಡು ಗೋಲು ಹೊಡೆದರು. ಪ್ರಶಾಂತ್ (52ನೇ ನಿ.) ಮತ್ತು ಪ್ರೇಮ್ (54ನೇ ನಿ.) ತಲಾ ಒಂದು ಗೋಲು ದಾಖಲಿಸಿ, ಗೆಲುವಿನ ಅಂತರ ಹಿಗ್ಗಿಸಿದರು.

ಇದೇ ಗುಂಪಿನ ಮತ್ತೊಂದು ಪಂದ್ಯದಲ್ಲಿ ಅಗ್ನಿಪುತ್ರ ಎಫ್‌ಸಿ ತಂಡವು 2–1ರಿಂದ ಮಹೇಶ್‌ರಾಜ್ ಯುನೈಟೆಡ್ ಎಫ್‌ಸಿ ತಂಡದ ವಿರುದ್ಧ ರೋಚಕ ಜಯ ಸಾಧಿಸಿತು. ಅಗ್ನಿಪುತ್ರ ತಂಡದ ಸಾಯಿ ಸತ್ಯ (16ನೇ ನಿ.) ಹಾಗೂ ಸಾಹಿಲ್ (29ನೇ ನಿ.) ತಲಾ ಒಂದು ಗೋಲು ಹೊಡೆದು ಗೆಲುವಿನ ರೂವಾರಿಯಾದರು. ಮಹೇಶ್‌ರಾಜ್ ಯುನೈಟೆಡ್ ತಂಡದ ವಿಶಾಲ್ (5ನೇ ನಿ.) ಒಂದು ಗೋಲು ಗಳಿಸಿದರು.

ಡಿ.ಬಿ.ಯುನೈಟೆಡ್– ಆರ್.ವಿ. ಫುಟ್‌ಬಾಲ್ ಕ್ಲಬ್ ತಂಡಗಳ ನಡುವಣ ಪಂದ್ಯ ಗೋಲು ರಹಿತ ಡ್ರಾ ಆಯಿತು.


ಮಂಗ್ಲೆನ್‌ಲಾಲ್ ಕಿಪ್‌ಜೆನ್ ಅವರು 2ನೇ ನಿಮಿಷದಲ್ಲಿ ಗಳಿಸಿದ ಗೋಲಿನ ಬಲದಿಂದ ರೊನಾಲ್ಡೊ ಎಫ್‌ಸಿ ಬೆಂಗಳೂರು ತಂಡವು ಸಿ ಗುಂಪಿನ ಪಂದ್ಯದಲ್ಲಿ 1–0ಯಿಂದ ಬ್ಲ್ಯೂ ಮೂನ್ ಎಫ್‌ಸಿ ತಂಡವನ್ನು ಸೋಲಿಸಿತು.

ದಿನದ ಇತರ ಪಂದ್ಯಗಳಲ್ಲಿ ಪ್ಲೇ 365 ತಂಡವು 6–0ಯಿಂದ ಯಲಹಂಕ ಎಫ್‌ಸಿ ತಂಡವನ್ನು ಮಣಿಸಿದರೆ, ಅನ್ಮ್ಯ ಸ್ಪೋರ್ಟ್ಸ್ ಕ್ಲಬ್ ತಂಡವು 4–2ರಿಂದ ವಿಕ್ಟೋರಿಯಾ ಎಫ್‌ಸಿ ಬೆಂಗಳೂರು ತಂಡದ ವಿರುದ್ಧ ರೋಚಕ ಜಯ ಸಾಧಿಸಿತು.

‘ಕೈ’ ದೇಶದ ಹಿತಾಸಕ್ತಿ ವಿರೋಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂಧನ ಮಿತವ್ಯಯದ ವಿಚಾರದಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಯಾವುದಕ್ಕೂ ಕಡಿವಾಣ ಹಾಕಿಲ್ಲ, ಸ್ವಯಂ ಪ್ರೇರಿತರಾಗಿ ಮಿತವ್ಯಯವನ್ನು ಅಳವಡಿಸಿಕೊಳ್ಳಲು ಸಲಹೆ ನೀಡಿದ್ದಾರೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.



ಬಸವರಾಜ ಬೊಮ್ಮಾಯಿ

‘ಒಬ್ಬ ನಾಯಕನಾಗಿ ನೈತಿಕತೆ ಇರುವುದರಿಂದ ಈ ರೀತಿಯ ಕರೆ ಕೊಟ್ಟಿದ್ದಾರೆ. ಆದರೆ, ಕಾಂಗ್ರೆಸ್ ಪಕ್ಷದ ನಾಯಕರು ಭಾರತ ದೇಶದ ಹಿತಾಸಕ್ತಿಗೆ ವಿರುದ್ಧವಾಗಿ ಬೇಜವಾಬ್ದಾರಿ ಹೇಳಿಕೆಗಳನ್ನು ನೀಡುತ್ತಿದ್ದಾರೆ’ ಎಂದು ಅವರು ಟೀಕಿಸಿದರು.

‘ಲಾಲ್ ಬಹದ್ದೂರ್ ಶಾಸ್ತ್ರಿ ಪ್ರಧಾನಿ ಆಗಿದ್ದಾಗ ದೇಶದಲ್ಲಿ ಆಹಾರ ಕೊರತೆ ಉಂಟಾಗಿತ್ತು. ಆಗ ಅವರು ಒಂದು ಹೊತ್ತು ಉಪವಾಸ ಮಾಡಲು ಜನರಿಗೆ ಹೇಳಿದ್ದರು. ಪ್ರಧಾನಿ ಮೋದಿ ಶ್ರೀಮಂತರಿಗೆ ಎಲ್‌ಪಿಜಿ ಸಿಲಿಂಡರ್ ಸಹಾಯಧನ ಬಿಟ್ಟುಕೊಡುವಂತೆ ಹೇಳಿದ್ದರು. ಆರು ಕೋಟಿ ಜನರು ಬಿಟ್ಟುಕೊಟ್ಟಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದರು. ದೇಶದ ಜನ ಅದನ್ನು ಪಾಲಿಸಿದ್ದರಿಂದ ದೇಶದಲ್ಲಿ ಕೋವಿಡ್ ಎದುರಿಸಲು ಸಾಧ್ಯವಾಯಿತು’ ಎಂದು ಬೊಮ್ಮಾಯಿ ಹೇಳಿದರು.

‘ಪಿ.ಚಿದಂಬರಂ ಹಣಕಾಸು ಸಚಿವರಾಗಿದ್ದಾಗ ಬಂಗಾರದ ಬಗ್ಗೆ ವ್ಯಾಮೋಹ ಬೇಡ ಎಂದು ಸಲಹೆ ನೀಡಿದ್ದರು. ಹಿಂದೆ ಇರಾನ್–ಇರಾಕ್ ಯುದ್ಧ ಆದಾಗ ಎರಡೇ ದಿನದಲ್ಲಿ ಪೆಟ್ರೋಲ್ ಬಂಕ್‌ಗಳ ಮುಂದೆ ಕಿಲೋ ಮೀಟರ್‌ಗಟ್ಟಲೆ ವಾಹನಗಳು ಸಾಲುಗಟ್ಟಿ ನಿಲ್ಲುತ್ತಿದ್ದವು. ಈಗ ಯುದ್ಧ ಶುರುವಾಗಿ ಎರಡು ತಿಂಗಳು ಕಳೆದರೂ ಅಂತ ಪರಿಸ್ಥಿತಿ ಇಲ್ಲ’ ಎಂದು ಬೊಮ್ಮಾಯಿ ತಿಳಿಸಿದರು.

ಕಾಂಗ್ರೆಸ್ಸಿಗರ ಆರ್ಥಿಕ ಅಜ್ಞಾನ: ಅಶೋಕ



‘ಇತಿಹಾಸದ ಅರಿವೂ ಇಲ್ಲದ, ಆರ್ಥಿಕ ನಿರ್ವಹಣೆಯ ಗಂಧ–ಗಾಳಿಯೂ ಗೊತ್ತಿಲ್ಲದ ಈಗಿನ ಕಾಂಗ್ರೆಸ್ ನಾಯಕರಿಗೆ ಪ್ರಧಾನಿ ಮೋದಿ ಅವರ ಪ್ರತಿಯೊಂದು ನಡೆಯನ್ನೂ ವಿರೋಧಿಸುವುದೇ ಒಂದು ನಿತ್ಯ ಕಾಯಕವಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.

‘ರಾಷ್ಟ್ರದ ಹಿತದೃಷ್ಟಿಯಿಂದ ಮೋದಿ ಅವರು ನೀಡುವ ದೂರದೃಷ್ಟಿಯ ಆರ್ಥಿಕ ಸಲಹೆಗಳನ್ನು ಲೇವಡಿ ಮಾಡುವ ಈ ಕಾಂಗ್ರೆಸ್ಸಿಗರು ಒಮ್ಮೆ ತಮ್ಮದೇ ಪಕ್ಷದ ಇತಿಹಾಸವನ್ನು ತಿರುವಿ ಹಾಕಲಿ’ ಎಂದಿದ್ದಾರೆ.



ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಲಾಯಿತು. ಸಿ.ವಿ. ಸ್ನೇಹಾ, ಪ್ರೊ. ರಮೇಶ್ ಬಿ., ಲೀಲಾ ಕಲ್ಲಮ್ಮನವರ್, ಮೀನಾ ಜೈನ್, ಖುಷಿ ಕುಶಾಲಪ್ಪ, ಪ್ರೊ.ರಿತಿಕಾ ಸಿನ್ಹಾ ಉಪಸ್ಥಿತರಿದ್ದರು

ನವೀಕರಣಗೊಂಡ ಉದ್ಯಾನ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ವಿಧಾನ ಸಭಾ ಕ್ಷೇತ್ರದಲ್ಲಿ ನವೀಕರಣಗೊಳಿಸಿರುವ ಭೂಪಸಂದ್ರದ ಗೆದ್ದಲಹಳ್ಳಿ, ಕೆಇಬಿ, ಎಸಿಎಸ್ ಬಡಾವಣೆ, ಪೋಸ್ಟಲ್ ಕಾಲೊನಿ ಹಾಗೂ ನಾಗಶೆಟ್ಟಿಹಳ್ಳಿಯ ಎನ್‌ಜಿಇಎಫ್ ಬಡಾವಣೆಯ ಉದ್ಯಾನಗಳನ್ನು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಂಗಳವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ‘ರಾಜ್ಯ ಸರ್ಕಾರದ ₹30 ಕೋಟಿ ವಿಶೇಷ ಅನುದಾನದ ಅಡಿಯಲ್ಲಿ ಈ ಉದ್ಯಾನಗಳನ್ನು ನವೀಕರಣ ಮಾಡಲಾಗುತ್ತಿದೆ. ಇದೀಗ ಐದು ಉದ್ಯಾನಗಳನ್ನು ಅಭಿವೃದ್ಧಿಪಡಿಸಿ, ಉದ್ಘಾಟಿಸಲಾಗಿದೆ. ಇನ್ನುಳಿದ ಉದ್ಯಾನಗಳ ನವೀಕರಣ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಹಂತಹಂತವಾಗಿ ಪೂರ್ಣಗೊಳಿಸಿ ಸಾರ್ವಜನಿಕರ ಬಳಕೆಗೆ ನೀಡಲಾಗುವುದು’ ಎಂದು ಭರವಸೆ ನೀಡಿದರು.



ಎಇಸಿಎಸ್ ಬಡಾವಣೆಯ ಉದ್ಯಾನವನ್ನು ಬೈರತಿ ಸುರೇಶ್ ಉದ್ಘಾಟಿಸಿದರು

‘ಉದ್ಯಾನಗಳಲ್ಲಿ ವಾಯು ವಿಹಾರಿಗಳಿಗೆ ಅನುಕೂಲವಾಗುವಂತೆ ಪಾದಚಾರಿ ಮಾರ್ಗ, ವಿದ್ಯುತ್ ದೀಪಗಳ ಸೌಲಭ್ಯ, ಕುಡಿಯುವ ನೀರಿನ ವ್ಯವಸ್ಥೆ, ವ್ಯಾಯಾಮ ಮಾಡುವ ಸಲಕರಣೆಗಳನ್ನು ಅಳವಡಿಸಲಾಗಿದೆ. ಇದಲ್ಲದೇ, ಸದಾ ಹಸಿರಿನಿಂದ ಕಂಗೊಳಿಸುವಂತೆ ಮಾಡಲು ನಿರಂತರವಾಗಿ ಗಿಡ-ಮರಗಳಿಗೆ ನೀರು ಪೂರೈಕೆ ವ್ಯವಸ್ಥೆ ಇದ್ದು, ನೀರಿನ ಕೊರತೆ ಎದುರಾದರೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದರು.

‘ಮೊದಲ ಹಂತದಲ್ಲಿ 50 ಉದ್ಯಾನಗಳ ನವೀಕರಣ ಕಾಮಗಾರಿ ಕೈಗೊಂಡಿದ್ದು, ಇನ್ನೊಂದು ತಿಂಗಳಲ್ಲಿ ಪೂರ್ಣವಾಗಲಿದೆ. ಎರಡನೇ ಹಂತದಲ್ಲಿ ಉಳಿದ ಉದ್ಯಾನಗಳ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು’ ಎಂದು ತಿಳಿಸಿದರು.

‘ಸಾಮಾಜಿಕ ಪಿಡುಗು ಜನಜಾಗೃತಿ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜದಲ್ಲಿ ವಿವಿಧ ಹಂತಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳ ತಡೆಗೆ ಯುವಸಮೂಹ ನೆರವಾಗಬೇಕು’ ಎಂದು ಮಕ್ಕಳ ರಕ್ಷಣಾ ನಿರ್ದೇಶನಾಲಯದ ನಿರ್ದೇಶಕಿ ಸಿ.ವಿ. ಸ್ನೇಹಾ ಹೇಳಿದರು.

ಡಾ. ಮನಮೋಹನ್‌ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ, ಬೆಂಗಳೂರು ನಗರ ಜಿಲ್ಲಾಡಳಿತ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಮಕ್ಕಳ ಹಕ್ಕುಗಳು ಹಾಗೂ ಮಕ್ಕಳ ಕಾನೂನುಗಳ ರಕ್ಷಣೆಯಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಪಾತ್ರ ಹಾಗೂ ಪೋಕ್ಸೊ ಕಾಯ್ದೆ ಕುರಿತು ಅರಿವು–ತರಬೇತಿ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಕುಟುಂಬವೂ ಸೇರಿದಂತೆ ಸಮಾಜದ ವಿವಿಧ ಹಂತಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಹಾಗೂ ಹೆಣ್ಣು ಮಕ್ಕಳ ಮೇಲಿನ ಲೈಂಗಿಕ ಶೋಷಣೆಯನ್ನು ತಡೆಗಟ್ಟಬೇಕು. ಈ ಪ್ರಕ್ರಿಯೆಯಲ್ಲಿ ಯುವಸಮೂಹ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಬಾಲ್ಯ ವಿವಾಹ, ಭ್ರೂಣ ಹತ್ಯೆ, ಭಿಕ್ಷಾಟನೆ ಸೇರಿ ವಿವಿಧ ಸಾಮಾಜಿಕ ಪಿಡುಗುಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಿದೆ. ಈ ಕಾರ್ಯದಲ್ಲಿ ವಿದ್ಯಾರ್ಥಿಗಳು ಕೈಜೋಡಿಸಬೇಕು’ ಎಂದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ರಮೇಶ್ ಬಿ., ‘ರಾಜ್ಯದಲ್ಲಿ ಕಳೆದೊಂದೆ ವರ್ಷದಲ್ಲಿ ಸುಮಾರು 80 ಸಾವಿರ ಬಾಲಗರ್ಭಿಣಿಯರು ಪತ್ತೆಯಾಗಿದ್ದಾರೆ. ಹರೆಯದ ಹೆಣ್ಣುಮಕ್ಕಳನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಆಕರ್ಷಿಸಿ, ದುರ್ಬಳಕೆ ಮಾಡಿಕೊಳ್ಳುವ ವಂಚಕರ ಜಾಲ ಸಕ್ರಿಯವಾಗಿದೆ. ಈ ಬಗ್ಗೆ ವಿದ್ಯಾರ್ಥಿಗಳು ಸದಾ ಜಾಗೃತವಾಗಿರಬೇಕು’ ಎಂದರು.

‘ನಮ್ಮ ಸೂಪರ್ 30’ ಅಂತಿಮ ಆಯ್ಕೆ ಸುತ್ತು

ಪ್ರಜಾವಾಣಿ ವಾರ್ತೆ

ರಾಮನಗರ: ಪ್ರತಿಷ್ಠಿತ ಆರ್ಕಿಡ್ಸ್ ಇಂಟರ್‌ನ್ಯಾಷನಲ್ ಶಾಲೆಯ ಕನಕಪುರ ಕ್ಯಾಂಪಸ್‌ನಲ್ಲಿ ಮೇ 14ರಂದು ‘ನಮ್ಮ ಸೂಪರ್ 30’ ಸ್ಪರ್ಧೆಯ ಅಂತಿಮ ಆಯ್ಕೆ ಸುತ್ತು ನಡೆಯಲಿದೆ.

ಮೊದಲ ಎರಡು ಸುತ್ತುಗಳಲ್ಲಿ ಆಯ್ಕೆಯಾದ ರಾಜ್ಯದ ನಾನಾ ಶಾಲೆಗಳ ಅರ್ಹ 150 ಪ್ರತಿಭಾವಂತ ವಿದ್ಯಾರ್ಥಿಗಳು ಅಂತಿಮ ಆಯ್ಕೆ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ.

‘ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್’ ಹಾಗೂ ಪಬ್ಲಿಕ್ ಟಿ.ವಿ ಮಾಧ್ಯಮ ಸಹಯೋಗದಲ್ಲಿ ಆರ್ಕಿಡ್ಸ್ ಇಂಟರ್‌ನ್ಯಾಷನಲ್ ಶಾಲೆ ಈ ಸ್ಪರ್ಧೆ ಆಯೋಜಿಸಿದೆ.

ರಾಜ್ಯದಾದ್ಯಂತ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಅವರಿಗೆ ಗುಣಮಟ್ಟದ ಶೈಕ್ಷಣಿಕ ತರಬೇತಿ, ಅವಕಾಶ ನೀಡಿ ಸಜ್ಜುಗೊಳಿಸುವ ಉದ್ದೇಶದೊಂದಿಗೆ ‘ನಮ್ಮ ಸೂಪರ್ 30’ ಯೋಜನೆ ರೂಪಿಸಲಾಗಿದೆ. ರಾಜ್ಯದಾದ್ಯಂತ ಈ ಬಾರಿ ನಿರೀಕ್ಷೆಗೂ ಮೀರಿ ಸ್ಪಂದನೆ ದೊರೆತಿದೆ.


ಮುಖ್ಯಾಂಶಗಳು
- ಆರ್ಕಿಡ್ಸ್ ಶಾಲೆಯಲ್ಲಿ ಸ್ಪರ್ಧೆ
- 150 ವಿದ್ಯಾರ್ಥಿಗಳ ಆಯ್ಕೆ

ರಾಜ್ಯದಾದ್ಯಂತ ಐದು ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ಪರ್ಧೆಗೆ ಹೆಸರು ನೋಂದಣಿ ಮಾಡಿಕೊಂಡಿದ್ದರು. ಆ ಪೈಕಿ ಮೊದಲ ಸುತ್ತಿನ ಆಯ್ಕೆ ಪ್ರಕ್ರಿಯೆಯಲ್ಲಿ ಮೂರು ಸಾವಿರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಆ ಪೈಕಿ ಎರಡನೇ ಆಯ್ಕೆ ಸುತ್ತಿಗೆ 1,500 ವಿದ್ಯಾರ್ಥಿಗಳು ಆಯ್ಕೆಯಾಗಿದ್ದರು. ಪೈಪೋಟಿಯಿಂದ ಕೂಡಿದ್ದ ಎರಡನೇ ಸುತ್ತಿನಲ್ಲಿ ಆಯ್ಕೆಯಾದ 150 ವಿದ್ಯಾರ್ಥಿಗಳು ಮೇ 14ರಂದು ನಡೆಯುವ ಅಂತಿಮ ಆಯ್ಕೆ ಸುತ್ತಿನಲ್ಲಿ ಭಾಗವಹಿಸಲಿದ್ದಾರೆ.

ಅಂತಿಮ ಸುತ್ತಿನಲ್ಲಿ ವಿದ್ಯಾರ್ಹತೆ ಮಾತ್ರವಲ್ಲ, ವಿದ್ಯಾರ್ಥಿಗಳು ಬೆಳೆದು ಬಂದ ಪರಿಸರ, ಕೌಟುಂಬಿಕ, ಸಾಮಾಜಿಕ, ಆರ್ಥಿಕ ಹಿನ್ನೆಲೆ, ಅವರ ಕನಸು, ಗುರಿ, ಬದ್ಧತೆ ಇತ್ಯಾದಿಗಳನ್ನು ಪರಿಗಣಿಸಲಾಗುವುದು ಎಂದು ಆಯೋಜಕರು ಹೇಳಿದ್ದಾರೆ.

ರವೀಂದ್ರ ಯಾವಗಲ್‌ಗೆ ‘ಲಯ ಸಾರ್ವಭೌಮ ಪ್ರಶಸ್ತಿ’

ಬೆಂಗಳೂರು: ಪಂಡಿತ್ ನಂದಕುಮಾರ್ ಕುರುಡಿ ಅಮೃತ ಮಹೋತ್ಸವ ಸಮಿತಿ ನೀಡುವ ‘ಲಯ ಸಾರ್ವಭೌಮ ಪ್ರಶಸ್ತಿ’ಗೆ ತಬಲಾ ವಾದಕ ರವೀಂದ್ರ ಯಾವಗಲ್ ಆಯ್ಕೆಯಾಗಿದ್ದಾರೆ.



ರವೀಂದ್ರ ಯಾವಗಲ್

ಹಿಂದೂಸ್ತಾನಿ ಗಾಯಕ ನಂದಕುಮಾರ್ ಕುರುಡಿ ಅವರ 75ನೇ ಜನ್ಮದಿನೋತ್ಸವದ ಅಂಗವಾಗಿ ಸಮಿತಿಯು ಇದೇ 15ರಂದು ಸಂಜೆ 5 ಗಂಟೆಗೆ ಜಯನಗರದ 8ನೇ ಬ್ಲಾಕ್‌ನಲ್ಲಿರುವ ಜಯರಾಮ ಸೇವಾ ಮಂಡಳಿಯಲ್ಲಿ ನಾದಾಮೃತ ಕಾರ್ಯಕ್ರಮ ಹಮ್ಮಿಕೊಂಡಿದೆ. ಈ ಸಂಗೀತ ಸಂಭ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ತಬಲಾ ವಾದಕರಾದ ಸತೀಶ್ ಹಂಪಿಹೊಳಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಸಪ್ತಕ ಸಂಸ್ಥೆಯ ಸಂಸ್ಥಾಪಕ ಜಿ.ಎಸ್. ಹೆಗಡೆ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಳ್ಳಲಿದ್ದಾರೆ.

ಬಳಿಕ ನಡೆಯುವ ಸಂಗೀತ ಕಛೇರಿಯಲ್ಲಿ ನಂದಕುಮಾರ್ ಕುರುಡಿ ಗಾಯನ ಪ್ರಸ್ತುತಪಡಿಸಲಿದ್ದಾರೆ. ತಬಲಾದಲ್ಲಿ ಎಂ. ನಾಗೇಶ್, ಹಾರ್ಮೋನಿಯಂನಲ್ಲಿ ವ್ಯಾಸಮೂರ್ತಿ ಕಟ್ಟಿ ಸಾಥ್ ನೀಡಲಿದ್ದಾರೆ. ರವೀಂದ್ರ ಯಾವಗಲ್ ಅವರಿಂದ ತಬಲಾ ಹಾಗೂ ರಂಜನ್ ಕುಮಾರ್ ಬೇವೂರ್ ಅವರಿಂದ ಪಿಟೀಲು ವಾದನ ನಡೆಯಲಿದೆ.

ಅಮ್ಮನ ಬಿಟ್ಟು ಕದಲದ ಮರಿಯಾನೆ

ಸಂಗಮ ಬಳಿ ಕಾಡಾನೆ ಸಾವು

ಪ್ರಜಾವಾಣಿ ವಾರ್ತೆ

ಕನಕಪುರ (ರಾಮನಗರ): ಕಾವೇರಿ ವನ್ಯಜೀವಿ ವಿಭಾಗದ ಕಾವೇರಿ ಸಂಗಮ ಬಳಿ ಸುಮಾರು 38 ವರ್ಷದ ಹೆಣ್ಣಾನೆ ಬಹು ಅಂಗಾಂಗ ವೈಫಲ್ಯದಿಂದಾಗಿ ಸೋಮವಾರ ರಾತ್ರಿ ಮೃತಪಟ್ಟಿದೆ.

ತಾಯಿ ಆನೆ ಮೃತಪಟ್ಟಿರುವ ವಿಷಯ ಅರಿಯದ ಪುಟ್ಟ ಮರಿಯಾನೆ ಸೊಂಡಿಲಿನಿಂದ ತಾಯಿಯನ್ನು ತಟ್ಟಿ ಎಬ್ಬಿಸಲು ಶತಪ್ರಯತ್ನ ನಡೆಸಿತ್ತು. ರಾತ್ರಿಯಿಂದಲೂ ಅದು ಕಳೇಬರದ ಬಳಿಯೇ ಕದಲದೆ ರೋದಿಸುತ್ತ ನಿಂತಿದ್ದ ದೃಶ್ಯ ಮನ ಕಲಕುವಂತಿತ್ತು.

ಕೆಲ ಹೊತ್ತಿನ ಬಳಿಕ ಕಾಡಾನೆಗಳು ಬಂದು ಕಂಬನಿ ಮಿಡಿದವು. ಮರಿಯಾನೆಯನ್ನು ತಮ್ಮೊಂದಿಗೆ ಕರೆದುಕೊಂಡು ಕಾಡಿನೊಳಗೆ ಮರೆಯಾದವು.

ಸಂಗಮ ಬಳಿ ಅರಣ್ಯ ಪ್ರದೇಶದಲ್ಲಿ ಗಸ್ತು ತಿರುಗುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಮುಗ್ಗೂರು ವಲಯದ ಮಡಿವಾಳದ ಬಳಿ ಆನೆಯೊಂದು ಮೃತಪಟ್ಟಿರುವ ವಿಷಯ ಗಮನಿಸಿ, ಮಾಹಿತಿ ನೀಡಿದರು. ಮಂಗಳವಾರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಲಾಯಿತು.

ಆನೆಗಳ ಹಿಂಡು ಮರಿಯೊಂದಿಗೆ ಕಾಡಿನೊಳಗೆ ತೆರಳಿದ ಬಳಿಕ ಸಾತನೂರಿನ ಪಶು ವೈದ್ಯಾಧಿಕಾರಿ ಡಾ. ಗಿರೀಶ್ ನೇತೃತ್ವದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕಾವೇರಿ ವನ್ಯಜೀವಿ ವಿಭಾಗದ ಎಸಿಎಫ್ ನಾಗೇಂದ್ರ ಪ್ರಸಾದ್ ‘ಪ್ರಜಾವಾಣಿ’ಗೆ ತಿಳಿಸಿದರು.



ಕನಕಪುರ ತಾಲ್ಲೂಕಿನ ಕಾವೇರಿ ವನ್ಯಜೀವಿ ವಿಭಾಗದ ಮಡಿವಾಳದ ಬಳಿ ಮೃತಪಟ್ಟ ಹೆಣ್ಣಾನೆ ಬಳಿ ಮರಿಯಾನೆ ರೋದಿಸುತ್ತಿದ್ದ ದೃಶ್ಯ ಮನ ಕಲಕುವಂತಿತ್ತು

f prajavani.net prajavani | ಬುಧವಾರ, ಮೇ 13, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 132 | ಪುಟ 16 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಹುಡುಕಾಟ....

ಮಹಾರಾಷ್ಟ್ರದ ನವಿ ಮುಂಬೈನ ಕೆರೆಯೊಂದರಲ್ಲಿ ಫ್ಲೆಮಿಂಗೊ ಮರಿಗಳ ಆಟ, ಹುಡುಕಾಟ



ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 74,559 | ನಿಫ್ಟಿ 23,379 | $/₹ 95.68 | ಚಿನ್ನ (Std. 10g) ₹1,58,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,89,400 (ಬೆಂಗಳೂರು)

ಸಾರಿಗೆ ನಿಗಮಗಳ ನೌಕರರ ವೇತನ ಶೇ 12.5ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯ ಸರ್ಕಾರವು ನಾಲ್ಕು ಸಾರಿಗೆ ಸಂಸ್ಥೆಗಳ ನೌಕರರು ಮತ್ತು ಅಧಿಕಾರಿಗಳ ವೇತನ ಪರಿಷ್ಕರಣೆ ಮಾಡಿದ್ದು, 2025ರ ಏಪ್ರಿಲ್ 1ರಿಂದ ಪೂರ್ವಾನ್ವಯ ಆಗುವಂತೆ ಮೂಲ ವೇತನದಲ್ಲಿ ಶೇ 12.5ರಷ್ಟು ಏರಿಕೆ ಮಾಡಿದೆ.

2026ರ ಜುಲೈನಿಂದ ಪರಿಷ್ಕೃತ ವೇತನವನ್ನು ನೀಡಲಾಗುತ್ತದೆ. ಹಿಂಬಾಕಿಯನ್ನು ಹಂತ-ಹಂತವಾಗಿ ಬಿಡುಗಡೆ ಮಾಡಲಾಗುತ್ತದೆ ಎಂದು ಸಾರಿಗೆ ಇಲಾಖೆ ತಿಳಿಸಿದೆ.

ನಾಲ್ಕು ನಿಗಮಗಳ 1.05 ಲಕ್ಷ ಸಿಬ್ಬಂದಿಗೆ ಈ ವೇತನ ಪರಿಷ್ಕರಣೆ ಅನ್ವಯವಾಗಲಿದೆ. ಪರಿಷ್ಕರಣೆಯಿಂದ ನಾಲ್ಕೂ ನಿಗಮಗಳಿಗೆ ಪ್ರತಿ ತಿಂಗಳು ₹72.80 ಕೋಟಿಯಂತೆ ವಾರ್ಷಿಕವಾಗಿ ಒಟ್ಟು ₹873.64 ಕೋಟಿ ಹೆಚ್ಚುವರಿ ವೆಚ್ಚವಾಗಲಿದೆ ಎಂದಿದೆ.

2023ರ ಮಾರ್ಚ್‌ನ ವೇತನ ಪರಿಷ್ಕರಣೆಯ 26 ತಿಂಗಳ ಹಿಂಬಾಕಿಯ ಮೊತ್ತ ₹1,271.92 ಕೋಟಿಯಲ್ಲಿ, ಮೊದಲ ಕಂತಿನ ₹450 ಕೋಟಿಯನ್ನು ಈಗಾಗಲೇ ಬಿಡುಗಡೆ ಮಾಡಿ ನೌಕರರ ಖಾತೆಗಳಿಗೆ ಜಮೆ ಮಾಡಲಾಗಿದೆ ಎಂದು ಮಾಹಿತಿ ನೀಡಿದೆ.

ನೀಟ್ ರದ್ದು: ಮರು ಪರೀಕ್ಷೆ

ಪ್ರಶ್ನೆ ಪತ್ರಿಕೆ ಸೋರಿಕೆ ಆರೋಪ: ತನಿಖೆ ಕೈಗೆತ್ತಿಕೊಂಡ ಸಿಬಿಐ

ನವದೆಹಲಿ (ಪಿಟಿಐ): ವೈದ್ಯಕೀಯ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಮೇ 3ರಂದು ನಡೆದ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯ (ನೀಟ್‌-ಯುಜಿ) ಪ್ರಶ್ನೆ ಪತ್ರಿಕೆ ಸೋರಿಕೆಯಾಗಿರುವ ಆರೋಪದ ಕಾರಣದಿಂದ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಆ ಪರೀಕ್ಷೆಯನ್ನು ಮಂಗಳವಾರ ರದ್ದುಗೊಳಿಸಿದೆ.



ಅಲ್ಲದೆ, 'ನೀಟ್‌-ಯುಜಿ' ಪರೀಕ್ಷೆಯಲ್ಲಿ ನಡೆದಿರುವ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸುವಂತೆ ಏಜೆನ್ಸಿಯು ಸಿಬಿಐ ಅನ್ನು ಕೋರಿದೆ. ಅದರ ಬೆನ್ನಲ್ಲೇ ಸಿಬಿಐ ಮಂಗಳವಾರ ಈ ಕುರಿತು ಎಫ್‌ಐಆರ್ ದಾಖಲಿಸಿದೆ. ಈ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸಲಾಗುವುದು ಮತ್ತು ಅದರ ದಿನಾಂಕಗಳನ್ನು ಹೊಸದಾಗಿ ಪ್ರಕಟಿಸಲಾಗುವುದು ಎಂದೂ ಏಜೆನ್ಸಿ ಹೇಳಿದೆ.

ಈ ಪ್ರಕರಣದ ಕುರಿತು ಈಗಾಗಲೇ ತನಿಖೆ ನಡೆಸುತ್ತಿರುವ ರಾಜಸ್ಥಾನದ ವಿಶೇಷ ಕಾರ್ಯಪಡೆಯು (ಎಸ್‌ಒಜಿ) ರಾಜಸ್ಥಾನದ ಸಿಕರ್, ಜುನ್‌ಜುನು ಮತ್ತು ಉತ್ತರಾಖಂಡದ ಡೆಹ್ರಾಡೂನ್ ಹಾಗೂ ಕೇರಳಂನ ವ್ಯಕ್ತಿಗಳು ಸೇರಿದಂತೆ 15 ಜನರ ವಿಚಾರಣೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ, ರಾಜಸ್ಥಾನದ ಪೊಲೀಸರ ಮನವಿ ಮೇರೆಗೆ ಮಹಾರಾಷ್ಟ್ರದ ಪೊಲೀಸರು ನಾಸಿಕ್‌ನಲ್ಲಿ ಮಂಗಳವಾರ ಶುಭಂ ಖೈರ್‌ನಾರ್ (30)ಎಂಬ ವ್ಯಕ್ತಿಯನ್ನು ಬಂಧಿಸಿದ್ದು, ಆತನನ್ನು ಸಿಬಿಐ ವಶಕ್ಕೆ ಪಡೆದಿದೆ.

▶11



ನೀಟ್‌-ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ ದೆಹಲಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದ ಎಸ್‌ಎಫ್‌ಐ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು — ಪಿಟಿಐ ಚಿತ್ರ

ಅಮೃತ ಕಾಲವಲ್ಲ, ವಿಷ ಕಾಲ: ರಾಹುಲ್ ಟೀಕೆ



ರಾಹುಲ್

ನೀಟ್‌-ಯುಜಿ ಪರೀಕ್ಷೆಯನ್ನು ರದ್ದುಗೊಳಿಸಿದ ಕ್ರಮವನ್ನು ಖಂಡಿಸಿರುವ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮೋದಿ ಅವರ 'ಅಮೃತ ಕಾಲ'ವು ದೇಶಕ್ಕೆ 'ವಿಷ ಕಾಲ'ವಾಗಿ ಮಾರ್ಪಟ್ಟಿದೆ' ಎಂದು ರಾಹುಲ್ 'ಎಕ್ಸ್‌'ನಲ್ಲಿ ಟೀಕಿಸಿದ್ದಾರೆ. ದೇಶದ 23 ಲಕ್ಷ ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ತ್ಯಾಗ ಮತ್ತು ಕನಸುಗಳನ್ನು ಭ್ರಷ್ಟ ಬಿಜೆಪಿ ಆಡಳಿತವು ಪುಡಿ ಮಾಡಿದೆ ಎಂದು ಅವರು ದೂರಿದ್ದಾರೆ.

ಸಿಇಟಿ ಕೌನ್ಸೆಲಿಂಗ್ ವಿಳಂಬ ಸಾಧ್ಯತೆ

ಬೆಂಗಳೂರು: ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆಯನ್ನು ರದ್ದು ಮಾಡಿದ್ದರಿಂದ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸೀಟು ಹಂಚಿಕೆಯೂ ವಿಳಂಬವಾಗುವ ಸಾಧ್ಯತೆ ಇದೆ.

2026–27ನೇ ಸಾಲಿನಲ್ಲಿ ನೀಟ್‌ಗೆ ಕರ್ನಾಟಕದ 1.45 ಲಕ್ಷ ವಿದ್ಯಾರ್ಥಿಗಳು ಹಾಜರಾಗಿದ್ದರು. ವೈದ್ಯಕೀಯದಲ್ಲಿ ರಾಜ್ಯ ಕೋಟಾದ 10,559 ಸೀಟುಗಳು ಲಭ್ಯವಿದ್ದು, ನೀಟ್ ಅರ್ಹತಾ ಪಟ್ಟಿಯ ಆಧಾರದಲ್ಲಿ ಈ ಸೀಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಹಂಚಿಕೆ ಮಾಡುತ್ತದೆ. ವೈದ್ಯಕೀಯ ಸೀಟುಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ನಂತರ ಸಿಇಟಿ ಅರ್ಹತಾ ಪಟ್ಟಿಯ ಪ್ರಕಾರ ವೃತ್ತಿ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ಕೌನ್ಸೆಲಿಂಗ್ ನಡೆಯುತ್ತದೆ.

ನೀಟ್ ಫಲಿತಾಂಶದ ಪಟ್ಟಿಯ ಆಧಾರದಲ್ಲಿ ವೈದ್ಯಕೀಯ ಕೌನ್ಸೆಲಿಂಗ್ ಪರಿಷತ್ತು (ಎಂಸಿಸಿ) ದೇಶದಲ್ಲಿ ಲಭ್ಯವಿರುವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಸೀಟುಗಳಲ್ಲಿ ಶೇ 15ರಷ್ಟು ಹಂಚಿಕೆ ಮಾಡುತ್ತದೆ. ಎನ್‌ಟಿಎ ಪರೀಕ್ಷೆ ನಡೆಸಿ 90 ದಿನಗಳು ಕಳೆದರೂ ಮೊದಲ ಸುತ್ತಿನ ಸೀಟು ಹಂಚಿಕೆ ಪ್ರಕ್ರಿಯೆಯನ್ನೇ ಎಂಸಿಸಿ ಆರಂಭಿಸಿರಲಿಲ್ಲ. ವಿಳಂಬದಿಂದಾಗಿ ಎರಡನೇ ಮತ್ತು ಕೊನೆಯ ಸುತ್ತನಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಸಂಕಷ್ಟ ಅನುಭವಿಸಿದ್ದರು. ಈ ಬಾರಿ ನೀಟ್ ರದ್ದಾಗಿರುವುದರಿಂದ ಸಿಇಟಿ ಬರೆದಿದ್ದ ರಾಜ್ಯದ 3.31 ಲಕ್ಷ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಿದ್ದಾರೆ.

> ನೀಟ್ ರದ್ದತಿಯಿಂದ ಸಿಇಟಿ ಪ್ರಕ್ರಿಯೆಯಲ್ಲಿನ ವಿಳಂಬ ತಪ್ಪಿಸಲು ಪ್ರತ್ಯೇಕ ಕೌನ್ಸೆಲಿಂಗ್ ನಡೆಸುವ ಕುರಿತು ಸರ್ಕಾರದ ಜತೆ ಚರ್ಚಿಸಲಾಗುವುದು
> **ಎಚ್.ಪ್ರಸನ್ನ,** ಕಾರ್ಯನಿರ್ವಾಹಕ ನಿರ್ದೇಶಕ, ಕೆಇಎ

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಪ್ರಶ್ನೆ

ನಷ್ಟ ಭರಿಸಲು ಎಷ್ಟು ದಿನ ಸಾಧ್ಯ?

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳು ಪೆಟ್ರೋಲ್, ಡೀಸೆಲ್ ಮತ್ತು ಎಲ್‌ಪಿಜಿಯನ್ನು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಗೆ ಮಾರಾಟ ಮಾಡುತ್ತ ಎಷ್ಟು ದಿನ ನಷ್ಟ ಭರಿಸಲು ಸಾಧ್ಯ ಎಂಬುದರ ಬಗ್ಗೆ ಅವಲೋಕನ ನಡೆಸಬೇಕಾಗುತ್ತದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ.

'ಹಾಗಾದರೆ, ಶೀಘ್ರದಲ್ಲಿ ಇಂಧನ ದರ ಹೆಚ್ಚಳವಾಗುತ್ತದೆಯೇ' ಎಂಬ ಪ್ರಶ್ನೆಗೆ ಉತ್ತರಿಸಲು ಸಚಿವರು ನಿರಾಕರಿಸಿದ್ದಾರೆ. ಇಂಧನ ಮಾರಾಟ ದರ ಬದಲಾಗದೆ ಇದ್ದರೆ, ಹಣಕಾಸಿನ ಒತ್ತಡ ಸೃಷ್ಟಿಯಾಗುತ್ತದೆ ಎಂಬುದನ್ನು ಸಚಿವರು ಒಪ್ಪಿದ್ದಾರೆ.

ದೇಶದಲ್ಲಿ ಎರಡು ತಿಂಗಳಿಗೆ ಸಾಕಾಗುವಷ್ಟು ಇಂಧನ ದಾಸ್ತಾನು ಇದೆ. ಜಾಗತಿಕ ಮಟ್ಟದಲ್ಲಿ ಇಂಧನ ಸಾಗಣೆಗೆ ಅಡ್ಡಿ ಉಂಟಾಗಿದ್ದರೂ, ದೇಶದಲ್ಲಿ ಇಂಧನ ಕೊರತೆ ಆಗಿಲ್ಲ. ಕಚ್ಚಾ ತೈಲ ಬೆಲೆ ಏರಿಕೆ ಮುಂದುವರಿದರೆ ಮತ್ತು ಇಂಧನ ಮಾರಾಟ ದರ ಬದಲಾಗದಿದ್ದರೆ, ತೈಲೋತ್ಪನ್ನಗಳ ಮಾರಾಟ ಕಂಪನಿಗಳು ಒಂದೇ ತ್ರೈಮಾಸಿಕದಲ್ಲಿ ₹1 ಲಕ್ಷ ಕೋಟಿಯಷ್ಟು ನಷ್ಟ ಕಾಣಬಹುದು ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಆಯೋಜಿಸಿದ್ದ ವ್ಯಾಪಾರ ಶೃಂಗಸಭೆಯಲ್ಲಿ ಮಂಗಳವಾರ ಹೇಳಿದ್ದಾರೆ.

ದೇಶದಲ್ಲಿ 45 ದಿನಕ್ಕೆ ಆಗುವಷ್ಟು ಎಲ್‌ಪಿಜಿ ಸಂಗ್ರಹ ಇದೆ. ಈ ಮೊದಲು ಪ್ರತಿ ದಿನ 36 ಸಾವಿರ ಟನ್ ಎಲ್‌ಪಿಜಿ ದೇಶದಲ್ಲಿ ಉತ್ಪಾದನೆ ಆಗುತ್ತಿತ್ತು. ಅದು ಈಗ 54 ಸಾವಿರ ಟನ್‌ಗೆ ಹೆಚ್ಚಳವಾಗಿದೆ ಎಂದು ತಿಳಿಸಿದ್ದಾರೆ.

ಪ್ರಧಾನಿಯವರ ಹೇಳಿಕೆ ಬಹಳ ದೂರದೃಷ್ಟಿಯಿಂದ ಕೂಡಿದೆ. ಇದು ಭವಿಷ್ಯದತ್ತ ನೋಡುತ್ತದೆ. ಈ ಯುದ್ಧ ಮುಂದುವರಿದರೆ, ಹಣಕಾಸಿನ ಒತ್ತಡವನ್ನು ಕಡಿಮೆ ಮಾಡಲು ವಿವಿಧ ಕ್ರಮಗಳ ಬಗ್ಗೆ ಯೋಚಿಸಲು ಪ್ರಾರಂಭಿಸಬೇಕಾಗುತ್ತದೆ. ಅಲ್ಲದೆ, ಕೆಲವು ಚಟುವಟಿಕೆಗಳನ್ನು ಮೊಟಕುಗೊಳಿಸಬೇಕಾಗುತ್ತದೆ. ಇದರ ಅರ್ಥ ಲಾಕ್‌ಡೌನ್ ಅಲ್ಲ ಎಂದು ಹೇಳಿದ್ದಾರೆ.





> ದೇಶದ ಪ್ರತಿ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಇದೆ. ಎಲ್ಲಿಯೂ ಕೊರತೆ ಉಂಟಾಗಿಲ್ಲ. ಎಲ್‌ಪಿಜಿ ಪೂರೈಕೆ ಸಹ ಸಾಕಷ್ಟಿದೆ
> **ಹರದೀಪ್ ಸಿಂಗ್ ಪುರಿ,** ಕೇಂದ್ರ ಪೆಟ್ರೋಲಿಯಂ ಸಚಿವ

ವನ್ಯಜೀವಿ ಪಥದಲ್ಲಿ ಚಾರಣ ಸ್ಥಗಿತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ವನ್ಯಜೀವಿ ಸಂಚಾರ ಇರುವ ಎಲ್ಲ ಚಾರಣ ಪಥ ಮತ್ತು ಸಂಚಾರ ಪಥಗಳನ್ನು ಮುನ್ನೆಚ್ಚರಿಕೆ ಕ್ರಮವಾಗಿ ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು ಎಂದು ಅರಣ್ಯ ಇಲಾಖೆ ಆದೇಶ ಹೊರಡಿಸಿದೆ.

ಚಾಮರಾಜನಗರದ ನಾಗಮಲೆ ಅರಣ್ಯ ಪ್ರದೇಶದಲ್ಲಿ ಇದೇ ಭಾನುವಾರ ಚಿರತೆ ದಾಳಿಯಿಂದ ಹತ್ತು ವರ್ಷದ ಬಾಲಕ ಮೃತಪಟ್ಟ ಘಟನೆಯ ಕುರಿತಾಗಿ ಅರಣ್ಯ ಇಲಾಖೆ ಅಧಿಕಾರಿಗಳ ಜತೆ ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ ಅವರು ಮಂಗಳವಾರ ಸಭೆ ನಡೆಸಿದರು. ಈ ವೇಳೆ, 'ಕಾಡುಪ್ರಾಣಿಗಳ ಸಂಚಾರ ಮತ್ತು ಚಟುವಟಿಕೆ ಇರುವ ಪ್ರದೇಶದಲ್ಲಿ ಚಾರಣವನ್ನು ತಕ್ಷಣವೇ ಸ್ಥಗಿತಗೊಳಿಸಿ' ಎಂದು ಸಚಿವರು ಸೂಚಿಸಿದ್ದರು.

ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರು ಮಂಗಳವಾರ ಮಧ್ಯಾಹ್ನವೇ ಆದೇಶ ಹೊರಡಿಸಿದ್ದು, 'ಚಿರತೆ, ಹುಲಿ, ಆನೆ ಮತ್ತು ಕರಡಿಯಂತಹ ಕಾಡುಪ್ರಾಣಿಗಳ ಸಂಚಾರ ಇರುವೆಡೆ ಮಾನವ-ವನ್ಯಜೀವಿ ಸಂಘರ್ಷ ತಪ್ಪಿಸಬೇಕಿದೆ. ಅಂತಹ ಪ್ರದೇಶದಲ್ಲಿ ಚಾರಣ ಮತ್ತು ನಡಿಗೆಯನ್ನು ನಿಲ್ಲಿಸಿ' ಎಂದು ರಾಜ್ಯದ ಎಲ್ಲ ವನ್ಯಜೀವಿ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಸೂಚಿಸಿದ್ದಾರೆ.

▶6

ಸಾಗರ ವಲಯ ಅರಣ್ಯಾಧಿಕಾರಿ ಅಮಾನತು

ಶಿವಮೊಗ್ಗದ ಸಾಗರ ತಾಲ್ಲೂಕಿನ ಮಾಲ್ವೆ ಗ್ರಾಮದ 5 ಎಕರೆ ಅರಣ್ಯ ಭೂಮಿ ಮತ್ತು 25 ಎಕರೆ ವಿಸ್ತೀರ್ಣದ ಸೊಪ್ಪಿನಬೆಟ್ಟ ಪ್ರದೇಶದಲ್ಲಿ ಇದ್ದ ನೆಡುತೋಪು ಮತ್ತು ಮರಗಳನ್ನು ಅಕ್ರಮವಾಗಿ ತೆರವು ಮಾಡಿದ ಪ್ರಕರಣದಲ್ಲಿ ಸಾಗರ ವಲಯ ಅರಣ್ಯಾಧಿಕಾರಿ ಅಣ್ಣಪ್ಪ ಬಿ. ಅವರನ್ನು ಅರಣ್ಯ ಇಲಾಖೆಯು ಅಮಾನತು ಮಾಡಿದೆ.

'ಮಾಲ್ವೆ ಗ್ರಾಮದ ಸರ್ವೆ ಸಂಖ್ಯೆ 43ರ ಜಮೀನು ಅರಣ್ಯ ಇಲಾಖೆಯ ವ್ಯಾಪ್ತಿಯಲ್ಲಿದ್ದು, ಇಲಾಖೆಯು ಬೆಳೆಸಿದ್ದ ಅಕೇಷಿಯಾ ಮತ್ತು ಇತರ ಕಾಡು ಮರಗಳನ್ನು ಆರೋಪಿಗಳು ಕಡಿದು ಸಾಗಿಸಿದ್ದಾರೆ. ಜೆಸಿಬಿ ಯಂತ್ರ ಬಳಸಿಕೊಂಡು ಅರಣ್ಯಭೂಮಿಯನ್ನು ಸಮತಟ್ಟು ಮಾಡಿ, ರಸ್ತೆ ನಿರ್ಮಿಸಿದ್ದಾರೆ. ಅರಣ್ಯಾಧಿಕಾರಿಯು ಈ ವಿಚಾರವಾಗಿ ಎಫ್‌ಐಆರ್ ದಾಖಲಿಸಿದ್ದರೂ, ಸದರಿ ಜಮೀನು ಅರಣ್ಯ ಪ್ರದೇಶದ ಹೊರಗೆ ಇದೆ ಎಂದು ನಮೂದಿಸಿದ್ದಾರೆ. ಈ ಮೂಲಕ ಅತಿಕ್ರಮ ಮಾಡಿದವರಿಗೆ ಅನುಕೂಲ ಮಾಡಿಕೊಡಲು ಯತ್ನಿಸಿದ್ದಾರೆ' ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಶಿಸ್ತು ಪ್ರಾಧಿಕಾರಿ ಅಮಾನತು ಆದೇಶದಲ್ಲಿ ವಿವರಿಸಿದ್ದಾರೆ.

ಗೋಡೆ ಕುಸಿದು 6 ಭಕ್ತರ ಸಾವು

ಸಾಂಗ್ಲಿ(ಮಹಾರಾಷ್ಟ್ರ) (ಪಿಟಿಐ): ಸಾಂಗ್ಲಿ ಜಿಲ್ಲೆಯಲ್ಲಿ ಮಂಗಳವಾರ ಸುರಿದ ಭಾರಿ ಮಳೆ ಹಾಗೂ ಜೋರಾಗಿ ಬೀಸಿದ ಗಾಳಿಯಿಂದಾಗಿ ದೇವಸ್ಥಾನವೊಂದರ ಗೋಡೆ ಹಾಗೂ ತಗಡುಗಳು ಕುಸಿದ ಪರಿಣಾಮ ಆರು ಭಕ್ತರು ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಜತ್ತ ತಾಲ್ಲೂಕಿನ ಮೋಥೆವಾಡಿ ಗ್ರಾಮದ ಮಾರ್ಗುದೇವಿ ದೇವಸ್ಥಾನದಲ್ಲಿ ಈ ಘಟನೆ ನಡೆದಿದೆ. ಘಟನೆಯಲ್ಲಿ 12ರಿಂದ 14 ಜನರು ಗಾಯಗೊಂಡಿದ್ದು, ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ. ಮಂಗಳವಾರ ಈ ದೇವಸ್ಥಾನಕ್ಕೆ ಭಾರಿ ಸಂಖ್ಯೆಯಲ್ಲಿ ಭಕ್ತರು ಭೇಟಿ ನೀಡುತ್ತಾರೆ.

'ದೇವಸ್ಥಾನ ಆವರಣದಲ್ಲಿ 350 ಭಕ್ತರಿದ್ದರು. ಜೋರಾದ ಗಾಳಿಯೊಂದಿಗೆ ಭಾರಿ ಮಳೆ ಸುರಿಯಲಾರಂಭಿಸಿದಾಗ, ಭಕ್ತರು ಗೋಡೆ ಪಕ್ಕದಲ್ಲಿ ನಿಂತು ಆಶ್ರಯ ಪಡೆದಿದ್ದಾರೆ. ಈ ವೇಳೆ ಗೋಡೆ ಹಾಗೂ ತಗಡಿನ ಶೀಟುಗಳು ದಿಢೀರ್‌ನೆ ಕುಸಿದು ದುರ್ಘಟನೆ ಸಂಭವಿಸಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತುಷಾರ್ ದೋಷಿ ತಿಳಿಸಿದ್ದಾರೆ.

2 ವರ್ಷ, 713 ಪೊಲೀಸರ ಅಮಾನತು

ಅಮಾನತುಗೊಂಡ ಅಧಿಕಾರಿಗಳು, ಸಿಬ್ಬಂದಿ

ಡಿವೈಎಸ್‌ಪಿಗಳು	ಪೊಲೀಸ್ ಇನ್‌ಸ್ಪೆಕ್ಟರ್‌ಗಳು	ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು	ಅಸಿಸ್ಟೆಂಟ್ ಸಬ್ ಇನ್‌ಸ್ಪೆಕ್ಟರ್‌ಗಳು	ಹೆಡ್ ಕಾನ್‌ಸ್ಟೆಬಲ್‌ಗಳು	ಕಾನ್‌ಸ್ಟೆಬಲ್‌ಗಳು
7	61	75	73	231	266

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪರಾಧ ಚಟುವಟಿಕೆ, ಭ್ರಷ್ಟಾಚಾರ, ಕರ್ತವ್ಯಲೋಪ ಮತ್ತು ಇತರೆ ದುರ್ವರ್ತನೆ ಆರೋಪಗಳ ಕಾರಣಕ್ಕೆ 2024ರ ಜನವರಿಯಿಂದ 2026ರ ಜನವರಿ ಅವಧಿಯಲ್ಲಿ ರಾಜ್ಯದ ವಿವಿಧ ದರ್ಜೆಯ 713 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಇಲಾಖಾ ತನಿಖೆ ಪೂರ್ಣಗೊಳ್ಳುವವರೆಗೆ ಅಮಾನತುಗೊಳಿಸಲಾಗಿದೆ.

ಪೊಲೀಸ್ ಇಲಾಖೆಯ ಮಾಹಿತಿ ಪ್ರಕಾರ, ಅಮಾನತುಗೊಂಡಿರುವ 713 ಅಧಿಕಾರಿಗಳ ಪೈಕಿ 95 ಮಂದಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದರೆ, 62 ಮಂದಿ ಭ್ರಷ್ಟಾಚಾರ ಆರೋಪಗಳನ್ನು ಎದುರಿಸುತ್ತಿದ್ದಾರೆ. ಉಳಿದ 556 ಮಂದಿಯನ್ನು ಇತರೆ ಕಾನೂನುಬಾಹಿರ ಚಟುವಟಿಕೆಗಳು ಹಾಗೂ ನಿಯಮ ಉಲ್ಲಂಘನೆಗೆ ಸಂಬಂಧಿಸಿದಂತೆ ಅಮಾನತುಗೊಳಿಸಲಾಗಿದೆ. ಅಮಾನತುಗೊಂಡವರಲ್ಲಿ ಶೇಕಡ 60ರಷ್ಟು ಅಧಿಕಾರಿಗಳು ಬೆಂಗಳೂರಿನವರು.

ಕೆಲವು ಪೊಲೀಸರು ದರೋಡೆ, ಕಳ್ಳತನ, ಕೊಲೆ ಮತ್ತು ವಂಚನೆಯಂತಹ ಗಂಭೀರ ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ. ಅಮಾನತುಗೊಂಡ ಸುಮಾರು 400 ಪೊಲೀಸ್ ಅಧಿಕಾರಿಗಳು ಈಗಾಗಲೇ ತಪ್ಪಿತಸ್ಥರೆಂದು ಕಂಡು ಬಂದಿದೆ.

ಲೈಂಗಿಕ ಕಿರುಕುಳ, ಅಕ್ರಮ ಬಂಧನ, ಎಫ್‌ಐಆರ್ ದಾಖಲಿಸುವಲ್ಲಿ ವಿಳಂಬ, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳದಿರುವುದು, ನಕಲಿ ಪಾಸ್‌ಪೋರ್ಟ್‌ಗೆ ನೆರವು ಮತ್ತು ರೌಡಿ ಶೀಟರ್ ದಾಖಲೆಗಳನ್ನು ತಿರುಚುವ ಆರೋಪಗಳನ್ನು 50ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಎದುರಿಸುತ್ತಿದ್ದಾರೆ ಎಂದು ವರದಿಯಾಗಿದೆ.

ಬಿಜೆಪಿ ನಾಯಕ ಯೋಗೇಶ ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಧಾರವಾಡದ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರಿಗೆ ನ್ಯಾಯಾಲಯವು ಏಳು ವರ್ಷ ಶಿಕ್ಷೆ ವಿಧಿಸಿದೆ.

ಮತ್ತೊಂದು ಘಟನೆಯಲ್ಲಿ ಪೊಲೀಸ್ ಕಿರುಕುಳಕ್ಕೆ ಸಂಬಂಧಿಸಿದಂತೆ ವಿದ್ಯಾರ್ಥಿ ಆತ್ಮಹತ್ಯೆ ಮಾಡಿಕೊಂಡ ಪ್ರಕರಣದಲ್ಲಿ ಧಾರವಾಡದ ಒಬ್ಬ ಪೊಲೀಸ್ ಇನ್‌ಸ್ಪೆಕ್ಟರ್ ಹಾಗೂ ಮೂವರು ಕಾನ್‌ಸ್ಟೇಬಲ್‌ಗಳನ್ನು ಅಮಾನತುಗೊಳಿಸಲಾಗಿದೆ. ದಾವಣಗೆರೆಯಲ್ಲಿ ಇಬ್ಬರು ಪೊಲೀಸ್ ಸಬ್ ಇನ್‌ಸ್ಪೆಕ್ಟರ್‌ಗಳು ಹಿರಿಯ ಅಧಿಕಾರಿಗಳಂತೆ ನಟಿಸಿ, ಚಿನ್ನದ ವ್ಯಾಪಾರಿಯಿಂದ 80 ಗ್ರಾಂ ಚಿನ್ನ ದೋಚಿದ ಆರೋಪ ಎದುರಿಸುತ್ತಿದ್ದಾರೆ.

'ಕೆಲ ಪೊಲೀಸರು ತಾವು ತಪ್ಪಿಸಿಕೊಳ್ಳಬಹುದು ಎಂಬ ನಂಬಿಕೆಯಿಂದ ಅಪರಾಧ ಕೃತ್ಯಗಳಲ್ಲಿ ತೊಡಗಲು ಧೈರ್ಯ ಮಾಡುತ್ತಾರೆ. ಒಮ್ಮೆ ಸಿಕ್ಕಿಬಿದ್ದ ಬಳಿಕ ಅನೇಕರು ತಾವು ಎಸಗಿದ ಅಪರಾಧಕ್ಕೆ ಪಶ್ಚಾತ್ತಾಪ ಪಡುತ್ತಾರೆ' ಎಂದು ರಾಜ್ಯ ಗುಪ್ತಚರ ವಿಭಾಗದ ಮಾಜಿ ಮುಖ್ಯಸ್ಥ ಗೋಪಾಲ್ ಹೊಸೂರ್ ಹೇಳಿದರು.

ಮುಖ್ಯಾಂಶಗಳು

- 713 ಅಧಿಕಾರಿಗಳ ಪೈಕಿ 95 ಮಂದಿ ವಿರುದ್ಧ ಕ್ರಿಮಿನಲ್ ಪ್ರಕರಣ
- ಶೇ 60ರಷ್ಟು ಅಧಿಕಾರಿಗಳು ಬೆಂಗಳೂರಿನವರು
- 400 ಪೊಲೀಸ್ ಅಧಿಕಾರಿಗಳು ತಪ್ಪಿತಸ್ಥರೆಂದು ಸಾಬೀತು

ಚುನಾವಣೆಗೂ ಮುನ್ನ ಟಿವಿಕೆ ಗೆಲುವಿನ ಭವಿಷ್ಯ ನುಡಿದಿದ್ದ ರಿಕಿ ರಾಧನ್ ಪಂಡಿತ್

ವಿಶೇಷ ಕರ್ತವ್ಯ ಅಧಿಕಾರಿಯಾಗಿ ಜ್ಯೋತಿಷಿ

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ತಮ್ಮ ವಿಶೇಷ ಕರ್ತವ್ಯ ಅಧಿಕಾರಿಯನ್ನಾಗಿ (ಒಎಸ್‌ಡಿ) ಜ್ಯೋತಿಷಿ ರಿಕಿ ರಾಧನ್ ಪಂಡಿತ್ ವೆಟ್ರಿವೇಲ್ ಅವರನ್ನು ಮಂಗಳವಾರ ನೇಮಕ ಮಾಡಿದ್ದಾರೆ.

ರಿಕಿ ರಾಧನ್ ಅವರು ವಿಜಯ್ ಅವರ ಜ್ಯೋತಿಷಿಯಾಗಿದ್ದು, ರಾಜಕೀಯ ವಿಚಾರಗಳಿಗೆ ಸಂಬಂಧಿಸಿದಂತೆ ಸಲಹೆಗಳನ್ನು ನೀಡುತ್ತಿದ್ದರು. ಒಎಸ್‌ಡಿಯಾಗಿ ಜ್ಯೋತಿಷಿಯ ನೇಮಕವು ಸಾಮಾಜಿಕ ಮಾಧ್ಯಮದಲ್ಲಿ ಟೀಕೆಗೆ ಗುರಿಯಾಗಿದೆ.

ಪ್ರಭಾವಿ ರಾಜಕೀಯ ನಾಯಕರ ಜ್ಯೋತಿಷಿ ಎಂದು ಬಿಂಬಿಸಿಕೊಂಡಿದ್ದ ರಿಕಿ, ಅವರು ಮಾಜಿ ಮುಖ್ಯಮಂತ್ರಿ, ದಿವಂಗತ ಜಯಲಲಿತಾ ಹಾಗೂ ಬಿಜೆಪಿ ನಾಯಕ ಎಲ್.ಕೆ. ಅಡ್ವಾಣಿ ಅವರಿಗೂ ಆಪ್ತರಾಗಿದ್ದರು ಎನ್ನಲಾಗಿದೆ.

ಕಾಂಗ್ರೆಸ್ ಸಂಸದ ಸಸಿಕಾಂತ ಸೆಂಥಿಲ್ ಅವರು ನೇಮಕಾತಿ ಪತ್ರವನ್ನು ಲಗತ್ತಿಸಿ, ಮುಖ್ಯಮಂತ್ರಿಯ ಸಾಮಾಜಿಕ ಮಾಧ್ಯಮ ಖಾತೆಗೆ ಟ್ಯಾಗ್ ಮಾಡಿ 'ಎಕ್ಸ್‌'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಜ್ಯೋತಿಷಿಗೆ ಒಎಸ್‌ಡಿ ಸ್ಥಾನ ಏಕೆ ಬೇಕು? ಯಾರಾದರೂ ವಿವರಿಸುತ್ತೀರಾ?' ಎಂದು ಮಾಜಿ ಐಎಎಸ್ ಅಧಿಕಾರಿ ಹಾಗೂ ತಿರುವಳ್ಳೂರು ಕ್ಷೇತ್ರದ ಸಂಸದ ತಮ್ಮ ಖಾತೆಯಲ್ಲಿ ಉಲ್ಲೇಖಿಸಿದ್ದಾರೆ. ಈ ಪೋಸ್ಟ್ ಸಾಮಾಜಿಕ ಮಾಧ್ಯಮದಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ.

717 ಮದ್ಯದಂಗಡಿ ಮುಚ್ಚಲು ಆದೇಶ

ಪೂಜಾ ಸ್ಥಳಗಳ ಬಳಿ ಇರುವ 276 ಮದ್ಯದಂಗಡಿ ಸೇರಿದಂತೆ ಒಟ್ಟು 717 ಸರ್ಕಾರಿ ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ಮುಚ್ಚುವಂತೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು ಮಂಗಳವಾರ ಆದೇಶಿಸಿದ್ದಾರೆ.

ಮಹಿಳೆಯರು ಹಾಗೂ ಕೆಲವು ರಾಜಕೀಯ ಪಕ್ಷಗಳ ಬೇಡಿಕೆಯನ್ನು ಪರಿಗಣಿಸಿ, ಸಾರ್ವಜನಿಕರ ಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮಕೈಗೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪ್ರಾರ್ಥನಾ ಸ್ಥಳಗಳ ಹತ್ತಿರದಲ್ಲಿರುವ 276, ಶಿಕ್ಷಣ ಸಂಸ್ಥೆಗಳ ಸಮೀಪದಲ್ಲಿರುವ 186 ಹಾಗೂ ಬಸ್ ನಿಲ್ದಾಣಗಳ ಬಳಿಯಿರುವ 255 ಮದ್ಯದಂಗಡಿಗಳನ್ನು ಎರಡು ವಾರಗಳಲ್ಲಿ ಮುಚ್ಚಲಾಗುವುದು ಎಂದಿದೆ.

ರಾಜ್ಯದಲ್ಲಿರುವ ಎಲ್ಲ ಮದ್ಯದಂಗಡಿಗಳನ್ನು ಮುಚ್ಚಬೇಕು. ಮದ್ಯ ನಿಷೇಧ ಜಾರಿಗೊಳಿಸಬೇಕು ಎಂದು ಮಹಿಳೆಯರು ಆಗ್ರಹಿಸುತ್ತಿದ್ದಾರೆ. ಈ ಬೇಡಿಕೆಗೆ ಪಿಎಂಕೆ ಕೆಲವು ರಾಜಕೀಯ ಪಕ್ಷಗಳೂ ದನಿಗೂಡಿಸಿವೆ.

'ಧಾರ್ಮಿಕ ಪೂಜಾ ಸ್ಥಳಗಳು, ಶಿಕ್ಷಣ ಸಂಸ್ಥೆಗಳ ಸಮೀಪದಲ್ಲಿ ಟಾಸ್ಮಾಕ್ ಮಳಿಗೆಗಳು ಇಲ್ಲ. ಪ್ರಚಾರ ತಂತ್ರವಿದು' ಎಂದು ಡಿಎಂಕೆ ವಕ್ತಾರ ಸರವಣನ್ ಅಣ್ಣಾದೊರೈ ಸಾಮಾಜಿಕ ಮಾಧ್ಯಮದಲ್ಲಿ ಲೇವಡಿ ಮಾಡಿದ್ದಾರೆ.

ತಮಿಳುನಾಡು ಸರ್ಕಾರದ ಪ್ರಮುಖ ಆದಾಯ ಗಳಿಕೆಯಲ್ಲಿ ಮದ್ಯ ಮಾರಾಟವೂ ಒಂದಾಗಿದೆ. ತಮಿಳುನಾಡು ಸ್ಟೇಟ್ ಮಾರ್ಕೆಟಿಂಗ್ ಕಾರ್ಪೊರೇಷನ್ (ಟಾಸ್ಮಾಕ್) ರಾಜ್ಯದಾದ್ಯಂತ 4,765 ಚಿಲ್ಲರೆ ಮದ್ಯದಂಗಡಿಗಳನ್ನು ನಿರ್ವಹಿಸುತ್ತಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬಿಸಿಲು ಹಾಗೂ ಮೋಡ ಕವಿದ ವಾತಾವರಣ ಇರಲಿದೆ

‘ಕುರ್ಚಿ ಸಂಘರ್ಷದಿಂದ ಪಾಲಿಕೆ ಚುನಾವಣೆ ಮುಂದಕ್ಕೆ’

ಬೆಂಗಳೂರು: ‘ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ನಡುವಿನ ಕುರ್ಚಿ ಸಂಘರ್ಷದ ಕಾರಣಕ್ಕೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ 5 ಪಾಲಿಕೆಗಳ ಚುನಾವಣೆ ಮುಂದೂಡುವ ಪ್ರಯತ್ನ ನಡೆಸಲಾಗುತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಉಪ ಮುಖ್ಯಮಂತ್ರಿ ಅನುಪಸ್ಥಿತಿಯಲ್ಲಿ ಮುಖ್ಯಮಂತ್ರಿ ಅವರೇ ಚುನಾವಣಾ ಆಯೋಗದ ಸಿಬ್ಬಂದಿಯನ್ನು ಕರೆದು ಚರ್ಚಿಸಿ ಚುನಾವಣೆ ನಡೆಸುವಂತೆ ಒತ್ತಡ ಹಾಕಿದರು. ಈ ವಿಷಯ ತಿಳಿದ ಉಪ ಮುಖ್ಯಮಂತ್ರಿ ಮತ್ತೊಂದು ಸಭೆ ನಡೆಸಿ ಸದ್ಯವೇ ಸಭೆ ನಡೆಸದಂತೆ ಸೂಚನೆ ನೀಡಿದರು. ಶಿವಕುಮಾರ್ ಅವರ ಒತ್ತಡದ ನಂತರ ಚುನಾವಣೆಯನ್ನು ಸೆಪ್ಟೆಂಬರ್‌ವರೆಗೂ ನಡೆಸದಂತೆ ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಅರ್ಜಿ ಸಲ್ಲಿಸಿದೆ ಎಂದು ಟೀಕಿಸಿದರು.



ಎಚ್.ಡಿ. ಕುಮಾರಸ್ವಾಮಿ

‘ಚುನಾವಣೆ ನಡೆದರೆ ಮುಖ್ಯಮಂತ್ರಿ ಸ್ಥಾನ ಆರು ತಿಂಗಳು ಭದ್ರ ಆಗಲಿದೆ ಎಂದು ಸಿದ್ದರಾಮಯ್ಯ ಯೋಚಿಸಿದರೆ, ವ್ಯತ್ಯಾಸವಾದರೆ ಮುಖ್ಯಮಂತ್ರಿ ಸ್ಥಾನ ಸಿಗುವುದಿಲ್ಲ ಎನ್ನುವ ಭಯ ಶಿವಕುಮಾರ್ ಅವರದ್ದು. ಮುಖ್ಯಮಂತ್ರಿ ಕುರ್ಚಿ ಕಿತ್ತಾಟದಲ್ಲಿ ಮೂರು ವರ್ಷ ಹಾಳು ಮಾಡಿಕೊಂಡಿದ್ದಾರೆ. ಈ ಸರ್ಕಾರ ತೆರಿಗೆ ಹಾಕಿ ಬೆಂಗಳೂರು ಜನರನ್ನು ಕಿತ್ತು ತಿನ್ನುತ್ತಿದೆ. ಈಗ ಮತ ಕೇಳಲು ಹೋದರೆ ಬೆಂಗಳೂರು ಜನ ಏನು ಮಾಡುತ್ತಾರೆ ಎನ್ನುವುದು ಇವರಿಗೆ ಚೆನ್ನಾಗಿ ಗೊತ್ತಿದೆ. ಹೀಗಾಗಿ ಚುನಾವಣೆ ನಡೆಸಲು ಹೆದರುತ್ತಿದ್ದಾರೆ’ ಎಂದು ಹೇಳಿದರು.

ಸೋಲುವ ಭಯದಿಂದ ಚುನಾವಣೆ ಮುಂದೂಡಿಕೆಗೆ ಯತ್ನ: ಸಿ.ಟಿ. ರವಿ ಟೀಕೆ

ಬೆಂಗಳೂರು: ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ನೆಲಕಚ್ಚಬಹುದು ಎಂಬ ಭಯದಿಂದ ಕಾಂಗ್ರೆಸ್ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿದೆ ಎಂದು ಬಿಜೆಪಿಯ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಜಿಬಿಎ ವ್ಯಾಪ್ತಿಯ ಪಾಲಿಕೆಗಳ ಚುನಾವಣೆ ಮುಂದೂಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಪ್ರಮಾಣ ಪತ್ರ ಸಲ್ಲಿಸಲು ಈ ಭಯವೇ ಕಾರಣ ಎಂದರು.

‘ಅಧಿಕಾರ ವಿಕೇಂದ್ರೀಕರಣದ ಬಗ್ಗೆ ದೊಡ್ಡ ದೊಡ್ಡ ಮಾತನಾಡುವ ಕಾಂಗ್ರೆಸ್‌ನವರು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸಲೂ ಹಿಂದೇಟು ಹಾಕುತ್ತಿದ್ದಾರೆ. ಚುನಾವಣೆಗಳನ್ನು ಮುಂದೂಡಲು ಸಬೂಬುಗಳನ್ನು ಹುಡುಕಬೇಡಿ’ ಎಂದರು.

ಚಿರತೆ ಸೆರೆಗೆ ಶೋಧ

ಮಹದೇಶ್ವರ ಬೆಟ್ಟ (ಚಾಮರಾಜನಗರ ಜಿಲ್ಲೆ): ಮಹದೇಶ್ವರ ಬೆಟ್ಟದ ನಾಗಮಲೆಗೆ ಪಾದಯಾತ್ರೆ ಹೊರಟಿದ್ದ ಬಾಲಕನನ್ನು ಕೊಂದು ಹಾಕಿದ ಚಿರತೆ ಸೆರೆಗೆ ಅರಣ್ಯ ಇಲಾಖೆ ತೀವ್ರ ಶೋಧ ನಡೆಸಿದೆ.

ನಾಗಮಲೆ ಗ್ರಾಮದಲ್ಲಿ ಚಿರತೆಯೊಂದು ಸೋಮವಾರ ರಾತ್ರಿ ಎರಡು ಮೇಕೆಗಳನ್ನು ಹೊತ್ತೊಯ್ದಿದ್ದು, ಸ್ಥಳೀಯರ ಆತಂಕ ಹೆಚ್ಚಿದೆ.

ಇಲಾಖೆಯ 40 ಸಿಬ್ಬಂದಿಯನ್ನು ಒಳಗೊಂಡ ತಂಡ ಅರಣ್ಯದೊಳಗೆ ಮಂಗಳವಾರ ಕಾರ್ಯಾಚರಣೆ ನಡೆಸಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

WANTED ENGLISH MEDIUM TRAINED B.Ed/ D.Ed LADY TEACHERS for Primary and High School to teach Maths & Science/ English/ Hindi/ Computer Faculty/ NTT Trained Salary with PF and ESI Facilities Contact in Person- 10am- 3pm on all working days- Secretary, Deccan Educational Society®, Near Sampige Theater Malleswaram Mob: 9353382686

Dr. Sri. Sri. Sri. Shivakumara Mahaswamy College of Engineering & Polytechnic
(Affiliated to VTU, Belgaum & Approved by AICTE, New Delhi)
Byranayakanahalli, Nelamangala Taluk, Bangalore Rural District - 562 132
Email: recruitdrsmce2211@gmail.com Website: www.drsmce.org

Faculty Positions Required for Engineering & Polytechnic

Applications are invited for the posts of Professors, Associate Professors and Asst. Professors in the following Disciplines...

- Computer Science & Engineering
- Information Science & Engineering
- Electronics & Communication Engineering
- Electrical & Electronics Engineering
- Mechanical Engineering
- Civil Engineering
- Basic Science Department : Physics, Chemistry and Mathematics
- MBA (Marketing, Finance, HR)
- Training and Placement Officer
- Physical Education Director
- Librarian and Asst. Librarian

Non Teaching Posts

- Accountant, FDA, SDA.
- Typists (Kannada & English)
- Wardens : Boys Hostel & Girls Hostel
- Receptionist, Drivers
- Foremen, Instructors and Attenders in the above Departments

Qualification and Pay Scale: As per AICTE norms

Note: For the posts of Professor & Associate Professor, Candidates having Ph.D is mandatory. Apply through email and send hard copy of your resume to the address shown above so as to reach on or before 7days from the date of advertisement.

Dr. K.S. Jagadeesh Gowda, Principal 98455 83294 — Sri D.C. Venugopal, Chairman

Brindavan College of Engineering
BRINDAVAN GROUP OF INSTITUTIONS
Dwarakanagar, Bagalur Main Road, Yelahanka, Bengaluru-560063
Recognised by Government of Karnataka,
Approved by AICTE
Affiliated to Visvesvaraya Technological University (VTU) Accredited by NAAC
www.brindavancollege.edu.in Ph: +91 8023478388 / 8423, +91 9606050612

Invites Applications from Suitable Applicants for the Proposed Vacancies:

Teaching: Assistant Professor/ Associate Professor / Professor
In CSE, ISE, AI&ML, IOT, ECE, MBA, MCA, BCA, Diploma (ECE) & Language (Kannada) Department
Qualification: BE / B.Tech /ME / M.Tech / MCA / MBA / MA /M.Sc with 1st Class, and Ph.D as per UGC norms
Experience: As per AICTE guidelines (Teaching / Research / Industry) with good teaching and research credentials

Non-Teaching: IT, Driver & Tele callers.
Qualification: Graduate in relevant discipline
Experience: Minimum 0-5 years in College.

Interested and eligible candidates with mentioned qualifications may send the detailed resume to **hr@brindavancollege.com** and also send your detailed resume with relevant Credentials/Testimonials to the following Address: **The HR, Brindavan Group of Institutions,** Dwarakanagar, Bagalur Main Road, Yelahanka, Bengaluru-560063 on or before **27 May 2026.**

- Salary for the prescribed posts and desired candidate is as per the AICTE norms.
- The applicant with Ph.D in relevant field from UGC recognised Universities are preferable.
- The eligible and shortlisted candidates shall be communicated for the selection process.

ADMISSIONS OPEN FOR 2026-2027
Contact: 9606487201 / 080-28478388 / 28478423

Sd/- CEO

VIDHYODAYA PUBLIC ENGLISH PRIMARY AND HIGH SCHOOL
No 34, 31st Main Road, Nandini Layout, Bengaluru -96
WANTED
1) Head Mistress - M.A / M.Sc with B.Ed
2) Kannada Teacher - M.A with B.Ed
3) PCM graduate with B Ed.
4) B.A/ B.Ed (English) for primary.
5) B.Sc (CBZ) with B.Ed .for Primary.
6) B.Sc (PCM) with B.Ed for Primary.
7) Hindi Teacher for Primary.
Contact No.: 9481476037, 8310456547
Gmail: Vidhyodayapublicenglishschool@gmail.com

ARVIND RESIDENTIAL SCHOOL & PU COLLEGE
Kunigal. Ph: 08132-210000/ 01.
Mob: 9945210041/ 9483683002.
Website: www.arvindinternationalschool.com, www.arvindpucollege.com
REQUIRES DEDICATED & PASSIONATE PROFESSIONALS WITH GOOD COMMUNICATION SKILLS
▸ PRINCIPAL ▸ VICE PRINCIPAL
▸ CO-ORDINATOR ▸ ICSE Maths (H/S)
Experienced in ICSE, CBSE, STATE syllabus
(Preferably Karnataka residents only)
Send your resume with recent passport size photo to airsjobs@gmail.com within 5 days

Engg/ Production Technical

ELECTRONICS CITY INDUSTRIAL TOWNSHIP AUTHORITY
ELCITA
Sy No. 13P & 18P, West Avenue 8, Electronics City Phase-1, Bengaluru : 560 100, Karnataka
Website: www.elcita.in; Phone: 080-69360000
ELCITA invites applications from suitable candidates for the position of
Assistant Engineer - Civil
- Candidate should be a graduate in civil engineering with 3-5 years of experience in construction/maintenance of infrastructure.
- Knowledge of Kannada and English are essential.

For JD, Biodata Form and more details visit: www.elcita.in
Last date for receipt of applications along with CV and ELCITA Biodata form: 17 May 2026 before 5PM
Email ID: franklin.b@elcita.in

RENTAL PROPERTIES

Accommodation Available

Industrial And Factory

AVAILABLE INDUSTRIAL Warehouse 160000 sqft Vijipura Hoskote Contact: 9341234288/ 9663224353/ 9845417487.

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

BUSINESS

Business Offers

Business For Sale

USED AS good as new-weld mech machine-4nos, wire straightening & cutting machine-16 nos. interested contact on 98866 12942 & 88802 70330 mail ID is: usedmachines2026@gmail.com

IMPACT COLLEGE OF ENGINEERING & APPLIED SCIENCES
Kodigehalli, Sahakaranagar, Bangalore-560092.
VTU Approved.
AICTE Norms apply for Qualifications & Salaries
FACULTY POSITION OPEN
PROFESSOR
PROFESSORS (PhD | 10+ Yrs) Artificial Intelligence & Machine Learning, Civil Engineering Computer Science & Engg CSE (Cyber Security / Data Science) Electronics & Communication Engineering
ASSOCIATE PROFESSOR
ASSOCIATE PROFESSORS (PhD | 8+ Yrs) CSE, AI&ML, MBA, Thermal Engg Automation & Robotics, Civil, Mechanical, ECE
ASSISTANT PROFESSOR
ASSISTANT PROFESSORS (M.Tech / MBA | 3+ Yrs) AI&ML, CSE, CSE Cyber Security
OTHER STAFF
Foreman / Supervisor Instructors / Mechanics Helpers
Apply: careers@impact.ac.in; Call: +91 80500 11866 +91 80233 34101
IMP-26705

BHARATHAMATHA EDUCATION SOCIETY, Wanted Immediately LIBRARIAN: B.Lib/M.Lib Graduates with experience in Institutional Library Management OFFICE_MANAGER: Experienced Lady Commerce Graduates, with Good Computer knowledge including Tally, Proficiency in Kannada and English Typing. Very good knowledge of Accounts Maintenance. Please apply Immediately with a detailed Resume with Photograph, to reach on or before 18/05/2026.To The Secretary, BHARATHAMATHA EDUCATION SOCIETY, Hanumanthanagar, Bangalore- 560019 Phone: 9110669225 Email: bharathamatha.edusoc@gmail.com

BET INSTITUTIONS BISMILLAHNAGAR, BGT ROAD, BANGALORE-29 Wanted: BET INSTITUTIONS is in need of faculties for the following positions (only Ladies preferred) 1. Head Mistress for BET Sufia High School, QR: M.A/ M.SC/ M.COM, B.ED 2. Head Mistress for BET Higher Primary School, QR: M.A/ M.SC/ M.COM, B.ED 3. Asst. Prof. to teach English in BET Sadathunnisa Degree College, QR: MA (English), Part Time 4. Asst. Teacher to teach science in BET Sufia High School, QR: B.Sc, B. Ed (PCM/CBZ), Full Time 5. Asst. Teacher in BET Higher Primary School a. PUC with NTT, 1 post b. PUC/ Graduate with D. Ed, 1 post c. B.Sc, B.Ed, 1 post d. Physical Education Teacher, B. PED, 1 post. Apply with a copy of certificates at Address: Bismillah Educational Trust, Bismillahnagar BGT Road, Bangalore-29. Contact: 9845280144 Email: bismillah.wc@gmail.com

ದಿ ಸ್ಪೋರ್ಟ್ಸ್ ಸ್ಕೂಲ್
ಕನಕಪುರ ರಸ್ತೆ.
ಬೇಕಾಗಿದ್ದಾರೆ
PGT/TGT ಶಿಕ್ಷಕರು
CBSE ಮತ್ತು ಕಾಲೇಜು ವಿಭಾಗಗಳಿಗೆ ಯೋಗ ಮತ್ತು ಗ್ರಂಥಪಾಲಕರ ಜೊತೆಗೆ ವಿವಿಧ ಬೋಧನಾ ಹುದ್ದೆಗಳಿಗೆ ಬೇಕಾಗಿದ್ದಾರೆ.
ಅರ್ಹತೆ: ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು.
ಅರ್ಜಿ ಸಲ್ಲಿಸಲು: ಆಸಕ್ತರು ನಿಮ್ಮ ಮಾಹಿತಿಯನ್ನು careers@thesportsschool.com ಇಮೇಲ್ ಮಾಡಿ.

WANTED B.A., B.Ed. Lady Teachers to teach Kannada and English for High School. Contact:- Max Muller English High School, No. 173/1, 3rd Main, H.V.R. Layout, Magadi Main Road, Bangalore-79. Ph: 23284559, 23285559. info@maxmullerhighschool.com

WE ARE HIRING
1) AC TECHNICIAN
2) PROJECT ENGINEERS
3) HELPERS
Experienced / Fresher
Qualification:
ITI (All Trade) Diploma & Any Engineering Background.
Salary as per Indusrial Standard.
Location : Bangalore
Apply Now / Walk in Directly
Glossarry Comfort Network
Punyabhoomi Layout, Hormavu Post, Kalakere Village, Bangalore-560043
E-mail : info@glossarycomfort.com
For more details contact: 9845533315 / 9686388868

WANTED EXPERIENCED MARKETING EXECUTIVE`For`a Consultant on Statutory Matters. Contact: G.Subramaniam BIMS Consulting Group Nr Shivananda Circle. (9448575683) bimsconsult@yahoo.com

Cook

WANTED A LADY BRAHMIN COOK
To work for a family in JP Nagar 3 hours in the Morning Only. Salary Rs.15000 to 20000 Per Month. Call: 89705 50662

Wanted

WANTED FEMALE STAFF
Logistics Company Exclusive Ladies Office Post: Audit Assistance & Accounts Clerk
Qualification:
8th Std & above Salary based on experience & Hard work.
Interested candidates can attend the interview personally at the below address with educational certificates.
Time: 11 AM to 5 PM (Monday to Saturday)
Address: Karnataka Road Lines Pvt Ltd, "Elegance Royalle" No.16 (unit #301 to 310) 4th Floor JC Road, 2nd Cross, Behind VISL House Backside Shell Petrol Bunk, Bangalore - 560002.
Email Id: accounts@krlmrl.net

WANTED Sales Girls for Show Room, Around Rajajinagar Contact: 080-23353406/ 9845359345/ 9880778440

AUTOMOTIVE

Four Wheelers Selling

Tata

TATA HEXA 2017 Model, White. Done 56,000 kms. Three new tyres are in good condition. Single owner, excellent condition. Price expected 8.30 lakhs. No loan, insurance paid. Immediate settlement. No Brokers. Negotiable to some extent. Contact: 9845885199.

I, FARUQ UL AMIN, S/o.H.P.Mohamed Murthuza, R/at.No.29, 4th`Main, Opp.Maruthi Layout, BTM`1st`Stage, near Water`Tank Bangalore South Bengaluru-560029. have`changed my`Name`from MOHAMED MURTHUZA FARUQ UL AMIN to FARUQ UL AMIN vide`Affidavit dated-12.05.2026 sworn before`Notary Mohammed Hussain.K Bangalore-60.

I, R.R.NIRANJAN R/a.Flat#106 A`Block 1st Floor,Mantri Alpyne,BSK 5th`Stage Uttarahalli Main`Road Bengaluru 560061 have`Changed`my minor Daughter's name`from SVASTII_N RAJA to SVASTII NIRANJAN_RAJA (DOB:20.7.2009) vide`affidavit dated:11.5.2026 before`Notary B.Gopalakrishna Bengaluru.

CHANGE OF NAME
I **DIVYA NAIK** and **DIVYA ASHOK NAIK** R/at Flat No 101, 8B Block, Provident Sunworth, Venkatapura, Kengeri, Bangalore-560060, hereby declare that the above names pertain to me only and name was entered **DIVYA NAIK** in my all educational records and **DIVYA ASHOK NAIK** in all other documents. Henceforth I shall be known as **DIVYA ASHOK NAIK** in future and all correspondence shall be made as **DIVYA ASHOK NAIK** vide affidavit dated 07-05-2026 before notary Ravi, Bengaluru.

I, BEENA Roy, Beena Rai, Beena Ray W/O Late. Raghunatha Panicker born on 1/10/1954 residing at 28/29 Unnathi Chowdappa Layout, Doddabetahalli, Vidyaranyapura, Bangalore 560097, have changed my name to Beena Panicker. affidavit dated 09/05/2026 at Bangalore.

PERSONAL

Change of Name

CHANGE OF NAME
I, **Shree Vaishnavi V,** residing at No. 57/11, 123, ITPL Road, Opp: BSNL Office, Kundalahalli Bangalore-560037, have changed my name to **VAISSHNAVI V** vide affidavit dated 06-05-2026 before notary Yankoba, Bangalore. Henceforth I shall be called **VAISSHNAVI V** only

CHANGE OF NAME
I, **NAVYA B P DEB,** residing at No. Flat A 305, 3rd Floor, Lourdes Nest, 9th Cross, Manjunatha Layout, 3rd Phase, Basavanapura MN Road, K.R. Puram, Bengaluru-560036, have changed my name to **NAVYA PRABHU** vide affidavit dated 18-01-2025 before notary Jain Swarnamala, Bengaluru. Henceforth I shall be called **NAVYA PRABHU** only

Lost

DOCUMENT LOST
I, K. Sudhakar Reddy No. 652, 11th Main, HAL 2nd Stage, Bangalore-560038, have lost my Property Document No. 833 and 834 (Bheemunipatnam Sub-Registrar Office, Andrapradesh) lost on 11-05-2026 at CMH Road, Bangalore
Lost Report No. 2197143/2026
Finders please contact: 96633 71691 or inform near by Police Station

HERITAGE PUBLIC SCHOOL Srinidhi Layout 7th Phase JP Nagar Konanakunte, requires SCIENCE ENGLISH and KANNADA TEACHERS for Middle School and KINDERGARTEN TEACHERS. WhatsApp or email resume to Mob : 9901733776. Email : heritagepublicschoolkk@gmail.com

WANTED SOCIAL & English Teacher High School/ Primary State Syllabus, Cambridge English School, Mathikere, Yeshwanthpur, Bangalore. Contact: No. 9379191544.

WANTED FOR immediate appointment SCIENCE (CBZ) TEACHER for CAMLIN HIGH SCHOOL Hampinagar, Vijayanagar 2nd Stage, Bangalore-104. WALK.IN INTERVIEW. Cantact: 23301363

Required qualified and experienced Staff:
- **Computer Science Teacher** - MCA / BCA
- **Office Assistant** with Computer knowledge and Administrative skills
- Experienced lady **Physical Education Teacher** (B.P.Ed)

Send your resume to: **st.thomaswfd@gmail.com**
St. Thomas School, 311, Inner Circle, Whitefield, Bangalore-66
Ph: 080-28452484

HRD & Admin

WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

REAL ESTATE BUYING

General

General

WE DO FUNDING & Solutions/ Settlementsfor disputed properties under Bank,High Court, Civil/DC/AC/Tribunal/ Tahsildar courts pending cases.Contact Verna Developers, Barton Centre, MG Road,Blr. 9620253180.

WANTED MALE Candidates to Teach English & Social Science for VIII and IX Std- 6.00pm to 9:00pm Contact : The Secretary, Deccan Educational Society®, Mob: 9353382686

WANTED PRINCIPAL to Guide and Manage the Staff and-students-on Academic and Administrative School Matters as also to Liaise with Govt. Departments on various issues. PRINCIPALS Retired Recently Will Also Be Considered. apply SRI AYYAPPAN EDUCATIONAL INSTITUTIONS, Benson Town Bangalore-46. Whatsapp:9845276609

SRI-AYYAPPAN NURSERY PRIMARY AND HIGH SCHOOL BENSON TOWN BANGALORE-46 (9986155417/9113062970) WANTED GARDUATES WITH B.Ed, PUC WITH NTT/MONTESSORI PE TEACHER sriayyappaninstitutions@gmail.com

WANTED: AL-AMEEN Kambalposh English Higher Primary School is in need of Asst. Teachers to teach Maths and Science QR: BSc, BEd (PCM/ CBZ) and a Trained Nursery Teacher. Apply with a copy of Certificates to The Madani Educational Trust, No. 1/3, Colonel Hill Road, Shivajinagar, Bengaluru- 560051. Contact: 9448091177/ 9945365598. Email ID. madani1974.trust@gmail.com

REQUIRED MATHS and Science Teacher for class 6 to 10 State Board contact The Kenmore School office 31/1 Kanakapura Road, Basavanagudi Near Lalbagh West gate or whatsapp 9901501185

VIDYAVAHINI ENGLISH SCHOOL Anandnagar Bangalore-24 mail:principalvves@srsect.edu.in Ph:080-23538869 9071119031 9343865939 9008396542 Urgently Requires Experienced Qualified Teacher for the-post of Hindi, Chemistry, EVS, Computer Teacher, Moral Science & Van Driver.

Hospital & Medical Jobs

MD PHYSICIAN, Receptionist, Ayah, Nurses for Manjushree Speciality Hospital, near Commercial Street. +91 9164386593, +91 9632267184, 9945235615

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

Marketing & Sales

WANTED SALES Managers, Sales Executives, Telecallers. Opportunity to earn up to 40,000 P.M. Contact 8867627879

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

ಕ್ಲಾಸಿಫೈಡ್ಸ್

ADMISSION CORNER

ಐವರು ಡ್ರಗ್ ಪೆಡ್ಲರ್ ಬಂಧನ

₹1.28 ಕೋಟಿ ಮೌಲ್ಯದ ಹೈಡ್ರೋ ಗಾಂಜಾ ಜಪ್ತಿ • ವಿದ್ಯಾರ್ಥಿಗಳಿಗೆ ಮಾರಾಟ

ಪೊಲೀಸ್ ಠಾಣೆ	ಜಪ್ತಿಯಾದ ಮಾದಕ ವಸ್ತು	ಮೌಲ್ಯ
ಅಶೋಕನಗರ	3 ಕೆ.ಜಿ.222 ಗ್ರಾಂ ಹೈಡ್ರೋಗಾಂಜಾ	₹1.12 ಕೋಟಿ
ಮಲ್ಲೇಶ್ವರ	464 ಹೈಡ್ರೋ ಗಾಂಜಾ	₹16.24 ಲಕ್ಷ

ಪ್ರಜಾವಾಣಿ ವಾರ್ತೆ


ವಶಪಡಿಸಿಕೊಂಡಿರುವ ಮಾದಕ ವಸ್ತು

ಬೆಂಗಳೂರು: ಅಶೋಕನಗರ, ಮಲ್ಲೇಶ್ವರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಹೊರ ರಾಜ್ಯದ ಮೂವರು ಸೇರಿ ಐವರು ಪೆಡ್ಲರ್‌ಗಳನ್ನು ಪೊಲೀಸರು ಬಂಧಿಸಿ, ₹1.28 ಕೋಟಿ ಮೌಲ್ಯದ ಹೈಡ್ರೋಗಾಂಜಾ ಜಪ್ತಿ ಮಾಡಿದ್ದಾರೆ.

ಅಶೋಕನಗರ ಠಾಣೆ ಪೊಲೀಸರು ಕೇರಳದ ಮೊಹಮ್ಮದ್ ಹಮ್ಜಾ (38), ಯಾಸೀರ್ ಅಹಮದ್(37) ಹಾಗೂ ಮಲ್ಲೇಶ್ವರ ಪೊಲೀಸರು ಶ್ರೀನಾಥ್ (28), ಕೊಡಗಿನ ಮೊಹಮ್ಮದ್ ಅಫ್ರಾನ್ (26), ಮೊಹಮ್ಮದ್ ಸಬೀತ್(21) ಎಂಬುವರನ್ನು ಬಂಧಿಸಿ, 3 ಕೆ.ಜಿ. 686 ಗ್ರಾಂ ಹೈಡ್ರೋ ಗಾಂಜಾ ವಶಪಡಿಸಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಸೀಮಾಂತ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಅಪರಾಧ ಸುದ್ದಿ

ಆರೋಪಿಗಳು ವಿದೇಶಿ ಮಾದಕ ವಸ್ತುವನ್ನು ಕೇರಳ ಮೂಲಕ ಕೊಡಗು ಮಾರ್ಗವಾಗಿ ಬೆಂಗಳೂರಿಗೆ ರವಾನೆ ಮಾಡುತ್ತಿದ್ದರು. ವಶಪಡಿಸಿ ಕೊಂಡಿರುವ ಡ್ರಗ್ಸ್‌ನ ಮೌಲ್ಯ ಮಾರುಕಟ್ಟೆಯಲ್ಲಿ ₹2.56 ಕೋಟಿ. ಮಲ್ಲೇಶ್ವರ ಪೊಲೀಸರು ವಶಕ್ಕೆ ಪಡೆದಿರುವ ಆರೋಪಿಗಳು ಮಡಿವಾಳದಲ್ಲಿ ಬಾಡಿಗೆ ಮನೆ ಪಡೆದು ವಾಸವಾಗಿದ್ದುಕೊಂಡು ಬಿಟಿಎಂ ಲೇಔಟ್ ವ್ಯಾಪ್ತಿಯಲ್ಲಿ ಹಣ್ಣಿನ ಜ್ಯೂಸ್ ಅಂಗಡಿ ನಡೆಸುತ್ತಿದ್ದರು. ಕೇರಳದಿಂದ ಹೈಡ್ರೋ ಗಾಂಜಾ ತರಿಸಿ ನಗರದಲ್ಲಿ ಮಾರಾಟ ಮಾಡುತ್ತಿದ್ದರು ಎಂದು ಹೇಳಿದರು.

ಹೆಚ್ಚಿನ ಹಣ ಗಳಿಸುವ ಉದ್ದೇಶದಿಂದ ಅಪರಿಚಿತ ವ್ಯಕ್ತಿಗಳಿಂದ ಕಡಿಮೆ ಬೆಲೆಗೆ ಹೈಡ್ರೋ ಗಾಂಜಾ ಖರೀದಿಸಿ ತರುತ್ತಿದ್ದರು. ನಗರದಲ್ಲಿ ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಮಾರಾಟ ಮಾಡುತ್ತಿದ್ದರು.

ಎಲ್ಲಿಂದ ಪೂರೈಕೆ?: ನೈಜೀರಿಯಾ, ಥಾಯ್ಲೆಂಡ್ ಸೇರಿ ವಿವಿಧ ದೇಶಗಳಿಂದ ಚೆನ್ನೈ ಏರ್‌ಪೋರ್ಟ್, ಬಂದರು ಮೂಲಕ ಕೇರಳಕ್ಕೆ ಪೂರೈಕೆಯಾಗುತ್ತಿದ್ದ ವಿದೇಶಿ ಡ್ರಗ್ಸ್, ಬಸ್, ರೈಲ್ವೆ ಮೂಲಕ ಬೆಂಗಳೂರು ತಲುಪುತ್ತಿದೆ.

ಪ್ರಯಾಣಿಕರು, ಕೂಲಿ ಕಾರ್ಮಿಕರ ವೇಷದಲ್ಲಿ ನಗರಕ್ಕೆ ಆಗಮಿಸುವ ದಂಧೆಕೋರರು ಸ್ಥಳೀಯರ ಸಹಾಯ ಪಡೆದು ಕಾಲೇಜು, ವಿಶ್ವವಿದ್ಯಾಲಯ, ಐಟಿ-ಬಿಟಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು ಎಂಬುದು ಪೊಲೀಸರು ನಡೆಸಿದ ತನಿಖೆಯಿಂದ ಬೆಳಕಿಗೆ ಬಂದಿದೆ.

ಮನೆಗಳ್ಳನ ಸೆರೆ: ₹50 ಲಕ್ಷ ಮೌಲ್ಯದ ವಜ್ರ, ಚಿನ್ನದ ಆಭರಣ ವಶ

ಬೆಂಗಳೂರು: ಮನೆಗಳ ಬೀಗ ಒಡೆದು ಕಳ್ಳತನ ಮಾಡುತ್ತಿದ್ದ ಆರೋಪಿಯನ್ನು ಕೋಣನಕುಂಟೆ ಠಾಣೆ ಪೊಲೀಸರು ಬಂಧಿಸಿ, ₹ 50 ಲಕ್ಷ ಮೌಲ್ಯದ ವಜ್ರ ಹಾಗೂ ಚಿನ್ನದ ಆಭರಣ ವಶಪಡಿಸಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಮಹೇಶ್ ಗೌಡ ಎಂಬಾತನನ್ನು ಬಂಧಿಸಿ, 318 ಗ್ರಾಂ ಚಿನ್ನ ಮತ್ತು ವಜ್ರ, 2 ಕೆ.ಜಿ. 435 ಗ್ರಾಂ ಬೆಳ್ಳಿಯ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಚುಂಚಘಟ್ಟ ಮುಖ್ಯ ರಸ್ತೆಯ ಮೈಸೂರು ಬ್ಯಾಂಕ್ ಕಾಲೊನಿಯಲ್ಲಿ ವಾಸವಿರುವ ರೇಖಾ ಎಂಬುವವರು ಕುಟುಂಬ ಸಮೇತ ಊರಿಗೆ ಹೋಗುವಾಗ ಗೇಟ್ ಕೀಯನ್ನು ಸಂಬಂಧಿಕರ ಮನೆಯಲ್ಲಿ ಕೊಟ್ಟಿದ್ದರು. ವಾಪಸ್ ಬಂದು ನೋಡಿದಾಗ ಬೀರುವಿನಲ್ಲಿದ್ದ ಚಿನ್ನ ಮತ್ತು ವಜ್ರದ ಆಭರಣಗಳು ಕಳವಾಗಿದ್ದವು.

ಈ ಸಂಬಂಧ ದೂರು ದಾಖಲಿಸಿಕೊಂಡ ಪೊಲೀಸರು, ಬಾತ್ಮಿದಾರರ ಮಾಹಿತಿ ಆಧರಿಸಿ ಮತ್ತು ವಿವಿಧ ಆಯಾಮಗಳಲ್ಲಿ ತನಿಖೆ ನಡೆಸಿ ಮದ್ದೂರು ಬಳಿ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದರು.

ಮನೆಯ ಬೀಗ ಒಡೆದು ಚಿನ್ನಾಭರಣ ಕಳ್ಳತನ ಮಾಡಿರುವುದು ಹಾಗೂ ಠಾಣಾ ವ್ಯಾಪ್ತಿಯಲ್ಲಿ ಕೆಲವು ಮನೆಗಳಲ್ಲಿ ಕಳ್ಳತನ ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ ಎಂದು ಪೊಲೀಸರು ಹೇಳಿದರು.

ಕಳವು ಮಾಡಿದ ಚಿನ್ನ ಮತ್ತು ಬೆಳ್ಳಿಯ ವಸ್ತುಗಳನ್ನು ಮದ್ದೂರಿನ ಆಭರಣ ಅಂಗಡಿಗಳಲ್ಲಿ ಅಡಮಾನ ಇಟ್ಟು, ಕೆಲವನ್ನು ಮಾರಾಟ ಮಾಡಿದ್ದ. ಅವುಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಆರೋಪಿಯು ಕೋಣನಕುಂಟೆಯ ಹರಿಹರ ನಗರದಲ್ಲಿ ವಾಸವಾಗಿದ್ದುಕೊಂಡು ಕಳ್ಳತನ ಮಾಡುತ್ತಿದ್ದ. ಈತನ ಬಂಧನದಿಂದ ಠಾಣಾ ವ್ಯಾಪ್ತಿಯ ಐದು ಮನೆ ಕಳವು ಪ್ರಕರಣಗಳು ಪತ್ತೆಯಾಗಿವೆ ಎಂದು ಹೇಳಿದರು.

ಅಂಜನಾದ್ರಿಗೆ ಆಭರಣ: 50 ವರ್ಷ ಖಚಿತ ಬಾಂಡ್

ಕೊಪ್ಪಳ: ರಾಜ್ಯ ಸರ್ಕಾರದ ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯ ಗಂಗಾವತಿ ತಾಲ್ಲೂಕಿನ ಅಂಜನಾದ್ರಿಯ ಆಂಜನೇಯನ ದೇವಸ್ಥಾನಕ್ಕೆ ಹೈದರಾಬಾದ್‌ನ ದಾನಿ ಎ. ಮಹೇಶ ರೆಡ್ಡಿ ಅವರು ದೇಣಿಗೆಯಾಗಿ ನೀಡಿದ ಆಭರಣದಲ್ಲಿ ಚಿನ್ನದ ಅಂಶದ ಖಚಿತತೆ ಬಗ್ಗೆ ಅವುಗಳ ತಯಾರಕರು 50 ವರ್ಷಗಳ ಗ್ಯಾರಂಟಿ ಬಾಂಡ್ ನೀಡಿದ್ದಾರೆ.

ಮಹೇಶ ರೆಡ್ಡಿ ಅವರು 1400 ಗ್ರಾಂ ಚಿನ್ನ ಲೇಪಿತ ಪ್ರಭಾವಳಿ, ಛತ್ರಿ, ಕಿರೀಟ, ಗದೆ ನೀಡಿದ್ದರು. ಕವಚಗಳನ್ನು ತಾಮ್ರದಿಂದ ತಯಾರಿಸಲಾಗಿದ್ದು, ಇವುಗಳಿಗೆ ಬಂಗಾರದ ಲೇಪನಕ್ಕಾಗಿ 60 ಗೇಜ್ ಉಳ್ಳ ಚಿನ್ನದ ಹಾಳೆಗಳನ್ನು ಬಳಸಲಾಗಿದೆ.

ಜಿಲ್ಲಾಡಳಿತ ಕೊಪ್ಪಳ ಹಾಗೂ ನೆರೆಯ ಹೊಸಪೇಟೆಯ ಒಟ್ಟು ನಾಲ್ಕು ಜನ ಅಕ್ಕಸಾಲಿಗರಿಂದ ತಪಾಸಣೆ ಮಾಡಿಸಿದಾಗ ಚಿನ್ನದ ಪ್ರಮಾಣದ ಬಗ್ಗೆ ಎಲ್ಲರೂ ಭಿನ್ನ ವರದಿ ನೀಡಿದ್ದಾರೆ. ಇದು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು.

‘ಆಭರಣದಲ್ಲಿರುವ ಚಿನ್ನದ ಪ್ರಮಾಣದ ಬಗ್ಗೆ ಒಬ್ಬೊಬ್ಬ ಅಕ್ಕಸಾಲಿಗ ವಿಭಿನ್ನ ವರದಿ ನೀಡಿದ್ದಾರೆ. ದೇವಸ್ಥಾನಕ್ಕೆ ನೀಡಿದ ಆಭರಣ ಕರಗಿಸಿ ಅದರಲ್ಲಿ ಬಂಗಾರದ ಪ್ರಮಾಣ ಎಷ್ಟಿದೆ ಎನ್ನುವುದನ್ನು ತೋರಿಸಿಕೊಡುತ್ತೇನೆ. ಅದಕ್ಕೆ ತಗಲುವ ಖರ್ಚು ನೀವೇ ಭರಿಸಬೇಕಾಗುತ್ತದೆ ಎಂದು ಆಭರಣ ತಯಾರಕ ಹೇಳಿದ್ದಾನೆ. ಆದ್ದರಿಂದ ಭಿನ್ನವಾಗಿ ಬಂದ ಎಲ್ಲ ವರದಿಗಳನ್ನು ಒಂದುಗೂಡಿಸಿ ಆಭರಣವನ್ನು ಸರ್ಕಾರದ ಖಜಾನೆಯಲ್ಲಿ ಇರಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಜಿಂಕೆ ಕೊಂಬು ವಶ: ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮಿಳುನಾಡಿನ ಕೃಷ್ಣಗಿರಿಯಿಂದ ನಗರಕ್ಕೆ ಜಿಂಕೆ ಕೊಂಬು ತಂದು ಮಾರಾಟ ಮಾಡುತ್ತಿದ್ದ ಮೂವರನ್ನು ಸಿಸಿಬಿಯ ಅಸಂಘಟಿತ ಅಪರಾಧ ದಳ (ಪೂರ್ವ) ಅಧಿಕಾರಿಗಳು ಬಂಧಿಸಿದ್ದಾರೆ.

ಸಂಜೀವಿನಿ ನಗರದ ಮುರುಳಿ (29), ಮಾರೇನಹಳ್ಳಿಯ ಮಂಜುನಾಥ (39) ಹಾಗೂ ಹನುಮಂತೇಗೌಡ ಲೇಔಟ್‌ನ ಕಾರ್ಯಪ್ಪ (53) ಬಂಧಿತರು.

ಸುಮಾರು ₹10 ಲಕ್ಷ ಮೌಲ್ಯದ ಜಿಂಕೆ ಕೊಂಬನ್ನು ನಗರದ ಚಿಕ್ಕಬಾಣಾವರ ಕಾಲೇಜುವೊಂದರ ಬಳಿ ಮಾರಾಟ ಮಾಡಲು ಮುಂದಾಗಿದ್ದರು. ಖಚಿತ ಮಾಹಿತಿ ಮೇರೆಗೆ ಸಿಸಿಬಿ ಪೊಲೀಸ್ ಇನ್‌ಸ್ಪೆಕ್ಟರ್ ಪಿ.ಸುರೇಶ ನೇತೃತ್ವದಲ್ಲಿ ದಾಳಿ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.


ಮುರುಳಿ


ಮಂಜು


ಕಾರ್ಯಪ್ಪ

ಕಾಡು ಪ್ರಾಣಿಗಳನ್ನು ಹತ್ಯೆಗೈದು ಈ ಕೃತ್ಯ ಮಾಡುತ್ತಿದ್ದಾರೆಯೋ ಅಥವಾ ಮೃತ ಪ್ರಾಣಿಗಳ ಕೊಂಬನ್ನು ಮಾರಾಟಕ್ಕೆ ಯತ್ನ ನಡೆಸುತ್ತಿದ್ದರೋ ಎಂಬ ಬಗ್ಗೆ ತನಿಖೆ ನಡೆಸುತ್ತಿರುವ ಪೊಲೀಸರು, ಈ ಕೃತ್ಯದ ಹಿಂದಿರುವವರ ಪತ್ತೆಗೆ ಮುಂದಾಗಿದ್ದಾರೆ.

ಕೆಲ ಪ್ರಾಣಿಗಳ ಕೊಂಬು ಹಾಗೂ ಚರ್ಮ ಹೆಚ್ಚಿನ ಬೆಲೆಗೆ ಮಾರಾಟ ಹಾಗೂ ವಿದೇಶಗಳಿಗೂ ಸಾಗಣೆ ಮಾಡುತ್ತಿರುವ ಬಗ್ಗೆ ಶಂಕೆ ವ್ಯಕ್ತಪಡಿಸಿದ್ದಾರೆ. ಸದ್ಯ ಬಂಧಿತರ ಬಗ್ಗೆ ಹಿಂದೆ ಯಾವುದೇ ಪ್ರಕರಣಗಳು ಕಂಡು ಬಂದಿಲ್ಲ ಎಂದು ಪೊಲೀಸರು ತಿಳಿದ್ದಾರೆ.

ಚಿಕ್ಕಬಾಣಾವರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್ ಬ್ಯಾಟರಿ ಸ್ಫೋಟ: ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯೊಳಗೆ ಚಾರ್ಜ್‌ಗೆ ಹಾಕಿದ್ದ ಎಲೆಕ್ಟ್ರಿಕಲ್ ಬೈಕ್‌ನ ಬ್ಯಾಟರಿ ಸ್ಫೋಟಗೊಂಡ ಪರಿಣಾಮ, ವೃದ್ಧರೊಬ್ಬರು ಮೃತಪಟ್ಟಿರುವ ಘಟನೆ ಹಲಸೂರಿನ ಮರ್ಫಿಟೌನ್‌ನಲ್ಲಿ ಮಂಗಳವಾರ ನಡೆದಿದೆ.

ಆಟೊ ಚಾಲಕ ಲೂರ್ದ್ ನಾದನ್ (65) ಮೃತ ವ್ಯಕ್ತಿ. ಸೋಮವಾರ ರಾತ್ರಿ 11ರ ವೇಳೆಗೆ ತಮ್ಮ ಎಲೆಕ್ಟ್ರಿಕ್ ವಾಹನವನ್ನು ಚಾರ್ಜ್‌ಗೆ ಹಾಕಿ ಮಲಗಿದ್ದರು. ಮಂಗಳವಾರ ಬೆಳಗಿನ ಜಾವ 3 ಗಂಟೆ ವೇಳೆಗೆ ವಾಹನದ ಬ್ಯಾಟರಿ ಸ್ಫೋಟಗೊಂಡಿದೆ. ಸ್ಫೋಟದ ತೀವ್ರತೆಗೆ ಮನೆಗೆ ಬೆಂಕಿ ವ್ಯಾಪಿಸಿದ್ದು, ನಿದ್ರೆಯಲ್ಲಿದ್ದ ಲೂರ್ದ್ ನಾದನ್ ಅವರಿಗೆ ತೀವ್ರ ಸುಟ್ಟಗಾಯಗಳಾಗಿತ್ತು. ತಕ್ಷಣವೇ ಅವರನ್ನು ಚಿಕಿತ್ಸೆಗಾಗಿ ಬೌರಿಂಗ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಪರೀಕ್ಷಿಸಿದ ವೈದ್ಯರು ಮೃತಪಟ್ಟಿದ್ದಾರೆ ಎಂದು ತಿಳಿಸಿದರು.


ಬ್ಯಾಟರಿ ಸ್ಫೋಟದಿಂದ ಸುಟ್ಟುಹೋಗಿರುವ ದ್ವಿಚಕ್ರ ವಾಹನ

ಮೃತರ ಪುತ್ರ ಫ್ರಾಂಕ್ ಆಂತೋನಿ ನೀಡಿದ ದೂರಿನ ಮೇರೆಗೆ ಹಲಸೂರು ಪೊಲೀಸ್ ಠಾಣೆಯಲ್ಲಿ ಯುಡಿಆರ್ ಪ್ರಕರಣ ದಾಖಲಾಗಿದೆ. ಈ ಅವಘಡಕ್ಕೆ ವಾಹನದ ತಾಂತ್ರಿಕ ದೋಷ ಅಥವಾ ಶಾರ್ಟ್ ಸರ್ಕಿಟ್ ಕಾರಣವಾಗಿರಬಹುದು ಎಂದು ಪೊಲೀಸರು ಶಂಕಿಸಿದ್ದು, ತನಿಖೆ ಮುಂದುವರಿಸಿದ್ದಾರೆ.

ನೀರಿನಲ್ಲಿ ಮುಳುಗಿ ಮೂವರು ಸಾವು

ಹಾನಗಲ್: ತಾಲ್ಲೂಕಿನಲ್ಲಿ ಮಂಗಳವಾರ ನಡೆದ ಎರಡು ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಮಕ್ಕಳು ಸೇರಿ ಮೂವರು ಮೃತಪಟ್ಟಿದ್ದಾರೆ.

ಕಂಚಿನೆಗಳೂರ ಗ್ರಾಮದ ಈಟಗಿನ ಕೆರೆಯಲ್ಲಿ ಈಜಲು ಹೋಗಿದ್ದ ನೀರಲಗಿ ಗ್ರಾಮದ ಸಹೋದರರಾದ ಸಚಿನ್ ಮಾರುತೆಪ್ಪ ಬ್ಯಾತನಾಳ (12) ಮತ್ತು ಸೃಜನ್ ಮಾರುತೆಪ್ಪ ಬ್ಯಾತನಾಳ (10) ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ.

ತಾಲ್ಲೂಕಿನ ಶ್ರೀಂಗೇರಿ ಗ್ರಾಮ ಸಮೀಪದ ಧರ್ಮಾ ಕಾಲುವೆಯಲ್ಲಿ ಈಜಲು ಹೋಗಿದ್ದ ಫೈಜಾನ್ (20) ಮೃತಪಟ್ಟಿದ್ದಾರೆ.



ಶಾಖೆ ಉದ್ಘಾಟನೆ

ಬೆಂಗಳೂರಿನ ವಿಜಯನಗರ ಬಸ್ ನಿಲ್ದಾಣದ ಬಳಿ ಇದ್ದ ‘ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್’ನ ಶಾಖೆಯನ್ನು ನಾಗರಭಾವಿ ಮುಖ್ಯರಸ್ತೆಗೆ ಸ್ಥಳಾಂತರ ಮಾಡಲಾಗಿದ್ದು, ಈ ಶಾಖೆಯನ್ನು ಶಾಸಕ ಎಂ.ಕೃಷ್ಣಪ್ಪ ಉದ್ಘಾಟಿಸಿದರು. ಬ್ಯಾಂಕ್‌ನ ಅಧ್ಯಕ್ಷ ಎಂ.ತಿಮ್ಮೇಗೌಡ ಹಾಗೂ ಬ್ಯಾಂಕ್‌ನ ಪದಾಧಿಕಾರಿಗಳು ಹಾಜರಿದ್ದರು

ಅರ್ಜಿ ಆಹ್ವಾನ

ಬೆಂಗಳೂರು: ಜೆ.ಪಿ.ನಗರ ಬ್ರಾಹ್ಮಣ ಸಭಾ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಬ್ರಾಹ್ಮಣ ಸಮುದಾಯದ ವಿದ್ಯಾರ್ಥಿಗಳಿಂದ ‘ವಿದ್ಯಾರ್ಥಿ ಸಹಾಯ ನಿಧಿ’ಗೆ ಅರ್ಜಿ ಆಹ್ವಾನಿಸಿದೆ.

ಬೆಂಗಳೂರಿನಲ್ಲಿ ವಾಸವಿದ್ದು, ಇಲ್ಲಿಯೇ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆಗೆ ಅರ್ಹರಾಗಿದ್ದು, ದೃಢೀಕರಿಸಿದ ಅಂಕಪಟ್ಟಿ, ಭಾವಚಿತ್ರ, ಆಧಾರ್ ಕಾರ್ಡ್, ವಾರ್ಷಿಕ ಆದಾಯ ಪತ್ರ, ವಾಸವಿರುವ ವಿಳಾಸ, ಸಂಪರ್ಕ ಸಂಖ್ಯೆ ಸಹಿತ ಅರ್ಜಿಯ ಪ್ರತಿಯನ್ನು ಜೂನ್ 12ರೊಳಗೆ ಎಂ.ಎಸ್. ರಾಮಪ್ರಸಾದ್, ಜೆ.ಪಿ.ನಗರ ಬ್ರಾಹ್ಮಣ ಸಭಾ, 1298, 20ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು–560078 ಈ ವಿಳಾಸಕ್ಕೆ ಕಳುಹಿಸುವಂತೆ ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ: 9448617964 ಅಥವಾ 9880787248

ಹಣ ಅಕ್ರಮ ವರ್ಗಾವಣೆ ಆರೋಪದಡಿ ಬಂಧನ

ಗೇಮ್ಸ್ ಕ್ರಾಫ್ಟ್ ನಿರ್ದೇಶಕರ ಅರ್ಜಿ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಣ ಅಕ್ರಮ ವರ್ಗಾವಣೆ ಆರೋಪ ಪ್ರಕರಣದಲ್ಲಿ ಬಂಧಿತರಾಗಿರುವ ‘ಗೇಮ್ಸ್ ಕ್ರಾಫ್ಟ್’ ಕಂಪನಿ ನಿರ್ದೇಶಕರಾದ ದೀಪಕ್ ಸಿಂಗ್ ಅಹ್ಲಾವತ್, ಪೃಥ್ವಿರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ತಮ್ಮ ಬಂಧನವನ್ನು ಅಕ್ರಮ ಎಂದು ಘೋಷಿಸುವಂತೆ ಕೋರಿ ಗುರುಗ್ರಾಮದ ದೀಪಕ್ ಸಿಂಗ್ (40) ಮತ್ತು ಇತರರು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಎಂ.ಜಿ. ಎಸ್ ಕಮಲ್ ಅವರ ರಜಾಕಾಲದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ದೀಪಕ್ ಸಿಂಗ್ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಎಸ್. ಮುರಳೀಧರ್, ‘ಗೇಮ್ಸ್ ಕ್ರಾಫ್ಟ್ ವಿರುದ್ಧ 2026ರ ಜನವರಿಯಲ್ಲಿ ಇ.ಡಿ ಜಾರಿ ಮಾಡಿದ್ದ ಎಫ್ಐಆರ್‌ಗೆ ಹೈಕೋರ್ಟ್‌ನ ಸಮನ್ವಯ ನ್ಯಾಯಪೀಠ ಈಗಾಗಲೇ ತಡೆ ನೀಡಿದೆ. ಆನ್‌ಲೈನ್ ಗೇಮಿಂಗ್ ಪ್ರಚಾರ ಮತ್ತು ನಿಯಂತ್ರಣ ಕಾಯ್ದೆ–2025 ಅನ್ನು ಜಾರಿಗೆ ತಂದ ದಿನದಿಂದಲೂ ಗೇಮ್ಸ್ ಕ್ರಾಫ್ಟ್ ತನ್ನ ಕಾರ್ಯಚಟುವಟಿಕೆ ನಿಲ್ಲಿಸಿದೆ’ ಎಂದರು.

‘ತೆಲಂಗಾಣದಲ್ಲಿ ದಾಖಲಾಗಿರುವ ಎಫ್ಐಆರ್ ಆಧರಿಸಿ ಬೆಂಗಳೂರಿನ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ದೀಪಕ್ ಮತ್ತು ಪೃಥ್ವಿರಾಜ್ ಅವರನ್ನು ಮೇ 8 ರಂದು ಗುರುಗ್ರಾಮದಲ್ಲಿ ಬಂಧಿಸಿದ್ದಾರೆ. ಟ್ರಾನ್ಸಿಟ್ ರಿಮ್ಯಾಂಡ್ ಪಡೆದು ಬೆಂಗಳೂರಿಗೆ ಕರೆತಂದು ಬಂಧಿಸಿಡಲಾಗಿದೆ. ಇದು ಸಂಪೂರ್ಣವಾಗಿ ಅಕ್ರಮ ಬಂಧನ’ ಎಂದರು.

ಹೈಕೋರ್ಟ್ ಸುದ್ದಿ

ಪೃಥ್ವಿರಾಜ್ ಸಿಂಗ್ ಮತ್ತು ವಿಕಾಸ್ ತನೇಜಾ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ ಅವರು, ‘ನಮ್ಮ ಅರ್ಜಿಗಳಲ್ಲೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೆ ಆದೇಶಿಸಬೇಕು’ ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಮೂರೂ ಅರ್ಜಿಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 14ಕ್ಕೆ ಮುಂದೂಡಿತು.

ಪ್ರಕರಣ: ‘ವಿಕಾಸ್ ತನೇಜಾ, ‘ಗೇಮ್ಸ್ ಕ್ರಾಫ್ಟ್ ಮತ್ತು ರಮ್ಮಿ ಕಲ್ಚರ್ ಟೆಕ್ನಾಲಜೀಸ್’ ನಿರ್ದೇಶಕ. ಇವರು ಮಾಜಿ ಪ್ರಧಾನ ಹಣಕಾಸು ಅಧಿಕಾರಿ ರಮೇಶ್ ಪ್ರಭು ಜೊತೆ ಸೇರಿ ₹250 ಕೋಟಿ ಮೊತ್ತವನ್ನು, ‘ಫ್ಯೂಚರ್ಸ್ ಮತ್ತು ಆಪ್ಷನ್ಸ್ ಹಾಗೂ ಮ್ಯುಚುವಲ್ ಫಂಡ್ಸ್’ನಲ್ಲಿ ಹೂಡಿಕೆ ಮಾಡುವುದಾಗಿ ಹೇಳಿ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ್ದಾರೆ. ಕಂಪನಿಯು ಆನ್‌ಲೈನ್ ಗೇಮಿಂಗ್ ವೇದಿಕೆಗಳನ್ನು ನಿರ್ವಹಿಸುತ್ತಿದ್ದು, ಆಟವನ್ನು ತಿರುಚಿ, ಬಳಕೆದಾರರಿಗೆ ವಂಚಿಸಲಾಗಿದೆ. ನಂತರ ನಕಲಿ ವೆಚ್ಚ ತೋರಿಸಿ, ಅದನ್ನು ನಗದಿನ ರೂಪದಲ್ಲಿ ವಾಪಸ್ ಪಡೆಯಲಾಗಿದೆ’ ಎಂಬುದು ಇ.ಡಿ ಆರೋಪ.





ಬನ್ನೇರುಘಟ್ಟ ಮುಖ್ಯರಸ್ತೆಯ ದೂಳುಮಯ ವಾತಾವರಣ (ಎಡ ಚಿತ್ರ), ದೂಳಿನಿಂದ ರಕ್ಷಣೆ ಪಡೆಯಲು ಯುವತಿಯರು ಮಾಸ್ಕ್ ಧರಿಸಿ ಸಂಚರಿಸಿದರು

ಪ್ರಜಾವಾಣಿ ಚಿತ್ರಗಳು: ಕಿಶೋರ್ ಕುಮಾರ್ ಬೋಳಾರ್

ಬಿಸಿಲಿಗೆ ದೂಳು, ಮಳೆಗೆ ಕೆಸರು

ನಿಧಾನಗತಿಯಲ್ಲಿ ಸಾಗಿದ ಕೊಳವೆ ಅಳವಡಿಕೆ ಕಾಮಗಾರಿ

● ಖಲೀಲಅಹ್ಮದ ಶೇಖ

ಬೆಂಗಳೂರು: ಬನ್ನೇರುಘಟ್ಟದಿಂದ ಬಿಳೇಕಹಳ್ಳಿಗೆ ಸಂಪರ್ಕಿಸುವ ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಅಧ್ವಾನಗೊಂಡಿದೆ. ಇದರಿಂದ ವಾಹನ ಸಂಚಾರಕ್ಕೆ ತೊಂದರೆಯಾಗಿದೆ. ಇಡೀ ಪ್ರದೇಶ ದೂಳುಮಯವಾಗಿದ್ದು, ಸ್ಥಳೀಯರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದೆ.



ಗುಂಡಿ ಬಿದ್ದಿರುವ ಸ್ಥಳದಲ್ಲಿ ಮರದ ತುಂಡು ಇಡಲಾಗಿದೆ

ಮೂರು ನಾಲ್ಕು ತಿಂಗಳ ಹಿಂದೆಯೇ ಈ ರಸ್ತೆಯಲ್ಲಿ ಕೊಳವೆಗಳನ್ನು ಜೋಡಿಸುವ ಕಾಮಗಾರಿ ಆರಂಭವಾಗಿದೆ. ಇದಕ್ಕಾಗಿ ಜಲಮಂಡಳಿಯವರು ರಸ್ತೆಯನ್ನು ಅಗೆದು ಕೊಳವೆಗಳನ್ನು ಜೋಡಿಸಿದ್ದಾರೆ. ಆದರೆ, ರಸ್ತೆಗೆ ಡಾಂಬರು ಹಾಕದೇ ಹಾಗೆಯೇ ಬಿಟ್ಟಿದ್ದು, ಈ ರಸ್ತೆಯಲ್ಲಿ ವಾಹನಗಳು ಸಂಚರಿಸುವ ಸಂದರ್ಭದಲ್ಲಿ ಇಡೀ ಪ್ರದೇಶ ದೂಳುವಾಯವಾಗುತ್ತದೆ.

ಜಲಮಂಡಳಿ ತನ್ನ ಕೆಲಸ ಮುಗಿಸಿ ಅರೆಬರೆಯಾಗಿ ಮುಚ್ಚಿ ಹೋದ ಗುಂಡಿಗಳ ನಡುವೆ ವಾಹನ ಸಂಚಾರಕ್ಕೆ ಜನ ಪರದಾಡುತ್ತಿದ್ದಾರೆ. ಈ ರಸ್ತೆ ಬಿಸಿಲಾದರೆ ದೂಳು, ಮಳೆಯಾದರೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ.

ಪಾದಚಾರಿ ಮಾರ್ಗದ ಮೇಲೆ ಬೃಹತ್ ಕೊಳವೆಗಳನ್ನು ಇಡಲಾಗಿದೆ. ಇದರಿಂದ ಸಾರ್ವಜನಿಕರು ಮುಖ್ಯರಸ್ತೆಯಲ್ಲಿ ಓಡಾಡುತ್ತಿದ್ದು, ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜತೆಗೆ ಅಪಘಾತಗಳು ಸಂಭವಿಸುತ್ತಿವೆ.

'ರೋಸ್ ಗಾರ್ಡನ್ ಅಪಾರ್ಟ್‌ಮೆಂಟ್‌ನಿಂದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು (ಐಐಎಂಬಿ) ಮೆಟ್ರೊ ನಿಲ್ದಾಣದವರೆಗಿನ ರಸ್ತೆಯನ್ನು ಸಂಪೂರ್ಣವಾಗಿ ಅಗೆದು, ಹಾಗೆಯೇ ಬಿಡಲಾಗಿದೆ. ಇಲ್ಲಿ ಡಾಂಬರು ಹಾಕದ ಪರಿಣಾಮ ವಾಹನಗಳು ಸಂಚರಿಸಿದಾಗ ವಾತಾವರಣ ದೂಳುಮಯವಾಗುತ್ತದೆ. ಈ ರಸ್ತೆಯಲ್ಲಿ ದ್ವಿಚಕ್ರ ವಾಹನಗಳನ್ನು ಚಾಲನೆ ಮಾಡುವುದೇ ಸವಾಲಾಗಿದೆ. ದೂಳಿನ ಕಣಗಳು ಶ್ವಾಸಕೋಶ ಸೇರಿ ನಮ್ಮ ಆರೋಗ್ಯ ಹದಗೆಡುತ್ತಿದೆ' ಎಂದು ದ್ವಿಚಕ್ರ ವಾಹನ ಸವಾರ ಸಾಹಿಲ್ ಅಳಲು ತೋಡಿಕೊಂಡರು.

'ಈ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅವಕಾಶ ಕಲ್ಪಿಸ ಲಾಗಿದೆ. ರಸ್ತೆ ಹದಗೆಟ್ಟಿರುವ ಪರಿಣಾಮ ಸಂಚಾರ ದಟ್ಟಣೆ ಆಗುತ್ತಿದೆ. ಬೆಳಿಗ್ಗೆ 8ರಿಂದ 11 ಗಂಟೆ ಹಾಗೂ ಸಂಜೆ 5ರಿಂದ ರಾತ್ರಿ 8 ಗಂಟೆಯ ಅವಧಿಯೊಳಗೆ ಈ ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿರುತ್ತವೆ' ಎಂದು ವಾಹನ ಸವಾರರು ದೂರಿದರು.

'ನಗರದ ಜನರು ದೂಳಿನಿಂದ ತೊಂದರೆ ಅನುಭವಿಸುತ್ತಿದ್ದಾರೆ. ಕೆಲ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಗಳನ್ನು ಅಗೆದು ಹಾಗೆಯೇ ಬಿಡಲಾಗಿದೆ. ಸಾರ್ವಜನಿಕರ ಓಡಾಟಕ್ಕೆ ಸಮಸ್ಯೆ ಆಗಿದೆ. ಪಾದಚಾರಿ ಮಾರ್ಗಗಳಲ್ಲಿ ಬೃಹತ್ ಕೊಳವೆಗಳನ್ನು ಇಟ್ಟಿರುವುದರಿಂದ ಪಾದಚಾರಿಗಳಿಗೆ ತೊಂದರೆ ಆಗಿದೆ. ವ್ಯಾಪಾರ–ವಹಿವಾಟಿಗೆ ಧಕ್ಕೆಯಾಗಿದೆ' ಎಂದು ಹೋಟೆಲ್ ಮಾಲೀಕರೊಬ್ಬರು ಆರೋಪಿಸಿದರು.

'ಬನ್ನೇರುಘಟ್ಟ ಮುಖ್ಯರಸ್ತೆಯ ಮೂಲಕ ಬಿಳೇಕಹಳ್ಳಿ, ಅರೆಕೆರೆ, ಜಯನಗರ, ಕೋಡಿಚಿಕ್ಕಹಳ್ಳಿ, ಗೊಟ್ಟಿಗೆರೆ, ಕಾಳೇನ ಅಗ್ರಹಾರ ಹಾಗೂ ಬನ್ನೇರುಘಟ್ಟಕ್ಕೆ ತೆರಳುವ ಬಹುತೇಕ ಬಸ್‌ಗಳು ಈ ಹಾದಿಯ ಮೂಲಕವೇ ಸಾಗಬೇಕು. ಇಲ್ಲಿ ಅನೇಕ ಐಟಿ ಕಂಪನಿಗಳು, ಅಪಾರ್ಟ್‌ಮೆಂಟ್‌ಗಳು, ಮಾಲ್‌ಗಳಿದ್ದು, ದೂಳುಮಯ ವಾತಾವರಣದಲ್ಲಿ ವಾಹನ ಸಂಚಾರ ಮಾಡುವುದೇ ಕಷ್ಟವಾಗಿದೆ. ರಸ್ತೆ ಕಾಮಗಾರಿ ಪೂರ್ಣಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಮಾಡಿದರೂ ಸ್ಪಂದಿಸುತ್ತಿಲ್ಲ' ಎಂದು ಬಿಳೇಕಹಳ್ಳಿ ನಿವಾಸಿ ರಾಜೇಂದ್ರನ್ ಆಕ್ರೋಶ ವ್ಯಕ್ತಪಡಿಸಿದರು.

'ಬನ್ನೇರುಘಟ್ಟ ಮುಖ್ಯರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ನಡೆಯುತ್ತಿದೆ. ಇಲ್ಲಿ ಕೊಳವೆಗಳನ್ನು ಜೋಡಿಸುವ ಕಾಮಗಾರಿ ನಡೆಯುತ್ತಿದ್ದು, ಶೀಘ್ರವೇ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ' ಎಂದು ಜಲಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

'ಬ್ರ್ಯಾಂಡ್ ಆಗದ ಬೆಂಗಳೂರು'

'ದೇಶದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿರುವ ಐಐಎಂಬಿ ಮುಂಭಾಗದ ಬನ್ನೇರುಘಟ್ಟ ಮುಖ್ಯರಸ್ತೆಯು ಹದಗೆಟ್ಟು ಹೋಗಿದೆ. ಬ್ರ್ಯಾಂಡ್ ಬೆಂಗಳೂರು ಮಾಡುವ ಕನಸು ನೀಡಿ, ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಈ ಬಗ್ಗೆ ಮಾತನಾಡುತ್ತಿಲ್ಲ. ನಗರದ ಬಹುತೇಕ ರಸ್ತೆಗಳು ಅಧ್ವಾನಗೊಂಡಿವೆ. ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಯಾವುದೇ ರೀತಿಯ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿಲ್ಲ' ಎಂದು ಸಾರ್ವಜನಿಕರು ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಈ ರಸ್ತೆಯಲ್ಲಿ ಮಾಸ್ಕ್ ಇಲ್ಲದೇ ಓಡಾಡಿದರೆ, ಆರೋಗ್ಯ ಹದಗೆಟ್ಟು ಆಸ್ಪತ್ರೆಗೆ ಸೇರಬೇಕಾಗುತ್ತದೆ. ಜನಪ್ರತಿನಿಧಿಗಳು ಓಡಾಡುವ ವಿಧಾನಸೌಧ, ಸದಾಶಿವನಗರಕ್ಕೆ ಸಂಪರ್ಕಿಸುವ ರಸ್ತೆಗಳು ಚೆನ್ನಾಗಿವೆ. ಇದೇ ರೀತಿ ನಗರದ ಎಲ್ಲ ರಸ್ತೆಗಳು ಇವೆ ಎಂಬ ಭ್ರಮೆಯಲ್ಲಿ ಜನಪ್ರತಿನಿಧಿಗಳು ಇದ್ದಾರೆ' ಎಂದು ಬರೆದುಕೊಂಡಿದ್ದಾರೆ.

ಸಾರ್ವಜನಿಕರು ಏನಂತಾರೆ?

'ಒಳಚರಂಡಿ ಕಾಮಗಾರಿ ಹೆಸರಿನಲ್ಲಿ ರಸ್ತೆಯನ್ನು ಅಗೆದು ಹಾಕಲಾಗಿದೆ. ಯಾರಿಗೆ ಹೇಳಿದರೂ ಸಮಸ್ಯೆಗೆ ಪರಿಹಾರ ಸಿಗುತ್ತಿಲ್ಲ. ಇಡೀ ಪ್ರದೇಶ ದೂಳುಮಯವಾಗಿದ್ದು, ವ್ಯಾಪಾರ ಸಂಪೂರ್ಣವಾಗಿ ನೆಲಕಚ್ಚಿದೆ. ದೂಳಿನ ಸಮಸ್ಯೆ ಹೆಚ್ಚಾದ ಕಾರಣ ನಮ್ಮ ಅಂಗಡಿಗೆ ಗ್ರಾಹಕರು ಬರುತ್ತಿಲ್ಲ. ಇದರಿಂದ ಅಂಗಡಿಯ ಬಾಡಿಗೆ ಹಾಗೂ ಕಾರ್ಮಿಕರ ಸಂಬಳ ಕೊಡಲು ಆಗುತ್ತಿಲ್ಲ. ಕೂಡಲೇ ಕಾಮಗಾರಿ ಪೂರ್ಣಗೊಳಿಸಬೇಕು.

ಮನು, ಜ್ಯೂಸ್ ಅಂಗಡಿ ಮಾಲೀಕ

ಬೆಂಗಳೂರು ನಗರದ ಬಹುತೇಕ ರಸ್ತೆಗಳು ಹಾಳಾಗಿವೆ. ಆದರೆ, ಸರ್ಕಾರ ಮಾತ್ರ ಈ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ನಾವು ದುಡಿದ ಹಣದಲ್ಲಿ ಅರ್ಧ ಎಲ್‌ಪಿಜಿ ಸಿಲಿಂಡರ್‌ಗೆ ನೀಡಿದರೆ, ಇನ್ನುಳಿದ ಹಣವನ್ನು ದೂಳಿನಿಂದ ಹಾಳಾಗಿರುವ ಆರೋಗ್ಯಕ್ಕಾಗಿ ಮೀಸಲಿಡಬೇಕಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಬನ್ನೇರುಘಟ್ಟ ಮುಖ್ಯರಸ್ತೆಯ ಕಾಮಗಾರಿಗೆ ವೇಗ ನೀಡಬೇಕು.

ರಮೇಶ್, ಆಟೊ ಚಾಲಕ

'ತನಿಖೆ ಮುಗಿಯುವವರೆಗೆ ವರ್ಗ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಒಂದು ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಿ ಅದಕ್ಕೆ ತನಿಖಾಧಿಕಾರಿ ನೇಮಕವಾದಲ್ಲಿ, ಆ ಪ್ರಕರಣದ ತನಿಖೆ ಪೂರ್ಣಗೊಂಡು ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಕೆ ಆಗುವ ತನಕ ತನಿಖಾಧಿಕಾರಿಯನ್ನು ವರ್ಗಾವಣೆ ಮಾಡಬಾರದು' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಡ್ರೋನ್ ತಂತ್ರಜ್ಞಾನ ದತ್ತಾಂಶ ಕಳವು ಪ್ರಕರಣದ ಆರೋಪಿಯ ನಿರೀಕ್ಷಣಾ ಜಾಮೀನು ರದ್ದುಪಡಿಸಬೇಕು' ಎಂದು ಕೋರಿ 'ಮೆಸರ್ಸ್ ನ್ಯೂ ಸ್ಪೇಸ್ ರಿಸರ್ಚ್ ಆಂಡ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿ' ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆಯಲ್ಲಿ ನ್ಯಾಯಪೀಠ, 'ಎಸ್‌ಐಟಿ ರಚಿಸಿ ಒಂದು ವರ್ಷ ಕಳೆದಿದೆ. ಆದರೂ ವಿಚಾರಣೆಯನ್ನು ಏಕೆ ಪೂರ್ಣಗೊಳಿಸಿಲ್ಲ' ಎಂದು ಪ್ರಶ್ನಿಸಿತ್ತು. ಇದಕ್ಕೆ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಬಿ.ಎಸ್.ಪ್ರಮೋದಚಂದ್ರ, 'ತನಿಖಾಧಿಕಾರಿಯನ್ನು ಮತ್ತೊಂದು ಎಸ್‌ಐಟಿ ಮುಖ್ಯಸ್ಥರನ್ನಾಗಿ ನೇಮಿಸಲಾಗಿತ್ತು. ಆದ್ದರಿಂದ, ವಿಳಂಬಕ್ಕೆ ಕಾರಣವಾಗಿದೆ' ಎಂದು ತಿಳಿಸಿದ್ದರು.

ಇದಕ್ಕೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದ ನ್ಯಾಯಪೀಠ, 'ಎಸ್‌ಐಟಿ ರಚನೆ ಮಾಡಿ ತನಿಖಾಧಿಕಾರಿ ನೇಮಕ ಮಾಡಿದ ಬಳಿಕ ಆಡಳಿತಾತ್ಮಕ ಕಾರಣಗಳಿದ್ದರೂ, ದೋಷಾರೋಪ ಪಟ್ಟಿ ಸಲ್ಲಿಸುವ ಮುನ್ನ ತನಿಖಾಧಿಕಾರಿಯನ್ನು ಬದಲಾಯಿಸಬಾರದು. ಒಂದು ವೇಳೆ ವರ್ಗಾವಣೆ ಅನಿವಾರ್ಯವಾದರೆ, ತನಿಖಾಧಿಕಾರಿಯು ದೋಷಾರೋಪ ಪಟ್ಟಿ ಸಲ್ಲಿಸಿದ ನಂತರವೇ ಹೊಸ ಜವಾಬ್ದಾರಿ ವಹಿಸಿಕೊಳ್ಳಬೇಕು' ಎಂದು ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?


ಡ್ರೋನ್ ತಂತ್ರಜ್ಞಾನ ದತ್ತಾಂಶ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ತನ್ನ ಕಂಪನಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿ ಶ್ರೀಮತಿ ಗರಿಮಾ ಶರ್ಮಾ ವಿರುದ್ಧ 'ಮೆಸರ್ಸ್ ನ್ಯೂ ಸ್ಪೇಸ್ ರಿಸರ್ಚ್ ಆಂಡ್ ಟೆಕ್ನಾಲಜೀಸ್ ಪ್ರೈವೆಟ್ ಲಿಮಿಟೆಡ್ ಕಂಪನಿ' ಈಶಾನ್ಯ ವಿಭಾಗದ ಸಿಇಎನ್ ಕ್ರೈಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿತ್ತು. ಇದರ ತನಿಖೆಗೆ ಎಸ್‌ಐಟಿ ರಚನೆ ಮಾಡುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿಯನ್ನೂ ಸಲ್ಲಿಸಿತ್ತು.

ಈ ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಮರು ತನಿಖೆಗೆ ಆದೇಶಿಸಿತ್ತು. ಇದಕ್ಕಾಗಿ, 'ಡಿಜಿಪಿ ಪ್ರಣವ್ ಮೊಹಂತಿ ನೇತೃತ್ವದಲ್ಲಿ, ಐಪಿಎಸ್ ಅಧಿಕಾರಿ ಭೂಷಣ್ ಗುಲಾಬ್ ರಾವ್ ಬೊರಸೆ ಮತ್ತು ನಿಶಾ ಜೇಮ್ಸ್ ಅವರನ್ನು ಒಳಗೊಂಡ ಸಮಿತಿ ರಚಿಸಬೇಕು. ಮೂರು ತಿಂಗಳಲ್ಲಿ ತನಿಖೆ ನಡೆಸಿ ವರದಿ ಸಲ್ಲಿಸಬೇಕು' ಎಂದು ನ್ಯಾಯಾಂಗ ಆದೇಶ ಹೊರಡಿಸಿತ್ತು.

ಏತನ್ಮಧ್ಯೆ, ಪ್ರಕರಣದ ಪ್ರಮುಖ ಆರೋಪಿಗೆ ವಿಚಾರಣಾ ನ್ಯಾಯಾಲಯ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು. ಈ ಆದೇಶವನ್ನು ರದ್ದುಪಡಿಸುವಂತೆ ಕೋರಿ ದೂರುದಾರ ಕಂಪನಿ ಹೈಕೋರ್ಟ್‌ಗೆ ಮತ್ತೊಂದು ಅರ್ಜಿ ಸಲ್ಲಿಸಿತ್ತು.

ಡಾ. ಭರತ್ ಕಾಡಾದಿ ಆಯ್ಕೆ

ಬೆಂಗಳೂರು: ಬೆಂಗಳೂರು ಆರ್ಥೋಪೆಡಿಕ್ಸ್ ಸೊಸೈಟಿಯ ಅಧ್ಯಕ್ಷರಾಗಿ ಮೂಳೆ ತಜ್ಞ ಡಾ. ಭರತ್ ಕೆ.ಕಾಡಾದಿ ಆಯ್ಕೆಯಾಗಿದ್ದಾರೆ.



ಇತ್ತೀಚೆಗೆ ನಗರದಲ್ಲಿ ನಡೆದ ಸೊಸೈಟಿಯ ಸಮಾವೇಶದಲ್ಲಿ, 2026-27ನೇ ಸಾಲಿಗೆ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

'ಮೂಳೆ ವೈದ್ಯಕೀಯ ಕ್ಷೇತ್ರದಲ್ಲಿನ ಸವಾಲನ್ನು ಸಂಶೋಧನಾತ್ಮಕವಾಗಿ ಎದುರಿಸಲು ಆದ್ಯತೆ ನೀಡಲಾಗುತ್ತದೆ. ಮೂಳೆ ತಜ್ಞರ ಸಮಾವೇಶ, ವಿಚಾರ ಸಂಕಿರಣವನ್ನು ಏರ್ಪಡಿಸಲಾಗುತ್ತದೆ. ಅಗತ್ಯ ವೈದ್ಯಕೀಯ ನೆರವು ನೀಡುವಲ್ಲಿ ಬೆಂಗಳೂರು ಆರ್ಥೋಪೆಡಿಕ್ಸ್ ಸೊಸೈಟಿ ಶ್ರಮಿಸುತ್ತಿದೆ' ಎಂದು ಡಾ. ಭರತ್ ಕಾಡಾದಿ ತಿಳಿಸಿದ್ದಾರೆ.

ಮಧ್ಯಂತರ ಜೀವನಾಂಶದ ಪ್ರಮಾಣ ನಿರ್ಧಾರ

'ವಿವೇಚನಾಧಿಕಾರ ನ್ಯಾಯಯುತವಾಗಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೌಟುಂಬಿಕ ವ್ಯಾಜ್ಯಗಳಲ್ಲಿ ಮಧ್ಯಂತರ ಜೀವನಾಂಶದ ಪ್ರಮಾಣವನ್ನು ನಿರ್ಧರಿಸುವಾಗ ಮದುವೆಯ ಅವಧಿ, ಸಂಗಾತಿಗಳ ಗಳಿಕೆ ಸಾಮರ್ಥ್ಯ, ಮಕ್ಕಳನ್ನು ನಿರ್ವಹಿಸುವ ಜವಾಬ್ದಾರಿ ಹಾಗೂ ಹಕ್ಕುದಾರರ ಶೈಕ್ಷಣಿಕ ಅರ್ಹತೆಗಳಂತಹ ಅಂಶಗಳನ್ನು ಪರಿಗಣಿಸಿ ಸೂಕ್ತ ನಿರ್ಣಯ ಕೈಗೊಳ್ಳಬೇಕಾಗುತ್ತದೆ' ಎಂದು ಹೈಕೋರ್ಟ್, ಪ್ರಕರಣವೊಂದರಲ್ಲಿ ಅಭಿಪ್ರಾಯಪಟ್ಟಿದೆ.

'ಬೆಂಗಳೂರಿನ 6ನೇ ಹೆಚ್ಚುವರಿ ಕೌಟುಂಬಿಕ ನ್ಯಾಯಾಲಯ 2025ರ ಸೆಪ್ಟೆಂಬರ್ 17ರಂದು ಹೊರಡಿಸಿರುವ ಆದೇಶ ರದ್ದುಗೊಳಿಸಬೇಕು' ಎಂದು ಕೋರಿ ಪತ್ನಿ (23) ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೆ.ಮನ್ಮಥ ರಾವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಮಧ್ಯಂತರ ಜೀವನಾಂಶದ ಪ್ರಮಾಣವನ್ನು ನಿರ್ಧರಿಸಲು, ಹಿಂದೂ ವಿವಾಹ ಕಾಯ್ದೆ-1955ರ ಕಲಂ 24 ಯಾವುದೇ ಕಠಿಣ ಸೂತ್ರವನ್ನು ಸೂಚಿಸುವುದಿಲ್ಲ ಎಂಬುದನ್ನು ಗಮನದಲ್ಲಿ ಇರಿಸಿಕೊಂಡಿರಬೇಕು. ಕಾಯ್ದೆಯ ಉದ್ದೇಶ ಮತ್ತು ವೈವಾಹಿಕ ಕಾನೂನಿನ ಸ್ಥಿರ ತತ್ವಗಳನ್ನು ಗಮನದಲ್ಲಿ ಇರಿಸಿಕೊಳ್ಳುವ ಮೂಲಕ ಕೌಟುಂಬಿಕ ನ್ಯಾಯಾಲಯ ಚಲಾಯಿಸುವ ವಿವೇಚನಾ ಅಧಿಕಾರ ನ್ಯಾಯಯುತವಾಗಿ ಇರುವಂತೆ ನೋಡಿಕೊಳ್ಳಬೇಕು' ಎಂದು ವಿವರಿಸಿದೆ.

'ಹಾಲಿ ಪ್ರಕರಣದಲ್ಲಿ ಕೌಟುಂಬಿಕ ನ್ಯಾಯಾಲಯವು ಪತ್ನಿಯ ಅರ್ಜಿಯನ್ನು ತಿರಸ್ಕರಿಸಲು ಸಾಕಷ್ಟು ಕಾರಣಗಳನ್ನು ಒದಗಿಸಲು ವಿಫಲವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಪ್ರಕರಣದಲ್ಲಿ ಕಲಂ 24ರ ಅಡಿಯಲ್ಲಿ ತಿಂಗಳಿಗೆ ₹50 ಸಾವಿರ ಮಧ್ಯಂತರ ಜೀವನಾಂಶ ಮತ್ತು ₹1 ಲಕ್ಷ ಮೊಕದ್ದಮೆ ವೆಚ್ಚ ನೀಡುವಂತೆ ಕೋರಿ ಪತ್ನಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ರದ್ದುಗೊಳಿಸಿದೆ.

ವ್ಯಾಜ್ಯವನ್ನು ಬೆಂಗಳೂರಿನ ಕೌಟುಂಬಿಕ ನ್ಯಾಯಾಲಯಕ್ಕೆ ಹಿಂತಿರುಗಿಸಿ ಆದೇಶಿಸಿರುವ ನ್ಯಾಯಪೀಠ, ದಂಪತಿ ಜೂನ್ 10ರಂದು ವೈಯಕ್ತಿಕವಾಗಿ ಅಥವಾ ಅವರ ವಕೀಲರ ಮೂಲಕ ಹಾಜರಾಗಲು ನಿರ್ದೇಶಿಸಿದೆ.

ಪ್ರತಿಕೂಲ ಸಾಕ್ಷ್ಯ: ಪರಿಹಾರಕ್ಕೆ ಅವಕಾಶವಿಲ್ಲ- ಹೈಕೋರ್ಟ್

ಬೆಂಗಳೂರು: 'ಕ್ರಿಮಿನಲ್ ಪ್ರಕರಣಗಳಲ್ಲಿ ಪ್ರಾಸಿಕ್ಯೂಷನ್ ಪರವಾಗಿ ಸಾಕ್ಷ್ಯ ನುಡಿಯದೆ ಪ್ರತಿಕೂಲ ಸಾಕ್ಷ್ಯ ನುಡಿಯುವವರಿಗೆ ಸರ್ಕಾರದ ಸಂತ್ರಸ್ತರ ಪರಿಹಾರ ಯೋಜನೆ ಅಡಿಯಲ್ಲಿ ಪರಿಹಾರ ನೀಡುವುದಕ್ಕೆ ಅವಕಾಶವಿಲ್ಲ' ಎಂದು ಹೈಕೋರ್ಟ್ ತಿಳಿಸಿದೆ.

ಪ್ರಕರಣವೊಂದರಲ್ಲಿ, ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಸಲ್ಲಿಸಿದ್ದ ಕ್ರಿಮಿನಲ್ ಮರು ಪರಿಶೀಲನಾ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸಂತ್ರಸ್ತೆ ನೀಡಿದ ಪ್ರತಿಕೂಲ ಹೇಳಿಕೆಯ ಆಧಾರದಲ್ಲಿ ಆರೋಪಿ ಖುಲಾಸೆಗೊಂಡಿದ್ದಾನೆ. ಆದ್ದರಿಂದ, ಪ್ರತಿಕೂಲ ಹೇಳಿಕೆ ನೀಡಿದ ಸಂತ್ರಸ್ತೆಗೆ ಪರಿಹಾರ ನೀಡಲು ನಿರ್ದೇಶಿಸಿರುವ ವಿಚಾರಣಾ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.



ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಪರ ಎ.ಎಸ್.ವಿಘ್ನೇಶ್ ವಾದ ಮಂಡಿಸಿದ್ದರು.

ಪ್ರಕರಣ: ತುಮಕೂರು ಜಿಲ್ಲೆಯ ಹುಳಿಯಾರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅತ್ಯಾಚಾರ ಆರೋಪದ ಕ್ರಿಮಿನಲ್ ಪ್ರಕರಣ ದಾಖಲಾಗಿತ್ತು. ಪ್ರಕರಣದಲ್ಲಿ 21 ವರ್ಷದ ಸಂತ್ರಸ್ತೆ ತನಿಖಾಧಿಕಾರಿ ಮತ್ತು ಮ್ಯಾಜಿಸ್ಟ್ರೇಟ್ ಮುಂದೆ ತಮ್ಮ ಹೇಳಿಕೆ ದಾಖಲಿಸಿದ್ದರು. ಆದರೆ, ವಿಚಾರಣಾ ನ್ಯಾಯಾಲಯದಲ್ಲಿನ ಪಾಟಿ ಸವಾಲು ಸಂದರ್ಭದಲ್ಲಿ ತಮ್ಮ ಮೊದಲಿನ ಹೇಳಿಕೆಗೆ ತದ್ವಿರುದ್ಧ ವಿವರಣೆ ನೀಡಿದ್ದರು. ಇದರಿಂದ ವಿಚಾರಣಾ ನ್ಯಾಯಾಲಯ ಆರೋಪಿಯನ್ನು ಖುಲಾಸೆಗೊಳಿಸಿ ಆದೇಶಿಸಿತ್ತು.

ಆದರೆ, ಈ ಅಂಶವನ್ನು ಪರಿಗಣಿಸದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶರೂ ಆದ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರು ಸಂತ್ರಸ್ತೆಗೆ ₹3 ಲಕ್ಷ ಪರಿಹಾರ ವಿತರಿಸುವಂತೆ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಶಿಫಾರಸು ಮಾಡಿದ್ದರು. ಈ ಕ್ರಮವನ್ನು ಪ್ರಶ್ನಿಸಿ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಹೈಕೋರ್ಟ್‌ಗೆ ಮರು ಪರಿಶೀಲನಾ ಅರ್ಜಿ ಸಲ್ಲಿಸಿತ್ತು.

‘ಮಳೆ ನೀರು ಕಾಲುವೆ ಹೂಳು ತೆಗೆಯಿರಿ’

ವಾರ್ಡ್‌ವಾರು ಕ್ರಿಯಾಯೋಜನೆ ಸಿದ್ಧಪಡಿಸಿ: ಡಿ.ಎಸ್. ರಮೇಶ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಳೆ ನೀರು ಕಾಲುವೆಗಳ ನಿರ್ವಹಣೆಗೆ ವಾರ್ಡ್‌ವಾರು ಕ್ರಿಯಾ ಯೋಜನೆ ಸಿದ್ಧಪಡಿಸಿಕೊಂಡು ಮೂರು ತಿಂಗಳಿಗೆ ಒಮ್ಮೆ ಹೂಳು ತೆಗೆಯುವ ಮೂಲಕ ಅನಾಹುತ ಆಗದಂತೆ ನೋಡಿಕೊಳ್ಳಬೇಕು’ ಎಂದು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಸೂಚನೆ ನೀಡಿದರು.

‘ಮಳೆ ನೀರು ಕಾಲುವೆ ನಿರ್ವಹಣೆ, ಸಿಎಂಐಡಿಪಿ, ಎಸ್‌ಎಸ್‌ಐಪಿ ಅನುದಾನದಡಿ ಕೈಗೊಂಡ ಅಭಿವೃದ್ಧಿ ಕಾಮಗಾರಿ ಪ್ರಗತಿ ಪರಿಶೀಲನೆ ಹಾಗೂ ಶಿಥಿಲಾವಸ್ಥೆ ಕಟ್ಟಡಗಳ ತೆರವು ಕಾರ್ಯಾಚರಣೆ ಕುರಿತು ಸಭೆ ನಡೆಸಿದ ಅವರು, ಮಹದೇವಪುರ ವಲಯದಲ್ಲಿ 35 ಕಿ.ಮೀ, ಕೆ.ಆರ್. ಪುರ ವಲಯ ವ್ಯಾಪ್ತಿಯಲ್ಲಿ 45 ಕಿ.ಮೀ. ಉದ್ದದ ಮಳೆ ನೀರು ಕಾಲುವೆ ನಿರ್ವಹಣೆಗೆ ಒತ್ತು ನೀಡಬೇಕು’ ಎಂದು ಸೂಚಿಸಿದರು.



‘ವಿಶ್ವಬ್ಯಾಂಕ್ ಅನುದಾನದಡಿ ಬೃಹತ್ ಮಳೆ ನೀರು ಕಾಲುವೆ ಅಭಿವೃದ್ಧಿಪಡಿಸುತ್ತಿರುವ ಸ್ಥಳಗಳಲ್ಲಿ ಯೋಜನಾ ಅನುಷ್ಠಾನ ಘಟಕದೊಂದಿಗೆ ಸಮನ್ವಯ ಸಾಧಿಸಬೇಕು. ಸ್ವಚ್ಛತೆಗೆ ಗುರಿ ನಿಗದಿಪಡಿಸಿಕೊಂಡು, ಎಷ್ಟು ಕಿ.ಮೀ. ವ್ಯಾಪ್ತಿಯಲ್ಲಿ ಕಾಲುವೆ ಸ್ವಚ್ಛಗೊಳಿಸಲಾಗಿದೆ ಎಂದು ವರದಿ ಸಲ್ಲಿಸಬೇಕು. ತಪಾಸಣೆ ನಡೆಸುವಾಗ ಹೂಳು ತುಂಬಿರುವುದು ಕಂಡು ಬಂದಲ್ಲಿ ಅಧಿಕಾರಿಯನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು’ ಎಂದು ಎಚ್ಚರಿಸಿದರು.

‘ಸಿವಿಲ್ ಕಾಮಗಾರಿ ಪೂರ್ಣಗೊಂಡಿರುವ ಕಡೆ ಮೇ 15ರೊಳಗೆ ರಸ್ತೆ ಡಾಂಬರೀಕರಣ, ಬಾಕಿಯಿರುವ ಕಡೆ ಮೇ 30ರೊಳಗೆ ಅಭಿವೃದ್ಧಿ ಕಾಮಗಾರಿ ಪೂರ್ಣಗೊಳಿಸಬೇಕು’ ಎಂದು ಸೂಚನೆ ನೀಡಿದರು.

‘ನಗರಪಾಲಿಕೆ ವ್ಯಾಪ್ತಿಯಲ್ಲಿ ಶಿಥಿಲಗೊಂಡಿರುವ ಹಳೆಯ ಕಟ್ಟಡಗಳು, ಕಾಂಪೌಂಡ್, ತಡೆಗೋಡೆಗಳು ಸಹಿತ ಅಪಾಯಕಾರಿ ನಿರ್ಮಾಣಗಳನ್ನು ಗುರುತಿಸಿ ತೆರವುಗೊಳಿಸಬೇಕು. ಖಾಸಗಿ ಸ್ವತ್ತಿನ ಕಟ್ಟಡಗಳ ತೆರವಿಗೆ ನೋಟಿಸ್ ನೀಡಬೇಕು. ಸೂಕ್ತ ಬ್ಯಾರಿಕೇಡ್ ವ್ಯವಸ್ಥೆ ಮಾಡಿ ವಾಹನ ಸಂಚಾರಕ್ಕೆ ಬದಲಿ ವ್ಯವಸ್ಥೆ ಕಲ್ಪಿಸಬೇಕು’ ಎಂದರು.

‘ಮ್ಯಾನ್‌ಹೋಲ್ ಉಕ್ಕದಂತೆ ತಡೆಯಿರಿ’

ಬೆಂಗಳೂರು: ‘ಮುಂಬರುವ ಮಳೆಗಾಲದಲ್ಲಿ ನಗರದ ಜನತೆಗೆ ತೊಂದರೆಯಾಗದಂತೆ 15 ದಿನಗಳ ಒಳಗಾಗಿ ಒಳಚರಂಡಿ ಹೂಳೆತ್ತುವ ಕಾಮಗಾರಿ ಪೂರ್ಣಗೊಳಿಸಿ’ ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್ ಪ್ರಸಾತ್ ಮನೋಹರ್ ಸೂಚನೆ ನೀಡಿದ್ದಾರೆ.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಮುಂಗಾರು ಪೂರ್ವಸಿದ್ಧತಾ ಸಭೆ ನಡೆಸಿದ ಅವರು, ‘ತಗ್ಗು ಪ್ರದೇಶಗಳಲ್ಲಿ ಪ್ರವಾಹ ಆಗದ ಜತೆಗೆ ಮ್ಯಾನ್‌ಹೋಲ್ ಉಕ್ಕಿಹರಿಯದಂತೆ ತಡೆಯುವುದು ಮೊದಲ ಆದ್ಯತೆ. ಮಳೆಯಿಂದ ಹಾನಿಗೊಳಗಾಗುವ ಸೂಕ್ಷ್ಮ ಪ್ರದೇಶಗಳನ್ನು ಗುರುತಿಸಬೇಕು’ ಎಂದರು.

ವಲಯವಾರು ಮುಖ್ಯ ಎಂಜಿನಿಯರ್‌ಗಳು ಕಚೇರಿಗೆ ಸೀಮಿತವಾಗದೆ, ಸ್ಥಳಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಹಾಗೆಯೇ, ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳ ಕುರಿತು ಕೇಂದ್ರ ಕಚೇರಿಗೆ ಸಮಗ್ರ ವರದಿ ಸಲ್ಲಿಸುವುದು ಕಡ್ಡಾಯ’ ಎಂದರು.

‘ಬೀಗ ಹಾಕಿದ, ಖಾಲಿ ಮನೆ ಮರುಪರಿಶೀಲನೆ’

ಬೆಂಗಳೂರು: ಉತ್ತರ ನಗರಪಾಲಿಕೆ ವ್ಯಾಪ್ತಿಯಲ್ಲಿ ಬೀಗ ಹಾಕಿರುವ ಹಾಗೂ ಖಾಲಿ ಮನೆಗಳಿಗೆ ಮತ್ತೊಮ್ಮೆ ಭೇಟಿ ನೀಡಿ ಜನಗಣತಿ ಮಾಡಲು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಸೂಚನೆ ನೀಡಿದ್ದಾರೆ.

‘ಪ್ರತಿದಿನ ಸಂಜೆ ಹಾಗೂ ರಜಾದಿನಗಳಲ್ಲಿ ವಿಶೇಷ ಮಾಪ್ ಅಪ್ ರೌಂಡ್ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದ್ದು, ಯಾವುದೇ ಮನೆಗಳು ಗಣತಿಯಿಂದ ಹೊರತಾಗದಂತೆ ಕ್ರಮವಹಿಸಲಾಗುತ್ತಿದೆ’ ಎಂದು ತಿಳಿಸಿದ್ದಾರೆ.

ಎಲ್ಲ ಚಾರ್ಜ್ ಅಧಿಕಾರಿಗಳು, ಸಹಾಯಕ ಚಾರ್ಜ್ ಅಧಿಕಾರಿಗಳು, ಮೇಲ್ವಿಚಾರಕರು, ಗಣತಿದಾರರು ಭಾಗವಹಿಸಿ ಎನ್ಯೂಮರೇಷನ್ ಬ್ಲಾಕ್ ಗಡಿಗಳಲ್ಲಿ ಮರುಪರಿಶೀಲನಾ ಕಾರ್ಯಾಚರಣೆ ನಡೆಸಿದ್ದಾರೆ. ಮೊದಲ ಹಂತದ ಮನೆ ಪಟ್ಟಿ, ಮನೆ ಗಣತಿ ಕಾರ್ಯವನ್ನು ಶೇ 100 ರಷ್ಟು ಪೂರ್ಣ ಗೊಳಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೃಷಿ ವಿ.ವಿ ಘಟಿಕೋತ್ಸವ ನಾಳೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ 60ನೇ ಘಟಿಕೋತ್ಸವ ಮೇ 14ರಂದು ಜಿಕೆವಿಕೆ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ನಡೆಯಲಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅಧ್ಯಕ್ಷತೆ ವಹಿಸಲಿದ್ದು, ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಭಾಗವಹಿಸಲಿದ್ದು, ರಾಷ್ಟ್ರೀಯ ಜೀವ ವಿಜ್ಞಾನ ಕೇಂದ್ರದ ಎಲ್. ಎಸ್. ಶಶಿಧರ ಪ್ರಧಾನ ಭಾಷಣ ಮಾಡಲಿದ್ದಾರೆ.

ಅಜನೀಶ್ ಲೋಕನಾಥ್ ಸಂಗೀತ ಕಛೇರಿ 16ಕ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಎಸಿಟಿಸಿ ಈವೆಂಟ್ಸ್ ಇದೇ 16ರಂದು ಸಂಜೆ 6.30ಕ್ಕೆ ಭಾರತೀಯ ಮಾಲ್ ಆಫ್ ಬೆಂಗಳೂರಿನಲ್ಲಿ ಸಂಗೀತ ನಿರ್ದೇಶಕ ಬಿ. ಅಜನೀಶ್ ಲೋಕನಾಥ್ ಅವರ ನೇತೃತ್ವದಲ್ಲಿ ಸಂಗೀತ ಕಛೇರಿ ಹಮ್ಮಿಕೊಂಡಿದೆ.

ಈ ಕಾರ್ಯಕ್ರಮ ‘ಪ್ರಜಾವಾಣಿ’ ಮಾಧ್ಯಮ ಸಹಯೋಗದಲ್ಲಿ ನಡೆಯಲಿದೆ. ಕನ್ನಡದ ಜನಪ್ರಿಯ ಸಂಗೀತ ನಿರ್ದೇಶಕರಲ್ಲಿ ಒಬ್ಬರಾಗಿರುವ ಅಜನೀಶ್ ಲೋಕನಾಥ್ ಅವರು, ‘ಕಾಂತಾರ’ ಸೇರಿದಂತೆ ಹಲವು ಯಶಸ್ವಿ ಚಲನಚಿತ್ರಗಳಿಗೆ ಸಂಗೀತ ನೀಡಿದ್ದಾರೆ. ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ ಅತ್ಯಂತ ಪ್ರಭಾವಶಾಲಿ ಸಂಗೀತ ಸಂಯೋಜಕರಲ್ಲಿ ಒಬ್ಬರೆಂದು ಗುರುತಿಸಲ್ಪಟ್ಟಿರುವ ಅವರ ಚಿತ್ರರಂಗದ ಪಯಣ ವೇದಿಕೆ ಮೇಲೆ ಅನಾವರಣಗೊಳ್ಳಲಿದೆ.

ಈ ಸಂಗೀತ ಕಛೇರಿಯಲ್ಲಿ ವಿಜಯ್ ಪ್ರಕಾಶ್, ಮಂಗ್ಲಿ, ನಕಾಶ್ ಅಜೀಜ್, ಅನನ್ಯಾ ಭಟ್, ಸಾನ್ವಿ ಸುದೀಪ್, ಸಂಜಿತ್ ಹೆಗಡೆ, ಹರಿಶಂಕರ್, ಅಬ್ಬಿ ವಿ., ವಾಸುಕಿ ವೈಭವ್, ಅನಿರುದ್ಧ್, ಐಶ್ವರ್ಯ ರಂಗರಾಜನ್, ರಾಮ್‌ದಾಸ್, ಸಾಯಿ ವಿಘ್ನೇಶ್, ಹರ್ಷಿಕಾ, ಬಾಬಿ ಸೇರಿದಂತೆ ಹಲವು ಗಾಯಕರು ಪಾಲ್ಗೊಳ್ಳಲಿದ್ದಾರೆ.

ಟಿಕೆಟ್‌ಗಳು ಬುಕ್ ಮೈ ಶೋದಲ್ಲಿ ಲಭ್ಯವೆಂದು ಆಯೋಜಕರು ತಿಳಿಸಿದ್ದಾರೆ.

ಮದರಸಾದಲ್ಲಿ ಮಕ್ಕಳಿಗೆ ಕಿರುಕುಳ: ಪ್ರಕರಣ ದಾಖಲು

ತುಮಕೂರು: ಮಕ್ಕಳನ್ನು ಕಟ್ಟಡ ಕಟ್ಟುವ ಕೆಲಸಕ್ಕೆ ಬಳಸಿಕೊಂಡು, ಅವರಿಗೆ ದೈಹಿಕ ಹಿಂಸೆ ನೀಡಿದ ಆರೋಪದ ಮೇರೆಗೆ ತಾಲ್ಲೂಕಿನ ಅಮಲಾಪುರದ ಜಾಮೀಯಾ ಅರೇಬಿಯಾ ಹಸೀನಿಯಾ ಟ್ರಸ್ಟ್ (ಮದರಸಾ) ಶಿಕ್ಷಕ ಮೌಲಾಲಿ ಎಂಬುವರ ವಿರುದ್ಧ ಪ್ರಕರಣ ದಾಖಲಾಗಿದೆ.

ಏ. 19ರಂದು 24 ಮಕ್ಕಳು ಮದರಸಾದಿಂದ ತಪ್ಪಿಸಿಕೊಂಡು ಹೋಗಿದ್ದರು. ಬೆಂಗಳೂರಿನ ಕೆಆರ್‌ಎಸ್ ರೈಲು ನಿಲ್ದಾಣದಲ್ಲಿ ರೈಲ್ವೆ ಪೊಲೀಸರು ಅವರನ್ನು ರಕ್ಷಿಸಿ, ಮಕ್ಕಳ ಸಹಾಯವಾಣಿ ಕೇಂದ್ರದ ಸಿಬ್ಬಂದಿಗೆ ಒಪ್ಪಿಸಿದ್ದರು. ಅಲ್ಲಿಂದ ಅವರನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಮಕ್ಕಳ ರಕ್ಷಣಾ ಘಟಕಕ್ಕೆ ಸೇರಿಸಲಾಗಿತ್ತು. ಏ.23ರಂದು ಮಕ್ಕಳ ಕಲ್ಯಾಣ ಸಮಿತಿ ಮುಂದೆ ಆಪ್ತ ಸಮಾಲೋಚನೆ ನಡೆಸಿದಾಗ ಮದರಸಾದಲ್ಲಿ ಹಿಂಸೆ ನೀಡುತ್ತಿದ್ದ ವಿಚಾರ ಗೊತ್ತಾಗಿದೆ. ಬೆಂಗಳೂರು ರೈಲು ನಿಲ್ದಾಣದ ಮಕ್ಕಳ ಸಹಾಯವಾಣಿ ಕೇಂದ್ರದ ಮೇಲ್ವಿಚಾರಕ ನಾಗಭೂಷಣ್ ದೂರು ನೀಡಿದ್ದರು.

ವಿಶ್ವ ಶಾಂತಿಗಾಗಿ ಜಾಗತಿಕ ಧ್ಯಾನ ಇಂದು



ಶ್ರೀಶ್ರೀ ರವಿಶಂಕರ್ ಗುರೂಜಿ

ಬೆಂಗಳೂರು: ದಿ ಆರ್ಟ್ ಆಫ್ ಲಿವಿಂಗ್ ಅಂತರರಾಷ್ಟ್ರೀಯ ಕೇಂದ್ರದಲ್ಲಿ ನೂತನವಾಗಿ ನಿರ್ಮಿಸಿರುವ ಧ್ಯಾನ ಮಂದಿರವನ್ನು ಪ್ರಧಾನಿ ನರೇಂದ್ರ ಮೋದಿ ಈಚೆಗೆ ಉದ್ಘಾಟಿಸಿದ್ದು, ಶ್ರೀ ಶ್ರೀ ರವಿಶಂಕರ್ ಗುರೂಜಿ ನೇತೃತ್ವದಲ್ಲಿ ಈ ಮಂದಿರದಲ್ಲಿಯೇ ‘ವಿಶ್ವ ಶಾಂತಿಗಾಗಿ ಜಾಗತಿಕ ಧ್ಯಾನ’ ಎಂಬ ಮೊದಲ ಕಾರ್ಯಕ್ರಮ ಬುಧವಾರ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ವಿಶ್ವದ 182 ದೇಶಗಳ ಲಕ್ಷಾಂತರ ಜನರು ಭೌತಿಕವಾಗಿ ಮತ್ತು ನೇರ ಪ್ರಸಾರದ ಮೂಲಕ ಭಾಗವಹಿಸಲಿದ್ದಾರೆ.

ದಿ ವರ್ಲ್ಡ್ ಮೆಡಿಟೇಟ್ಸ್ ವಿತ್ ಗುರುದೇವ್ ಕಾರ್ಯಕ್ರಮವು ಒಂದು ತಿಂಗಳ ಕಾಲ ನಡೆಯಲಿದೆ. ಇದು ಆರ್ಟ್ ಆಫ್ ಲಿವಿಂಗ್‌ನ 45 ವರ್ಷಗಳ ಸಂಭ್ರಮಾಚರಣೆಯ ಕೇಂದ್ರ ಬಿಂದುವಾಗಿದೆ. ಈ ಕಾರ್ಯಕ್ರಮದಲ್ಲಿ ಕೇಂದ್ರದ ಸಚಿವರು, ವಿವಿಧ ರಾಜ್ಯಗಳ ರಾಜ್ಯಪಾಲರು, ಚಿತ್ರರಂಗದ ಗಣ್ಯರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

‘ನೀಟ್ ಯುಜಿ ರದ್ದು: ವಿದ್ಯಾರ್ಥಿಗಳ ಬದುಕಿನೊಂದಿಗೆ ಚೆಲ್ಲಾಟ’

ಬೆಂಗಳೂರು: ‘ನೀಟ್’ ಯುಜಿ ಪರೀಕ್ಷೆ ರದ್ದುಪಡಿಸುವ ಮೂಲಕ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಲಕ್ಷಾಂತರ ವಿದ್ಯಾರ್ಥಿಗಳ ಬದುಕಿನೊಂದಿಗೆ ಚೆಲ್ಲಾಟ ಆಡುತ್ತಿದೆ ಎಂದು ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಷನ್ (ಎಐಡಿಎಸ್‌ಒ) ದೂರಿದೆ.

ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆಗಳು ಪದೇ ಪದೇ ಸೋರಿಕೆ ಆಗುತ್ತಿರುವುದು ಎನ್‌ಟಿಎ ವೈಫಲ್ಯವಲ್ಲ. ಇದು ಲಕ್ಷಾಂತರ ಪ್ರಾಮಾಣಿಕ ವಿದ್ಯಾರ್ಥಿಗಳ ಬೆವರು ಮತ್ತು ಕನಸುಗಳ ಮೇಲೆ ಎಸಗುತ್ತಿರುವ ಘೋರ ದೌರ್ಜನ್ಯವಾಗಿದೆ. ಮೂರು ವರ್ಷಗಳಲ್ಲಿ ಎರಡನೇ ಬಾರಿಗೆ, ವೈದ್ಯಕೀಯ ಶಿಕ್ಷಣದ ಕನಸು ಹೊತ್ತವರ ಆಶೋತ್ತರಗಳನ್ನು ಅತಿ ಹೆಚ್ಚು ಹಣ ನೀಡುವವರಿಗೆ ಹರಾಜು ಹಾಕಲಾಗಿದೆ’ ಎಂದು ಎಐಡಿಎಸ್‌ಒ ರಾಜ್ಯ ಕಾರ್ಯದರ್ಶಿ ಅಜಯ್ ಕಾಮತ್ ಆರೋಪಿಸಿದ್ದಾರೆ.

ಎನ್‌ಟಿಎ ಕೋಚಿಂಗ್ ಮಾಫಿಯಾದ ಕೈಗೊಂಬೆಯಂತೆ ವರ್ತಿಸುತ್ತಿದೆ. ಆದ್ದರಿಂದ ಎನ್‌ಟಿಎ ರದ್ದುಗೊಳಿಸಬೇಕು. ಪ್ರಶ್ನೆಪತ್ರಿಕೆ ಸೋರಿಕೆಯ ಹಿಂದೆ ಇರುವ ವ್ಯಕ್ತಿಗಳು ಮತ್ತು ಕೋಚಿಂಗ್ ಮಾಫಿಯಾವನ್ನು ಪತ್ತೆಹಚ್ಚಲು ಉನ್ನತ ಮಟ್ಟದ ಸ್ವತಂತ್ರ ನ್ಯಾಯಾಂಗ ತನಿಖೆಯಾಗಬೇಕು. ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಬೇಕು’ ಎಂದು ಆಗ್ರಹಿಸಿದ್ದಾರೆ.



ಕರ್ನಾಟಕ ಜೈನ್ ಅಸೋಸಿಯೇಷನ್ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಡಿ.ಸುಧಾಕರ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ (ಎಡದಿಂದ) ಅಸೋಸಿಯೇಷನ್ ಅಧ್ಯಕ್ಷ ಎಸ್.ಜಿತೇಂದ್ರಕುಮಾರ್, ಸಾಹಿತಿ ಹಂಪ ನಾಗರಾಜಯ್ಯ ಮತ್ತು ಕನಕಗಿರಿಯ ಭುವನಕೀರ್ತಿ ಭಟ್ಟಾರಕ ಸ್ವಾಮೀಜಿ ಅವರು ಡಿ. ಸುಧಾಕರ್ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು –ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಕೆ.ಜೆ.ವಿ.ಎಸ್. ಬೆಂಗಳೂರು ನಗರ ಜಿಲ್ಲಾ ಎರಡನೇ ಸಮಾವೇಶ: ಉದ್ಘಾಟನೆ: ದಿನೇಶ್ ಗುಂಡೂರಾವ್, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿಗಳು: ಡಾ.ಸಿ.ಆರ್. ಚಂದ್ರಶೇಖರ್, ಈ. ಬಸವರಾಜು, ಪ್ರಾಸ್ತಾವಿಕ ನುಡಿ: ನಾ. ಶ್ರೀಧರ, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ ಬೆಂಗಳೂರು ನಗರ ಜಿಲ್ಲೆ, ಸ್ಥಳ: ಹೋಟೆಲ್ ಮೌರ್ಯ ಸಭಾಂಗಣ, ಗಾಂಧಿನಗರ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10

ವಿದ್ವತ್–2026: ಅತಿಥಿ: ಕೆ.ಜೆ. ಜಾರ್ಜ್, ಅಧ್ಯಕ್ಷತೆ: ಟಿ.ಸೋಮಶೇಖರ್, ಆಯೋಜನೆ ಮತ್ತು ಸ್ಥಳ: ಇಂಡಿಯನ್ ಅಕಾಡೆಮಿ ಡಿಗ್ರಿ ಕಾಲೇಜು, ಹೆಣ್ಣೂರು ಮುಖ್ಯರಸ್ತೆ, ಬೆಳಿಗ್ಗೆ 11.30

‘ಪರ್ವ–ವರ್ಣೋತ್ಸವ’ ಕಾಲೇಜು ವಾರ್ಷಿಕೋತ್ಸವ: ಅತಿಥಿಗಳು: ಮಂಗಳ ಎನ್, ಸ್ಪರ್ಶಾ ಆರ್.ಕೆ, ಆಯೋಜನೆ ಮತ್ತು ಸ್ಥಳ: ಸುರಾನ ಕಾಲೇಜು, ಮಧ್ಯಾಹ್ನ 1

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in



ಅಂತರಿಕ್ಷದಲ್ಲಿ ಸಾಧ್ಯವೆ ಮಾನವ ಸಂತಾನೋತ್ಪತ್ತಿ?

• ಎಸ್.ಎನ್.ಹೆಗಡೆ

ಈಗ ಭೂಮಿಯ ಒಟ್ಟು ಜನಸಂಖ್ಯೆ ಸುಮಾರು 830 ಕೋಟಿಯನ್ನು ದಾಟಿದೆ ಎಂಬ ಅಂದಾಜಿದೆ. ಇದರಲ್ಲಿ ಭಾರತದ ಜನಸಂಖ್ಯೆಯೇ ಸುಮಾರು 148 ಕೋಟಿ. ಕುಟುಂಬ ಯೋಜನೆಯಂಥ ಯೋಜನೆಗಳಿದ್ದರೂ ಜಾಗತಿಕ ಜನಸಂಖ್ಯೆಯ ಹೆಚ್ಚಳ ನಿಯಂತ್ರಣವಿಲ್ಲದೆ ಬೆಳೆಯುತ್ತಲೇ ಇದೆ. ಹೀಗೆ ಅಂಕೆಯಿಲ್ಲದೆ ಜಾಗತಿಕ ಜನಸಂಖ್ಯೆ ಹೆಚ್ಚಳವಾಗುತ್ತಿರುವುದನ್ನು 'ಜನಸಂಖ್ಯಾಸ್ಫೋಟ' ಎನ್ನುತ್ತಾರೆ. ಜನಸಂಖ್ಯಾಸ್ಫೋಟ ಇಂದಿನ ಜಾಗತಿಕ ಸಮಸ್ಯೆಗಳಲ್ಲಿ ಒಂದು. ಇಷ್ಟು ಜನರಿಗೆ ಜೀವನ ಸಾಗಿಸಲು ಹಾಗೂ ಬದುಕಲು ಅಗತ್ಯವಾದ ಮೂಲಸೌಲಭ್ಯಗಳನ್ನು ಹೊಂದಿಸಿಕೊಳ್ಳಲು ಪರಸ್ಪರ ಸ್ಪರ್ಧೆ ಹೋರಾಟಗಳು ನಡೆಯುತ್ತಿವೆ. ಈ ಸ್ಪರ್ಧೆ–ಹೋರಾಟಗಳನ್ನು ತಪ್ಪಿಸಲು ಜನಸಂಖ್ಯೆಯ ಸ್ವಲ್ಪ ಭಾಗವನ್ನು ಭೂಮಿಯಿಂದ ಚಂದ್ರ, ಮಂಗಳ ಅಥವಾ ಇನ್ನಾವುದೋ ಗ್ರಹಕ್ಕೆ ಸಾಗಿಸಿ ಅಲ್ಲಿ ಮಾನವ ಆವಾಸ ಕಲ್ಪಿಸಿಕೊಡುವುದು ಸಾಧ್ಯವೇ ಎಂದು ಈಗ ಖಗೋಳ ವಿಜ್ಞಾನಿಗಳು ಚಿಂತಿಸುತ್ತಿದ್ದಾರೆ. ಅಂತರಿಕ್ಷದಲ್ಲಿ ಚಂದ್ರ, ಮಂಗಳಗಳಂಥ ಯಾವುದಾದರೂ ಗ್ರಹದಲ್ಲಿ ಮಾನವ ವಸಾಹತು ಸ್ಥಾಪನೆಯ ಸಾಧ್ಯತೆಯನ್ನು ಪರಿಶೀಲಿಸುವುದು, ಈಗ ನಾಸಾ, ಇಸ್ರೊ ಹಾಗೂ ಇನ್ನಿತರ ಅಂತರಿಕ್ಷ ಸಂಶೋಧನಾ ಸಂಸ್ಥೆಗಳು ಕೈಗೊಳ್ಳುತ್ತಿರುವ ಗಗನಯಾನಗಳ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ.

ಹಿಂದೆಲ್ಲ, ಈ ಗ್ರಹಗಳ ವಾತಾವರಣ ಭೂಮಿಯ ವಾತಾವರಣಕ್ಕಿಂತ ಭಿನ್ನವಾಗಿದ್ದು ಅಲ್ಲಿ ಮಾನವನು ವಾಸಿಸುವುದು ಅಸಾಧ್ಯ – ಎಂದು ಯೋಚಿಸಲಾಗುತ್ತಿತ್ತು. ಇತ್ತೀಚೆಗೆ ಬಾಹ್ಯಾಕಾಶದಲ್ಲಿ, ಭೂಮಿಯ ಹೊರತಾಗಿ ಇತರ ಗ್ರಹಗಳಲ್ಲಿ ಮಾನವ ವಾಸಯೋಗ್ಯ ಪರಿಸರನ್ನು ಕೃತಕವಾಗಿ ನಿರ್ಮಿಸುವ ಸಾಧ್ಯತೆಯ ಕುರಿತು ಹಾಗೂ ಅಲ್ಲಿ ಮಾನವ ವಸಾಹತು ಸ್ಥಾಪಿಸುವುದರತ್ತವೂ ಪರಿಶೋಧನೆಗಳನ್ನು ನಡೆಸಲಾಗುತ್ತಿದೆ. ಅದರಲ್ಲಿಯೂ ಮಂಗಳಗ್ರಹದಲ್ಲಿ ಸುಲಭವಾಗಿ ಮಾನವ ವಾಸಯೋಗ್ಯ ಪರಿಸರವನ್ನು ನಿರ್ಮಿಸುವ ಸಾಧ್ಯತೆ ಹೆಚ್ಚಿದೆ ಎಂದು ಈ ಸಂಶೋಧನೆಗಳು ತಿಳಿಸಿವೆ. ಹಾಗಾದರೆ ಭೂಮಿಯ ಮೇಲಿನ ಒಂದಿಷ್ಟು ಜನರನ್ನು ಮಂಗಳನಲ್ಲಿಗೋ ಅಥವಾ ಚಂದ್ರನಲ್ಲಿಗೋ ಯಾಕೆ ಕಳಿಸಬಾರದು? ಆದರೂ ಈ ಪ್ರಶ್ನೆಗೆ ಉತ್ತರವನ್ನು ನೀಡುವುದು ಅಷ್ಟು ಸುಲಭವಲ್ಲ.

ಮಾನವನ ಅಥವಾ ಯಾವುದೇ ಜೀವಿಯ ಮೂಲ ಜೈವಿಕಕ್ರಿಯೆ ಸಂತಾನಾಭಿವೃದ್ಧಿ. ಭೂಮಿಯಲ್ಲಿ ಬದುಕುತ್ತಿರುವ ಮಾನವರಲ್ಲಿ ಒಂದಿಷ್ಟು ಜನರನ್ನು ಆಕಾಶಕಾಯಗಳಿಗೆ ವರ್ಗಾಯಿಸಿದರೆ ಅಲ್ಲಿ ಅವರು ಲೈಂಗಿಕಕ್ರಿಯೆ ಹಾಗೂ ಸಂತಾನಾಭಿವೃದ್ಧಿಯನ್ನು ಸಮಂಜಸವಾಗಿ ಮಾಡುವಂತಿರಬೇಕು. ಇದು ಸಾಧ್ಯವೇ ಎಂಬ ಪ್ರಶ್ನೆಗೆ ಉತ್ತರವನ್ನು ಕಂಡುಹಿಡಿಯಲು ಆಸ್ಟ್ರೇಲಿಯಾದ ಅಡಿಲೇಡ್ ವಿಶ್ವವಿದ್ಯಾಲಯದ ವೀರ್ಯ ಮತ್ತು ಭ್ರೂಣ ಜೀವಶಾಸ್ತ್ರ ಪ್ರಯೋಗಾಲಯ ಪ್ರಯತ್ನ ನಡೆಸುತ್ತಿದೆ. ಆ ಪ್ರಯೋಗಾಲಯದ ಶೋಧಗಳ ಪ್ರಾಥಮಿಕ ವರದಿಯನ್ನು ಕಳೆದ ಮಾರ್ಚ್ ತಿಂಗಳ 'ಕಮ್ಯೂನಿಕೇಷನ್ ಬಯಾಲಜಿ' ಎಂಬ ಮಾಸಪತ್ರಿಕೆ ಹಾಗೂ ಅಡಿಲೇಡ್ ವಿಶ್ವವಿದ್ಯಾಲಯದ ದೈನಿಕ ವಿಜ್ಞಾನ ವರದಿಗಳಲ್ಲಿ ಪ್ರಕಟಿಸಲಾಗಿದೆ.

ಭೂಪರಿಸರದಲ್ಲಿ ಸಂಭೋಗದ ಸಮಯದಲ್ಲಿ ಪುರುಷನ ವೀರ್ಯವು ಸ್ತ್ರೀಯ ಜನನಾಂಗವನ್ನು ಸೇರಿರುತ್ತದೆ. ಅದರಲ್ಲಿರುವ ಅಸಂಖ್ಯಾತ ವೀರ್ಯಾಣುಗಳು ಗರ್ಭಾಶಯದ ಮೂಲಕ ಅಂಡನಾಳದ ಕಡೆಗೆ ಚಲಿಸುತ್ತವೆ. ಇನ್ನೊಂದೆಡೆ ಹೆಣ್ಣಿನ ಅಂಡಾಶಯದಲ್ಲಿ ಬೆಳೆದ ಅಂಡಾಣು ಅಂಡನಾಳದ ಮೂಲಕ ಗರ್ಭಾಶಯದ ಕಡೆಗೆ ಸಾಗುತ್ತದೆ. ಋತುಚಕ್ರದ ಮಧ್ಯದ ಅವಧಿಯಲ್ಲಿ ಸಂಭೋಗವಾಗಿ ವೀರ್ಯಾಣುಗಳು ಸ್ತ್ರೀಯ ಜನನನಾಳದ ಮೂಲಕ ಗರ್ಭಾಶಯವನ್ನು ತಲುಪಿ, ಅಲ್ಲಿಂದ ಅಂಡನಾಳದ ಕಡೆಗೆ ಚಲಿಸುತ್ತವೆ; ಇನ್ನೊಂದೆಡೆ ಹೆಣ್ಣಿನ ಅಂಡಾಣು ಅಂಡನಾಳದ ಮಧ್ಯ ಭಾಗವನ್ನು ತಲುಪಿದಾಗ ವೀರ್ಯದ ಅಸಂಖ್ಯಾತ ವೀರ್ಯಾಣುಗಳಲ್ಲಿ ಒಂದು ಅಂಡನಾಳದ ಮಧ್ಯದ ವರೆಗೆ ಸಾಗಿಬಂದ ಅಂಡಾಣುವಿನೊಡನೆ ಸಂಯೋಗ ಹೊಂದಿ ಅದನ್ನು ನಿಶೇಚನೆಗೊಳಿಸುತ್ತದೆ. ಋತುಚಕ್ರದ ಹದಿನಾಲ್ಕರಿಂದ ಹದಿನಾರನೆಯ ದಿನ ಸಂಭೋಗದ ಮೂಲಕ ವೀರ್ಯ ಹೆಣ್ಣಿನ ಜನನಾಂಗವನ್ನು ಪ್ರವೇಶಿಸಿದರೆ ಮಾತ್ರ ಗರ್ಭಧಾರಣೆ ಸಾಧ್ಯ. ಹೀಗೆ ಗಂಡಿನ ವೀರ್ಯಾಣು ಹಾಗೂ ಸ್ತ್ರೀಯ ಅಂಡಾಣುಗಳು ಸೇರಿ ಯುಗ್ಮಕೋಶ ಉದ್ಭವಿಸುತ್ತದೆ. ಈ ಯುಗ್ಮಕೋಶವು ಸ್ತ್ರೀಯ ಗರ್ಭಾಶಯವನ್ನು ಸೇರಿ ಭ್ರೂಣವಾಗಿ ಬೆಳೆಯುತ್ತದೆ. ಇದೇ ಭ್ರೂಣವು ಮುಂದೆ ಮಗುವಾಗಿ ಜನಿಸುತ್ತದೆ. ಅದರ ಮೂಲಕ ಮಾನವ ಪೀಳಿಗೆ ಮುಂದುವರಿಯುತ್ತದೆ.

ಸ್ತ್ರೀಯ ಜನನಾಂಗವನ್ನು ಸೇರಿದ ವೀರ್ಯಾಣುಗಳಿಗೆ ಅಂಡಾಣುವಿನ ಕಡೆಗೆ ಚಲಿಸಬೇಕೆಂಬುದು ತಿಳಿದಿರುತ್ತದೆ. ಭೂಮಿಯ ಮೇಲಿನ ಗುರುತ್ವಾಕರ್ಷಣೆ ಹಾಗೂ ಅಂಡಾಶಯದಲ್ಲಿ ಸ್ರವಿಸಲ್ಪಟ್ಟ 'ಪ್ರೊಜೆಸ್ಟಿರಾನ್' ಎಂಬ ಹಾರ್ಮೋನುಗಳು ಈ ಚಲನೆಯನ್ನು ನಿರ್ದೇಶಿಸುತ್ತವೆ. ಈ ನಿರ್ದೇಶನವನ್ನು ಅವಲಂಬಿಸಿ ವೀರ್ಯಾಣುಗಳು ಗರ್ಭಾಶಯದ ಮುಖಾಂತರ ಅಂಡಾಣುನಾಳವನ್ನು ಪ್ರವೇಶಿಸುತ್ತವೆ. ಸ್ತ್ರೀಯ ಜನನಾಂಗಗಳಲ್ಲಿ ಅಂಡಾಣು ವೀರ್ಯಾಣುಗಳ ಚಟುವಟಿಕೆ ಗುರುತ್ವಾಕರ್ಷಣೆ ಹಾಗೂ ರಾಸಾಯನಿಕ ಹಾರ್ಮೋನ್‌ಗಳ ಆಕರ್ಷಣೆಯನ್ನು ಅವಲಂಬಿಸಿವೆ. ಎಂದರೆ ಮಾನವರ ಸಂತಾನೋತ್ಪತ್ತಿ ಸಾಮರ್ಥ್ಯವು ಗುರುತ್ವಾಕರ್ಷಣೆ ಹಾಗೂ ರಾಸಾಯನಿಕ ಆಕರ್ಷಣೆಯನ್ನು ಅವಲಂಬಿಸಿದೆ ಎಂದಾಯಿತು.

ಆದರೆ ಬಾಹ್ಯಾಕಾಶದಲ್ಲಿ ಗುರುತ್ವಾಕರ್ಷಣೆಯ ಬಲ ಭೂಮಿಯ ಗುರುತ್ವಾಕರ್ಷಣ ಬಲಕ್ಕಿಂತ ಕಡಿಮೆ ಇರುವುದರಿಂದ ವೀರ್ಯಾಣು ಗರ್ಭಾಶಯದ ಕಡೆಗೆ ಚಲಿಸಲು ಅಸಮರ್ಥವಾಗುತ್ತವೆ ಎನ್ನುತ್ತವೆ ಈ ಶೋಧಗಳು. ಅಂದರೆ ಬಾಹ್ಯಾಕಾಶದಲ್ಲಿ ಮಾನವನ ಸಂತಾನಾಭಿವೃದ್ಧಿ ಸಾಮರ್ಥ್ಯವು ಗುರುತ್ವಾಕರ್ಷಣೆಯ ಅನುಪಾತದಲ್ಲಿ ಕಡಿಮೆಯಾಗಬಹುದು.

ಆಸ್ಟ್ರೇಲಿಯಾದ ಅಡಿಲೇಡ್‌ನ ವಿಶ್ವವಿದ್ಯಾಲಯದ ಸಂಶೋಧಕರು ಮೊದಲು ಜೀವಂತ ಇಲಿಗಳಲ್ಲಿ ಸೂಕ್ಷ್ಮ ಗುರುತ್ವಾಕರ್ಷಣೆಯುಳ್ಳ ಹೆಣ್ಣಿನ ಗರ್ಭಾಶಯವನ್ನು ಹೋಲುವ ಚಿಕ್ಕ ಕೋಣೆಗಳನ್ನು ರಚಿಸಿ ಅದರಲ್ಲಿ ವೀರ್ಯಾಣುಗಳನ್ನು ಸೇರಿಸಿ ಪ್ರಯೋಗ ನಡೆಸಿದರು. ಸೂಕ್ಷ್ಮ ಗುರುತ್ವಾಕರ್ಷಣೆಯ ಪರಿಸ್ಥಿತಿಗಳಲ್ಲಿ, ವೀರ್ಯಾಣುಗಳು ಗರ್ಭಾಶಯದ ಕಡೆಗೆ ಚಲಿಸುವ ಬದಲು, ವಿವಿಧ ದಿಕ್ಕಿನೆಡೆಗೆ ಚದುರಿಹೋದವು. ಅದರಿಂದ ಅವುಗಳ ಸಂತಾನೋತ್ಪತ್ತಿ ಸಾಮರ್ಥ್ಯ ಶೇ 70ರಷ್ಟು ಇಳಿದಿರುವುದು ಕಂಡುಬಂತು. ಅನಂತರ ಮಾನವವೀರ್ಯವನ್ನು ಸ್ತ್ರೀ ಸಂತಾನೋತ್ಪತ್ತಿ ಪ್ರದೇಶವನ್ನು ಅನುಕರಿಸುವಂತೆ ವಿನ್ಯಾಸಗೊಳಿಸಲಾದ ಸೂಕ್ಷ್ಮ ಗುರುತ್ವಾಕರ್ಷಣೆಯುಳ್ಳ ಕೋಣೆಯೊಂದರಲ್ಲಿ ಹಾಕಿ ವೀರ್ಯಾಣುಗಳ ಚಲನಸಾಮರ್ಥ್ಯವನ್ನು ಪರೀಕ್ಷಿಸಿದರು. ಮಾನವನಲ್ಲಿಯೂ ಇಂಥದೇ ಫಲಿತಾಂಶಗಳು ದೊರಕಿದವು. ಈ ಪ್ರಯೋಗಗಳ ಮೂಲಕ ಅಡಿಲೇಡ್ ತಂಡ, ಬಾಹ್ಯಾಕಾಶದ ಕಡಿಮೆ ಗುರುತ್ವಾಕರ್ಷಣೆ ಸಂತಾನೋತ್ಪತ್ತಿಯ ಮೇಲೆ ಸಾಕಷ್ಟು ಪರಿಣಾಮ ಬೀರುತ್ತದೆ; ಭೂಮಿಯ ಸಂತಾನೋತ್ಪತ್ತಿ ದರಕ್ಕೆ ಹೋಲಿಸಿದರೆ ಇದು ಅತ್ಯಲ್ಪ ಎಂದು ತೀರ್ಮಾನಿಸಿತು.

ಇದುವರೆಗೆ ಬಾಹ್ಯಾಕಾಶದಲ್ಲಿ ಗಗನಯಾನಿಗಳು ಯಾರೂ ಲೈಂಗಿಕತೆಗೆ ಅಥವಾ ಪ್ರಜನನಕ್ಕೆ ಪ್ರಯತ್ನಿಸಿರುವ ಅಥವಾ ಪ್ರಯತ್ನಿಸುವ ಸಾಧ್ಯತೆ ಇಲ್ಲ. ಆದರೆ ಮುಂದೊಂದು ದಿನ ಅನ್ಯಗ್ರಹವೊಂದರಲ್ಲಿ ವಸಾಹತು ಸ್ಥಾಪನೆ ಮಾಡುವ ಸಂದರ್ಭ ಬಂದರೆ ಆಗ ಬಾಹ್ಯಾಕಾಶದಲ್ಲಿ ಸಂತಾನೋತ್ಪತ್ತಿ ಅಗತ್ಯ ಉಂಟಾಗಬಹುದು. ಇದುವರೆಗಿನ ಸಂಶೋಧನೆಗಳು ಅಂತರಿಕ್ಷದಲ್ಲಿ ಸಂತಾನೋತ್ಪತ್ತಿಯ ಸಾಧ್ಯತೆಗಳು ಕಡಿಮೆ ಎಂದು ತೋರಿಸಿವೆ. ಅದರಿಂದ ಅಂತರಿಕ್ಷದಲ್ಲಿ ಮಾನವ ವಸಾಹತು ಸ್ಥಾಪಿಸುವ ಯೋಜನೆಯನ್ನು ಸದ್ಯಕ್ಕೆ ತಡೆಹಿಡಿಯುವುದು ಸೂಕ್ತ – ಎನ್ನುತ್ತಾರೆ, ಅಡಿಲೇಡ್ ವಿ.ವಿ.ಯ ನಿಕೋಲ್ ಮ್ಯಾಕ್ಫರ್ಸನ್.



ಡೇಟಾ ಸ್ಟೋರೇಜ್ ಸ್ಪೇಸ್ ಇಲ್ಲ ಸ್ಪೇಸ್ ಇಲ್ಲ!

• ಕೃಷ್ಣಭಟ್

ನಮ್ಮ ಬಳಿ ಈಗ ಹಲವು ಡಿಜಿಟಲ್ ಸಾಧನಗಳಿವೆ. ಸ್ಮಾರ್ಟ್‌ಫೋನ್, ಲ್ಯಾಪ್‌ಟಾಪ್, ಡೆಸ್ಕ್‌ಟಾಪ್, ಟ್ಯಾಬ್ಲೆಟ್ – ಎಲ್ಲವೂ ಇವೆ. ಎಲ್ಲದರಲ್ಲೂ ಜಿಬಿಗಟ್ಟಲೆ ಡೇಟಾ ಇದೆ. ಸ್ಮಾರ್ಟ್‌ಫೋನ್ ಹಾಗೂ ಟ್ಯಾಬ್ಲೆಟ್‌ನಲ್ಲಿ 128 ಜಿಬಿ, ಲ್ಯಾಪ್‌ಟಾಪ್‌ನಲ್ಲಿ 1 ಟಿಬಿ, ಡೆಸ್ಕ್‌ಟಾಪ್‌ನಲ್ಲಿ 1 ಟಿಬಿ – ಹೀಗೆ ಟಿಬಿಗಟ್ಟಲೆ ಡೇಟಾ ನಮ್ಮ ಮನೆಯಲ್ಲಿರುತ್ತದೆ. ನಮ್ಮ ಮನೆಗಳಲ್ಲಿರುವ ಎಲ್ಲ ಸದಸ್ಯರ ಡಿವೈಸ್‌ಗಳಲ್ಲಿರುವ ಸ್ಟೋರೇಜ್ ಸ್ಪೇಸ್ ಲೆಕ್ಕ ಹಾಕಿದರಂತೂ ಈ ಸಂಖ್ಯೆ ಇನ್ನಷ್ಟು ಹೆಚ್ಚಾಗುತ್ತದೆ.

ಆದರೂ, ನಮ್ಮ ಸ್ಮಾರ್ಟ್‌ಫೋನ್‌ನಲ್ಲಿ 'ನಿಮ್ಮ ಸ್ಟೋರೇಜ್ ಸ್ಪೇಸ್ ಕಡಿಮೆ ಇದೆ. ಮತ್ತಷ್ಟು ತುಂಬಿಸಲು ಈಗಿರುವುದನ್ನು ಖಾಲಿ ಮಾಡಿ ಅಥವಾ ಕ್ಲೌಡ್ ಸಬ್‌ಸ್ಕ್ರಿಪ್ಷನ್ ಪಡೆಯಿರಿ' ಎಂಬ ಮೆಸೇಜ್ ಕಾಯಂ ಆಗಿ ಕಾಣಿಸುತ್ತಲೇ ಇರುತ್ತದೆ.

ಈ ಸ್ಟೋರೇಜ್‌ನಲ್ಲಿ ಹೆಚ್ಚು ಸಂಖ್ಯೆಯ ಡೇಟಾ ತುಂಬಿಕೊಂಡಿರುವುದೇ ಫೋಟೊಗಳದ್ದು! ಒಂದು ಊರಿಗೆ ಹೋದರೆ ಬೇಕೋ ಬೇಡವೋ, ಎಲ್ಲ ಸೇರಿ ಜಿಬಿಗಟ್ಟಲೆ ಫೋಟೊಗಳನ್ನು ತುಂಬಿಸಿಕೊಂಡು ಬರುತ್ತೇವೆ. ಮನೆ ಹೊಸ್ತಿಲು ದಾಟಿದಾಗ ತೆಗೆಯುವ ಮೊದಲ ಫೋಟೊದಿಂದ ಹಿಡಿದು ಮನೆಗೆ ವಾಪಸು ಬರುವವರೆಗಿನ ಪ್ರತಿ ಕ್ಷಣದ ಫೋಟೊವನ್ನೂ ನಾವು ಸೆರೆಹಿಡಿಯುತ್ತಲೇ ಇರುತ್ತೇವೆ. ಆಮೇಲೆ ಮನೆಗೆ ಬಂದು ಮತ್ತೆ ಅದರಲ್ಲಿನ ಹತ್ತು ಫೋಟೊಗಳನ್ನಾದರೂ ತೆಗೆದು ನೋಡುತ್ತೇವೋ ಇಲ್ಲವೋ? ಆದರೆ, ಆ ಕ್ಷಣವನ್ನು ಸೆರೆಹಿಡಿಯುವ ಉತ್ಸಾಹದಲ್ಲಿ ನಾವು ಅವನ್ನು ದಾಖಲಿಸಿಕೊಳ್ಳುತ್ತಲೇ ಇರುತ್ತೇವೆ.

ಹೀಗೆ ಸೆರೆಹಿಡಿದ ಫೋಟೊಗಳು ತುಂಬಿಕೊಳ್ಳುತ್ತಲೇ ಹೋಗುತ್ತವೆ. ನಾವು ಸಾವಿರಾರು ರೂಪಾಯಿಗಳನ್ನು ಕೊಟ್ಟು, ಫೀಚರುಗಳನ್ನೆಲ್ಲ ಲೆಕ್ಕ ಹಾಕಿ ಕೊಂಡುಕೊಂಡ ಸ್ಮಾರ್ಟ್‌ಫೋನ್ ಸ್ಟೋರೇಜ್ ಇಲ್ಲದೇ ನಿಧಾನವಾಗಲು ತೊಡಗುತ್ತದೆ.

ಕಳೆದ 10 ವರ್ಷಗಳ ಹಿಂದಿನ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ಸಾಮ್ಯತೆ ಇದೆ. ಫ್ಲಾಪಿ ಡಿಸ್ಕ್ ಇದ್ದ ಕಾಲದಿಂದಲೂ ನಾವು ಸ್ಟೋರೇಜ್ ಇಲ್ಲ ಎಂದೇ ಹಪಾಹಪಿಸುತ್ತಿದ್ದೆವು. ಆಗ ಕೆಬಿ ಲೆಕ್ಕದಲ್ಲಿ ನಮ್ಮ ಸ್ಟೋರೇಜ್ ಇತ್ತು. ಈಗ ಜಿಬಿ ಹಾಗೂ ಟಿಬಿ ಲೆಕ್ಕದಲ್ಲಿ ನಮ್ಮ ಬಳಿ ಸ್ಟೋರೇಜ್ ಇದೆ. ಆದರೂ ನಮಗೆ ಸ್ಟೋರೇಜ್ ಸಾಲುತ್ತಿಲ್ಲ!

ಇದೇ ಕಾರಣಕ್ಕೆ ಈಗ ದೊಡ್ಡ ದೊಡ್ಡ ತಂತ್ರಜ್ಞಾನ ಕಂಪನಿಗಳು ಕ್ಲೌಡ್ ಸ್ಟೋರೇಜ್ ಸೌಲಭ್ಯವನ್ನು ಒದಗಿಸುತ್ತಿವೆ. ಗೂಗಲ್ ಪ್ರೋ ಸಬ್‌ಸ್ಕ್ರಿಪ್ಷನ್ ತೆಗೆದುಕೊಂಡರೆ 1 ಟಿಬಿ ಸ್ಟೋರೇಜ್ ಜೊತೆಗೆ ಜೆಮಿನೈ ಎಐ ಪ್ರೋ ವರ್ಷನ್ ಕೂಡ ಸಿಗುತ್ತದೆ. ಬಹುತೇಕ ಜನರು ಈಗ ಗೂಗಲ್ ಜೆಮಿನೈ ಸಬ್‌ಸ್ಕ್ರಿಪ್ಷನ್ ಖರೀದಿ ಮಾಡಿದ್ದೇ ಅದರಲ್ಲಿ 1 ಟಿಬಿ ಸ್ಟೋರೇಜ್ ಸ್ಪೇಸ್ ಸಿಗುತ್ತದೆ ಎಂಬ ಕಾರಣಕ್ಕೆ! ಅದರ ಜೊತೆಗೆ ಜೆಮಿನೈ ಕೂಡ ಸಿಗುತ್ತಿರುವುದು ಹೆಚ್ಚುವರಿ ಪ್ರಯೋಜನದ ಹಾಗೆ!

ಆದರೆ, ಅಂತಹ ಹೆಚ್ಚುವರಿ ಪ್ರಯೋಜನದಿಂದಲೂ ನಮ್ಮ ಡಿವೈಸ್‌ನ ಸ್ಟೋರೇಜ್ ಸ್ಪೇಸ್ ಅನ್ನು ಇನ್ನಷ್ಟು ನುಂಗುವ ತಂತ್ರವಿರುತ್ತದೆ. ನಾವು ಸೆರೆಹಿಡಿದ ಫೋಟೊಗಳನ್ನು ಎಐಗೆ ಹಾಕಿ ಎಡಿಟ್ ಮಾಡುತ್ತೇವೆ. ಅದು ಒಂದೇ ಫೋಟೊದ ಮೂರ್ನಾಲ್ಕು ವರ್ಷನ್ ಕೊಡುತ್ತದೆ. ಅವೆಲ್ಲವನ್ನೂ ಡೌನ್‌ಲೋಡ್ ಮಾಡಿಕೊಂಡು ಮತ್ತಷ್ಟು ಸ್ಟೋರೇಜ್ ಸ್ಪೇಸ್ ಹೆಚ್ಚಿಸಿಕೊಳ್ಳುತ್ತೇವೆ!

ಅಲ್ಲಿಗೆ ನಮ್ಮ ಪ್ರತಿ ಫೋಟೊ, ಪ್ರತಿ ಚಟುವಟಿಕೆ ಹಾಗೂ ಪ್ರತಿ ನಡೆಯೂ ಸ್ಟೋರೇಜ್ ಹೆಚ್ಚಿಸುವ ಪರಿಕ್ರಮವೇ ಆಗುತ್ತದೆ!

ಇದೊಂದು ವರ್ತುಲ!: ಒಳ್ಳೆಯ ಕ್ಯಾಮೆರಾ ಇದ್ದಾಗ, ಒಂದೊಂದು ಫೋಟೊವನ್ನು ಸೇವ್ ಮಾಡಿದಾಗಲೂ ಹೆಚ್ಚು ಸ್ಟೋರೇಜ್ ಸ್ಪೇಸ್ ತಿನ್ನುವ ಒಳ್ಳೆಯ ಕ್ಯಾಮೆರಾ ಫೀಚರ್ ಇರುವ ಫೋನ್ ಖರೀದಿಸುತ್ತೇವೆ. ಪ್ರತಿ ಬಾರಿ ಫೋನ್ ಖರೀದಿ ಮಾಡುವಾಗಲೂ ಹಿಂದಿನ ಫೋನ್‌ಗಿಂತ ಹೆಚ್ಚಿನ ಸ್ಟೋರೇಜ್ ಸ್ಪೇಸ್ ಇರುವ ಹಾಗೆ ನೋಡಿಕೊಳ್ಳುತ್ತೇವೆ. ಹೆಚ್ಚು ಸ್ಟೋರೇಜ್ ಸ್ಪೇಸ್ ಎಂದರೆ ಹೆಚ್ಚು ಹಣ ಅಂತ ಅರ್ಥ.

ಆ ಸ್ಟೋರೇಜ್ ಮುಗಿಯುತ್ತಿದ್ದ ಹಾಗೆಯೇ ಅಂಥದ್ದೇ ಟೆಕ್ ಕಂಪನಿಯೊಂದು ಒದಗಿಸುವ ಕ್ಲೌಡ್ ಸ್ಟೋರೇಜ್ ಖರೀದಿ ಮಾಡುತ್ತೇವೆ. ಕ್ಲೌಡ್ ಸ್ಟೋರೇಜ್‌ನಲ್ಲಿ ನಾವು ಫೋಟೊ ಸ್ಟೋರ್ ಮಾಡಿದೆವು ಎಂದರೆ ಅಲ್ಲಿ ಖಾಲಿ ಬಿದ್ದಿರುವ ನಮ್ಮ ಫೋಟೊಗಳನ್ನು ಇಟ್ಟುಕೊಳ್ಳಲು ಕಂಪನಿಗೆ ಪ್ರತಿ ತಿಂಗಳೂ ಬಾಡಿಗೆ ಕೊಟ್ಟ ಹಾಗೆ!

ಇದರಿಂದ ನಮಗೆ ಇರುವ ಏಕೈಕ ಅನುಕೂಲವೆಂದರೆ, ಆ ನೆನಪುಗಳನ್ನು ನಾವು ಆಗಾಗ ಮೆಲುಕುಹಾಕುತ್ತಿರಬಹುದು. ಆದರೆ, ಹಾಗೆ ನಮ್ಮ ಡಿಜಿಟಲ್ ಸಾಧನದಲ್ಲಿರುವ ಫೋಟೊ ವಿಡಿಯೊಗಳನ್ನು ನೋಡಿ ನಮ್ಮ ಕ್ಷಣಗಳನ್ನು ಮೆಲುಕು ಹಾಕುವುದಕ್ಕೂ ಮತ್ತು ಅದಕ್ಕೆ ಬೇಕಾಗಿ ನಾವು ನಮ್ಮ ಕಿಸೆಯಿಂದ ಪ್ರತಿ ತಿಂಗಳು ಅಥವಾ ಪ್ರತಿ ವರ್ಷ ವೆಚ್ಚ ಮಾಡುವ ಹಣಕ್ಕೂ ತಾಳೆಯಾಗುತ್ತದೆಯೇ?

ಇದು ನಮಗೆ ನಾವೇ ಕೇಳಿಕೊಳ್ಳಬೇಕಾದ ಪ್ರಶ್ನೆ!: ನಾವು ಡಿಜಿಟಲ್ ಸಾಧನಗಳ ಬಳಕೆ ಹೆಚ್ಚಾಗಿರುವ ಈ ಕಳೆದ ಹತ್ತಿಪ್ಪತ್ತು ವರ್ಷಗಳಲ್ಲೇ ಪ್ರತಿಯೊಬ್ಬರೂ 'ಮುಂದೊಂದು ದಿನ ಬೇಕಾಗಬಹುದು' ಎಂಬ ಕಾರಣಕ್ಕೆ ಟಿಬಿಗಟ್ಟಲೆ ಡೇಟಾವನ್ನು ಸಂಗ್ರಹಿಸಿದ್ದೇವೆ! ಇನ್ನೊಂದೆರಡು ತಲೆಮಾರು ಕಳೆದರೆ ಪ್ರತಿ ವ್ಯಕ್ತಿಯೂ ಎಷ್ಟು ಟಿಬಿಗಟ್ಟಲೆ ಡೇಟಾ ಸಂಗ್ರಹಿಸಬಹುದು! ಹಾಗೆ ಸಂಗ್ರಹಿಸಿದ ಡೇಟಾಗೆ ಆತ ಖರ್ಚು ಮಾಡುವ ಹಣ ಎಷ್ಟಿರಬಹುದು!

ಈಗಲೇ ನಾವು ಒಂದು ನಾಲ್ಕು ಟೂರ್‌ಗೆ ಹೋಗಿ ಬಂದ ಫೋಟೋ, ವಿಡಿಯೊಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದಕ್ಕೆ ಅಂತಲೇ ಒಂದು ಟಿಬಿ ಹಾರ್ಡ್‌ಡ್ರೈವ್ ಖರೀದಿ ಮಾಡಿದರೆ, ಅದಕ್ಕೆ ₹ 8-10 ಸಾವಿರ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತಿದೆ. ಎಂದರೆ ಒಂದು ಪ್ರವಾಸದ ಒಂದು ಸಣ್ಣ ಖರ್ಚಿನ ಬಾಬತ್ತೇ ಅದಕ್ಕೆ ಆಗುತ್ತಿದೆ!

ಇದು ಹೀಗೇ ಆದರೆ, ಮುಂದಿನ ದಿನಗಳಲ್ಲಿ ನಾವು ಈ ಡೇಟಾ ಬಳಕೆಯ ಖರ್ಚಿಗೇ ಎಷ್ಟು ಮೀಸಲಿಡಬೇಕಾಗಬಹುದು!

ಏನಿದೆ ಪರಿಹಾರ?: ಡಿಜಿಟಲ್ ಸೌಕರ್ಯಗಳು ನಮ್ಮ ಕೈಗೆ ಸುಲಭವಾಗಿ ಸಿಗುವಂತೆ ಇರುವುದು ನಿಜವಾದರೂ, ಅದನ್ನು ನಿಭಾಯಿಸುವುದೂ ನಮ್ಮ ಕೈಯಲ್ಲೇ ಇದೆ. ಮುಂದೆ ಯಾವತ್ತೋ ಒಂದು ದಿನ ತೆಗೆದು ನೋಡುತ್ತೇವೆಯೋ ಅಥವಾ ಇಲ್ಲವೋ ಎಂದು ಖಾತರಿಯೂ ಇಲ್ಲದ, ಅದನ್ನು ಕಾಪಿಟ್ಟುಕೊಳ್ಳುವುದಕ್ಕೇ ಸಾವಿರಾರು ರೂಪಾಯಿ ಖರ್ಚು ಮಾಡಬೇಕಿರುವ ಅಥವಾ ಬೇಡ ಎಂದುಕೊಂಡರೆ ಅದನ್ನು ಅಳಿಸಿಹಾಕುವುದಕ್ಕೂ ಗಂಟೆಗಟ್ಟಲೆ ಸಮಯ ಮೀಸಲಿಡಬೇಕಿರುವ ಫೋಟೊ–ವಿಡಿಯೊಗಳನ್ನು, ಪ್ರವಾಸದ ಸಮಯದಲ್ಲೋ ಅಥವಾ ಇತರ ಕ್ಷಣಗಳಲ್ಲೋ ಸೆರೆಹಿಡಿಯುವುದೇ ಆತ್ಯಂತಿಕ ಕಾಯಕ ಎಂದುಕೊಳ್ಳದೇ, ಸೀಮಿತವಾಗಿ, ಕೆಲವೇ ಕೆಲವು ಫೋಟೊ–ವಿಡಿಯೊಗಳನ್ನು ತೆಗೆದುಕೊಂಡು ಉಳಿದವನ್ನು ಮನಸಲ್ಲೇ ಸೆರೆಹಿಡಿದುಕೊಂಡರೆ ಜೇಬೂ ಸುರಕ್ಷಿತ, ಮನಸಿಗೂ ಹಿತ!

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

13) ಒಂದು ಪ್ರನಾಳದಲ್ಲಿರುವ 5 *ml* ಸೋಡಿಯಂ ಸಲ್ಫೇಟ್ ದ್ರಾವಣಕ್ಕೆ ಅಷ್ಟೇ ಪ್ರಮಾಣದ ಬೇರಿಯಂ ಕ್ಲೋರೈಡ್ ದ್ರಾವಣ ಸೇರಿಸಿದಾಗ
(1) ಉತ್ಪತ್ತಿಯಾದ ಜಲವಿಲೀನಗೊಳ್ಳದ ಬಿಳಿಯ ಪ್ರಕ್ಷೇಪ ಯಾವುದು?
(2) ಬಿಳಿಯ ಪ್ರಕ್ಷೇಪ ಉಂಟಾಗಲು ಕಾರಣವಾದ ಅಯಾನುಗಳನ್ನು ಹೆಸರಿಸಿ
(3) ಇಲ್ಲಿ ಜರುಗಿದ ರಾಸಾಯನಿಕ ಕ್ರಿಯೆಯ ವಿಧವನ್ನು ತಿಳಿಸಿ (ಜೂನ್ 2023)

ಉತ್ತರ;– (1) $BaSO_4$ ಬೇರಿಯಂ ಸಲ್ಫೇಟ್
(2) $SO^{2-}{}_4$ ಸಲ್ಫೇಟ್ ರ‍್ಯಾಡಿಕಲ್,
Ba^{2+} ಬೇರಿಯಂ ಅಯಾನು
(3) ದ್ವಿಸ್ಥಾನಪಲ್ಲಟ ಕ್ರಿಯೆ/ ಪ್ರಕ್ಷೇಪನ ಕ್ರಿಯೆ

14) ಬೆಳ್ಳಿಯ ವಸ್ತುಗಳನ್ನು ಕೆಲವು ದಿನ ಗಾಳಿಗೆ ತೆರೆದಿಟ್ಟಾಗ ಕಪ್ಪು ಬಣ್ಣಕ್ಕೆ ತಿರುಗುತ್ತದೆ, ಮತ್ತೆ ಟೂತ್ ಪೇಸ್ಟಿನಿಂದ ಉಜ್ಜಿದಾಗ ಮೊದಲಿನಂತೆ ಹೊಳೆಯ ತೊಡಗುತ್ತದೆ.
(1)ಬೆಳ್ಳಿಯ ವಸ್ತುಗಳು ಏಕೆ ಹೀಗಾಗುತ್ತವೆ? ಈ ವಿದ್ಯಮಾನವನ್ನು ಹೆಸರಿಸಿ.
(2) ಉಂಟಾದ ಆ ಕಪ್ಪು ವಸ್ತುವನ್ನು ಹೆಸರಿಸಿ ಮತ್ತು ಅದರ ಅಣುಸೂತ್ರವನ್ನು ಬರೆಯಿರಿ.

ಉತ್ತರ:– (1) ಬೆಳ್ಳಿಯ ವಸ್ತುಗಳು ಗಾಳಿಯಲ್ಲಿ H_2Sನಂತಹ ಸಲ್ಫರ್ ಸಂಯುಕ್ತಗಳೊಂದಿಗೆ ವರ್ತಿಸುತ್ತದೆ, ಈ ವಿದ್ಯಮಾನವನ್ನು ನಶಿಸುವಿಕೆ ಎನ್ನುವರು, (ಅಥವಾ ಈ ಸಂದರ್ಭದಲ್ಲಿ ಬೆಳ್ಳಿಯ ನಶಿಸುವಿಕೆ ಎನ್ನಬಹುದು)
(2) ಆ ಕಪ್ಪು ವಸ್ತುವು ಬೆಳ್ಳಿಯ ಕ್ಷಿಣಿಸುವಿಕೆ ಸಲ್ಫೇಟ್ (Ag_2S)

15) ಕಬ್ಬಿಣದ ಮೊಳೆಯನ್ನು ತಾಮ್ರ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದಾಗ ಜರಗುವ ರಾಸಾಯನಿಕ ಕ್ರಿಯೆಯ ವಿಧ ಯಾವುದು? ಏಕೆ? ರಾಸಾಯನಿಕ ಕ್ರಿಯೆಗೆ ಸರಿದೂಗಿಸಿದ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (ಏಪ್ರಿಲ್2022)

ಉತ್ತರ:– ಕಬ್ಬಿಣದ ಮೊಳೆಯನ್ನು ತಾಮ್ರ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿದಾಗ ಜರಗುವ ರಾಸಾಯನಿಕ ಕ್ರಿಯೆಯ ಹೆಸರು ರಾಸಾಯನಿಕ ಸ್ಥಾನಪಲ್ಲಟ, ಏಕೆಂದರೆ ಹೆಚ್ಚು ಕ್ರಿಯಾಪಟುವಾಗಿರುವ ಕಬ್ಬಿಣವು ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಗೊಳಿಸಿದೆ.

$Fe + CuSO_4 \rightarrow FeSO_4 + Cu,$

16) ಅಲ್ಯುಮಿನಿಯಂ ಸಲ್ಫೇಟ್‌ನೊಂದಿಗೆ ಬೇರಿಯಂ ಕ್ಲೋರೈಡ್ ವರ್ತನೆಯು ಯಾವ ವಿಧದ ರಾಸಾಯನಿಕ ಕ್ರಿಯೆಗೆ ಉದಾಹರಣೆಯಾಗಿದೆ? ಏಕೆ? ಈ ಕ್ರಿಯೆಗೆ ಸರಿದೂಗಿಸುವ ರಾಸಾಯನಿಕ ಸಮೀಕರಣವನ್ನು ಬರೆಯಿರಿ. (ಮಾರ್ಚ್–2020)

ಉತ್ತರ:– ಇದು ದ್ವಿಸ್ಥಾನಪಲ್ಲಟ ಕ್ರಿಯೆಗೆ ಉದಾಹರಣೆಯಾಗಿದೆ/ಪ್ರಕ್ಷೇಪನ ಕ್ರಿಯೆಗೆ ಉದಾಹಣೆಯಾಗಿದೆ.

ಪ್ರತಿವರ್ತಕಗಳ ನಡುವೆ ಆಯಾನುಗಳ ವಿನಿಮಯ ನಡೆಯುವುದರಿಂದ/ ಬೇರಿಯಂ ಸಲ್ಫೇಟ್‌ನ ಬಿಳಿಯ ಬಣ್ಣದ ಪ್ರಕ್ಷೇಪ ಉಂಟಾಗುತ್ತದೆ.

$3\ BaCl_2 + Al_2\ (SO_4)_3 \rightarrow 3BaSO_4 + 22AlCL_3$

17) ಘನಸ್ಥಿತಿಯಲ್ಲಿರುವ ಕ್ಯಾಲ್ಸಿಯಂ ಆಕ್ಸೈಡ್ ಅನ್ನು ಒಂದು ಪಾತ್ರೆಯಲ್ಲಿ ತೆಗೆದುಕೊಂಡು ಅದಕ್ಕೆ ನಿಧಾನವಾಗಿ ನೀರನ್ನು ಸೇರಿಸಲಾಗಿದೆ.
ಎ) ಗಮನಿಸಿದ ಅಂಶಗಳನ್ನು ಬರೆಯಿರಿ
ಬಿ) ಉಂಟಾದ ಉತ್ಪನ್ನದ ರಾಸಾಯನಿಕ ಸೂತ್ರ ಬರೆಯಿರಿ
ಸಿ) ಸುಣ್ಣದ ತಿಳಿ ನೀರಿನ ಮೂಲಕ ಕಾರ್ಬನ್ ಡೈ ಆಕ್ಸೈಡ್ ಅನಿಲವನ್ನು ಊದಿದಾಗ ಏನಾಗುತ್ತದೆ?
(1) ಕಡಿಮೆ ಪ್ರಮಾಣದಲ್ಲಿ
(2) ಅಧಿಕ ಪ್ರಮಾಣದಲ್ಲಿ
ಡಿ) ಕಬ್ಬಿಣದ ವಸ್ತುಗಳ ಮೇಲೆ ಬಣ್ಣವನ್ನು ಲೇಪಿಸುವುದು ಏಕೆ?

ಉತ್ತರ:–(ಎ) ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ತೀವ್ರವಾಗಿ ವರ್ತಿಸಿ ಅಧಿಕ ಪ್ರಮಾಣದ ಉಷ್ಣ ಬಿಡುಗಡೆ ಮಾಡುತ್ತದೆ
(ಬಿ) ಕ್ಯಾಲ್ಸಿಯಂ ಹೈಡ್ರಾಕ್ಸೈಡ್ (ಅರಳಿದ ಸುಣ್ಣ) ಅಣುಸೂತ್ರ $Ca(OH_{2+})$
(ಸಿ)(1) ಕಡಿಮೆ ಪ್ರಮಾಣದಲ್ಲಿ ದ್ರಾವಣವು ಹಾಲಿನ ಬಣ್ಣಕ್ಕೆ ತಿರುಗುತ್ತದೆ, ಕಾರಣ ಕ್ಯಾಲ್ಸಿಯಂ ಕಾರ್ಬೋನೇಟ್ ಉಂಟಾಗುತ್ತದೆ.

$Ca(OH)_2 + CO_2 \rightarrow CaCO_2 + H_2O$

(2) ಅಧಿಕ ಪ್ರಮಾಣದಲ್ಲಿ ಹಾಲಿನ ಬಿಳಿ ಬಣ್ಣವು ಇಲ್ಲವಾಗಿ ದ್ರಾವಣವು ಪಾರದರ್ಶಕವಾಗುತ್ತದೆ, ಕಾರಣ ಕ್ಯಾಲ್ಸಿಯಂ ಕಾರ್ಬೋನೇಟ್, ಕ್ಯಾಲ್ಸಿಯಂ ಹೈಡ್ರೋಜನ್ ಕಾರ್ಬೋನೇಟ್ ಆಗಿ ಬದಲಾಗುತ್ತದೆ.

$CaCO_2 + H_2O + CO_2 \rightarrow Ca(OH_3)_2$

ಡಿ) ಕಬ್ಬಿಣದ ವಸ್ತುಗಳ ಮೇಲ್ಮೈ ಮೇಲೆ ಬಣ್ಣ ಬಳಿಯುವುದರಿಂದ ಅದೂ ವಾತಾವರಣದ ತೇವಾಂಶ ಮತ್ತು ಆಕ್ಸಿಜನೊಂದಿಗೆ ನೇರ ಸಂಪರ್ಕ ಹೊಂದುವುದನ್ನು ತಡೆಯುತ್ತದೆ, ಹೀಗಾಗಿ ಬೇಗ ತುಕ್ಕು ಹಿಡಿಯುವುದಿಲ್ಲ

18)(1) ಕ್ಯಾಲ್ಸಿಯಂ ಆಕ್ಸೈಡ್ ನೀರಿನೊಂದಿಗೆ ವರ್ತಿಸಿದಾಗ ಉತ್ಪತ್ತಿಯಾಗುವ ಉತ್ಪನ್ನವನ್ನು ಹೆಸರಿಸಿ (ಜೂನ್ 2023)
ಉತ್ತರ:– ಕ್ಯಾಸಿಯಂ ಹೈಡ್ರಾಕ್ಸೈಡ್ ಅಥವಾ ಅರಳಿದ ಸುಣ್ಣ

2) $ZnO, + C \rightarrow Zn + CO$, ಈ ಕ್ರಿಯೆಯಲ್ಲಿ ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕಗಳನ್ನು ಬರೆಯಿರಿ (ಏಪ್ರಿಲ್– 2022)

ಉತ್ತರ:– ಉತ್ಕರ್ಷಿಸಲ್ಪಟ್ಟ ಪ್ರತಿವರ್ತಕ – C
ಮತ್ತು ಅಪಕರ್ಷಿಸಲ್ಪಟ್ಟ ಪ್ರತಿವರ್ತಕ – ZnO

19) ಒಂದು ಕಬ್ಬಿಣದ ಉಂಗುರಕ್ಕೆ ತಾಮ್ರದ ಲೇಪನ ಮಾಡಬೇಕಾಗಿದೆ ವಿದ್ಯುತ್ ಶಕ್ತಿಯನ್ನು ಉಪಯೋಗಿಸದೆ ಇದನ್ನು ನಾವು ಹೇಗೆ ಮಾಡಬಹುದು? (ಮಾರ್ಚ್–2020)

ಉತ್ತರ:– ಕಬ್ಬಿಣದ ಉಂಗುರವನ್ನು ತಾಮ್ರದ ಸಲ್ಫೇಟ್ ದ್ರಾವಣದಲ್ಲಿ ಮುಳುಗಿಸಿಡಬೇಕು, ಕಬ್ಬಿಣವು ತಾಮ್ರದ ಸಲ್ಫೇಟ್ ದ್ರಾವಣದಿಂದ ತಾಮ್ರವನ್ನು ಸ್ಥಾನಪಲ್ಲಟಿಸುತ್ತದೆ ಮತ್ತು ತಾಮ್ರವು ಕಬ್ಬಿಣದ ಉಂಗುರುದ ಮೇಲೆ ಲೇಪನಗೊಳ್ಳುತ್ತದೆ.

20) ಸುಣ್ಣದ ಕಲ್ಲಿನಿಂದ ಸುಟ್ಟ ಸುಣ್ಣವನ್ನು ಪಡೆಯುವ ರಾಸಾಯನಿಕ ಕ್ರಿಯೆಯ ವಿಧ ಯಾವುದು? (ಜೂನ್ 2022)
ಉತ್ತರ:– ಉಷ್ಣ ವಿಭಾಜನಾ ಕ್ರಿಯೆ/ ಅಂತರುಷ್ಣಕ ಕ್ರಿಯೆ

21) ಚಪಾತಿಯನ್ನು ನಿಧಾನವಾಗಿ ಜಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ ಏಕೆ? (ಸೆಪ್ಟೆಂಬರ್– 2020)
ಉತ್ತರ:– ಚಪಾತಿಯು ಪಿಷ್ಟವನ್ನು ಹೊಂದಿದೆ, ಚಪಾತಿ ಜಗಿದಾಗ ಲಾಲಾರಸವು ಸ್ರವಿಸಲ್ಪಡುತ್ತದೆ, ಲಾಲಾರಸದಲ್ಲಿರುವ ಅಮೈಲೇಸ್ ಪಿಸ್ಟವನ್ನು ವಿಭಜಿಸಿ ಸರಳ ಸಕ್ಕರೆಯನ್ನಾಗಿಸುತ್ತದೆ. ಚಪಾತಿಯನ್ನು ನಿಧಾನವಾಗಿ ಜಗಿದು ತಿಂದಾಗ ಸಿಹಿಯಾಗಿ ರುಚಿಸುತ್ತದೆ

22) ಒಂದು ಜಮೀನಿಗೆ ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಸಲಹೆ ನೀಡಿದ್ದಾರೆ ಇದಕ್ಕೆ ಕಾರಣಗಳೇನಿರಬಹುದು?
ಉತ್ತರ:– ಮಣ್ಣು ಆಮ್ಲೀಯವಾಗಿದ್ದರೆ ಕೃಷಿ ಭೂಮಿಯನ್ನು ಸರಿಪಡಿಸಲು ಕೃಷಿ ತಜ್ಞರು ನಿರ್ದಿಷ್ಟ ಪ್ರಮಾಣದ ಸುಣ್ಣವನ್ನು ಸೇರಿಸಲು ಹೇಳುತ್ತಾರೆ. ಇದರಿಂದ ಮಣ್ಣಿನಲ್ಲಿರುವ ಆಮ್ಲೀಯತೆ ಕಡಿಮೆಯಾಗುತ್ತದೆ. (ಕಾರಣ ಸುಣ್ಣವು ಪ್ರತ್ಯಾಮ್ಲೀಯವಾಗಿದೆ,)

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

Types of Solutions

8. If 15g urea $(H_2N-CO-NH_2)$ is dissolved in 200 g water. Calculate the molality of the solution.

Soln:- The molality is given by the equation -

$$\text{Molality, } m = \frac{w_2}{M_2} \times \frac{1000}{w_1}$$

Molecular mass of urea $(H_2N-CO-NH_2)=60$

$$\therefore m = \frac{15}{60} \times \frac{1000}{200} = 1.25$$

9. State the laws of osmotic pressure.

Ans:-(a) Van't Hoff – Boyle's law – At constant temperature, the osmotic pressure is directly proportional to the concentration C of the solution.

$$\pi \propto C$$

(b) Van't Hoff – Charle's law -
Concentration being constant, the osmotic pressure of a solution is directly proportional to the absolute temperature T.

$$\pi \propto T$$

10. Write a brief note on reverse osmosis?

Ans:- This reverse osmosis technique is very useful in obtaining pure water from sea water.

When a semipermeable membrane separates a solvent and a solution, solvent molecules move across the membrane into the solution. However, if external pressure is applied on the solution such that the applied pressure is greater than the osmotic pressure of the solution, the solvent molecules move from the solution to the solvent. This process is called the reverse osmosis.

12. List out some of the differences between Osmosis and Diffusion.

Ans:- Some of the differences between Osmosis and Diffusion are –

	Osmosis	Diffusion
1	It takes place only through the semipermeable membrane.	Semipermeable membrane is not necessary.
2	Only the solvent molecules move.	Both solute and the solvent molecules move.
3	Solvent molecules move from lower concentration to higher concentration.	Molecules move from higher concentration to lower concentration.
4	This property is exhibited by the solutions in the liquid state.	This property is exhibited by the liquid and gaseous solutions.

Fill in the blanks by choosing the appropriate word from those given in the brackets
(1, 0.9, lower, saturated solution, higher, unsaturated solution)

1) Red blood cells are isotonic with_________ % NaCl solution
Ans:- 0.9
2) For non-electrolytes, the van't Hoff factor (i) is ________
Ans:- 1
3) Greater the value of Henry's constant of a gas__________ is its solubility at the same partial pressure and temperature.
Ans:- lower
4) An ionic compound dissolves in water if hydration energy is __________ than lattice energy.
Ans:- higher
5) A solution in which no more solute can be dissolved at the same temperature and pressure is called________
Ans:- saturated solution

Problems:-

1. Calculate the molality of a solution containing 5.3 g of anhydrous NaCO in 200 g of water?

Ans:-

$$\text{Molality (m)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Mass of solvent in grams}}{1000}\right)}$$

$$\therefore \text{Molality (m)} = \frac{5.3g/106\,g\,mol}{200\,g/1000} = \frac{(0.05\,mol)}{(0.2\,kg)} = 0.25\,mol/kg\,(or)\,0.25\,m$$

2. Calculate the molarity of the solution containing 4.9 grams of HSO dissolved in 250 mL of the solution?

Ans:-

$$\text{Molarity (M)} = \frac{\left(\frac{\text{Mass of solute in grams}}{\text{molar mass}}\right)}{\left(\frac{\text{Volume of solution in mL}}{1000}\right)} = \frac{4.9g/98\,g\,mol^{-1}}{250\,mL/1000} = \frac{(0.05\ mol)}{(0.25\ L)} = 0.2\ mol\ L^{-1}\ (or)\ 0.2\,M$$

3. Calculate the normality of a solution containing 0.74 g of $Ca(OH)_2$ dissolved in 200mL of the solution?

Ans:-

$$\text{Normality (N)} = \frac{\text{Gram equivalents of the solute}}{\text{Volume of solution in litres}}$$

$$\text{Equivalent mass of } Ca(OH)_2 = \frac{\text{Molar mass}}{\text{Acidity}} = \frac{74}{2} = 37\,g\,equiv^{-1}$$

$$\therefore \text{Normality of solution (N)} = \frac{0.74g/37\,g\,equiv^{-1}}{200mL/1000} = 0.1\ equiv/L\,(or)\,0.1N$$

‘ಜಿಲೆಟಿನ್ ಕಡ್ಡಿ: ಉದ್ದೇಶಪೂರ್ವಕ ಕೃತ್ಯ’

ಆರೋಪಿಗಳ ಸುಳಿವು ಅಲಭ್ಯ
• ಎಲ್ಲಾ ಆಯಾಮಗಳಿಂದ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ವಡೇರಹಳ್ಳಿಯ ಸೇತುವೆ ಬಳಿ ಜಿಲೆಟಿನ್ ಕಡ್ಡಿಗಳು ಪತ್ತೆಯಾದ ಪ್ರಕರಣದ ತನಿಖೆಯನ್ನು ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸರು ತೀವ್ರಗೊಳಿಸಿದ್ದು, ಮೂರು ದಿನ ಕಳೆದರೂ ಆರೋಪಿಗಳ ಸುಳಿವು ಸಿಕ್ಕಿಲ್ಲ.

ಜಿಲೆಟಿನ್ ಕಡ್ಡಿಗಳಿದ್ದ ಪೆಟ್ಟಿಗೆಯನ್ನು ಪ್ರಧಾನಿ ಸಾಗುವ ಮಾರ್ಗದಲ್ಲಿ ಉದ್ದೇಶಪೂರ್ವಕವಾಗಿ ಇಡಲಾಗಿತ್ತು ಎಂಬುದು ಪ್ರಾಥಮಿಕ ತನಿಖೆಯಲ್ಲಿ ಪತ್ತೆಯಾಗಿದೆ. ಆದರೆ, ಇವುಗಳನ್ನು ಯಾವ ಸಮಯದಲ್ಲಿ ತಂದು ಇರಿಸಲಾಗಿತ್ತು ಎಂಬುದು ಸ್ಪಷ್ಟವಾಗಿಲ್ಲ ಎಂದು ಮೂಲಗಳು ಹೇಳಿವೆ.

ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವದಲ್ಲಿ ಭಾಗವಹಿಸಲು ಭಾನುವಾರ ನಗರಕ್ಕೆ ಬಂದಿದ್ದ ಪ್ರಧಾನಿ ನರೇಂದ್ರ ಮೋದಿ ಅವರು ಸಾಗಿದ ನೈಸ್ ರಸ್ತೆಯ ಸಮೀಪದಲ್ಲಿಯೇ ಎರಡು ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿದ್ದವು. ರಟ್ಟಿನ ಪೆಟ್ಟಿಗೆಯಲ್ಲಿ ಜಿಲೆಟಿನ್ ಕಡ್ಡಿಗಳ ಜೊತೆಗೆ ಅಗರಬತ್ತಿ, ಬೆಂಕಿ ಕಡ್ಡಿಗಳು, ಕರ್ಪೂರದ ಖಾಲಿ ಡಬ್ಬಿಗಳು ಇದ್ದವು.



ಜಪ್ತಿ ಮಾಡಿರುವ ಸ್ಫೋಟಕ ವಸ್ತುಗಳು

ಕನಕಪುರ ರಸ್ತೆ ಸಮೀಪದ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ಮಣ್ಣಿನ ರಸ್ತೆಯಿಂದ ಸುಮಾರು 20 ಅಡಿ ದೂರದಲ್ಲಿ ಬ್ಯಾಟರಿ ಪ್ಯಾಕ್, ವೈರ್, ಟೇಪ್‌ಗಳು, ಸರ್ಕೀಟ್ ಬೋರ್ಡ್‌ನಂತೆ ಕಾಣುವ ವಸ್ತುಗಳು ಪತ್ತೆಯಾಗಿವೆ ಎಂದು ಮೂಲಗಳು ಹೇಳಿವೆ. ಹಾಗಾಗಿ ಪೊಲೀಸರು ಎಲ್ಲಾ ಆಯಾಮಗಳಿಂದ ತನಿಖೆ ನಡೆಸುತ್ತಿದ್ದಾರೆ.

ಎನ್‌ಐಎ, ಗುಪ್ತಚರ ಅಧಿಕಾರಿಗಳು ನಗರಕ್ಕೆ ಬಂದಿದ್ದು, ಮಾಹಿತಿ ಕಲೆಹಾಕುತ್ತಿದ್ದಾರೆ. ಬೆಂಗಳೂರು ನಗರ ಹಾಗೂ ಬೆಂಗಳೂರು ದಕ್ಷಿಣ ಜಿಲ್ಲೆಯ ಪೊಲೀಸರಿಗೆ ಸಹಾಯ ಮಾಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸ್ಫೋಟಕ ಪೆಟ್ಟಿಗೆ ಪತ್ತೆಯಾದ ಸ್ಥಳದ ಆಸುಪಾಸಿನ ಅನುಮಾನಾಸ್ಪದ ವ್ಯಕ್ತಿಗಳ ಚಲನವಲನದ ಮೇಲೆ ನಿಗಾ ಇಟ್ಟಿದ್ದಾರೆ. ಈ ಕೃತ್ಯದ ಹಿಂದೆ ಹೊರ ರಾಜ್ಯದ ನಂಟು ಇದೆಯೇ ಎಂಬ ಆಯಾಮದಲ್ಲೂ ಮಾಹಿತಿ ಕಲೆ ಹಾಕುತ್ತಿದ್ದಾರೆ.

ಸ್ಫೋಟಕಗಳು ಪತ್ತೆಯಾದ ಸ್ಥಳ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳು ಇಲ್ಲದಿರುವುದು ತನಿಖಾ ತಂಡಕ್ಕೆ ಸವಾಲಾಗಿದೆ.

ಬೆಂಗಳೂರು ದಕ್ಷಿಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿವಾಸ ಗೌಡ ನೇತೃತ್ವದಲ್ಲಿ ಆರು ತಂಡ ರಚಿಸಲಾಗಿದ್ದು, ಎಲ್ಲಾ ಆಯಾಮಗಳಿಂದ ತನಿಖೆ ನಡೆಸಲಾಗುತ್ತಿದೆ.

ಜಿಲೆಟಿನ್ ಕಡ್ಡಿ ಪತ್ತೆಯಾದ ಸ್ಥಳದಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇಲ್ಲದಿದ್ದರೂ ಪ್ರವೇಶ ದ್ವಾರಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿಯನ್ನು ತೀವ್ರವಾಗಿ ತಪಾಸಣೆ ನಡೆಸಲಾಗುತ್ತಿದೆ. ವಿವಿಧ ತಾಂತ್ರಿಕ ಸಾಕ್ಷ್ಯಾಧಾರಗಳಲ್ಲಿ ಪೊಲೀಸರು ತೊಡಗಿದ್ದಾರೆ.

ಜಿಲೆಟಿನ್ ಕಡ್ಡಿ ಪತ್ತೆಯಾದ ಸ್ಥಳದ ಸುತ್ತಮುತ್ತಲ ಕ್ವಾರಿ ಕಾರ್ಮಿಕರು ಹಾಗೂ ಮಾಲೀಕರಿಂದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ತಮಿಳುನಾಡು ಪೊಲೀಸ್ ಸಹಾಯವಾಣಿಗೂ ಕರೆ

ಪ್ರಧಾನಿ ಕಾರ್ಯಕ್ರಮದ ಸ್ಥಳದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಬೆದರಿಕೆ ಹಾಕಿ ಬಂಧಿತನಾಗಿರುವ ಆರೋಪಿ ಲೋಹಿತ್‌ನ ವಿಚಾರಣೆಯನ್ನು ಪೊಲೀಸರು ತೀವ್ರಗೊಳಿಸಿದ್ದಾರೆ.

ಕೋರಮಂಗಲ ನಿವಾಸಿಯಾದ ಲೋಹಿತ್, ಪೊಲೀಸ್ ನಿಯಂತ್ರಣ ಕೊಠಡಿಗೆ ಕರೆ ಮಾಡಿ ಬಾಂಬ್ ಸ್ಫೋಟದ ಬೆದರಿಕೆ ಹಾಕಿದ ನಂತರ ಮೊಬೈಲ್ ಸ್ವಿಚ್ ಆಫ್ ಮಾಡಿದ್ದ. ಮೊಬೈಲ್ ಟವರ್ ಲೊಕೇಷನ್ ಆಧಾರದಲ್ಲಿ ಆರೋಪಿಯನ್ನು ಪತ್ತೆ ಹಚ್ಚಲಾಯಿತು. ಲೋಹಿತ್ ರಾಜ್ಯ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ್ದಲ್ಲದೆ, ತಮಿಳುನಾಡಿನ ಪೊಲೀಸ್ ಸಹಾಯವಾಣಿಗೂ ಕರೆ ಮಾಡಿದ್ದಾನೆ. ಜತೆಗೆ ರಾಜ್ಯ ಮತ್ತು ರಾಷ್ಟ್ರದ ಪ್ರತಿಷ್ಠಿತ ತನಿಖಾ ಸಂಸ್ಥೆಗಳ ಸಹಾಯವಾಣಿಗೂ ಕರೆ ಮಾಡಿರುವುದು ಗೊತ್ತಾಗಿದೆ.

ಸದ್ಯದ ಮಾಹಿತಿ ಪ್ರಕಾರ ಆರೋಪಿ, ಕೆಲ ತಿಂಗಳಿಂದ ವ್ಯಸನಮುಕ್ತ ಕೇಂದ್ರದಲ್ಲಿ ಚಿಕಿತ್ಸೆ ಪಡೆಯುತ್ತಿದ್ದ. ಕಳೆದ ವರ್ಷವೇ ಆತನನ್ನು ಅಲ್ಲಿಂದ ಕರೆತರಲಾಗಿತ್ತು. ಈ ವೇಳೆ ಜಸ್ಟ್ ಡಯಲ್ ಹಾಗೂ ಗೂಗಲ್ ಮೂಲಕ ಪೊಲೀಸ್ ಸಹಾಯವಾಣಿ ಸಂಖ್ಯೆ ಪಡೆದು ಕರೆ ಮಾಡಿದ್ದಾನೆ. ಜತೆಗೆ ಸಿಬಿಐ, ಎನ್‌ಐಎ ಹಾಗೂ ಇತರ ತನಿಖಾ ಸಂಸ್ಥೆಗಳ ಸಂಖ್ಯೆಗಳು ಈತನ ಮೊಬೈಲ್‌ನಲ್ಲಿ ಪತ್ತೆಯಾಗಿವೆ.

ಮತ್ತೊಂದೆಡೆ ಲೋಹಿತ್ ಮಾನಸಿಕ ಖಿನ್ನತೆಗೆ ಚಿಕಿತ್ಸೆ ಪಡೆಯುತ್ತಿರುವುದಕ್ಕೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಆತನ ಪೋಷಕರು ನೀಡಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿಯನ್ನು ರಾಜ್ಯ ಮತ್ತು ಕೇಂದ್ರ ಗುಪ್ತಚರ ಇಲಾಖೆ, ಆಂತರಿಕ ಭದ್ರತಾ ವಿಭಾಗ (ಐಎಸ್‌ಡಿ), ಎನ್‌ಐಎ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಇದರೊಂದಿಗೆ ಪ್ರಮುಖವಾಗಿ ತಮಿಳುನಾಡಿನ ಎಟಿಎಸ್ ಅಧಿಕಾರಿಗಳು ಲೋಹಿತ್‌ನ ವಿಚಾರಣೆ ನಡೆಸಿದ್ದಾರೆ. ಆದರೆ, ಪ್ರತಿಯೊಂದು ತನಿಖಾ ಸಂಸ್ಥೆಯ ಅಧಿಕಾರಿಗಳಿಗೆ ಒಂದೊಂದು ಉತ್ತರ ನೀಡುತ್ತಿದ್ದಾನೆ. ನಿಮ್ಹಾನ್ಸ್‌ನಲ್ಲಿ ಪರೀಕ್ಷೆಗೆ ಒಳಪಡಿಸಿದ ಬಳಿಕ ಸ್ಪಷ್ಟತೆ ಸಿಗಲಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಲೋಹಿತ್ ಕರೆ ಮಾಡಿದ ದಿನವೇ ಎರಡು ಜಿಲೆಟಿನ್ ಕಡ್ಡಿ, ಊದುಬತ್ತಿ, ಕರ್ಪೂರ ಪತ್ತೆಯಾಗಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಹೀಗಾಗಿ ಲೋಹಿತ್ ಕರೆಗೂ ಜಿಲೆಟಿನ್ ಕಡ್ಡಿ ಪತ್ತೆಗೂ ಸಂಬಂಧ ಇದೆಯೇ ಎಂಬ ಬಗ್ಗೆಯೂ ತನಿಖೆ ನಡೆಯುತ್ತಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಎನ್‌ಐಎ ತನಿಖೆಗೆ ಸಹಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿಗೆ ಭೇಟಿ ನೀಡಿದ್ದ ವೇಳೆ ಪ್ರಯಾಣದ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಪತ್ತೆಯಾಗಿರುವ ಸಂಬಂಧ ಸ್ಥಳೀಯ ಪೊಲೀಸರು ತನಿಖೆ ಮಾಡುತ್ತಿದ್ದಾರೆ. ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸುವ ತನಿಖೆಗೂ ರಾಜ್ಯ ಸರ್ಕಾರ ಸಹಕಾರ ನೀಡಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪ್ರಧಾನಿ ಸಂಚರಿಸಬೇಕಿದ್ದ ಮಾರ್ಗದಲ್ಲಿ ಜಿಲೆಟಿನ್ ಕಡ್ಡಿಗಳು ಸಿಕ್ಕಿದಂತೆ ಏನಿದೆಯೋ ಆ ಬಗ್ಗೆ ತನಿಖೆ ಮಾಡಲಾಗುತ್ತಿದೆ’ ಎಂದು ಹೇಳಿದರು.

‘ಬೆಂಗಳೂರಿನಲ್ಲಿ ನಿಗದಿಯಾಗಿದ್ದ ಪ್ರಧಾನಿ ಕಾರ್ಯಕ್ರಮದ ಸ್ಥಳದಲ್ಲಿ ಬಾಂಬ್ ಸ್ಫೋಟಿಸುವುದಾಗಿ ಕರೆ ಮಾಡಿ ಬೆದರಿಕೆ ಹಾಕಿದ್ದ ವ್ಯಕ್ತಿಯನ್ನು ಪೊಲೀಸರು ಈಗಾಗಲೇ ಬಂಧಿಸಿ ತನಿಖೆ ಮಾಡುತ್ತಿದ್ದಾರೆ’ ಎಂದು ಸ್ಪಷ್ಟಪಡಿಸಿದರು.

‘ಪ್ರಧಾನಿ ಕಾರ್ಯಕ್ರಮಕ್ಕೆ ಹೆಚ್ಚಿನ ಭದ್ರತೆ ಇರುತ್ತದೆ. ರಾಷ್ಟ್ರೀಯ ಸಂಸ್ಥೆಗಳು ಹಾಗೂ ರಾಜ್ಯ ಸರ್ಕಾರ ಜಂಟಿಯಾಗಿ ಹೊಣೆಗಾರಿಕೆ ನಿಭಾಯಿಸಿ, ಹೆಚ್ಚಿನ ಭದ್ರತೆ ಒದಗಿಸುತ್ತವೆ. ರಾಜ್ಯ ಸರ್ಕಾರಕ್ಕೂ ಸೂಚನೆ ಬಂದಿರುತ್ತದೆ. ಇದನ್ನು ಆಧರಿಸಿ ಭದ್ರತೆ ನೀಡಲಾಗುತ್ತದೆ. ಪ್ರಧಾನಿ ಬೆಂಗಳೂರಿನ ಕಾರ್ಯಕ್ರಮಕ್ಕೆ ಬರುವ 2 ತಾಸು ಮುಂಚೆಯೇ ಪೊಲೀಸ್ ಸಿಬ್ಬಂದಿ ಜಿಲೆಟಿನ್ ಕಡ್ಡಿಗಳನ್ನು ಪತ್ತೆ ಹಚ್ಚಿದ್ದಾರೆ. ಇದು ಒಳ್ಳೆಯ ಕೆಲಸ. ಭಯೋತ್ಪಾದನೆಯೋ ಆ ಪ್ರಕರಣವೋ ನಂಟು ಇದೆಯೇ ಎಂಬ ವಿಚಾರ ಕುರಿತು ಈಗಲೇ ಏನನ್ನೂ ಹೇಳಲು ಆಗುವುದಿಲ್ಲ. ತನಿಖೆ ಆಗಲಿ ನೋಡೋಣ’ ಎಂದರು.

ಮಳೆಯಿಂದ ರೈಲು ಸಂಚಾರ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಮಂಗಳವಾರ ಬಿರುಗಾಳಿ, ಗುಡುಗು ಮತ್ತು ಸಿಡಿಲು ಸಹಿತ ಧಾರಾಕಾರ ಮಳೆಯಾಯಿತು. ಹಲವು ಕಡೆ ವಿದ್ಯುತ್ ಕಂಬಗಳಿಗೆ ಹಾನಿಯಾದರೆ, ಕೆಲ ಕಡೆ ಮರಗಳು ಉರುಳಿ ಬಿದ್ದವು. ಬಹುತೇಕ ಕಡೆ ವಿದ್ಯುತ್ ಸಂಪರ್ಕ ಕಡಿತಗೊಂಡಿತು.

ಬೆಳಗಾವಿ ಜಿಲ್ಲೆಯ ರಾಮದುರ್ಗ ಮತ್ತು ಖಾನಾಪುರ ತಾಲ್ಲೂಕಿನಲ್ಲಿ ಮಳೆಯಾಯಿತು. ಖಾನಾಪುರ ತಾಲ್ಲೂಕಿನ ನಾಗರಗಾಳಿ-ತಾವರಗಟ್ಟಿ ರೈಲು ನಿಲ್ದಾಣಗಳ ಮಧ್ಯೆ ಇರುವ ಅರಣ್ಯ ಪ್ರದೇಶದಲ್ಲಿನ ಹಳಿ ಮೇಲೆ ಬೃಹತ್ ಮರ ಬಿದ್ದು, ಅಳ್ನಾವರ-ಲೋಂಡಾ ಮಾರ್ಗದಲ್ಲಿ ಸಂಚರಿಸುವ ಕೊಲ್ಹಾಪುರ–ತಿರುಪತಿ ಹರಿಪ್ರಿಯಾ ಎಕ್ಸ್‌ಪ್ರೆಸ್ ರೈಲು ಸೇರಿ ಹಲವು ರೈಲುಗಳ ಸಂಚಾರಕ್ಕೆ ವ್ಯತ್ಯಯ ಉಂಟಾಯಿತು. ನಾಗರಗಾಳಿ ಮತ್ತು ತಾವರಗಟ್ಟಿ ನಿಲ್ದಾಣಗಳ ಸಿಬ್ಬಂದಿ ಘಟನಾ ಸ್ಥಳಕ್ಕೆ ಬಂದು ಪರಿಶೀಲಿಸಿದರು.

‘ಲೋಂಡಾದಲ್ಲಿ ಸಾಂಗ್ಲಿ-ಬೆಂಗಳೂರು ಮಾರ್ಗದಲ್ಲಿ ಸಂಚರಿಸುವ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್ ರೈಲು, ಖಾನಾಪುರ ನಿಲ್ದಾಣದಲ್ಲಿ ಬೆಳಗಾವಿ–ಮೈಸೂರು ರೈಲು ಸಂಚಾರ ತಡೆಹಿಡಿಯಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧಾರವಾಡ ಜಿಲ್ಲೆಯ ಧಾರವಾಡ-ಹುಬ್ಬಳ್ಳಿ, ಅಳ್ನಾವರ, ಕುಂದಗೋಳ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಮಳೆ ಸುರಿಯಿತು. ಅಳ್ನಾವರದಲ್ಲಿ ಗಾಳಿ ರಭಸಕ್ಕೆ ಕೆಲವೆಡೆ ಮನೆಗಳ ಚಾವಣಿಯ ಶೀಟುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದವು. ಮನೆಗಳಿಗೆ ನೀರು ನುಗ್ಗಿತು. ಅಳ್ನಾವರದ ನಾಡಕಚೇರಿ ಆವರಣದಲ್ಲಿನ ಮರ ರಸ್ತೆಗೆ ಉರುಳಿ ಬಿದ್ದ ಪರಿಣಾಮ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು.



ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ನಾಗರಗಾಳಿ–ತಾವರಗಟ್ಟಿ ರೈಲು ನಿಲ್ದಾಣಗಳ ಮಧ್ಯೆ ಹಳಿ ಮೇಲೆ ಮರ ಬಿದ್ದ ಪರಿಣಾಮ ರೈಲು ಸಂಚಾರದಲ್ಲಿ ವ್ಯತ್ಯಯವಾಯಿತು

ಉತ್ತರ ಕನ್ನಡ ಜಿಲ್ಲೆಯಾದ್ಯಂತ ಗುಡುಗು, ಸಿಡಿಲು ಸಹಿತ ಗಾಳಿ, ಮಳೆ ಸುರಿಯಿತು. ಜೊಯಿಡಾ ಮೂಲಕ ಹಾದುಹೋಗುವ ಸದಾಶಿವಗಡ–ಔರಾದ್ ರಾಜ್ಯ ಹೆದ್ದಾರಿ, ಶಿರಸಿ–ಹಾವೇರಿ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಮಳೆನೀರು ಹರಿದು ರಸ್ತೆ ಕೆಸರುಮಯವಾಯಿತು.

ಧಾರಾಕಾರ ಮಳೆ (ಮಂಗಳೂರು ವರದಿ): ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಮಂಗಳವಾರ ರಾತ್ರಿ ಗುಡುಗು ಮಿಂಚು ಸಹಿತ ಧಾರಾಕಾರ ಸುರಿಯಿತು.

ಸಿಡಿಲು ಬಡಿದು ರೈತ ಸಾವು (ಹನುಮಸಾಗರ): ಕುಷ್ಟಗಿ ತಾಲ್ಲೂಕಿನ ಕಬ್ಬರಗಿ ಗ್ರಾಮದ ರೈತ ಶರಣಪ್ಪ ಮಾಸಪ್ಪ ಹೂಲಗೇರಿ (51) ಸಿಡಿಲು ಬಡಿದು ಮಂಗಳವಾರ ಮೃತಪಟ್ಟಿದ್ದಾರೆ. ಸಂಜೆ ತಮ್ಮ ಹೊಲದಲ್ಲಿ ಕೃಷಿ ಕೆಲಸ ನಿರ್ವಹಿಸುತ್ತಿದ್ದಾಗ ಈ ಘಟನೆ ನಡೆದಿದೆ.



ಮಾಯಕೊಂಡ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕೆರೆಯಾಗಳಹಳ್ಳಿ ಗ್ರಾಮದಲ್ಲಿ ಬಿರುಗಾಳಿಗೆ ಉರುಳಿರುವ ಬಾಳೆ ಗಿಡಗಳನ್ನು ಶಾಸಕ ಕೆ.ಎಸ್. ಬಸವಂತಪ್ಪ ಅವರು ಮಂಗಳವಾರ ವೀಕ್ಷಿಸಿದರು

ಬಿರುಗಾಳಿಗೆ ಧರಗುರುಳಿದ ಅಡಿಕೆ, ಬಾಳೆ

ದಾವಣಗೆರೆ: ಜಿಲ್ಲೆಯ ವಿವಿಧೆಡೆ ಮಂಗಳವಾರ ಸಂಜೆ ಸುರಿದ ಬಿರುಗಾಳಿ ಸಹಿತ ಮಳೆಗೆ ಅಡಿಕೆ ಹಾಗೂ ಬಾಳೆ ಗಿಡಗಳು ಧರೆಗೆ ಉರುಳಿವೆ. ಮಳೆಗಿಂತ ಬಿರುಗಾಳಿ ಜೋರಾಗಿ ಬೀಸಿದ ಪರಿಣಾಮ ತೋಟಗಾರಿಕೆ ಬೆಳೆಗಳಿಗೆ ಹಾನಿಯುಂಟಾಗಿದೆ.

ಸೋಮವಾರ ರಾತ್ರಿ ಮತ್ತು ಮಂಗಳವಾರ ಸಂಜೆ ಭಾರಿ ಗಾಳಿ, ಗುಡುಗು, ಸಿಡಿಲು ಸಮೇತ ಸಹಿತ ಮಳೆ ಸುರಿಯಿತು. ದಾವಣಗೆರೆ ತಾಲ್ಲೂಕಿನ ಕೆರೆಯಾಗಳಹಳ್ಳಿ ಗ್ರಾಮದಲ್ಲಿ ತೋಟಗಾರಿಕೆ ಬೆಳೆಗಳಿಗೆ ಹೆಚ್ಚಿನ ಪ್ರಮಾಣದ ಹಾನಿಯಾಗಿದೆ. ಆಲಿಕಲ್ಲು ಸಹಿತ ಸುರಿದ ಮಳೆಗೆ ಹಾಲೇಶ್ ಎಂಬುವರ ನಾಲ್ಕೂವರೆ ಎಕರೆ ಬಾಳೆಯಲ್ಲಿ ಬಹುತೇಕ ಗಿಡಗಳು ಮುರಿದು ಬಿದ್ದಿವೆ.

ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೊಸ ಕೆರೆಯಾಗಳ ಹಳ್ಳಿಯ ಅಡಿಕೆ ತೋಟಗಳಲ್ಲಿ ಅಡಿಕೆ ಮರಗಳು ಉರುಳಿ ಬಿದ್ದಿವೆ.

ವಿದ್ಯುತ್ ಕಂಬಕ್ಕೆ ಹಾನಿ

ಮಡಿಕೇರಿ: ನಗರ ಹಾಗೂ ನಾಪೋಕ್ಲು, ವಿರಾಜಪೇಟೆಯ ಅಲ್ಲಲ್ಲಿ ಮಂಗಳವಾರ ಕೆಲಹೊತ್ತು ಮಳೆಯಾಯಿತು.

ನಾಪೋಕ್ಲು ಸಮೀಪದ ಈಸ್ಟ್ ಕೊಳಕೇರಿ ಬೊಮ್ಮಂಜಿಕೇರಿಯ ಮಾನಿವಾಡೆ ಮಂದ್ ಬಳಿ ನೂರಾರು ವರ್ಷದ ಹಳೆಯ ಮರ ಕುಸಿದು ಬಿತ್ತು. ಮರ ಬಿದ್ದ ರಭಸಕ್ಕೆ ವಿದ್ಯುತ್ ಕಂಬ ಮುರಿದು ವಿದ್ಯುತ್ ಸಂಪರ್ಕ ಕಡಿತಗೊಂಡಿದ್ದು, ಬೊಮ್ಮಂಜಿಕೇರಿ-ಕೋಟೇರಿ ರಸ್ತೆ ಸಂಪರ್ಕವೂ ಬಂದ್ ಆಗಿತ್ತು.

‘ಸಭೆ ನಡಾವಳಿಯಲ್ಲಿ ಏಕರೂಪತೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ದೇಶದ ಎಲ್ಲ ರಾಜ್ಯಗಳ ವಿಧಾನಮಂಡಲಗಳ ನಡಾವಳಿ ಮತ್ತು ನಿಯಮಗಳಲ್ಲಿ ಏಕರೂಪತೆ ತರಲು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರು, 6 ವಿಧಾನಸಭಾ ಸ್ಪೀಕರ್‌ಗಳ ಸಮಿತಿ ರಚಿಸಿದ್ದಾರೆ. ಸಮಿತಿಯು ಎಲ್ಲ ಸ್ಪೀಕರ್‌ಗಳ ಜೊತೆ ಸಭೆ ನಡೆಸಿ ವರದಿ ನೀಡಲಿದೆ’ ಎಂದು ವಿಧಾನಸಭಾ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಸಮಿತಿ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಉತ್ತರ ಪ್ರದೇಶ ಸ್ಪೀಕರ್ ಸತೀಶ್ ಮಹಾನಾ ಸಮಿತಿ ಅಧ್ಯಕ್ಷರಾಗಿದ್ದು, ನಾಗಾಲ್ಯಾಂಡ್, ಹಿಮಾಚಲ ಪ್ರದೇಶ, ಕರ್ನಾಟಕ, ಮಹಾರಾಷ್ಟ್ರ ಮತ್ತು ದೆಹಲಿ ವಿಧಾನ ಸಭೆಗಳ ಅಧ್ಯಕ್ಷರು ಸದಸ್ಯರಾಗಿದ್ದಾರೆ. ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವ ವರದಿಯನ್ನು ಸಮಿತಿಯು ನೀಡಲಿದೆ’ ಎಂದರು.

‘1881ರಲ್ಲಿ ಮೈಸೂರಿನಲ್ಲಿ ಪ್ರಜಾ ಪ್ರತಿನಿಧಿ ಸಭೆ ಸ್ಥಾಪನೆಯಾದ್ದರಿಂದ ಇಲ್ಲಿಯೇ ಮೊದಲ ಸಭೆ ಆಯೋಜಿಸಲಾಗಿದೆ. ಮುಂದಿನ ಸಭೆ ಒಂದೂವರೆ ತಿಂಗಳಲ್ಲಿ ದೆಹಲಿಯಲ್ಲಿ ನಡೆಯಲಿದೆ’ ಎಂದರು.

ಸಮಿತಿ ಅಧ್ಯಕ್ಷ ಸತೀಶ್ ಮಹಾನಾ, ‘ಪ್ರತಿ ರಾಜ್ಯದ ವಿಧಾನಸಭೆಯು ತನ್ನದೇ ನಡಾವಳಿ ಹೊಂದಿದೆ. ಏಕರೂಪತೆಯನ್ನು ತರಲು ಸಮಿತಿಯು 6 ತಿಂಗಳಲ್ಲಿ ಲೋಕಸಭೆಗೆ ವರದಿ ನೀಡಲಿದೆ’ ಎಂದು ತಿಳಿಸಿದರು.

‘ಅಧಿವೇಶನದ ಕಲಾಪ ಅವಧಿಯು ಕಡಿಮೆಯಾಗುತ್ತಿದ್ದು, ಕನಿಷ್ಠ 30 ದಿನಗಳನ್ನು ನಿಗದಿ ಪಡಿಸಬೇಕಿದೆ’ ಎಂದರು.

‘ಹೊಸ ಮಸೂದೆಗಳ ಚರ್ಚೆಯಲ್ಲಿ ಸದಸ್ಯರು ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ತಿದ್ದುಪಡಿಯ ಜೊತೆಗೆ ಉತ್ತಮ ಕಾಯ್ದೆಯಾಗಿ ಹೊಮ್ಮಲು ಸಂವಾದಗಳು ಅಗತ್ಯ’ ಎಂದು ಪ್ರತಿಪಾದಿಸಿದರು.

ರಾಜ್ಯದ ಕೆಲವೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೆಲವೆಡೆ ಬುಧವಾರದಿಂದ ಮುಂದಿನ ಒಂದು ವಾರ ಸಾಧಾರಣ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬುಧವಾರ 20 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಕರಾವಳಿಯ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು ಜಿಲ್ಲೆಯ ಒಂದು ಅಥವಾ ಎರಡು ಸ್ಥಳದಲ್ಲಿ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ದಕ್ಷಿಣ ಒಳನಾಡಿನ ಶಿವಮೊಗ್ಗ, ದಾವಣಗೆರೆ, ಚಿಕ್ಕಮಗಳೂರು, ಹಾಸನ, ಕೊಡಗು, ಮೈಸೂರು, ಚಾಮರಾಜನಗರ ಹಾಗೂ ಮಂಡ್ಯ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ.

ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಜಿಲ್ಲೆಗಳ ಕೆಲವೆಡೆ ಗುರುವಾರ ಮತ್ತು ಶುಕ್ರವಾರ ಬಿರುಗಾಳಿ ಸಹಿತ ಮಳೆ ಸುರಿಯುವ ಸಂಭವವಿದೆ. ಒಂದು ಅಥವಾ ಎರಡು ಸ್ಥಳಗಳಲ್ಲಿ ಆಲಿಕಲ್ಲು ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಬೆಂಗಳೂರಿನಲ್ಲಿ ಗುರುವಾರ ಸಾಧಾರಣ ಮಳೆಯಾಗುವ ಸಾಧ್ಯತೆ ಬಗ್ಗೆ ಇಲಾಖೆ ಮುನ್ಸೂಚನೆ ನೀಡಿದೆ.

ಬಿಜೆಪಿ–ಇ.ಸಿ ಲಜ್ಜೆಗೆಟ್ಟ ಪಿತೂರಿ: ರಾಹುಲ್ ಆರೋಪ

ನವದೆಹಲಿ (ಪಿಟಿಐ):ಪಶ್ಚಿಮ ಬಂಗಾಳದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನೇತೃತ್ವ ವಹಿಸಿದ್ದ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಅಗರ್‌ವಾಲ್ ಅವರನ್ನು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯಾಗಿ ಹಾಗೂ ಎಸ್‌ಐಆರ್ ವಿಶೇಷ ವೀಕ್ಷಕರಾಗಿದ್ದ ಸುಬ್ರತಾ ಗುಪ್ತಾ ಅವರನ್ನು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಮುಖ್ಯ ಸಲಹೆಗಾರರಾಗಿ ನೇಮಿಸಿರುವುದನ್ನು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಖಂಡಿಸಿದ್ದಾರೆ.

‘ಬಿಜೆಪಿ ಮತ್ತು ಚುನಾವಣಾ ಆಯೋಗದ ‘ಚೋರ್ ಬಜಾರ್’ನಲ್ಲಿ ಕಳ್ಳತನ ದೊಡ್ಡದಾದಷ್ಟು, ಪ್ರತಿಫಲವೂ ದೊಡ್ಡದಿದೆ’ ಎಂದು ಅವರು ಟೀಕಿಸಿದ್ದಾರೆ.

‘ಪಶ್ಚಿಮ ಬಂಗಾಳ ಸರ್ಕಾರದ ಈ ನೇಮಕಾತಿಯು, ಚುನಾವಣಾ ಆಯೋಗ ಮತ್ತು ಬಿಜೆಪಿ ನಡುವಿನ ಲಜ್ಜೆಗೆಟ್ಟ ಪಿತೂರಿ ಮತ್ತು ಒಳಸಂಚನ್ನು ಪ್ರತಿಬಿಂಬಿಸುತ್ತದೆ’ ಎಂದು ರಾಹುಲ್ ‘ಎಕ್ಸ್’ ಪೋಸ್ಟ್‌ನಲ್ಲಿ ಹೇಳಿದ್ದಾರೆ.

‘ಬಂಗಾಳದಲ್ಲಿ ಚುನಾವಣಾ ಆಯೋಗವು ನಿಷ್ಪಕ್ಷಪಾತವಾಗಿರಲಿಲ್ಲ ಮತ್ತು ಬಿಜೆಪಿಗೆ ಲಾಭ ಮಾಡಿಕೊಡುವ ಉದ್ದೇಶದಿಂದ ಮಾತ್ರ ಕಾರ್ಯನಿರ್ವಹಿಸಿತ್ತು ಎನ್ನುವುದಕ್ಕೆ ಈ ನೇಮಕಾತಿ ಸಾಕ್ಷಿ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ವಿಜಯ್‌ಗೆ ಮತ್ತೆ 30 ಶಾಸಕರ ಬಲ

ತಮಿಳಗ ವೆಟ್ರಿ ಕಳಗಂ ಜತೆ ನಿಂತ ಒಂದು ಬಣ: ಇಬ್ಭಾಗದತ್ತ ಎಐಎಡಿಎಂಕೆ



ತಮಿಳುನಾಡು ವಿಧಾನಸಭೆಯ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಜೆಸಿಡಿ ಪ್ರಭಾಕರ್ ಅವರನ್ನು ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಹಾಗೂ ಸಚಿವರಾದ ಕೆ.ಎ. ಸೆಂಗೊಟ್ಟೈಯನ್ ಸಭಾಧ್ಯಕ್ಷರ ಪೀಠಕ್ಕೆ ಕರೆತಂದರು ಮುಖ್ಯಮಂತ್ರಿ ವಿಜಯ್ ಇದ್ದಾರೆ ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಎಐಎಡಿಎಂಕೆಯ 30 ಬಂಡಾಯ ಶಾಸಕರು ಟಿವಿಕೆ ನೇತೃತ್ವದ ಸಿ. ಜೋಸೆಫ್ ವಿಜಯ್ ಸರ್ಕಾರಕ್ಕೆ ಮಂಗಳವಾರ ಬೆಂಬಲ ಘೋಷಿಸಿದ್ದಾರೆ.

ಪಕ್ಷದ ವರಿಷ್ಠ ಎಡಪ್ಪಾಡಿ ಕೆ. ಪಳನಿಸ್ವಾಮಿ ನಾಯಕತ್ವದ ವಿರುದ್ಧ ಹಲವು ಶಾಸಕರು ಬಂಡಾಯದ ಕಹಳೆ ಮೊಳಗಿಸಿದ್ದು, ಎಐಎಡಿಎಂಕೆ ಇಬ್ಭಾಗವಾಗುವ ಸಾಧ್ಯತೆ ಹೆಚ್ಚಿದೆ.

ವಿಧಾನಸಭೆಯಲ್ಲಿ ಮುಖ್ಯಮಂತ್ರಿಯು ಬುಧವಾರ ವಿಶ್ವಾಸ ಮತ ಯಾಚಿಸಲಿದ್ದು, ಎಐಎಡಿಎಂಕೆಯ ಬಂಡಾಯ ಶಾಸಕರ ಬೆಂಬಲವು ವಿಜಯ್‌ಗೆ ಅಪಾರ ಬಲ ತುಂಬಲಿದೆ.

> ಮುಖ್ಯಮಂತ್ರಿ ಜೋಸೆಫ್ ವಿಜಯ್ ಅವರನ್ನು ಭೇಟಿಯಾಗಿ ಎಐಎಡಿಎಂಕೆಯ 30 ಶಾಸಕರ ಬೆಂಬಲ ಪತ್ರ ನೀಡಿದ್ದೇವೆ
> **ಸಿ.ವಿ. ಷಣ್ಮುಗಂ,** ಎಐಎಡಿಎಂಕೆ ಬಂಡಾಯ ಬಣದ ನಾಯಕ

ಎಐಎಡಿಎಂಕೆಯ ನಾಯಕತ್ವವು ಪ್ರತಿಸ್ಪರ್ಧಿ ಡಿಎಂಕೆಯೊಂದಿಗೆ ಚುನಾವಣೋತ್ತರ ಮೈತ್ರಿ ಮಾಡಿಕೊಳ್ಳಲು ಬಯಸಿದೆ ಎಂದು ಆರೋಪಿಸಿ ಹಿರಿಯ ನಾಯಕರಾದ ಎಸ್.ಪಿ. ವೇಲುಮಣಿ ಮತ್ತು ಸಿ.ವಿ. ಷಣ್ಮುಗಂ ನೇತೃತ್ವದ ಬಣವು ವಿಶ್ವಾಸಮತ ಯಾಚನೆಗೂ ಮುನ್ನ ಟಿವಿಕೆಗೆ ಬೆಂಬಲ ಘೋಷಿಸಿದೆ.

ತಮಿಳುನಾಡು ವಿಧಾನಸಭೆಯಲ್ಲಿ ಎಐಎಡಿಎಂಕೆ 47 ಶಾಸಕರನ್ನು ಹೊಂದಿದ್ದು, 30 ಶಾಸಕರು ಪಳನಿಸ್ವಾಮಿ ವಿರುದ್ಧ ಬಂಡಾಯ ಎದ್ದಿದ್ದಾರೆ.

ಬಂಡಾಯವನ್ನು ತಳ್ಳಿಹಾಕಿರುವ ಎಐಎಡಿಎಂಕೆ ನಾಯಕತ್ವವು, ‘ಟಿವಿಕೆ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಲು ಬಯಸಿರುವ ವೇಲುಮಣಿ, ಷಣ್ಮುಗಂ, ಸಿ. ವಿಜಯಭಾಸ್ಕರ್ ಅವರು ವದಂತಿ ಹರಡುತ್ತಿದ್ದಾರೆ. ಯಾವೊಬ್ಬ ಶಾಸಕರೂ ಅವರೊಂದಿಗಿಲ್ಲ. ಎಲ್ಲರೂ ಪಳನಿಸ್ವಾಮಿ ಜೊತೆಗಿದ್ದಾರೆ’ ಎಂದು ಸಾಮಾಜಿಕ ಮಾಧ್ಯಮದಲ್ಲಿ ಉಲ್ಲೇಖಿಸಿದೆ.

ಚುನಾವಣೋತ್ತರ ಮೈತ್ರಿ ಕುರಿತಂತೆ ಷಣ್ಮುಗಂ ನೀಡಿರುವ ಹೇಳಿಕೆಯನ್ನು ಡಿಎಂಕೆಯು ತಳ್ಳಿಹಾಕಿದ್ದು, ‘ವಿಜಯ್ ಬೆಂಬಲಿಸಲಿಕ್ಕಾಗಿ ಅವರು ಆಧಾರರಹಿತ ಆರೋಪ ಮಾಡುತ್ತಿದ್ದಾರೆ’ ಎಂದು ಸಂಘಟನಾ ಕಾರ್ಯದರ್ಶಿ ಆರ್.ಎಸ್. ಭಾರತಿ ತಿರುಗೇಟು ನೀಡಿದ್ದಾರೆ.

ವಿಧಾನಸಭೆ ಅಧ್ಯಕ್ಷರಾಗಿ ಪ್ರಭಾಕರ್: ತಮಿಳುನಾಡು ವಿಧಾನಸಭೆಯ ಅಧ್ಯಕ್ಷರಾಗಿ ಟಿವಿಕೆ ಶಾಸಕರಾದ ಜೆಸಿಡಿ ಪ್ರಭಾಕರ್ ಹಾಗೂ ಉಪ ಸಭಾಧ್ಯಕ್ಷರಾಗಿ ಎಂ. ರವಿಶಂಕರ್ ಅವರು ಅವಿರೋಧವಾಗಿ ಮಂಗಳವಾರ ಆಯ್ಕೆಯಾದರು.

‘ಪ್ರಜಾಪ್ರಭುತ್ವದ ಹೃದಯ, ಮೆದುಳಿನಂತೆ ವಿಧಾನಸಭೆಯು ಕೆಲಸ ಮಾಡಬೇಕು. ಇಲ್ಲಿ ಎಲ್ಲರೂ ಸಮಾನರು. ಸಮಾನ ಆದ್ಯತೆ ನೀಡಲಾಗುತ್ತದೆ. ಒಳ್ಳೆಯ ವಿಷಯಗಳನ್ನು ಸ್ವೀಕರಿಸಲಾಗುವುದು’ ಎಂದು ಮುಖ್ಯಮಂತ್ರಿ ವಿಜಯ್ ಅವರು ಸಭಾಧ್ಯಕ್ಷರ ಆಯ್ಕೆ ಬಳಿಕ ಸದನದಲ್ಲಿ ಹೇಳಿದರು.

ಸನಾತನ ಧರ್ಮ ನಾಶಗೊಳಿಸಿ: ಉದಯನಿಧಿ ಪುನರುಚ್ಚಾರ

‘ಜನರನ್ನು ವಿಭಜಿಸುವ ಸನಾತನ ಧರ್ಮವನ್ನು ನಾಶಗೊಳಿಸಿ’ ಎಂದು ತಮಿಳುನಾಡು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಉದಯನಿಧಿ ಸ್ಟಾಲಿನ್ ಅವರು ಮಂಗಳವಾರ ಪುನರುಚ್ಚರಿಸಿದರು.

‘ತಮಿಳ್ ತಾಯ್ ವಾಳ್ತು’ ನಾಡಗೀತೆಗೆ ಅಪಮಾನ ಮಾಡುವುದನ್ನು ಡಿಎಂಕೆ ಎಂದಿಗೂ ಸಹಿಸುವುದಿಲ್ಲ ಎಂದು ವಿಪಕ್ಷ ನಾಯಕನಾಗಿ ವಿಧಾನಸಭೆಯಲ್ಲಿ ಮಾಡಿದ ಮೊದಲ ಭಾಷಣದಲ್ಲೇ ಪ್ರತಿಪಾದಿಸಿದರು.

2023ರ ಸೆಪ್ಟೆಂಬರ್‌ನಲ್ಲಿ ನೀಡಿದ್ದ ಹೇಳಿಕೆಯನ್ನೇ ಇದೀಗ ಮತ್ತೆ ಪುನರುಚ್ಚರಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣವನ್ನು ಎದುರಿಸುತ್ತಿದ್ದಾರೆ.

ನೂತನ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ನಾಡಗೀತೆಯನ್ನು ಮೂರನೇ ಸ್ಥಾನಕ್ಕೆ ತಳ್ಳಲಾಗಿದೆ ಎಂದು ವಿಪಕ್ಷ ನಾಯಕ ಅಸಮಾಧಾನ ವ್ಯಕ್ತಪಡಿಸಿದರು.

‘ಇಂತಹ ತಪ್ಪು ಮತ್ತೊಮ್ಮೆ ಸಂಭವಿಸಲು ನೀವು ಅನುಮತಿಸಬಾರದು. ನಾವು ಅನುಮತಿಸುವುದಿಲ್ಲ. ವಿಧಾನಸಭೆಯಲ್ಲಷ್ಟೇ ಅಲ್ಲ, ಯಾವುದೇ ಸರ್ಕಾರಿ ಕಾರ್ಯಕ್ರಮ ಅಥವಾ ತಮಿಳುನಾಡಿನಲ್ಲಿ ನಡೆಯುವ ಯಾವುದೇ ಕಾರ್ಯಕ್ರಮದಲ್ಲಾಗಲಿ ನಾಡಗೀತೆಗೆ ಪ್ರಥಮ ಪ್ರಾಶಸ್ತ್ಯ ನೀಡಬೇಕು’ ಎಂದು ಉದಯನಿಧಿ ಆಗ್ರಹಿಸಿದರು.

‘ಈ ವಿಷಯದಲ್ಲಿ ಎಂದಿಗೂ ರಾಜಿ ಮಾಡಿಕೊಳ್ಳಬಾರದು. ನಮ್ಮ ಹಕ್ಕುಗಳು ಹಾಗೂ ಸಂಪ್ರದಾಯಗಳನ್ನು ರಕ್ಷಿಸಿಕೊಳ್ಳುವಲ್ಲಿ ನಾವು ಬಹಳ ಜಾಗರೂಕರಾಗಿರಬೇಕು’ ಎಂದು ಹೇಳಿದರು.

‘ಮುಖ್ಯಮಂತ್ರಿ ವಿಜಯ್, ವಿಧಾನಸಭಾಧ್ಯಕ್ಷ ಜೆಸಿಡಿ ಪ್ರಭಾಕರ್ ಹಾಗೂ ನಾನು ಲೊಯೋಲಾ ಕಾಲೇಜಿನ ಹಳೆಯ ವಿದ್ಯಾರ್ಥಿಗಳು. ಆದರೆ ರಾಜಕೀಯ ಅನುಭವದಲ್ಲಿ ಡಿಎಂಕೆಯ ನಾವೇ ಹಿರಿಯರು’ ಎಂದು ಉದಯನಿಧಿ ಹೇಳಿದರು.

ಸುದ್ದಿ 2 ನಿಮಿಷ

ಸಚಿವರಲ್ಲಿ ಅರ್ಧದಷ್ಟು ಮಂದಿ ವಿರುದ್ಧ ಅಪರಾಧ ಪ್ರಕರಣ

ನವದೆಹಲಿ (ಪಿಟಿಐ): ತಮಿಳುನಾಡಿನ ನೂತನ ಸಚಿವರಲ್ಲಿ ಅರ್ಧದಷ್ಟು ಜನರ ವಿರುದ್ಧ ಅಪರಾಧ ಪ್ರಕರಣಗಳಿವೆ. ಶೇಕಡ 20ರಷ್ಟು ಸಚಿವರು ₹100 ಕೋಟಿಗೂ ಅಧಿಕ ಆಸ್ತಿ ಹೊಂದಿದ್ದಾರೆ ಎಂದು ‘ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್’ (ಎಡಿಆರ್) ಬಿಡುಗಡೆ ಮಾಡಿರುವ ವರದಿ ತಿಳಿಸಿದೆ.

‘10 ಶಾಸಕರಲ್ಲಿ ತಲಾ ಐದು ಶಾಸಕರು ತಮ್ಮ ವಿರುದ್ಧ ಅಪರಾಧ ಪ್ರಕರಣವಿರುವುದಾಗಿ ಘೋಷಿಸಿದ್ದಾರೆ, ಅದರಲ್ಲಿ ತಲಾ ಮೂವರ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳಿವೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸಚಿವ ಸಂಪುಟದಲ್ಲಿರುವವರಲ್ಲಿ ಮುಖ್ಯಮಂತ್ರಿ ವಿಜಯ್ ಅವರು ಹೆಚ್ಚು ಶ್ರೀಮಂತರಾಗಿದ್ದು, ಅವರ ಆಸ್ತಿಯ ಒಟ್ಟು ಮೌಲ್ಯ ₹648.85 ಕೋಟಿ ಇದೆ. ಸಚಿವ ಸಂಪುಟದಲ್ಲಿರುವವರ ಸರಾಸರಿ ಆಸ್ತಿ ₹126.50 ಕೋಟಿ ಇದೆ.

₹22.57 ಲಕ್ಷ ಮೊತ್ತದ ಆಸ್ತಿ ಹೊಂದಿರುವ ಸಚಿವೆ ಕೀರ್ತನಾ ಸಂಪತ್ ಅವರು ತಮಿಳುನಾಡಿನ ಸಚಿವರಲ್ಲಿ ಅತಿ ಕಡಿಮೆ ಆಸ್ತಿ ಹೊಂದಿರುವವರು. ಸಚಿವ ಸಂಪುಟದಲ್ಲಿ ಒಬ್ಬರು ಮಹಿಳೆ ಮಾತ್ರ ಇದ್ದಾರೆ.



ಮೂವರು ಸಚಿವರು ತಮ್ಮ ವಿದ್ಯಾರ್ಹತೆ 8ನೇ ತರಗತಿಯಿಂದ 12ನೇ ತರಗತಿವರೆಗೆ ಎಂದು ಘೋಷಿಸಿಕೊಂಡಿದ್ದಾರೆ. ಏಳು ಮಂದಿ ಪದವಿ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯಾರ್ಹತೆ ಹೊಂದಿದ್ದಾರೆ.

ಮತ ಚಲಾಯಿಸುವ ಹಕ್ಕು ‘ಸುಪ್ರೀಂ’ಗೆ ಟಿವಿಕೆ ಶಾಸಕ

ನವದೆಹಲಿ: ವಿಶ್ವಾಸ ಮತ ಯಾಚನೆ ವೇಳೆ ಮತ ಚಲಾಯಿಸದಂತೆ ಮದ್ರಾಸ್ ಹೈಕೋರ್ಟ್ ನೀಡಿರುವ ಆದೇಶ ಪ್ರಶ್ನಿಸಿ, ಟಿವಿಕೆಯ ಶಾಸಕ ಆರ್. ಸೀನಿವಾಸ ಸೇತುಪತಿ ಅವರು ಮಂಗಳವಾರ ಸುಪ್ರೀಂ ಕೋರ್ಟ್‌ನ ಮೊರೆ ಹೋದರು.

ಹಿರಿಯ ವಕೀಲ ಅಭಿಷೇಕ್ ಮನುಸಿಂಘ್ವಿ ಅವರು ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ತೆಗೆದುಕೊಳ್ಳುವಂತೆ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರ ಪೀಠಕ್ಕೆ ಮನವಿ ಮಾಡಿದರು. ಮನವಿಯನ್ನು ಪರಿಗಣಿಸಿದ ಪೀಠವು, ಬುಧವಾರ ವಿಚಾರಣೆ ನಡೆಸುವುದಾಗಿ ತಿಳಿಸಿದೆ.

ತಮಿಳುನಾಡು ವಿಧಾನಸಭೆಯಲ್ಲಿ ಮುಖ್ಯಮಂತ್ರಿ ವಿಜಯ್ ಅವರು ಬುಧವಾರ ವಿಶ್ವಾಸಮತ ಯಾಚಿಸಲಿದ್ದಾರೆ.

ಶಿವಗಂಗಾ ಜಿಲ್ಲೆಯ ತಿರುಪ್ಪತ್ತೂರು ವಿಧಾನಸಭಾ ಕ್ಷೇತ್ರದಿಂದ ಸೇತುಪತಿ ಅವರು ಡಿಎಂಕೆ ಮುಖಂಡ, ಸಹಕಾರ ಸಚಿವರಾಗಿದ್ದ ಪೆರಿಯಕರುಪ್ಪನ್ ವಿರುದ್ಧ ಒಂದು ಮತದ ಅಂತರದಿಂದ ಗೆಲುವು ಸಾಧಿಸಿದ್ದರು.

ಅಂಚೆ ಮತಗಳ ಎಣಿಕೆಯಲ್ಲಿ ಲೋಪವಿದೆ ಎಂದು ದೂರಿ ಪೆರಿಯ ಕರುಪ್ಪನ್ ಅವರು ಮದ್ರಾಸ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ವನ್ಯಜೀವಿ ಪಥದಲ್ಲಿ ಚಾರಣ ಸ್ಥಗಿತ

ಒಂದನೇ ಪುಟದಿಂದ...

ಜತೆಗೆ, ‘ಚಾರಣ ಪಥಗಳಲ್ಲಿ ಚಾರಣಿಗರ ಸುರಕ್ಷತೆಗಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಒಪಿ) ಜಾರಿಗೆ ತರಲಾಗಿತ್ತು. ಅರಣ್ಯ ಇಲಾಖೆ ವ್ಯಾಪ್ತಿಯ ಚಾರಣ ಪಥಗಳಲ್ಲಿ ಮೇ 8ರ ಒಳಗೆ ಎಸ್‌ಒಪಿ ಅನುಷ್ಠಾನಕ್ಕೆ ಸಿದ್ಧತೆ ಮಾಡಿಕೊಳ್ಳಬೇಕು. ಇಲ್ಲದೇ ಇದ್ದಲ್ಲಿ, ಚಾರಣವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಬೇಕು ಎಂದು ಈ ಹಿಂದೆಯೇ ಸೂಚಿಸಲಾಗಿತ್ತು. ಹೀಗಿದ್ದೂ ಕೆಲವು ಚಾರಣ ಪಥಗಳಲ್ಲಿ ಪೂರ್ಣ ಸಿದ್ಧತೆ ಆಗಿಲ್ಲ ಎಂಬುದು ಗಮನಕ್ಕೆ ಬಂದಿದೆ. ಎಸ್‌ಒಪಿ ಜಾರಿಗೆ ಸಿದ್ಧತೆ ಮಾಡಿಕೊಳ್ಳದ ಚಾರಣ ಪಥಗಳನ್ನೂ ತಕ್ಷಣವೇ ಸ್ಥಗಿತಗೊಳಿಸಿ’ ಎಂದು ಇನ್ನೊಂದು ಆದೇಶದಲ್ಲಿ ಸೂಚಿಸಿದ್ದಾರೆ.

ಕರ್ನಾಟಕ ಪರಿಸರ–ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿಯ ಮೇಲ್ವಿಚಾರಣೆಯಲ್ಲಿ ನಿರ್ವಹಿಸಲಾಗುತ್ತಿರುವ ಚಾರಣ ಪಥಗಳಿಗೂ ಈ ಆದೇಶ ಅನ್ವಯವಾಗಲಿದೆ. ಈ ಹಿಂದೆ ಎಸ್‌ಒಪಿ ಜಾರಿಗೊಳಿಸಿದಾಗ, ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ವ್ಯಾಪ್ತಿಯ ಚಾರಣ ಪಥಗಳನ್ನು ಅದು ಒಳಗೊಂಡಿರಲಿಲ್ಲ.

ನೀಟ್ ಟೀಕೆಗೆ ಮೊದಲು ಕೆಪಿಎಸ್‌ಸಿ ಸರಿಪಡಿಸಿ: ಸಚಿವ ಕುಮಾರಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೀಟ್ ಪರೀಕ್ಷೆ ಬಗ್ಗೆ ಟೀಕೆ ಮಾಡುವವರು ಮೊದಲು ಕರ್ನಾಟಕ ಲೋಕಸೇವಾ ಆಯೋಗವನ್ನು ಸರಿಪಡಿಸಲಿ’ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

‘ಕಾಂಗ್ರೆಸ್ ಆಡಳಿತ ಕಾಲದಲ್ಲೇ ಕೆಪಿಎಸ್‌ಸಿ ಸರಿಪಡಿಸಲು ಆಗದಷ್ಟು ಹಾಳಾಗಿದೆ. ಎಲ್ಲವನ್ನೂ ತೊಳೆಯುತ್ತೇವೆ ಎಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಯಾವ ರೀತಿ ತೊಳೆದರು ಎನ್ನುವುದು ಗೊತ್ತಿದೆ. ‘ರೀಡೂ’ ಮಾಡಿಕೊಟ್ಟ ವ್ಯಕ್ತಿಯನ್ನೇ ಆಯೋಗದ ಅಧ್ಯಕ್ಷರನ್ನಾಗಿ ನೇಮಿಸಿದರು. ಬೀದಿಯಲ್ಲಿ ಹುದ್ದೆಗಳಿಗೆ ಹರಾಜು ಹಾಕಲಾಗಿದೆ. ನೀಟ್ ಪರೀಕ್ಷೆ ಬಗ್ಗೆ ಟೀಕಿಸುವವರು ಕರ್ನಾಟಕದಲ್ಲಿ ಎಷ್ಟು ಬಾರಿ ಪರೀಕ್ಷೆ ಮುಂದಕ್ಕೆ ಹಾಕಿದ್ದಾರೆ ಎಂದು ಜನರಿಗೆ ತಿಳಿಸಲಿ’ ಎಂದು ಆಗ್ರಹಿಸಿದರು.

‘ರಾಜಸ್ಥಾನದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ ಎಂದು ಹೇಳಲಾಗುತ್ತಿದೆ. ಯಾರೋ ಮಾಡಿದ ತಪ್ಪಿಗೆ ಸರ್ಕಾರದ ಮೇಲೆ ತಪ್ಪು ಹೊರಿಸಲು ಆಗೋದಿಲ್ಲ. ಕೇಂದ್ರ ಸರ್ಕಾರ ಈಗಾಗಲೇ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದೆ. ತಪ್ಪಿತಸ್ಥರು ತಪ್ಪಿಸಿಕೊಳ್ಳಲು ಆಗುವುದಿಲ್ಲ’ ಎಂದು ಹೇಳಿದರು.

ಬಿಜೆಪಿ ನಾಯಕರೊಬ್ಬರು ಸತತ ಎರಡನೇ ಬಾರಿಗೆ ಮುಖ್ಯಮಂತ್ರಿ

ಅಸ್ಸಾಂ: ಇತಿಹಾಸ ನಿರ್ಮಿಸಿದ ಹಿಮಂತ

ಗುವಾಹಟಿ (ಪಿಟಿಐ): ಅಸ್ಸಾಂನ ಮುಖ್ಯಮಂತ್ರಿಯಾಗಿ ಸತತ ಎರಡನೇ ಬಾರಿಗೆ ಹಿಮಂತ ಬಿಸ್ವ ಶರ್ಮಾ ಅವರು ಮಂಗಳವಾರ ಪ್ರಮಾಣ ವಚನ ಸ್ವೀಕರಿಸಿದರು.

ಕಾಂಗ್ರೆಸ್ಸಿಗರಲ್ಲದವರು ರಾಜ್ಯದಲ್ಲಿ ಸತತ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗುತ್ತಿರುವುದು ಇದೇ ಮೊದಲು. ಜೊತೆಗೆ, ಬಿಜೆಪಿ ನಾಯಕರೊಬ್ಬರು ಸತತ ಎರಡನೇ ಬಾರಿಗೆ ಮುಖ್ಯಮಂತ್ರಿ ಆಗುತ್ತಿರುವುದೂ ಇದೇ ಮೊದಲು. ಈ ಮೂಲಕ ಹಿಮಂತ ಅವರು ಇತಿಹಾಸ ನಿರ್ಮಿಸಿದ್ದಾರೆ.

ಹಿಮಂತ ಅವರೊಂದಿಗೆ ಬಿಜೆಪಿಯ ರಾಮೇಶ್ವರ ತೆಲಿ ಮತ್ತು ಅಜಂತಾ ನಿಯೋಗ್, ಎನ್‌ಜಿಪಿ ಪಕ್ಷದ ಅತುಲ್ ಬೋರಾ, ಬಿಪಿಎಫ್ ಪಕ್ಷದ ಚರಣ್ ಬೋರೊ ಅವರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಪಾಲ ಲಕ್ಷ್ಮಣ್ ಪ್ರಸಾದ್ ಆಚಾರ್ಯ ಅವರು ಪ್ರಮಾಣ ವಚನ ಬೋಧಿಸಿದರು.

ನಿಯೋಗ್, ಬೋರಾ ಮತ್ತು ಬೋರೊ ಅವರು ಕಳೆದ ಬಾರಿಯ ಸಂಪುಟದಲ್ಲಿಯೂ ಇದ್ದರು. ತೆಲಿ ಅವರು ಹೊಸದಾಗಿ ಸಂಪುಟ ಸೇರಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ ಸಿಂಗ್, ನಿತಿನ್ ಗಡ್ಕರಿ ಸೇರಿ ಹಲವು ಸಚಿವರು ಕಾರ್ಯಕ್ರಮದಲ್ಲಿ ಹಾಜರಿದ್ದರು. ಬಿಜೆಪಿ ಆಡಳಿತದಲ್ಲಿರುವ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು, ಎನ್‌ಡಿಎ ಮಿತ್ರಪಕ್ಷಗಳ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು.

ಭಾರತದಲ್ಲಿನ ಅಮೆರಿಕ ರಾಯಭಾರಿ ಸರ್ಗಿಯೊ ಗೋರ್ ಅವರು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಭಾಗಿಯಾಗಿದ್ದರು.

ಸಜೀವ ಗುಂಡು ಹೊಂದಿದ್ದ ವ್ಯಕ್ತಿ ಬಂಧನ: ಸಮಾರಂಭಕ್ಕೆ ಬಂದಿದ್ದ ವ್ಯಕ್ತಿಯೊಬ್ಬರ ಬಳಿ ನಾಲ್ಕು ಸಜೀವ ಗುಂಡುಗಳು ಪತ್ತೆಯಾಗಿವೆ. ಭದ್ರತಾ ಪರಿಶೀಲನೆ ವೇಳೆ ವ್ಯಕ್ತಿ ಬಳಿ ಗುಂಡುಗಳಿರುವುದು ತಿಳಿದುಬಂದಿದೆ.

ರಾಜ್ಯಪಾಲರು ಇನ್ನೇನು ಪ್ರಮಾಣ ವಚನ ಬೋಧಿಸಬೇಕು ಎಂಬ ಹೊತ್ತಿಗೆ ವ್ಯಕ್ತಿಯು ಸಮಾರಂಭ ಪ್ರವೇಶಿಸುತ್ತಿದ್ದ. ‘ವ್ಯಕ್ತಿಯನ್ನು ವಶಕ್ಕೆ ಪಡೆದು ತನಿಖೆ ನಡೆಸಲಾಗುತ್ತಿದೆ. ಈತನ ಬಳಿ ಶಸ್ತ್ರಾಸ್ತ್ರ ಇರಲಿಲ್ಲ’ ಎಂದು ಪೊಲೀಸರು ತಿಳಿಸಿದರು. ಸಮಾರಂಭದಲ್ಲಿ ಸುಮಾರು ಒಂದು ಲಕ್ಷ ಜನರು ಭಾಗವಹಿಸಿದ್ದರು.

ಸಚಿವರ ಪರಿಚಯ

ರಾಮೇಶ್ವರ ತೆಲಿ: ರಾಮೇಶ್ವರ ತೆಲಿ ಅವರು ಅಸ್ಸಾಂನ ಪ್ರಮುಖ ಬಿಜೆಪಿ ನಾಯಕರಾಗಿದ್ದಾರೆ. ಜೊತೆಗೆ, ಚಹಾ ತೋಟಗಳಲ್ಲಿ ಕೆಲಸ ಮಾಡುವ ಬುಡಕಟ್ಟು ಸಮುದಾಯಗಳ ಮುಖ್ಯ ನಾಯಕ ಕೂಡ ಹೌದು. ವಿದ್ಯಾರ್ಥಿ ದೆಸೆಯಿಂದಲೇ ರಾಜಕಾರಣದಲ್ಲಿ ತೊಡಗಿಕೊಂಡಿದ್ದ ತೆಲಿ, 2001ರಲ್ಲಿ ಮೊದಲ ಬಾರಿಗೆ ದುಲಿಯಾಜಾನ್ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾದರು. 2006ರಲ್ಲಿ ಮರು ಆಯ್ಕೆಯಾದರು. 2011ರ ಚುನಾವಣೆಯಲ್ಲಿ ಸೋಲುಂಡ ಬಳಿಕ ರಾಷ್ಟ್ರ ರಾಜಕಾರಣಕ್ಕೆ ಪ್ರವೇಶ ಪಡೆದರು. ದಿಬ್ರುಗಢ ಲೋಕಸಭೆ ಕ್ಷೇತ್ರದಿಂದ 2014, 2019ರಲ್ಲಿ ಸಂಸದರಾಗಿ ಆಯ್ಕೆಯಾದರು. ಈಗ ಇವರು ರಾಜ್ಯಸಭಾ ಸದಸ್ಯರು. ಪ್ರಧಾನಿ ಮೋದಿ ಸರ್ಕಾರದಲ್ಲಿ ಸಚಿವರೂ ಆಗಿದ್ದರು.

ಅಜಂತಾ ನಿಯೋಗ್: 62 ವರ್ಷದ ಅಜಂತಾ ನಿಯೋಗ್ ಅವರು ಆರನೇ ಬಾರಿಗೆ ಶಾಸಕಿಯಾಗುವ ಮೂಲಕ ಅತಿ ಹೆಚ್ಚು ಅವಧಿಗೆ ಶಾಸಕ ಸ್ಥಾನದಲ್ಲಿದ್ದ ಅಸ್ಸಾಂ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. 2001ರಿಂದ ಗೋಲಘಾಟ್ ವಿಧಾನಸಭಾ ಕ್ಷೇತ್ರದಿಂದ ಇವರು ಆಯ್ಕೆಯಾಗುತ್ತಿದ್ದಾರೆ. 2021ರಲ್ಲಿ ಇವರಿಗೆ ಹಣಕಾಸು ಖಾತೆ ನೀಡಲಾಗಿತ್ತು. ಮಹಿಳೆಯೊಬ್ಬರಿಗೆ ಹಣಕಾಸು ಖಾತೆ ನೀಡಿದ್ದು ರಾಜ್ಯದ ಇತಿಹಾಸದಲ್ಲಿಯೇ ಮೊದಲಾಗಿತ್ತು. ಕಾಂಗ್ರೆಸ್‌ನ ತರುಣ್ ಗೊಗೋಯ್ ಅವರ ಸಂಪುಟದಲ್ಲಿ ಸಚಿವೆಯಾಗಿದ್ದ ಇವರು 2020ರಲ್ಲಿ ಬಿಜೆಪಿ ಸೇರಿಕೊಂಡಿದ್ದರು.



ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ಪ್ರಧಾನಿ ಮೋದಿ ಅವರು ಭಾಗವಹಿಸಿ, ಹಿಮಂತ ಅವರಿಗೆ ಶುಭಕೋರಿದರು ಪಿಟಿಐ ಚಿತ್ರ

ಅಂತಿಮ ಘಟ್ಟದಲ್ಲಿ ಸಿ.ಎಂ ಆಯ್ಕೆ

ನವದೆಹಲಿ/ ತಿರುವನಂತಪುರ (ಪಿಟಿಐ): ಕೆಪಿಸಿಸಿಯ ಮಾಜಿ ಅಧ್ಯಕ್ಷರು, ಕಾರ್ಯಾಧ್ಯಕ್ಷರೊಂದಿಗೆ ವ್ಯಾಪಕ ಸಮಾಲೋಚನೆ ನಡೆಸಿದರೂ, ಕಾಂಗ್ರೆಸ್ ಹೈಕಮಾಂಡ್‌ಗೆ ಕೇರಳಂ ಮುಖ್ಯಮಂತ್ರಿ ಹೆಸರನ್ನು ಅಂತಿಮಗೊಳಿಸಲು ಮಂಗಳವಾರವೂ ಸಾಧ್ಯವಾಗಲಿಲ್ಲ. ಆದರೆ, ಈ ಕುರಿತು ವಾರದಿಂದೀಚೆಗೆ ನಡೆಯುತ್ತಿರುವ ಚರ್ಚೆ ಬಹುತೇಕ ಅಂತಿಮ ಘಟ್ಟಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.



ಮುಖ್ಯಮಂತ್ರಿ ಸ್ಥಾನಕ್ಕಾಗಿ ಪಟ್ಟುಹಿಡಿದಿರುವ ಕೆ.ಸಿ ವೇಣುಗೋಪಾಲ್ ಮತ್ತು ವಿ.ಡಿ. ಸತೀಶನ್ ಇಬ್ಬರೂ ಕಣದಿಂದ ಹಿಂದೆ ಸರಿಯಲು ಒಪ್ಪದ ಕಾರಣ ಮತ್ತು ಇಬ್ಬರಲ್ಲಿ ಒಬ್ಬರನ್ನು ಅಂತಿಮಗೊಳಿಸಲು ಹೈಕಮಾಂಡ್‌ಗೆ ಸುಲಭವಾಗಿ ಆಗದ ಕಾರಣ ಅನಿಶ್ಚಿತತೆ ಮುಂದುವರಿದಿದೆ.

ಕೆಪಿಸಿಸಿ ಮಾಜಿ ಅಧ್ಯಕ್ಷರಾದ ವಿ.ಎಂ. ಸುಧೀರನ್, ಎಂ. ರಾಮಚಂದ್ರನ್, ಕೆ. ಸುಧಾಕರನ್, ಕೆ. ಮುರಳೀಧರನ್ ಮತ್ತು ಎಂ.ಎಂ ಹಸನ್ ಅವರು ಮಂಗಳವಾರ ನವದೆಹಲಿಯಲ್ಲಿ ರಾಹುಲ್ ಗಾಂಧಿ ಮತ್ತು ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿ ಚರ್ಚೆ ನಡೆಸಿದರು.

ಹಿರಿಯ ಶಾಸಕರಾದ ಟಿ. ರಾಧಾಕೃಷ್ಣನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಪಿ.ಸಿ ವಿಷ್ಣುನಾಥ್, ಶಾಫಿ ಪರಂಬಿಲ್, ಎ.ಪಿ. ಅನಿಲ್ ಕುಮಾರ್ ಅವರನ್ನೂ ಹೈಕಮಾಂಡ್ ದೆಹಲಿಗೆ ಕರೆಯಿಸಿಕೊಂಡು ಮಾತುಕತೆ ನಡೆಸಿತು. ಹಿರಿಯ ಮುಖಂಡ ಎ.ಕೆ. ಆ್ಯಂಟನಿ ಅವರೊಂದಿಗೂ ರಾಹುಲ್ ದೂರವಾಣಿ ಮೂಲಕ ಚರ್ಚೆ ನಡೆಸಿದರು.

ಸಭೆಯ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಕೆ. ಮುರಳೀಧರನ್, ‘ಕೇರಳಂ ಮುಖ್ಯಮಂತ್ರಿ ಹೆಸರು ಮಂಗಳವಾರ ರಾತ್ರಿ ಅಥವಾ ಬುಧವಾರ ಘೋಷಣೆಯಾಗಲಿದೆ’ ಎಂದರು.

‘ನೀಟ್: ರಾಜ್ಯಕ್ಕೆ ಅಧಿಕಾರ ನೀಡಿ’

ನಾವೇ ಪರೀಕ್ಷೆ ನಡೆಸಿದರೆ ಸೂಕ್ತ: ಸಚಿವ ಎಂ.ಸಿ.ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಕೋಟಾದ ವೈದ್ಯಕೀಯ ಸೀಟುಗಳನ್ನು ಭರ್ತಿ ಮಾಡಿಕೊಳ್ಳಲು ಆಯಾ ರಾಜ್ಯಗಳಿಗೇ ಅಧಿಕಾರ ನೀಡಬೇಕು. ಕರ್ನಾಟಕದಲ್ಲಿ ಪರೀಕ್ಷೆ ಆಯೋಜಿಸುವ ಸಾಮರ್ಥ್ಯ ಕೆಇಎಗೆ ಇದೆ. ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ಅಖಿಲ ಭಾರತ ಕೋಟಾದ ಸೀಟುಗಳಿಗೆ ಮಾತ್ರ ನೀಟ್ ನಡೆಸಬೇಕು’ ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಆಗ್ರಹಿಸಿದರು.

ಪ್ರಶ್ನೆಪತ್ರಿಕೆ ಸೋರಿಕೆ ಕಾರಣಕ್ಕೆ ನೀಟ್ ಪರೀಕ್ಷೆ ರದ್ದಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿರುವ ಅವರು, ‘ರಾಜ್ಯದಲ್ಲಿ 10 ಸಾವಿರಕ್ಕೂ ಹೆಚ್ಚು ವೈದ್ಯಕೀಯ ಸೀಟುಗಳು ಲಭ್ಯವಿದ್ದು, ಶೇ 15ರಷ್ಟು ಸೀಟುಗಳನ್ನು ಮಾತ್ರ ಅಖಿಲ ಭಾರತ ಕೋಟಾದಲ್ಲಿ ಭರ್ತಿ ಮಾಡಲಾಗುತ್ತದೆ. ಉಳಿದ ಶೇ 85ರಷ್ಟು ಸಿಟುಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವೇ ಹಂಚಿಕೆ ಮಾಡುತ್ತದೆ. ಹಾಗಾಗಿ, ರಾಜ್ಯ ಕೋಟಾದ ಸೀಟುಗಳಿಗೆ ಸಿಇಟಿ ಮಾದರಿಯಲ್ಲೇ ಪರೀಕ್ಷೆ ನಡೆಸಲು ಅನುಮತಿ ನೀಡಬೇಕು ಎನ್ನುವುದು ರಾಜ್ಯದ ಬೇಡಿಕೆ. ಇದರಿಂದ ಸಿಇಟಿ ಪ್ರಕ್ರಿಯೆಯಲ್ಲಿನ ವಿಳಂಬವನ್ನೂ ತಪ್ಪಿಸಬಹುದು’ ಎಂದರು.

‘ಎಂಜಿನಿಯರಿಂಗ್ ಪ್ರವೇಶಕ್ಕೆ ಸಿಇಟಿ ನಡೆಸಲಾಗುತ್ತದೆ. ಫಲಿತಾಂಶದ ನಂತರ ಅರ್ಹತಾಪಟ್ಟಿ ಸಿದ್ಧಪಡಿಸುವಾಗ ದ್ವಿತೀಯ ಪಿಯು ಅಂಕಗಳಲ್ಲಿ ಶೇ 50ರಷ್ಟು ಪರಿಗಣಿಸಿ ಅರ್ಹತಾ ಪಟ್ಟಿ ಸಿದ್ಧಪಡಿಸಲಾಗುತ್ತದೆ. ಆದರೆ, ನೀಟ್‌ನಲ್ಲಿ ದ್ವಿತೀಯ ಪಿಯು ಅಂಕಗಳನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ಇದು ವಿದ್ಯಾರ್ಥಿಗಳನ್ನು ಒತ್ತಡಕ್ಕೆ ತಳ್ಳುತ್ತದೆ. ಹಾಗಾಗಿ, ಪರೀಕ್ಷಾ ಕ್ರಮ ಬದಲಾಯಿಸಬೇಕು’ ಎಂದೂ ಒತ್ತಾಯಿಸಿದರು.

ಕೇಂದ್ರದ ದೊಡ್ಡ ಹಗರಣ: ಸಚಿವ

‘ರಾಜಸ್ಥಾನ, ಹರಿಯಾಣದ ಕೋಚಿಂಗ್ ಸೆಂಟರ್‌ಗಳು ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಮಾಡಿಸಿವೆ. ಕೇಂದ್ರ ಸರ್ಕಾರದ ಪಾಲೂ ಇದೆ. ಇದು ಕೇಂದ್ರ ಸರ್ಕಾರದ ದೊಡ್ಡ ಹಗರಣ’ ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣಪ್ರಕಾಶ ಪಾಟೀಲ ಆರೋಪಿಸಿದರು.

‘ನಾಲ್ಕೈದು ವರ್ಷಗಳಿಂದ ನೀಟ್‌ನಲ್ಲಿ ಒಂದಲ್ಲ ಒಂದು ಗೊಂದಲಗಳು, ಅಕ್ರಮಗಳು ನಡೆಯುತ್ತಲೇ ಇವೆ. ಪ್ರತಿ ವರ್ಷ ಆಗುತ್ತಿರುವ ಪ್ರಮಾದವನ್ನು ಸರಿಪಡಿಸಲು ಕೇಂದ್ರ ಸರ್ಕಾರಕ್ಕೆ ಆಗುತ್ತಿಲ್ಲ. ಸರ್ಕಾರ ಸಂಪೂರ್ಣ ಅಸಮರ್ಥವಾಗಿದೆ. ಪ್ರಶ್ನೆ ಪತ್ರಿಕೆ ಸೋರಿಕೆ ಹಿಂದೆ ಕೋಟ್ಯಂತರ ರೂಪಾಯಿ ವಹಿವಾಟು ನಡೆದಿರುತ್ತದೆ. ಇದಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವೇ ಹೊಣೆ. ಲಕ್ಷಾಂತರ ವಿದ್ಯಾರ್ಥಿಗಳ ಬಾಳಿನ ಜತೆಗೆ ಚೆಲ್ಲಾಟವಾಡಿದ ಕೇಂದ್ರ ಶಿಕ್ಷಣ ಸಚಿವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೊಡ್ಡ ದೊಡ್ಡ ಭಾಷಣ ಮಾಡುವ ಬದಲು, ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸಬೇಕು’ ಎಂದು ಆಗ್ರಹಿಸಿದರು.



ಸುಧಾರಣೆಗೆ ಮಧು ಬಂಗಾರಪ್ಪ ಒತ್ತಾಯ

‘ನೀಟ್ ರದ್ದುಗೊಳಿಸಿ, ಸಿಬಿಐ ತನಿಖೆಗೆ ಆದೇಶಿಸಿದರೆ ಸಾಲದು ಇಂತಹ ಘಟನೆಗಳು ಮರುಕಳಿಸದಂತೆ ಪರೀಕ್ಷಾ ವ್ಯವಸ್ಥೆ ಸುಧಾರಣೆಗೆ ಕ್ರಮ ಕೈಗೊಳ್ಳಬೇಕು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಒತ್ತಾಯಿಸಿದರು.

ಕೇಂದ್ರ ಸರ್ಕಾರದ ವಿವಿಧ ಸಂಸ್ಥೆಗಳು ನಡೆಸುವ ಪರೀಕ್ಷೆಗಳ ಮೇಲೆ ಜನರಿಗೆ ಇರುವ ನಂಬಿಕೆ ನಾಶವಾಗುತ್ತಿದೆ. ಪರೀಕ್ಷಾ ವ್ಯವಸ್ಥೆಯು ಹಳ್ಳ ಹಿಡಿಯುತ್ತಿರುವುದು ವಿದ್ಯಾರ್ಥಿಗಳ ಮಾನಸಿಕ ಸ್ಥಿತಿಯ ಮೇಲೆ ಪರಿಣಾಮ ಬೀರುತ್ತಿದೆ. ವರ್ಷಗಟ್ಟಲೆ ಹಗಲಿರುಳು ಶ್ರಮಪಟ್ಟು ಪರೀಕ್ಷೆ ಬರೆದಿದ್ದ ಲಕ್ಷಾಂತರ ಮಕ್ಕಳ ಮೇಲೆ ಮರುಪರೀಕ್ಷೆಯ ಗದಾ ಪ್ರಹಾರ ಮಾಡಲಾಗಿದೆ ಎಂದು ದೂರಿದ್ದಾರೆ.

‘ಶಾಲಾ ಹಂತದಲ್ಲಿ ಮಕ್ಕಳ ಶೈಕ್ಷಣಿಕ ಹಾಗೂ ಮಾನಸಿಕ ಒತ್ತಡವನ್ನು ಕಡಿಮೆ ಮಾಡಲು ನಿರಂತರವಾಗಿ ಪ್ರಯತ್ನಿಸುತ್ತಿದ್ದೇವೆ. ಆದರೆ, ಕೇಂದ್ರ ಸರ್ಕಾರದ ಇಂತಹ ನಿರ್ಧಾರಗಳು ಮಕ್ಕಳನ್ನು ಮತ್ತು ಪೋಷಕರನ್ನು ಹತಾಶೆಯ ಕೂಪಕ್ಕೆ ತಳ್ಳುತ್ತಿವೆ. ತನ್ನ ಜವಾಬ್ದಾರಿಗಳನ್ನು ನಿರ್ವಹಿಸುವಲ್ಲಿ ಕೇಂದ್ರ ಸಂಪೂರ್ಣ ವಿಫಲವಾಗಿದೆ’ ಎಂದು ಅವರು ಆರೋಪಿಸಿದರು.

ವಿದ್ಯಾರ್ಥಿಗಳ ಮೇಲೆ ದುಷ್ಪರಿಣಾಮ

ಮಂಗಳೂರು: ರಾಷ್ಟ್ರೀಯ ಪರೀಕ್ಷಾ ಪ್ರಾಧಿಕಾರ (ಎನ್‌ಟಿಎ) ವೈದ್ಯಕೀಯ ಪದವಿ ಪ್ರವೇಶಕ್ಕಾಗಿ ನಡೆಸಿದ್ದ ರಾಷ್ಟ್ರೀಯ ಅರ್ಹತೆ ಮತ್ತು ಪ್ರವೇಶ ಪರೀಕ್ಷೆ (ನೀಟ್ ಯುಜಿ-2026) ರದ್ದುಗೊಳಿಸಿ ಮರು ಪರೀಕ್ಷೆ ನಡೆಸುವ ನಿರ್ಧಾರಕ್ಕೆ ಕರ್ನಾಟಕ ಅನುದಾನರಹಿತ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿಗಳ ಸಂಘ (ಕುಪ್ಮ) ಬೇಸರ ವ್ಯಕ್ತಪಡಿಸಿದೆ.

‘ಪ್ರಶ್ನೆ ಪತ್ರಿಕೆ ಸೋರಿಕೆ ದೃಢ ಪಟ್ಟಿದ್ದರಿಂದ ನೀಟ್ ಯುಜಿ – 2026ರ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಣಯವನ್ನು ಎನ್‌ಟಿಎ ತೆಗೆದುಕೊಂಡಿದೆ. ಪ್ರಶ್ನೆಪತ್ರಿಕೆ ಸೋರಿಕೆ ಮಾಡಿರುವ ವ್ಯಕ್ತಿಗಳ ಅಥವಾ ಸಂಸ್ಥೆಯ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು. ಪ್ರಕರಣದ ತನಿಖೆಯನ್ನು ಸಿಬಿಐಗೆ ಒಪ್ಪಿಸಬೇಕು. ತಪ್ಪಿತಸ್ಥರು ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳಬೇಕು’ ಎಂದು ಸಂಘ ಆಗ್ರಹಿಸಿದೆ.

‘23 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ವರ್ಷ ಪೂರ್ತಿ ತಯಾರಿ ನಡೆಸಿ ಪರೀಕ್ಷೆ ಬರೆದು ಫಲಿತಾಂಶಕ್ಕಾಗಿ ಕಾಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮರು ಪರೀಕ್ಷೆ ನಡೆಸುವುದರಿಂದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿದೆ. ಇಂತಹ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಪ್ರಶ್ನೆಪತ್ರಿಕೆ ಸೋರಿಕೆ ಆಗದಂತೆ ಕೇಂದ್ರ ಸರ್ಕಾರ ಮುತುವರ್ಜಿ ವಹಿಸಬೇಕು’ ಎಂದು ಕುಪ್ಮ ಅಧ್ಯಕ್ಷ ಡಾ.ಎಂ.ಮೋಹನ್ ಆಳ್ವ ಮತ್ತು ಕಾರ್ಯದರ್ಶಿ ಪ್ರೊ.ನರೇಂದ್ರ ಎಲ್ ನಾಯಕ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನವದೆಹಲಿ: ಎನ್‌ಎಸ್‌ಯುಐ ಪ್ರತಿಭಟನೆ

ನವದೆಹಲಿ (ಪಿಟಿಐ): ನೀಟ್‌–ಯುಜಿ ಪ್ರಶ್ನೆಪತ್ರಿಕೆ ಸೋರಿಕೆಯನ್ನು ವಿರೋಧಿಸಿ, ಎನ್‌ಎಸ್‌ಯುಐ ಶಾಸ್ತ್ರಿ ಭವನದ ಹೊರಗೆ ಮಂಗಳವಾರ ಪ್ರತಿಭಟನೆ ನಡೆಸಿತು.

ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಸಂಘಟನೆ ಎನ್‌ಎಸ್‌ಯುಐ ಸದಸ್ಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದು, ‘ಪ್ರಧಾನಿ ರಾಜಿ ಮಾಡಿಕೊಂಡರು, ಪ್ರಶ್ನೆ ಪತ್ರಿಕೆಯಲ್ಲಿ ರಾಜಿಯಾಗಿದೆ’, ‘ಪತ್ರಿಕೆ ಸೋರಿಕೆ, ಮೋದಿ ಸರ್ಕಾರ ದುರ್ಬಲ’ ಮತ್ತು ‘ವೈದ್ಯರ ಪದವಿ ಮಾರಾಟಕ್ಕಿದೆ’ ಎಂಬ ಫಲಕ ಹಿಡಿದು ಪ್ರತಿಭಟಿಸಿದರು.

ಶಾಸ್ತ್ರಿ ಭವನದ ಹೊರಗೆ ಭಾರೀ ಬ್ಯಾರಿಕೇಡ್‌ಗಳು ಮತ್ತು ಪೊಲೀಸರ ಭದ್ರತೆಯ ನಡುವೆಯೂ ಪ್ರತಿಭಟನಕಾರರು, ‘ವಿದ್ಯಾರ್ಥಿಗಳ ಮೇಲಿನ ದಬ್ಬಾಳಿಕೆ ನಿಲ್ಲಿಸಿ’ ಎಂಬ ಘೋಷಣೆಗಳನ್ನು ಕೂಗಿದರು.

‘ನೀಟ್ ಪರೀಕ್ಷಾ ಪ್ರಕ್ರಿಯೆಯಲ್ಲಿ ದೊಡ್ಡ ಪ್ರಮಾಣದ ಅಕ್ರಮಗಳು ಮತ್ತು ಲೋಪಗಳು ನಡೆದಿವೆ ಎಂಬುದು ಪರೀಕ್ಷೆಯ ರದ್ದತಿಯೇ ಸಾಬೀತುಪಡಿಸುತ್ತದೆ. ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ರಕ್ಷಿಸುವಲ್ಲಿ ಕೇಂದ್ರ ಸರ್ಕಾರ ಪದೇ ಪದೇ ವಿಫಲವಾಗುತ್ತಿದೆ’ ಎಂದು ಎನ್‌ಎಸ್‌ಯುಐ ಆರೋಪಿಸಿದೆ.



ನವದೆಹಲಿಯ ಶಾಸ್ತ್ರಿ ಭವನದ ಹೊರಗೆ ಎನ್‌ಎಸ್‌ಯುಐ ಸದಸ್ಯರು ಮಂಗಳವಾರ ಪ್ರತಿಭಟನೆ ನಡೆಸಿದರು ಪಿಟಿಐ ಚಿತ್ರ

ಶೃಂಗೇರಿ ಕ್ಷೇತ್ರದ ವಿಚಾರದಲ್ಲಿ ‘ಸುಪ್ರೀಂ’ ಆದೇಶ ಪಾಲನೆ: ಯು.ಟಿ. ಖಾದರ್

ಮೈಸೂರು: ‘ಶೃಂಗೇರಿ ವಿಧಾನಸಭಾ ಕ್ಷೇತ್ರದ ಮರು ಮತ ಎಣಿಕೆ ಫಲಿತಾಂಶದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಆದೇಶ ಪಾಲಿಸಲಾಗುವುದು’ ಎಂದು ವಿಧಾನಸಭೆ ಸ್ಪೀಕರ್ ಯು.ಟಿ.ಖಾದರ್ ಹೇಳಿದರು.

ಇಲ್ಲಿ ಮಂಗಳವಾರ ಪತ್ರಕರ್ತರಿಗೆ ಪ್ರತಿಕ್ರಿಯೆ ನೀಡಿದ ಅವರು ‘ಮರು ಮತ ಎಣಿಕೆ ಫಲಿತಾಂಶಕ್ಕೆ ನ್ಯಾಯಾಲಯ ತಡೆ ನೀಡಿರುವ ಕಾರಣ ಶಾಸಕರಾಗಿ ರಾಜೇಗೌಡರೇ ಮುಂದುವರಿಯುತ್ತಾರೆ. ನಿಯಮಗಳ ಪ್ರಕಾರ ಅವರು ಮತ್ತೊಮ್ಮೆ ಪ್ರಮಾಣವಚನ ಸ್ವೀಕರಿಸಬೇಕಾಗುತ್ತದೆ. ಅದಕ್ಕಾಗಿ ಅವರು ಸಮಯ ಕೇಳಿದ್ದು, ಸದ್ಯದಲ್ಲೇ ಅವಕಾಶ ನೀಡುತ್ತೇನೆ’ ಎಂದರು.

ಮೀಸಲಾತಿ ಹೆಚ್ಚಿಸಲು ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸಿ: ಸಿದ್ದರಾಮಯ್ಯ

ಕೇಂದ್ರಕ್ಕೆ ನಿಯೋಗ ಕರೆದೊಯ್ಯುವ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಯ ಒಟ್ಟು ಪ್ರಮಾಣವನ್ನು ಶೇ 56ರಷ್ಟಕ್ಕೆ ಹೆಚ್ಚಿಸಿ, ಸಂವಿಧಾನದ 9ನೇ ಷೆಡ್ಯೂಲ್‌ನಲ್ಲಿ ಸೇರಿಸುವಂತೆ ಒತ್ತಾಯಿಸಲು ಪ್ರಧಾನಿ ಬಳಿಗೆ ಸರ್ವಪಕ್ಷ ಸದಸ್ಯರ ನಿಯೋಗ ಕರೆದೊಯ್ಯಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭರವಸೆ ನೀಡಿದರು.

ಕರ್ನಾಟಕ ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆಯು ಮಾಜಿ ಸಂಸದ ವಿ.ಎಸ್. ಉಗ್ರಪ್ಪ ನೇತೃತ್ವದಲ್ಲಿ ಸಿದ್ದರಾಮಯ್ಯ ಅವರನ್ನು ಮಂಗಳವಾರ ಭೇಟಿ ಮಾಡಿತ್ತು. ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ 17 ಮತ್ತು ಶೇ 7ಕ್ಕೆ ಹೆಚ್ಚಿಸುವ ಸಲುವಾಗಿ, ಒಟ್ಟಾರೆ ಮೀಸಲಾತಿ ಪ್ರಮಾಣವನ್ನು ಶೇ 56ಕ್ಕೆ ಹೆಚ್ಚಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ತನ್ನಿ’ ಎಂದು ಈ ವೇಳೆ ಮನವಿ ಮಾಡಿತ್ತು.



ವಾಲ್ಮೀಕಿ ಸಮುದಾಯದ ಪ್ರತಿನಿಧಿಗಳ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಚರ್ಚಿಸಿತು

ನಿಯೋಗದ ಜತೆಗೆ ಚರ್ಚಿಸಿದ ಸಿದ್ದರಾಮಯ್ಯ ಅವರು, ‘ಈ ಕುರಿತು ಕೇಂದ್ರಕ್ಕೆ ಈಗಾಗಲೇ ಪ್ರಸ್ತಾವ ಕಳುಹಿಸಲಾಗಿದೆ. ಈಗ ಮತ್ತೆ ಸಂಬಂಧಿತರ ಸಭೆ ಕರೆದು, ಪ್ರಧಾನಿ ಮತ್ತು ಕೇಂದ್ರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ಸಚಿವರನ್ನು ಭೇಟಿ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ’ ಎಂದು ಹೇಳಿದರು ಎಂದು ಮೂಲಗಳು ತಿಳಿಸಿವೆ.

ಸಂಬಂಧಪಟ್ಟ ಸಚಿವರು, ಶಾಸಕರ ಸಭೆಯನ್ನು ಕರೆಯಲು ಮತ್ತು ಮೀಸಲಾತಿ ವಿಚಾರದಲ್ಲಿ ನ್ಯಾಯಾಲಯದಲ್ಲಿ ಇರುವ ತಡೆಯನ್ನು ತೆರವು ಮಾಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಿ ಎಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸೂಚಿಸಿದರು ಎಂದು ಹೇಳಿವೆ.

ಸಂಜಯ ಕುಮಾರ ಸ್ವಾಮೀಜಿ, ರಾಮಲಿಂಗೇಶ್ವರ ಸ್ವಾಮೀಜಿ, ಈಶ್ವರಾನಂದ ಸ್ವಾಮೀಜಿ, ಪ್ರಕಾಶ ಸ್ವಾಮೀಜಿ, ಶಿವಾನಂದ ಸ್ವಾಮೀಜಿ, ಸಮಾನ ಮನಸ್ಕರ ವೇದಿಕೆಯ ರಾಜಪ್ಪ, ರಾಜಣ್ಣ ಟಿ., ರೇವತಿ, ಸಣ್ಣ ನಾಯಕ್, ರಾಧಾಕೃಷ್ಣ ಪಲ್ಲಕ್ಕಿ, ಪಂಪಾಪತಿ, ತುಳಸೀರಾಂ ಟಿ.ಆರ್., ಮಾರೆಪ್ಪ ನಾಯಕ್, ಶರಣು ನಾಯಕ್ ನಿಯೋಗದಲ್ಲಿದ್ದರು.

ಜನಜಾಗೃತಿಗೆ ತೀರ್ಮಾನ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸಮುದಾಯಕ್ಕೆ ಹೆಚ್ಚಳ ಮಾಡಿದ್ದ ಮೀಸಲಾತಿ ಪ್ರಮಾಣವನ್ನು ಕಾಂಗ್ರೆಸ್ ಸರ್ಕಾರ ರದ್ದು ಮಾಡಿರುವುದನ್ನು ಖಂಡಿಸಿ ಜನಜಾಗೃತಿ ಮೂಡಿಸಲು ತೀರ್ಮಾನಿಸಲಾಗಿದೆ ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ತಿಳಿಸಿದರು.

ತಮ್ಮ ನಿವಾಸದಲ್ಲಿ ಮಂಗಳವಾರ ನಡೆದ ಬಿಜೆಪಿಯ ಎಸ್‌ಸಿ–ಎಸ್‌ಟಿ ಮುಖಂಡರ ಸಭೆಯ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಮೀಸಲಾತಿ ಹೆಚ್ಚಳದ ಕುರಿತು ಸಮ್ಮಿಶ್ರ ಸರ್ಕಾರದ ಅವಧಿಯಲ್ಲೇ ನ್ಯಾಯಮೂರ್ತಿ ನಾಗಮೋಹನ್‌ದಾಸ್ ಅವರ ವರದಿ ಬಂದಿತ್ತು. ಆ ಬಳಿಕ ನಾನು ಮುಖ್ಯಮಂತ್ರಿ ಆಗಿದ್ದಾಗ ಎಸ್‌ಸಿ ಸಮುದಾಯಕ್ಕೆ ಶೇ 15ರಿಂದ ಶೇ 17ಕ್ಕೂ ಹಾಗೂ ಎಸ್‌ಟಿ ಸಮುದಾಯಕ್ಕೆ ಶೇ 3ರಿಂದ ಶೇ 7ಕ್ಕೂ ಮೀಸಲಾತಿ ಹೆಚ್ಚಿಗೆ ಮಾಡಿದ್ದೆ. ಇದರಿಂದ ಈ ಸಮುದಾಯದ ವಿದ್ಯಾರ್ಥಿಗಳಿಗೆ ಅನುಕೂಲವಾಗಿತ್ತು’ ಎಂದು ಹೇಳಿದರು.

‘ಕಾಂಗ್ರೆಸ್ ಸರ್ಕಾರ ಈಗ ಸುಪ್ರೀಂ ಕೋರ್ಟ್ ಆದೇಶ, ನಾಗಮೋಹನ್ ದಾಸ್ ವರದಿ, ಜೆ.ಸಿ.ಮಾಧುಸ್ವಾಮಿ ಸಮಿತಿ ವರದಿ ಇವುಗಳಲ್ಲಿ ಯಾವುದನ್ನೂ ಜಾರಿ ಮಾಡದೇ ಗೊಂದಲ ಸೃಷ್ಟಿ ಮಾಡಿದೆ. ಡಿಸೆಂಬರ್‌ನಲ್ಲಿ ನಡೆದ ಬೆಳಗಾವಿ ಅಧಿವೇಶನದಲ್ಲಿ ಎಸ್‌ಸಿ–ಎಸ್‌ಟಿ ಮೀಸಲಾತಿ ಪ್ರಮಾಣವನ್ನು ಕ್ರಮವಾಗಿ ಶೇ 17 ಮತ್ತು ಶೇ 7ಕ್ಕೆ ಹೆಚ್ಚಿಸುವುದಾಗಿ ಮಸೂದೆ ಅಂಗೀಕಾರ ಮಾಡಿದ್ದಾರೆ. ಇನ್ನೊಂದು ಕಡೆ ಈ ಸಮುದಾಯಗಳಿಗೆ ಶೇ 15 ಮತ್ತು ಶೇ 3ರಷ್ಟು ಮೀಸಲಾತಿ ಜಾರಿ ಮಾಡಿದ್ದಾರೆ. ಈ ವೈರುಧ್ಯವನ್ನು ದಲಿತ ಸಮುದಾಯಗಳು ಅರ್ಥ ಮಾಡಿಕೊಳ್ಳಬೇಕು. ಈ ಸರ್ಕಾರಕ್ಕೆ ಬದ್ಧತೆ ಇಲ್ಲದಿರುವುದನ್ನು ಜನರಿಗೆ ತಿಳಿಸುವ ಕೆಲಸ ಮಾಡುತ್ತೇವೆ’ ಎಂದರು.

ಸುವೇಂದು ಆಪ್ತನ ಹತ್ಯೆ ಪ್ರಕರಣ ಸಿಬಿಐಗೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರ ಆಪ್ತ ಚಂದ್ರನಾಥ್ ರಥ್ ಅವರ ಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವರ್ಗಾಯಿಸಲಾಗಿದೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಸಿಬಿಐ, ರಾಜ್ಯ ಪೊಲೀಸರಿಂದ ತನಿಖೆಯನ್ನು ವಹಿಸಿಕೊಂಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯ ಸರ್ಕಾರದ ಮನವಿಯ ಮೇರೆಗೆ ಸಿಬಿಐ ಈ ಕ್ರಮ ಕೈಗೊಂಡಿದೆ ಎಂದು ಅವರು ಹೇಳಿದ್ದಾರೆ.

ಸಿಬಿಐನ ದೆಹಲಿ ವಿಶೇಷ ಅಪರಾಧ ಘಟಕದ ಡಿಐಜಿ ನೇತೃತ್ವದಲ್ಲಿ ಏಳು ಸದಸ್ಯರ ವಿಶೇಷ ತನಿಖಾ ತಂಡವನ್ನು ರಚಿಸಲಾಗಿದೆ. ಇದರಲ್ಲಿ ಸಿಬಿಐನ ವಿವಿಧ ಘಟಕಗಳಿಂದ ಆಯ್ಕೆ ಮಾಡಲಾದ ಕೆಲವು ಅತ್ಯುತ್ತಮ ಅಧಿಕಾರಿಗಳು ಇದ್ದಾರೆ. ಸಿಬಿಐನ ಕೋಲ್ಕತ್ತ ವಲಯದ ಅಧಿಕಾರಿಗಳು ಕೂಡಾ ತನಿಖೆಗಾಗಿ ತಂಡವನ್ನು ಸೇರಲಿದ್ದಾರೆ. ಈ ತಂಡವು ಸಿಬಿಐ ಕೋಲ್ಕತ್ತ ವಲಯದ ಜಂಟಿ ನಿರ್ದೇಶಕರಿಗೆ ವರದಿ ಮಾಡಿಕೊಳ್ಳಲಿದೆ ಎಂದು ಅವರು ಹೇಳಿದ್ದಾರೆ.


ಚಂದ್ರನಾಥ್ ರಥ್

ಸಿಬಿಐ ತಂಡ ಈಗಾಗಲೇ ಅಪರಾಧ ಸ್ಥಳ ತಲುಪಿದ್ದು, ತನಿಖೆ ಪ್ರಾರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹತ್ಯೆಯ ತನಿಖೆಗಾಗಿ ರಾಜ್ಯ ಸರ್ಕಾರ ರಚಿಸಿದ್ದ ವಿಶೇಷ ತನಿಖಾ ತಂಡವು (ಎಸ್‌ಐಟಿ) ಇಬ್ಬರು ಆರೋಪಿಗಳಾದ ಮನೋಜ್ ಮಿಶ್ರಾ ಮತ್ತು ವಿಕ್ಕಿ ಮೌರ್ಯ ಅವರನ್ನು ಬಿಹಾರದ ಬಕ್ಸರ್‌ನಲ್ಲಿ ಬಂಧಿಸಿತ್ತು. ಮತ್ತೊಬ್ಬ ಆರೋಪಿ ರಾಜ್ ಸಿಂಗ್ ಅವರನ್ನು ಉತ್ತರ ಪ್ರದೇಶದ ಬಲಿಯಾದಲ್ಲಿ ಬಂಧಿಸಲಾಗಿತ್ತು.

ಮೇ 6ರಂದು ಚಂದ್ರನಾಥ್ ರಥ್ ಅವರನ್ನು ಮಧ್ಯಮಗ್ರಾಮದಲ್ಲಿ ಗುಂಡಿಕ್ಕಿ ಹತ್ಯೆ ಮಾಡಲಾಗಿತ್ತು. ಅದಕ್ಕೂ ಎರಡು ದಿನಗಳ ಹಿಂದೆ ಪಶ್ಚಿಮ ಬಂಗಾಳದ ಚುನಾವಣಾ ಫಲಿತಾಂಶ ಪ್ರಕಟವಾಗಿತ್ತು.

‘ಮಗನನ್ನು ಸಿಲುಕಿಸಲಾಗಿದೆ’

ಬಲಿಯಾ (ಉತ್ತರ ಪ್ರದೇಶ) (ಪಿಟಿಐ): ತಮ್ಮ ಮಗನನ್ನು ಪ್ರಕರಣದಲ್ಲಿ ಸಿಲುಕಿಸಲಾಗಿದೆ ಎಂದು ಪ್ರಕರಣದ ಆರೋಪಿ ರಾಜ್ ಸಿಂಗ್ ಅವರ ತಾಯಿ ಜಮ್‌ವಂತಿ ಸಿಂಗ್ ಆರೋಪಿಸಿದ್ದಾರೆ.

‘ನಾವು ಅಯೋಧ್ಯೆಯಿಂದ ಹಿಂತಿರುಗುತ್ತಿದ್ದಾಗ ನನ್ನನ್ನು ಮತ್ತು ಮಗನನ್ನು ಪೊಲೀಸರು ವಶಕ್ಕೆ ಪಡೆದು, ಮಗನನ್ನು ಕೋಲ್ಕತ್ತಕ್ಕೆ ವಿಮಾನದ ಮೂಲಕ ಕರೆದೊಯ್ದಿದ್ದಾರೆ’ ಎಂದಿದ್ದಾರೆ.

ಮದ್ಯ ತಯಾರಕರ ಜತೆ ಅಬಕಾರಿ ಸಚಿವ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಅಬಕಾರಿ ನೀತಿ ಜಾರಿಯ ಬೆನ್ನಲ್ಲೇ ಅಬಕಾರಿ ಸಚಿವ ಆರ್‌.ಬಿ.ತಿಮ್ಮಾಪುರ ಅವರು ಡಿಸ್ಟಿಲರಿ ಮಾಲೀಕರ ಸಂಘಟನೆಯ ಪ್ರತಿನಿಧಿಗಳ ಜತೆ ಮಂಗಳವಾರ ಸಭೆ ನಡೆಸಿದರು.

ಮದ್ಯದ ಬೆಲೆ ನಿಗದಿ ಅಧಿಕಾರವನ್ನು ಸರ್ಕಾರವು ತ್ಯಜಿಸಿರುವುದರ ಕುರಿತಾಗಿ ಮದ್ಯ ತಯಾರಕರು ಮೆಚ್ಚುಗೆ ವ್ಯಕ್ತಪಡಿಸಿದರು. ಪರವಾನಗಿ ನವೀಕರಣ, ಲೇಬಲ್ ಪರಿಶೀಲನೆ ಪ್ರಕ್ರಿಯೆಗಳನ್ನು ಸಂಪೂರ್ಣವಾಗಿ ಆನ್‌ಲೈನ್‌ಗೊಳಿಸಲಾಗಿದ್ದು, ಈ ಬಗ್ಗೆ ಇದ್ದ ಕೆಲವು ಸಂದೇಹಗಳನ್ನು ಪ್ರತಿನಿಧಿಗಳು ಪರಿಹರಿಸಿಕೊಂಡರು ಎಂದು ಮೂಲಗಳು ತಿಳಿಸಿವೆ.


ಆರ್‌.ಬಿ. ತಿಮ್ಮಾಪುರ

ಮದ್ಯದಲ್ಲಿರುವ ಆಲ್ಕೋಹಾಲ್ ಪ್ರಮಾಣದ ಆಧಾರದಲ್ಲಿ ಅಬಕಾರಿ ಸುಂಕ ವಿಧಿಸುವ ಪದ್ಧತಿಯು ಇದೇ 11ರಿಂದ ಜಾರಿಗೆ ಬಂದಿದೆ. ಹಳೆಯ ಅಬಕಾರಿ ಸುಂಕ ನೀತಿ ಜಾರಿಯಲ್ಲಿದ್ದಾಗ ತಯಾರಾದ ಮದ್ಯವನ್ನು ಮಾರಾಟ ಮಾಡುವ ಬಗ್ಗೆ ಇದ್ದ ಗೊಂದಲಗಳ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತು ಎಂದು ಮಾಹಿತಿ ನೀಡಿವೆ.

ಕುಕ್ಕೆ: ದೇವರ ದರ್ಶನ ಸಮಯದಲ್ಲಿ ಬದಲಾವಣೆ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆ ಸುಬ್ರಹ್ಮಣ್ಯ ದೇವಾಲಯದ ದೇವರ ದರ್ಶನದ ಸಮಯದಲ್ಲಿ ಅಲ್ಪ ಬದಲಾವಣೆ ಮಾಡಲಾಗಿದ್ದು, ಭಕ್ತರಿಗೆ ಹೆಚ್ಚಿನ ಸಮಯ ದರ್ಶನ ಸೌಲಭ್ಯ ಕಲ್ಪಿಸಲಾಗಿದೆ.

ಈ ಮೊದಲು ಮಧ್ಯಾಹ್ನ 1.30ರಿಂದ 3.30ರವರೆಗೆ ದರ್ಶನ ಸ್ಥಗಿತಗೊಳ್ಳುತ್ತಿತ್ತು. ಆಡಳಿತ ಮಂಡಳಿಯ ಹೊಸ ನಿರ್ಣಯದಂತೆ ಮಧ್ಯಾಹ್ನ 2ರಿಂದ 3ರವರೆಗೆ ಮಾತ್ರ ದರ್ಶನಕ್ಕೆ ಅವಕಾಶ ಇರುವುದಿಲ್ಲ.

ಹೊಸ ವ್ಯವಸ್ಥೆಯಂತೆ ಬೆಳಿಗ್ಗೆ 6.30ರಿಂದ ಮಧ್ಯಾಹ್ನ 2ರ ವರೆಗೆ, ಮಧ್ಯಾಹ್ನ 3ರಿಂದ ರಾತ್ರಿ 8.30ರವರೆಗೆ ನಿರಂತರ ದರ್ಶನ ವ್ಯವಸ್ಥೆ ಇರಲಿದೆ. ಮಹಾಮಂಗಳಾರತಿಯ ಸಮಯದಲ್ಲಿ ಮಾತ್ರ ಹಿಂದಿನಂತೆ ಅಲ್ಪಕಾಲ ದರ್ಶನ ಸ್ಥಗಿತಗೊಳ್ಳಲಿದೆ. ಈ ಪರಿಷ್ಕೃತ ದರ್ಶನ ವ್ಯವಸ್ಥೆ ಮೇ 10ರಿಂದಲೇ ಜಾರಿಗೆ ಬಂದಿದೆ ಎಂದು ದೇವಾಲಯದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಹಂಗಿನರಮನೆಗಿಂತ ವಿಂಗಡದ ಗುಡಿ ಲೇಸು, ಭಂಗಪಟ್ಟು ಉಣ್ಣುವ ಬಿಸಿ ಅನ್ನಕ್ಕಿಂತ ತಂಗಳು ಲೇಸು.

–ಸರ್ವಜ್ಞ

ಸಂಪಾದಕೀಯ

ಮಿತವ್ಯಯದ ಸಲಹೆ ಅಪಾಯಕರ ನೈತಿಕತೆ ಕೊರತೆಯ ಪ್ರಧಾನಿ ಕರೆ

ಮಿತವ್ಯಯಕ್ಕೆ ಸಂಬಂಧಿಸಿದಂತೆ ವಿವಿಧ ಕ್ರಮಗಳನ್ನು ಅನುಸರಿಸುವಂತೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಕರೆ ನೀಡಿದ್ದಾರೆ. ಈ ಮೂಲಕ, ಇಂಧನ ಮತ್ತು ವಿದೇಶಿ ವಿನಿಮಯಕ್ಕೆ ಸಂಬಂಧಿಸಿದ ತುರ್ತು ಪರಿಸ್ಥಿತಿಯನ್ನು ಪರೋಕ್ಷವಾಗಿ ಘೋಷಿಸಿದ್ದಾರೆ. ವಿದೇಶಿ ವಿನಿಮಯದ ಹೊರ ಹರಿವಿಗೆ ಕಾರಣವಾಗುವ ಸರಕುಗಳ ಆಮದನ್ನು ಕಡಿತಗೊಳಿಸುವ ಅವರ ಸಲಹೆಯ ಬಗ್ಗೆ ಸಾರ್ವತ್ರಿಕ ಸಮ್ಮತಿ ಇದೆ. ಆದರೆ, ಆ ಕರೆಯ ಹಿಂದಿನ ನೈತಿಕತೆ ಮತ್ತು ಸಮಯ ಪ್ರಶ್ನೆಗೆ ಕಾರಣವಾಗಿದೆ. ತೈಲದ ಬಿಕ್ಕಟ್ಟು ಈ ವಾರದ ಬೆಳವಣಿಗೆಯೇನಲ್ಲ. ಕಚ್ಚಾತೈಲ, ಎಲ್‌ಪಿಜಿ, ರಸಗೊಬ್ಬರ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜಿನ ಮೇಲೆ ಪರಿಣಾಮ ಬೀರುವ ಪಶ್ಚಿಮ ಏಷ್ಯಾದಲ್ಲಿನ ಯುದ್ಧ ಎರಡು ತಿಂಗಳ ಹಿಂದೆಯೇ ಆರಂಭವಾಗಿದೆ. ಇದರ ಪರಿಣಾಮವನ್ನು ಸಂಘರ್ಷದ ಆರಂಭದ ದಿನದಿಂದಲೂ ದೇಶ ಅನುಭವಿಸುತ್ತಿದೆ. ಆದರೆ, ವಾಣಿಜ್ಯ ಎಲ್‌ಪಿಜಿ ಹೊರತುಪಡಿಸಿ ಯಾವುದೇ ಪೆಟ್ರೋಲಿಯಂ ಉತ್ಪನ್ನದ ಬೆಲೆಯನ್ನು ಸರ್ಕಾರ ಹೆಚ್ಚು ಮಾಡಲಿಲ್ಲ. ಬೆಲೆ ಏರಿಸದಿರುವ ಸರ್ಕಾರದ ನಿಲುವಿಗೆ ಕೆಲವು ರಾಜ್ಯಗಳಲ್ಲಿ ನಡೆಯುತ್ತಿದ್ದ ವಿಧಾನಸಭಾ ಚುನಾವಣೆಗಳೇ ಕಾರಣವಾಗಿದ್ದುದು ಸ್ಪಷ್ಟ. ದೇಶದ ಹಿತಾಸಕ್ತಿಯ ಮೇಲೆ ರಾಜಕೀಯ ಮೇಲುಗೈ ಸಾಧಿಸಿದ್ದು ದುರದೃಷ್ಟಕರ. ಇತ್ತೀಚಿನ ವಾರಗಳಲ್ಲಿ ನರೇಂದ್ರ ಮೋದಿ ಅವರು ನೂರಾರು ವಾಹನಗಳೊಂದಿಗೆ ರೋಡ್ ಶೋಗಳನ್ನು ನಡೆಸಿದ್ದಾರೆ. ಮಿತವ್ಯಯದ ಕರೆ ನೀಡಿದ ನಂತರವೂ ಒಂದು ರೋಡ್ ಶೋ ನಡೆಸಿದ್ದಾರೆ. ಈ ಕಾರಣದಿಂದಲೂ ಅವರ ಕರೆ ಪ್ರಶ್ನಾರ್ಹ. ನೈತಿಕತೆಯ ಕೊರತೆ ಹಾಗೂ ವಿರೋಧಾಭಾಸದ ನಿಲುವನ್ನು ಅವರ ಕರೆ ಒಳಗೊಂಡಿದೆ.

ಕಚೇರಿಯ ಕೆಲಸಗಳನ್ನು ಮನೆಯಿಂದಲೇ ನಿರ್ವಹಿಸುವಂತೆ (ವರ್ಕ್ ಫ್ರಂ ಹೋಂ), ಸಾರ್ವಜನಿಕ ವಾಹನಗಳನ್ನು ಬಳಸುವಂತೆ, ಅನಗತ್ಯವಾದ ವಿದೇಶಿ ಪ್ರವಾಸಗಳನ್ನು ಹಾಗೂ ಚಿನ್ನದ ಖರೀದಿಯನ್ನು ಮುಂದೂಡುವಂತೆ ಪ್ರಧಾನಿ ನಾಗರಿಕರನ್ನು ಕೇಳಿಕೊಂಡಿದ್ದಾರೆ. ‘ನಾಗರಿಕ ಸತ್ಯಾಗ್ರಹ’ದ ರೂಪದಲ್ಲಿ ಈ ಕರೆ ಆಕರ್ಷಕವಾಗಿದೆ. ಆದರೆ, ರಾಜಕಾರಣ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಅಪ್ರಿಯ ಪ್ರಶ್ನೆಗಳನ್ನು ಮಿತವ್ಯಯದ ಕರೆ ಮರೆಮಾಚುವಂತಿದೆ. ಇಂಧನದ ಲಭ್ಯತೆ ಹಾಗೂ ಆರ್ಥಿಕತೆಯ ಬಗ್ಗೆ ಆತಂಕ ಪಡುವ ಅಗತ್ಯವಿಲ್ಲ ಎಂದು ಇಲ್ಲಿಯವರೆಗೂ ಕೇಂದ್ರ ಸರ್ಕಾರ ಭರವಸೆ ನೀಡಿಕೊಂಡೇ ಬಂದಿದೆ. ಶೇ 70ರಷ್ಟು ಕಚ್ಚಾತೈಲದ ಸರಬರಾಜು ಹೊರ್ಮುಜ್ ಜಲಸಂಧಿಯ ಮೂಲಕ ನಡೆಯುತ್ತಿಲ್ಲ ಮತ್ತು ಇಂಧನ ಪೂರೈಕೆ ಸುರಕ್ಷಿತವಾಗಿದೆ ಎಂದು ಸರ್ಕಾರ ಹೇಳಿಕೊಂಡು ಬಂದಿದೆ. ಈಗ ಇದ್ದಕ್ಕಿದ್ದಂತೆ ಪ್ರಧಾನಿ ಅವರು ನೀಡಿರುವ ಕರೆ, ಸರ್ಕಾರ ನಿರೀಕ್ಷಿಸದ ಅಥವಾ ಮುನ್ಸೂಚನೆ ನೀಡಲು ವಿಫಲವಾದ ಬಿಕ್ಕಟ್ಟಿಗೆ ಜನರನ್ನು ಸಿದ್ಧಗೊಳಿಸುವ ಪ್ರಯತ್ನದಂತೆ ಕಾಣಿಸುತ್ತಿದೆ. ತಮ್ಮ ಕರೆಗೆ ಬೆಂಬಲದ ರೂಪದಲ್ಲಿ ಸಾಂಕ್ರಾಮಿಕ ಪಿಡುಗಿನ ಪರಿಸ್ಥಿತಿಯನ್ನು ಅವರು ಉಲ್ಲೇಖಿಸಿದ್ದಾರೆ. ಪ್ರಧಾನಿ ನೀಡಿರುವ ಕೆಲವು ಸಲಹೆಗಳು ಜನಜೀವನ ಮತ್ತು ದೇಶದ ಆರ್ಥಿಕತೆಯ ಮೇಲೆ ಗಂಭೀರ ಪರಿಣಾಮ ಬೀರಲಿವೆ. ಈ ಬಾರಿಯ ಮುಂಗಾರು ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಇರುವುದಿಲ್ಲ ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಮುಂಗಾರಿನ ಕೊರತೆಯ ಜೊತೆಗೆ, ಪ್ರಧಾನಿ ಸಲಹೆಯಂತೆ ರಸಗೊಬ್ಬರ ಬಳಕೆಯನ್ನೂ ಕಡಿಮೆ ಮಾಡಿದರೆ ಕೃಷಿ ಇಳುವರಿ ಗಂಭೀರ ಪ್ರಮಾಣದಲ್ಲಿ ಕುಸಿಯುತ್ತದೆ. ಮನೆಯಿಂದಲೇ ಕೆಲಸ ಮಾಡುವ ಪದ್ಧತಿ ಈಗಾಗಲೇ ಅಸ್ತಿತ್ವದಲ್ಲಿದೆ; ಬಹುಶಃ ಅದನ್ನು ಮತ್ತಷ್ಟು ವಿಸ್ತರಿಸುವುದು ಸಾಧ್ಯವಾಗದಿರಬಹುದು. ರೂಪಾಯಿಯಂತೂ ಯುದ್ಧಕ್ಕೆ ಮೊದಲೇ ದುರ್ಬಲಗೊಳ್ಳಲು ಆರಂಭಿಸಿತ್ತು, ಆ ಕುಸಿತಕ್ಕೆ ಬೇರೆ ಕಾರಣಗಳೂ ಇದ್ದವು.

ಸರಕು ಮತ್ತು ಸೇವೆಯ ಬಳಕೆ ಹೆಚ್ಚಾಗುವುದಕ್ಕೂ ಆರ್ಥಿಕತೆ ಗಟ್ಟಿಯಾಗಿರುವುದಕ್ಕೂ ಸಂಬಂಧ ಇರುವ ಸಮಯದಲ್ಲಿ, ಮಿತವ್ಯಯದ ಕರೆಯನ್ನು ಪ್ರಧಾನಿ ಜನರಿಗೆ ನೀಡಿದ್ದಾರೆ. ಬಳಕೆಯಲ್ಲಿನ ಇಳಿಕೆಯು ವ್ಯತಿರಿಕ್ತ ಪರಿಣಾಮಗಳನ್ನು ಬೀರಬಹುದು ಹಾಗೂ ನಕಾರಾತ್ಮಕ ಪರಿಣಾಮಗಳನ್ನು ಉಂಟುಮಾಡಬಹುದು. ಆರ್ಥಿಕತೆಯಲ್ಲಿ ಸಮಸ್ಯೆ ಇದೆ ಎನ್ನುವುದನ್ನು ನಿರಾಕರಿಸಿ, ಸಮಸ್ಯೆ ಬೆಳೆಯುವುದಕ್ಕೆ ಅನುವು ಮಾಡಿಕೊಟ್ಟು, ಈಗ ಸಮಸ್ಯೆಯಿದೆ ಎಂದು ಸರ್ಕಾರ ಹೇಳುತ್ತಿದೆ ಹಾಗೂ ಅದನ್ನು ಪರಿಹರಿಸಲು ಜನರಿಗೆ ಕರೆ ನೀಡುತ್ತಿದೆ. ನೈತಿಕತೆ ಒತ್ತಟ್ಟಿಗಿರಲಿ, ಇದು ಜವಾಬ್ದಾರಿಯುತ ನಡವಳಿಕೆಯೂ ಅಲ್ಲ.



ದೇಶದ ಜನರು ಮಿತವ್ಯಯದ ಕ್ರಮಗಳನ್ನು ಅನುಸರಿಸುವಂತೆ ಪ್ರಧಾನಿ ಮೋದಿ ನೀಡಿರುವ ಕರೆ, ನೈತಿಕತೆಯ ಕೊರತೆ ಮತ್ತು ವಿರೋಧಾಭಾಸಗಳಿಂದ ಕೂಡಿದೆ.

ತಂತ್ರಜ್ಞಾನ ಎಷ್ಟು ಮಾನವೀಯ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

> ಇಡೀ ವಿಶ್ವ ತಂತ್ರಜ್ಞಾನದ ಪ್ರಭೆಗೆ ತನ್ನನ್ನು ಒಡ್ಡಿಕೊಂಡಿರುವಾಗ, ತಂತ್ರಜ್ಞಾನಕ್ಕೂ ಮನುಷ್ಯ ಲೋಕದ ಸಂವೇದನೆಗಳಿಗೂ ಇರುವ ಸಂಬಂಧದ ಜಿಜ್ಞಾಸೆ ಮುನ್ನೆಲೆಗೆ ಬಂದಿದೆ. ತಂತ್ರಜ್ಞಾನವು ಮನುಷ್ಯಸ್ನೇಹಿ ಹಾಗೂ ಪರಿಸರಸ್ನೇಹಿ ಆಗಿರುವುದು ಇಂದಿನ ತುರ್ತು. ಆಗಿದೆಯೇ ಎನ್ನುವುದು ಬಗೆಹರಿಯದ ಪ್ರಶ್ನೆ.

ತಂತ್ರಜ್ಞಾನ ಎನ್ನುವುದು ಬರೀ ಯಂತ್ರಗಳ ಆವಿಷ್ಕಾರವೆ ಅಥವಾ ಅದು ಮಾನವ ಸಂವೇದನೆಗಳ ವಿಸ್ತರಣೆಯೆ? ಅತಿ ವೇಗದಲ್ಲಿ ದಾಂಗುಡಿಯಿಡುತ್ತಿರುವ ಅತ್ಯಾಧುನಿಕ ತಂತ್ರಜ್ಞಾನಗಳು ಮನುಷ್ಯತ್ವವನ್ನೇ ಮರೆಸುತ್ತಿವೆ ಎಂಬ ಅಭಿಪ್ರಾಯದ ಹಿನ್ನೆಲೆಯಲ್ಲಿ ಉದ್ಭವವಾಗಿರುವ ಪ್ರಶ್ನೆಯಿದು.

‘ಎಲ್ಲರನ್ನೂ ಒಳಗೊಳ್ಳುವ ಬೆಳವಣಿಗೆಗಾಗಿ ತುಡಿಯುವ ಜವಾಬ್ದಾರಿಯುತ ನಾವೀನ್ಯತೆ ಬೇಕು’ ಎಂಬ ಧ್ಯೇಯದ ಮೂಲಕ ತಾಂತ್ರಿಕ ಕ್ರಾಂತಿಯ ಮುಖಗಳನ್ನು ವಿಶ್ಲೇಷಿಸುವ ಪ್ರಯತ್ನ ಈಗ ಆಗಬೇಕಿದೆ. ಐದನೇ ಕೈಗಾರಿಕಾ ಕ್ರಾಂತಿಯ ಹಿಂಬೆಳಕಿನಲ್ಲಿ ನಮ್ಮ ನೆಲಮೂಲದ ಜ್ಞಾನ–ತಿಳಿವಳಿಕೆಗಳು ನಮ್ಮನ್ನು ಹೇಗೆಲ್ಲ ಉದ್ಧರಿಸಬಲ್ಲವು ಎಂಬುದನ್ನು ಯೋಚಿಸಿ ಯೋಜಿಸಬೇಕಿದೆ. ಇದು ಬರೀ ಸಾಧನೆಗಳ ಪ್ರದರ್ಶನವಾಗದೆ, ತಂತ್ರಜ್ಞಾನದ ಸರಿ–ತಪ್ಪುಗಳ ಪರಾಮರ್ಶೆಯೂ ಆಗಬೇಕು.

ಐದನೇ ಕೈಗಾರಿಕಾ ಕ್ರಾಂತಿಯು (ಇಂಡಸ್ಟ್ರಿ 5.0) ಸಂಪೂರ್ಣ ಸ್ವಯಂಚಾಲಿತ ವ್ಯವಸ್ಥೆಯಿಂದ ಮುಂದುವರಿದು, ಮಾನವ ಮತ್ತು ರೊಬೋಟ್ ನಡುವೆ ಸಹಯೋಗ ಬೇಕು ಮತ್ತು ಅದುವೇ ಜಗತ್ತಿಗೆ ಒಳ್ಳೆಯದು ಎಂದು ನಿರೂಪಿಸುತ್ತಿದೆ. ಸ್ಮಾರ್ಟ್ ಫ್ಯಾಕ್ಟರಿ ಮತ್ತು ಅತಿಯಾದ ಸಂಪರ್ಕದ ಮೇಲೆ ಕೇಂದ್ರೀಕರಿಸಿದ್ದ ಕಳೆದ ಕೈಗಾರಿಕಾ ಕ್ರಾಂತಿ (ಇಂಡಸ್ಟ್ರಿ 4.0)ಗಿಂತ ಭಿನ್ನವಾಗಿರುವ ಮತ್ತು ಮಾನವನ ಸೃಜನಶೀಲತೆಯನ್ನು ಹೆಚ್ಚಿಸಲು ತಂತ್ರಜ್ಞಾನವನ್ನು ಬಳಸಬೇಕೆಂದು ಪ್ರತಿಪಾದಿಸುವ ಇಂಡಸ್ಟ್ರಿ 5.0 ಕಾರ್ಮಿಕರನ್ನು ಉತ್ಪಾದನಾ ಪ್ರಕ್ರಿಯೆಯ ಕೇಂದ್ರಬಿಂದುವನ್ನಾಗಿ ಮಾಡುವ ಪ್ರಯತ್ನದಲ್ಲಿದೆ.

ಆರೋಗ್ಯ ಕ್ಷೇತ್ರದಲ್ಲಿ ಎಐ ಆಧಾರಿತ ರೋಗ ನಿರ್ಣಯವು ವೈದ್ಯರಿಗೆ ರೋಗಿಗಳೊಂದಿಗೆ ಹೆಚ್ಚು ಸಮಯ ಕಳೆಯಲು ಅವಕಾಶ ನೀಡುತ್ತಿರುವುದು ಮತ್ತು ಉತ್ಪಾದನಾ ವಲಯದಲ್ಲಿ ಪುನರಾವರ್ತಿತ ಹಾಗೂ ಅಪಾಯಕಾರಿ ಕೆಲಸಗಳನ್ನು ‘ಕೋಬೋಟ್ಸ್’ಗಳು ನಿರ್ವಹಿಸುತ್ತಿರುವುದು ಇದಕ್ಕೆ ಸಾಕ್ಷಿಯಾಗಿದೆ. ಈ ಕ್ರಾಂತಿಯು ಸೇವೆಗಳನ್ನು ದೇಶದ ಮೂಲೆ ಮೂಲೆಗೂ ತಲಪಿಸಬಹುದೆಂಬ ನಿರೀಕ್ಷೆಯಿದೆ.

ಪ್ರತಿಯೊಂದು ಕ್ರಾಂತಿಯೂ ತನ್ನದೇ ಆದ ಸವಾಲುಗಳನ್ನು ಒಡಲಲ್ಲಿಟ್ಟುಕೊಂಡೇ ಜನಿಸಿರುತ್ತದೆ. ಅದು ತ್ವರಿತ ಬದಲಾವಣೆಯ ನಕಾರಾತ್ಮಕ ಅಂಶಗಳನ್ನು ನಿರ್ಲಕ್ಷಿಸಬಾರದು. ಬದಲಾವಣೆಯ ವೇಗವು ಅತಿಯಾದಷ್ಟೂ ಅಸಮಾನತೆ ಹೆಚ್ಚಾಗುತ್ತದೆ ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಲು ಸಂಪನ್ಮೂಲಗಳಿಲ್ಲದ ಸಮುದಾಯಗಳನ್ನು ನಿರ್ದಾಕ್ಷಿಣ್ಯವಾಗಿ ಹಿಂದೆ ತಳ್ಳಿಬಿಡುತ್ತದೆ. ಸದ್ಯದ ಇಂಡಸ್ಟ್ರಿ 5.0 ಸಿದ್ಧಾಂತವು ಮಾನವ ಕೇಂದ್ರಿತವಾಗಿದ್ದರೂ, ದತ್ತಾಂಶ ಗೋಪ್ಯತೆ ಮತ್ತು ಕೃತಕ ಬುದ್ಧಿಮತ್ತೆಯ ನೈತಿಕ ಬಳಕೆಗೆ ಸಂಬಂಧಿಸಿದಂತೆ ದೊಡ್ಡ ಸವಾಲುಗಳನ್ನು ಒಡ್ಡುತ್ತಲೇ ಇದೆ. ತಂತ್ರಜ್ಞಾನದ ಮೇಲಿನ ಅತಿಯಾದ ಅವಲಂಬನೆಯು ಸಾಂಪ್ರದಾಯಿಕ ಕರಕೌಶಲಗಳನ್ನು ನಾಶ ಮಾಡಬಹುದು ಮತ್ತು ವಿಮರ್ಶಾತ್ಮಕ ಚಿಂತನೆಯಿಲ್ಲದ ಸಮಾಜವನ್ನು ರೂಪಿಸಿ ಸಾಮಾಜಿಕ ವೈಫಲ್ಯಗಳಿಗೆ ಕಾರಣವಾಗಬಹುದು. ಎಲ್ಲವನ್ನೂ ಹಣ–ವಿದೇಶಿ ವಿನಿಮಯ ದರದ ದೃಷ್ಟಿಯಲ್ಲಿ ನೋಡುವವರಿಗೆ ಇದು ಅರ್ಥವಾಗುವುದಿಲ್ಲ.

ಇ–ತ್ಯಾಜ್ಯದಿಂದ ಹಿಡಿದು ದತ್ತಾಂಶ ಕೇಂದ್ರಗಳ ಅತಿಯಾದ ಇಂಧನ–ನೀರಿನ ಬಳಕೆಯವರೆಗೆ ಈ ಹೈಪರ್ ಕನೆಕ್ಟೆಡ್ ಜಗತ್ತನ್ನು ನಿರ್ವಹಿಸಲು ಆಗುತ್ತಿರುವ ಪರಿಸರ ನಾಶವು ಸುಸ್ಥಿರತೆಯ ಹಾದಿಗೆ ದೊಡ್ಡ ಅಡ್ಡಿಯಾಗುತ್ತಿದೆ. ಇದು ತಿಳಿದಿದ್ದರೂ ಅದನ್ನು ನಿರ್ಲಕ್ಷಿಸಿ ನಡೆಯುತ್ತಿರುವ ಸರ್ಕಾರಿ ಯೋಜನೆಗಳು ಯಾರ ಒಳಿತಿಗಾಗಿ? ನೀರು, ವಿದ್ಯುತ್ತನ್ನು ಆಪೋಶನ ತೆಗೆದುಕೊಳ್ಳುವ ದತ್ತಾಂಶ ಕೇಂದ್ರಗಳು ಯಾರಿಗಾಗಿ? ಬೆಟ್ಟಗಳಲ್ಲಿ ಸುರಂಗ ಕೊರೆಯುವ ಅತ್ಯುನ್ನತ ತಂತ್ರಜ್ಞಾನ ಲಭ್ಯವಿದೆ ಎಂಬ ಕಾರಣಕ್ಕೆ ನಿಸರ್ಗದತ್ತ ಮಳೆಕಾಡಿನ ಘಟ್ಟಪ್ರದೇಶವನ್ನು ಕೊರೆಯಲು ಸಿದ್ಧವಾಗಿರುವುದು ಯಾವ ಸಾಧನೆಗಾಗಿ? ಯಂತ್ರಬಲವಿದೆ ಎಂದು ನದಿಗಳ ದಿಕ್ಕನ್ನೇ ತಿರುಗಿಸುವುದು ಸರಿಯೆ?

ಇದುವರೆಗಿನ ಬಹುಪಾಲು ತಾಂತ್ರಿಕ ಸಾಧನೆಗಳು ಮಾನವಕುಲಕ್ಕೆ ಅಭಿವೃದ್ಧಿಯ ಅಭೂತಪೂರ್ವ ಸಾಧನಗಳನ್ನು ನಿಸ್ಸಂದೇಹವಾಗಿ ನೀಡಿವೆ. ಅವುಗಳಿಂದ ಅನುಕೂಲಗಳಾಗಿವೆ ಎನ್ನುವುದು ಎಷ್ಟು ನಿಜವೋ, ಅನಪೇಕ್ಷಿತ ಪರಿಣಾಮಗಳೂ ಭೂಮಿಯನ್ನು ಬಾಧಿಸುತ್ತಿವೆ ಎನ್ನುವುದೂ ಅಷ್ಟೇ ಸತ್ಯ. ಯಾವುದೇ ಹೊಸ ಉತ್ಪನ್ನದ ಬಳಕೆ ಮತ್ತು ವಿಲೇವಾರಿಗಳು ಸಾಮಾಜಿಕ ಸ್ಥಿರತೆ ಮತ್ತು ಪರಿಸರದ ಆರೋಗ್ಯವನ್ನು ಹದಗೆಡಿಸಬಾರದು. ತಂತ್ರಜ್ಞಾನಕ್ಕೆ ‘ಮಾನವಸ್ಪರ್ಶ’ ಎನ್ನುವುದು ಬರೀ ಕಾರ್ಪೊರೇಟ್ ಘೋಷವಾಕ್ಯವಾಗದೆ, ನಾವೀನ್ಯತೆಯ ಮೂಲ ತತ್ತ್ವವಾಗಬೇಕು. ಯಾವುದೇ ದೇಶದ ಕೈಗಾರಿಕಾ ನೀತಿಯು ಮೊದಲು ಅದನ್ನು ಖಚಿತಪಡಿಸಬೇಕು.

ತಾಂತ್ರಿಕ ಕ್ರಾಂತಿಯ ಫಲಗಳು ಗಣ್ಯರಿಗೆ, ಸ್ಥಿತಿವಂತರಿಗೆ ಮಾತ್ರ ಸೀಮಿತವಾಗದಂತೆ ನಿಗಾವಹಿಸಬೇಕಿದೆ. ನಗರದ ಹೈಟೆಕ್ ಪ್ರಯೋಗಾಲಯದಲ್ಲಿನ ಆವಿಷ್ಕಾರವೊಂದು ದೂರದ ಹಳ್ಳಿಯ ರೈತನ ಜೀವನವನ್ನು ಸುಧಾರಿಸುತ್ತದೆಯೇ ಎಂಬುದೇ ನಮ್ಮ ಯಶಸ್ಸಿನ ನಿಜವಾದ ಅಳತೆಗೋಲು. ನಮ್ಮ ಅಧ್ಯಾಪಕರ ಮತ್ತು ಸಂಶೋಧಕರ ಪಿಎಚ್‌.ಡಿ. ಪ್ರಬಂಧಗಳು ಗ್ರಂಥಾಲಯದ ಕಪಾಟು ಸೇರಿ ದೂಳು ತಿನ್ನಬಾರದು. ಹಕ್ಕುಸ್ವಾಮ್ಯ ದೊರೆತ ತಕ್ಷಣ ಸಂಶೋಧಕನ ಜವಾಬ್ದಾರಿ ಮುಗಿಯುವುದಿಲ್ಲ. ಸಂಶೋಧನೆಯ ಫಲಿತಾಂಶವು ಜನಬಳಕೆಯ ಉತ್ಪನ್ನವಾದಾಗ ಮಾತ್ರ ಅದಕ್ಕೆ ಬೆಲೆ ಬರುತ್ತದೆ, ಉದ್ಯೋಗ ಸೃಷ್ಟಿಸುತ್ತದೆ. ಇದನ್ನೇ ಜವಾಬ್ದಾರಿಯುತ ನಾವೀನ್ಯತೆ ಎನ್ನುವುದು. ಇದನ್ನು ಸರಿಯಾಗಿ ನಿರ್ವಹಿಸಿ ಪೋಷಿಸುವ ಮೂಲಕ, ನಾವು ಆಧುನಿಕ ಯುಗದ ಸಂಕೀರ್ಣತೆಗಳನ್ನು ಸರಿಯಾಗಿ ನಿಭಾಯಿಸಬಹುದು.

ಹಬೆ ಶಕ್ತಿಯ ಬಳಕೆಯಿಂದ ಯಾಂತ್ರೀಕರಣದ ಯುಗ ಆರಂಭವಾಯಿತು. ವಿದ್ಯುತ್ ಶಕ್ತಿಯಿಂದಾಗಿ ಬೃಹತ್ ಪ್ರಮಾಣದ ಉತ್ಪಾದನೆ ಮತ್ತು ಅಸೆಂಬ್ಲಿ ಲೈನ್‌ಗಳು ಬಂದವು. ನಂತರ ಬಂದ ಕಂಪ್ಯೂಟರ್ ಮತ್ತು ಎಲೆಕ್ಟ್ರಾನಿಕ್ಸ್, ಇಂಟರ್ನೆಟ್ ಬಳಸಿಕೊಂಡು ಡಿಜಿಟಲ್ ಕ್ರಾಂತಿ ಹಾಗೂ ಸ್ವಯಂಚಾಲಿತ ವ್ಯವಸ್ಥೆಗಳನ್ನು ಚಾಲ್ತಿಗೆ ತಂದವು. ತಂತ್ರಜ್ಞಾನ ಮತ್ತೊಮ್ಮೆ ಮಗ್ಗುಲು ಬದಲಿಸಿದ್ದರಿಂದ ಇಂಟರ್ನೆಟ್ ಆಫ್ ಥಿಂಗ್ಸ್, ಡೇಟಾ ಮತ್ತು ಕ್ಲೌಡ್ ತಂತ್ರಜ್ಞಾನದ ಮೂಲಕ ಜಗತ್ತೇ ಬೆಸೆದುಕೊಂಡಿತು. ಈಗ ಯಂತ್ರಗಳ ವೇಗ ಮತ್ತು ಮನುಷ್ಯನ ಸೃಜನಶೀಲತೆ ಒಂದಾಗುತ್ತಿವೆ.

ಸಾಫ್ಟ್‌ವೇರ್, ಕೃತಕ ಬುದ್ಧಿಮತ್ತೆ ಮತ್ತು ಬಾಹ್ಯಾಕಾಶ ಸಂಶೋಧನೆಯಲ್ಲಿ ಅಮೆರಿಕ ಜಾಗತಿಕ ನಾಯಕತ್ವವನ್ನು ಸಾಧಿಸಿದೆ. ವಿಶ್ವದ ಕಾರ್ಖಾನೆ ಎಂಬ ಖ್ಯಾತಿಯ ಚೀನಾ 5ಜಿ ನೆಟ್‌ವರ್ಕ್, ಎಲೆಕ್ಟ್ರಿಕ್ ವಾಹನಗಳ ಉತ್ಪಾದನೆ ಮತ್ತು ಸುಧಾರಿತ ಮ್ಯಾನುಫ್ಯಾಕ್ಚರಿಂಗ್‌ನಲ್ಲಿ ಅಗ್ರಸ್ಥಾನದಲ್ಲಿದೆ. ರೊಬೊಟಿಕ್ಸ್ ಮತ್ತು ಎಲೆಕ್ಟ್ರಾನಿಕ್ಸ್ ಕ್ಷೇತ್ರದಲ್ಲಿ ಅಪ್ರತಿಮ ಸಾಧನೆ ಮಾಡಿರುವ ಪುಟ್ಟ ಜಪಾನ್, ಈಗ ಹೊಸ ತಂತ್ರಜ್ಞಾನಗಳನ್ನು ಸಾಮಾಜಿಕ ಸಮಸ್ಯೆಗಳ ಪರಿಹಾರಕ್ಕೆ ಬಳಸುತ್ತಿದೆ. ಸೆಮಿಕಂಡಕ್ಟರ್‌ಗಳು, ಸ್ಮಾರ್ಟ್‌ಫೋನ್ ತಂತ್ರಜ್ಞಾನ ಮತ್ತು ಅತ್ಯಾಧುನಿಕ ಡಿಜಿಟಲ್ ಪ್ರದರ್ಶನ ತಂತ್ರಜ್ಞಾನದಲ್ಲಿ ದಕ್ಷಿಣ ಕೊರಿಯಾ ವಿಶ್ವಕ್ಕೇ ಮಾದರಿಯಾಗಿದೆ.


ಭಾರತದ ತಂತ್ರಜ್ಞಾನ ಸಾಧನೆಗಳೇನೂ ಕಡಿಮೆಯಿಲ್ಲ. ಅತ್ಯಂತ ಕಡಿಮೆ ವೆಚ್ಚದಲ್ಲಿ ಮಂಗಳ ಗ್ರಹವನ್ನು ತಲಪಿದ ‘ಮಂಗಳಯಾನ’ ಮತ್ತು ಚಂದ್ರನ ದಕ್ಷಿಣ ಧ್ರುವವನ್ನು ಸ್ಪರ್ಶಿಸಿದ ಮೊದಲ ದೇಶವಾಗಿ ಭಾರತವನ್ನು ಗುರ್ತಿಸಿದ ‘ಚಂದ್ರಯಾನ–3’ ನಮ್ಮ ಬಾಹ್ಯಾಕಾಶ ಸಂಶೋಧನಾ ಸಾಮರ್ಥ್ಯಕ್ಕೆ ಸಾಕ್ಷಿಯೆನಿಸಿವೆ. ರಕ್ಷಣಾ ಕ್ಷೇತ್ರದಲ್ಲಿ ಸ್ವದೇಶಿ ನಿರ್ಮಿತ ‘ತೇಜಸ್’ ಲಘು ಯುದ್ಧ ವಿಮಾನ, ‘ಅಗ್ನಿ’, ‘ಪೃಥ್ವಿ’ ಕ್ಷಿಪಣಿ ಸರಣಿಗಳು, ‘ಅರಿಹಂತ್’ ಪರಮಾಣು ಜಲಾಂತರ್ಗಾಮಿ ಮತ್ತು ಇತ್ತೀಚಿನ ‘ವಿಕ್ರಾಂತ್’ ವಿಮಾನವಾಹಕ ನೌಕೆಗಳು ವಿಶ್ವದ ಗಮನ ಸೆಳೆದಿವೆ.

ಅಮೆರಿಕ, ಯುರೋಪ್ ದೇಶಗಳು ಇಂದಿಗೂ ಕಾರ್ಡ್ ಮತ್ತು ನಗದು ವ್ಯವಹಾರದ ಮೇಲೆ ಅವಲಂಬಿತವಾಗಿರುವಾಗ, ಯುಪಿಐ ತಂತ್ರಜ್ಞಾನವು ಬೀದಿ ಬದಿಯ ವ್ಯಾಪಾರಿಯಿಂದ ಹಿಡಿದು ದೊಡ್ಡ ಮಾಲ್‌ಗಳವರೆಗೆ ಕ್ಷಣಾರ್ಧದಲ್ಲಿ ಹಣ ವರ್ಗಾವಣೆ ಮಾಡುವ ಡಿಜಿಟಲ್ ಕ್ರಾಂತಿಯನ್ನು ಮಾಡಿದೆ. ಈ ತಂತ್ರಜ್ಞಾನವನ್ನಿಂದು ಸಿಂಗಪುರ, ಯುಎಇ ಮತ್ತು ಹಲವು ದೇಶಗಳು ಅಳವಡಿಸಿಕೊಳ್ಳುತ್ತಿವೆ.

ಸುಸ್ಥಿರ ಇಂಧನದತ್ತ ಮುಖ ಮಾಡಿರುವ ನಾವು ‘ಗ್ರೀನ್ ಹೈಡ್ರೋಜನ್ ಮಿಷನ್’ ಪ್ರಾರಂಭಿಸಿದ್ದೇವೆ. ಸ್ವದೇಶಿ ನಿರ್ಮಿತ ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿ ತಂತ್ರಜ್ಞಾನವನ್ನು ಬಳಸಿಕೊಂಡು, ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ತಗ್ಗಿಸುತ್ತಿದ್ದೇವೆ. ದೇಸೀ ತಂತ್ರಜ್ಞಾನದಿಂದ ಸಿದ್ಧಪಡಿಸಲಾದ ‘ನ್ಯಾನೊ ಯೂರಿಯಾ’ ಮಣ್ಣಿನ ಆರೋಗ್ಯವನ್ನು ಕಾಪಾಡುವಲ್ಲಿ ಯಶಸ್ವಿಯಾಗುತ್ತಿದೆ. ವಿಶ್ವದ ನೂರಕ್ಕೂ ಹೆಚ್ಚು ದೇಶಗಳಿಗೆ ನಾವೇ ತಯಾರಿಸಿದ ಜೆನೆರಿಕ್ ಔಷಧಗಳು ಮತ್ತು ಲಸಿಕೆಗಳನ್ನು ರಫ್ತು ಮಾಡಿ ‘ವಿಶ್ವದ ಔಷಧಾಲಯ’ ಎಂಬ ಖ್ಯಾತಿ ಗಳಿಸಿದ್ದೇವೆ. ಕೃಷಿ ಕ್ಷೇತ್ರದಲ್ಲಿ ‘ಕೃಷಿ ಡ್ರೋನ್’ಗಳ ಬಳಕೆ ಮತ್ತು ರೈತರಿಗಾಗಿ ಸಿದ್ಧಪಡಿಸಿದ ‘ಭುವನ್’ ಪೋರ್ಟಲ್ ಭೂಮಿಯ ನಕ್ಷೆ ಮತ್ತು ಬೆಳೆಗಳ ಸ್ಥಿತಿಗತಿಯನ್ನು ತಿಳಿಯಲು ಸಹಾಯ ಮಾಡುತ್ತಿವೆ.

ವಿದೇಶಿ ಅವಲಂಬನೆ ಕಡಿಮೆ ಮಾಡಿ ಭಾರತದಲ್ಲೇ ಚಿಪ್‌ಗಳ ತಯಾರಿಕೆಗೆ ಒತ್ತು ನೀಡುವ ಸೆಮಿಕಂಡಕ್ಟರ್ ಮಿಷನ್, ಮುಂದಿನ ತಲೆಮಾರಿನ ಸೂಪರ್ ಕಂಪ್ಯೂಟಿಂಗ್ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿರಲು ನೆಲೆ ಕಲ್ಪಿಸಲು ಕ್ವಾಂಟಂ ಮಿಷನ್, 6ಜಿ ತಂತ್ರಜ್ಞಾನದ ಅಭಿವೃದ್ಧಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಡಿಜಿಟಲ್ ಸಾಕ್ಷರತೆಯನ್ನು ತಲಪಿಸುವ ಡಿಜಿಟಲ್ ಕ್ರಾಂತಿ ಯೋಜನೆಗಳು ಸಿದ್ಧವಾಗಿವೆ.

ತಂತ್ರಜ್ಞಾನವು ಬರೀ ಬೌದ್ಧಿಕ ಆಸ್ತಿಯಲ್ಲ; ಅದು ಉದ್ಯೋಗ ಸೃಷ್ಟಿಸಬೇಕು. ತಂತ್ರಜ್ಞಾನದಿಂದ ಹುಟ್ಟುವ ತ್ಯಾಜ್ಯವನ್ನು ಸಂಸ್ಕರಿಸುವ ‘ಪ್ರತಿತಂತ್ರಜ್ಞಾನ’ ಬೇಕೇ ಬೇಕು. ಪ್ರತಿ ತಂತ್ರಜ್ಞಾನವು ಪರಿಸರಸ್ನೇಹಿ ಆಗಿರಬೇಕು. ಕಾಡುವ ಬಡತನ ಹಾಗೂ ಅನಾರೋಗ್ಯದ ವಿರುದ್ಧದ ಹೋರಾಟ ವಿಧಾನ ಆಗಬೇಕು. ತಂತ್ರಜ್ಞಾನವು ನಮಗೆ ನೀಡುವ ಶಕ್ತಿಯನ್ನು ನಾವೆಲ್ಲ ವಿವೇಕದಿಂದ ಬಳಸಬೇಕು.



ವಾಚಕರ ವಾಣಿ

ಉತ್ತರ ಕರ್ನಾಟಕಕ್ಕೆ ಕ್ರೀಡಾಂಗಣ ಬೇಡವೆ?

ಬೆಂಗಳೂರಿನಲ್ಲಿ ಈಗಾಗಲೇ ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಇದೆ. ಈಗ ಮತ್ತೊಂದು ಕ್ರೀಡಾಂಗಣ ನಿರ್ಮಾಣಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 23ರಂದು ಶಂಕುಸ್ಥಾಪನೆ ನೆರವೇರಿಸಲಿದ್ದಾರೆ. ಆದರೆ, ಉತ್ತರ ಕರ್ನಾಟಕದಲ್ಲಿ ಒಂದೇ ಒಂದು ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಂಗಣ ಇಲ್ಲ. ಇದರಿಂದಾಗಿ ಇಲ್ಲಿನ ಕ್ರೀಡಾ ಪ್ರತಿಭೆಗಳು ಬೆಂಗಳೂರು, ಪುಣೆ, ಹೈದರಾಬಾದ್‌ಗೆ ತೆರಳಿ ತರಬೇತಿ ಪಡೆಯಬೇಕು. ಕ್ರೀಡಾಂಗಣ ನಿರ್ಮಾಣದಿಂದ ಒಂದಿಷ್ಟು ಉದ್ಯೋಗಗಳು ಸೃಷ್ಟಿ ಆಗುತ್ತವೆ. ಈ ಬಗ್ಗೆ ಉತ್ತರ ಕರ್ನಾಟಕದ ಶಾಸಕರು, ಸಚಿವರು, ಸಂಸದರು ಚಕಾರ ಎತ್ತಿಲ್ಲ. ಮುಖ್ಯಮಂತ್ರಿಯವರು ಹೇಳಿದ್ದಕ್ಕೆ ತಲೆ ಅಲ್ಲಾಡಿಸುತ್ತ ಹೊಣೆಗೇಡಿತನ ಪ್ರದರ್ಶಿಸುತ್ತಿದ್ದಾರೆ. ವಿಶ್ವದರ್ಜೆಯ ಸೌಲಭ್ಯಗಳನ್ನು ಬೆಂಗಳೂರು, ಮೈಸೂರಿಗೆ ನೀಡುವುದಾದರೆ ಉಳಿದ ಜಿಲ್ಲೆಗಳ ಅಭಿವೃದ್ಧಿ ಯಾವಾಗ? ಉತ್ತರ ಕರ್ನಾಟಕದ ಜನರು ಅಂತರರಾಷ್ಟ್ರೀಯ ಕ್ರಿಕೆಟ್ ಪಂದ್ಯ ವೀಕ್ಷಿಸಲು ಬೆಂಗಳೂರಿಗೆ ಬರಬೇಕೆ? ನಮ್ಮಲ್ಲಿಯೇ ನಾವು ಪಂದ್ಯಗಳನ್ನು ವೀಕ್ಷಿಸುವುದು ಬೇಡವೇ?

ಸುರೇಶ ಎಸ್.ಪಿ., ಖವಟಕೊಪ್ಪ

ಪೆಟ್ರೋಲ್ ನಿಯಮ: ಸವಾರರಿಗೆ ಸಂಕಟ

ರಾಜ್ಯ ಸರ್ಕಾರವು ಬಂಕ್‌ಗಳಲ್ಲಿ ಬಾಟಲಿ ಅಥವಾ ಕ್ಯಾನ್‌ಗಳಲ್ಲಿ ಪೆಟ್ರೋಲ್ ನೀಡುವುದನ್ನು ನಿಷೇಧಿಸಿದೆ. ದುಷ್ಕೃತ್ಯ ತಡೆಯುವ ನಿಟ್ಟಿನಲ್ಲಿ ಈ ನಿಯಮವನ್ನು ಜಾರಿಗೊಳಿಸಿರುವುದು ಸರಿ. ಆದರೆ, ತುರ್ತು ಸಂದರ್ಭದಲ್ಲಿ ಸಾಮಾನ್ಯ ಸವಾರರ ಪಾಲಿಗೆ ಈ ನಿಯಮ ಶಾಪವಾಗಿದೆ. ರಸ್ತೆಯ ಮಧ್ಯೆ ಹಠಾತ್ತನೆ ಇಂಧನ ಖಾಲಿಯಾದಾಗ ಪೆಟ್ರೋಲ್ ಬಂಕ್‌ಗೆ ನಡೆದುಕೊಂಡು ಹೋಗಿ ಅಥವಾ ಬೇರೆಯವರ ವಾಹನದಲ್ಲಿ ತೆರಳಿ ಸಣ್ಣ ಬಾಟಲಿಯಲ್ಲಿ ಪೆಟ್ರೋಲ್ ತರುವುದು ಸಹಜ. ಹೊಸ ನಿಯಮದಿಂದಾಗಿ ಬಂಕ್ ಸಿಬ್ಬಂದಿಯು ಪೆಟ್ರೋಲ್ ನೀಡಲು ನಿರಾಕರಿಸುತ್ತಿದ್ದಾರೆ. ಬೇಸಿಗೆಯ ಕಡು ಬಿಸಿಲಿನಲ್ಲಿ ಸವಾರರು ಕಿಲೋಮೀಟರ್‌ಗಟ್ಟಲೆ ವಾಹನವನ್ನು ತಳ್ಳಿಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ತುರ್ತು ಸಂದರ್ಭದಲ್ಲಿ ಸಿಲುಕಿದ ಸವಾರರಿಗೆ ಅವರ ಗುರುತಿನಚೀಟಿ ಪಡೆದು ಪೆಟ್ರೋಲ್ ನೀಡಬೇಕಿದೆ.

ಪ್ರಶಾಂತ ಕೋಳಿ, ಧಾರವಾಡ

ಹೊಣೆಗಾರಿಕೆ ಅರಿಯದ ವಿರೋಧ ಪಕ್ಷ

ಈ ಹಿಂದೆ ಆಡಳಿತ ಪಕ್ಷಕ್ಕಿಂತ ವಿರೋಧ ಪಕ್ಷದ ಮೇಲೆ ಪ್ರಜೆಗಳು ಹೆಚ್ಚು ಭರವಸೆ ಇಡುತ್ತಿದ್ದರು. ಕಾರಣವಿಷ್ಟೇ, ಸರ್ಕಾರ ಜವಾಬ್ದಾರಿ ಮರೆತಾಗ ವಿಪಕ್ಷದವರು ಅದನ್ನು ಪ್ರಶ್ನಿಸಿ ಜನಸಾಮಾನ್ಯರಿಗೆ ನ್ಯಾಯ ಒದಗಿಸುತ್ತಿದ್ದರು. ಪ್ರಸ್ತುತ ರಾಜ್ಯದಲ್ಲಿ ಬಿಜೆಪಿ ನೆಪಮಾತ್ರಕ್ಕಷ್ಟೇ ವಿರೋಧ ಪಕ್ಷವಾಗಿದೆಯೇನೊ ಎನಿಸುತ್ತಿದೆ. ರಾಜ್ಯದಲ್ಲಿ 2.80 ಲಕ್ಷಕ್ಕೂ ಹೆಚ್ಚು ಸರ್ಕಾರಿ ಹುದ್ದೆಗಳು ಖಾಲಿ ಇವೆ. ಮೂರು ವರ್ಷಗಳಿಂದ ನೇಮಕಾತಿ ನಡೆದಿಲ್ಲ. ರಾಜ್ಯದ ಹಲವೆಡೆ ನಿರುದ್ಯೋಗಿಗಳು ತೀವ್ರ ಹೋರಾಟ ಮಾಡಿದ್ದಾರೆ. ಹೀಗಿದ್ದರೂ ಆ ಹೋರಾಟಕ್ಕೆ ವಿಪಕ್ಷದ ನಾಯಕರು ಬಲ ತುಂಬದಿರುವುದು ದುರಂತವೇ ಸರಿ. ಸರ್ಕಾರದ ಮೇಲೆ ಒತ್ತಡವನ್ನೂ ಹೇರುತ್ತಿಲ್ಲ. ಬರೀ ಟೀಕಿಸುವುದರಲ್ಲೇ ಕಾಲಹರಣ ಮಾಡುವುದು ರಾಜ್ಯದ ಹಿತದೃಷ್ಟಿಯಿಂದ ಒಳ್ಳೆಯದಲ್ಲ.

ಶೇಖರ್ ಕೋಳೂರು, ಬಳ್ಳಾರಿ

ಟೀಕೆಯ ಗುಂಗಿನಲ್ಲಿ ಅಧಿಕಾರ ವಂಚಿತರು

ತಮಿಳುನಾಡಿನ ಮುಖ್ಯಮಂತ್ರಿಯಾಗಿ ಜೋಸೆಫ್ ವಿಜಯ್ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಅವರಿಗೆ ಅನುಭವ ಕಡಿಮೆ ಎಂದು ಅಧಿಕಾರ ಸಿಗದವರು ಅಣಕವಾಡುತ್ತಿದ್ದಾರೆ. ರಾಜೀವ್ ಗಾಂಧಿಯವರು ಪ್ರಧಾನಿ ಪಟ್ಟಕ್ಕೇರಿದಾಗ ಅವರಿಗೆ ರಾಜಕೀಯದ ಕನಿಷ್ಠ ಅನುಭವವೂ ಇರಲಿಲ್ಲ; ಅವರ ಜನಪರ ಕಾಳಜಿಯ ಆಡಳಿತವು ಜನರಿಗೆ ಇಷ್ಟವಾಯಿತಲ್ಲವೆ? ಹಿರಿಯ, ಅನುಭವಿ ರಾಜಕಾರಣಿಗಳು ಮಾಡುತ್ತಿರುವ ಜನಪರ ಸೇವೆಯ ಘನಕಾರ್ಯವಾದರೂ ಏನು? ಅವರೆಲ್ಲ ವಂಶಪಾರಂಪರ್ಯ ಆಳ್ವಿಕೆ, ಅಕ್ರಮ ಹಣ ಗಳಿಕೆ, ದುರಾಡಳಿತದಲ್ಲಿ ಮುಳುಗಿದ್ದಾರಷ್ಟೆ. ಹೊಸದಾಗಿ ಅಧಿಕಾರಕ್ಕೇರುವವರಿಗೆ ಆಡಳಿತದ ಅನುಭವ ತಾನಾಗಿಯೇ ಬರುತ್ತದೆ. ಅನಗತ್ಯ ಟೀಕೆ ಸಲ್ಲದು. ದೇಶದ ಸುರಕ್ಷತೆ ಹಾಗೂ ಪಾರದರ್ಶಕ ಆಡಳಿತ ನೀಡುವುದಷ್ಟೇ ಅಧಿಕಾರಸ್ಥರ ಗುರಿಯಾಗಬೇಕು.

ಎಸ್.ಎನ್. ರಮೇಶ್, ನಾತನೂರು

‘ಉಡುಗೊರೆ’ ಎನ್ನುವ ಹಂಗಿನ ಸಂಕೋಲೆ

ನನಗೆ ಪರಿಚಿತವಿರುವ ಸರ್ಕಾರಿ ನೌಕರರೊಬ್ಬರಿದ್ದಾರೆ. ಅವರಿಗೆ ಬರುವ ಸಂಬಳದ ಮಿತಿಯಲ್ಲಿ ಸ್ವಾಭಿಮಾನದ ಬದುಕು ನಡೆಸುತ್ತಿದ್ದಾರೆ. ಮಡದಿಯ ತವರಿನಿಂದ ಸೂಜಿಯಷ್ಟು ಸಹಾಯವನ್ನೂ ಅವರು ನಿರೀಕ್ಷಿಸಿದವರಲ್ಲ. ಹೀಗಿದ್ದರೂ ಅವರ ಮಡದಿಯ ಮನೆಯವರು ಆತ ಬೇಡವೆಂದು ತಿರಸ್ಕರಿಸಿದರೂ ಉಡುಗೊರೆಯ ನೆಪದಲ್ಲಿ ತಮ್ಮ ಪ್ರತಿಷ್ಠೆ ತೋರಿಸಲು ಮುಂದಾಗುತ್ತಾರೆ. ಬಲವಂತವಾಗಿ ಉಡುಗೊರೆ ನೀಡುವುದು ಸಹ ಅಪರಾಧವಲ್ಲವೆ? ವರದಕ್ಷಿಣೆ ರೂಪದಲ್ಲಿ ಉಡುಗೊರೆ ತೆಗೆದುಕೊಳ್ಳುವುದಷ್ಟೇ ಅಪರಾಧವಲ್ಲ; ಕೊಡುವುದು ಕೂಡ ಅಪರಾಧ ಎಂಬುವುದನ್ನು ನಾಗರಿಕ ಸಮಾಜ ಅರಿಯಬೇಕಿದೆ.

ಸುಜ್ಜಲೂರು ವಿ.ಜಿ., ತಿ. ನರಸೀಪುರ

ಬಿಎಂಟಿಸಿ ದರ: ಪ್ರಯಾಣಿಕರಿಗೆ ಹೊರೆ

ಬೆಂಗಳೂರಿನಿಂದ ಚಿಂತಾಮಣಿಗೆ ಸುಮಾರು 70 ಕಿ.ಮೀ. ದೂರವಿದೆ. ಈ ಮಾರ್ಗದಲ್ಲಿ ಸಂಚರಿಸುವ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಜನಜಂಗುಳಿ ಇರುತ್ತದೆ. ಚಿಂತಾಮಣಿಗೆ ಸಂಚರಿಸುವ ಬಿಎಂಟಿಸಿ ಬಸ್‌ಗಳಲ್ಲಿ ಟಿನ್ ಫ್ಯಾಕ್ಟರಿಯಿಂದ ಕೈವಾರ ಕ್ರಾಸ್‌ಗೆ ₹90 ಟಿಕೆಟ್ ದರವಿದೆ. ನಿಗಮದ ಬಸ್‌ಗಳಲ್ಲಿ ₹77 ದರವಿದೆ. ದಾವಣಗೆರೆಯಿಂದ ಬೆಂಗಳೂರಿಗೆ ಸಂಚರಿಸುವ ಬಿಎಂಟಿಸಿ ಬಸ್‌ಗಳು ಮತ್ತು ನಿಗಮದ ಬಸ್‌ಗಳ ಟಿಕೆಟ್ ದರದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಚಿಂತಾಮಣಿ– ಟಿನ್ ಫ್ಯಾಕ್ಟರಿ ನಡುವೆ ಸಂಚರಿಸುವ ಬಿಎಂಟಿಸಿ ಬಸ್‌ಗಳ ದರದಲ್ಲಿ ಈ ಪರಿಯ ವ್ಯತ್ಯಾಸವೇಕೆ?

ಆನಂದ ಎಂ., ಕೈವಾರ

ಚಾಟಿ

ಚುನಾವಣೆ ಇಲ್ಲದ ಸಮಯ!



ಪ್ರಧಾನಿ ನರೇಂದ್ರ ಮೋದಿ ಅವರು ‘ಸರಳ ಜೀವನ’ ಸಾಗಿಸಲು ಕರೆ ಕೊಟ್ಟಿದ್ದಾರೆ. ಸದ್ಯ, ಈಗ ಯಾವುದೇ ಎಲೆಕ್ಷನ್ ಇಲ್ಲ! ಯಾವ ತಲೆ ಬಿಸಿಯೂ ಇಲ್ಲ! ಹಾಗಾಗಿ, ಸಿಂಪಲ್ ಲೈಫ್ ಓಕೆ! ಅವರ ದೂರದೃಷ್ಟಿ ಅದ್ಭುತ!

ಎಂ. ಜವರಾಜ್, ಲೇಖಕ, ‘ಫೇಸ್‌ಬುಕ್’ನಿಂದ

ಕಿಡಿನುಡಿ



ಯಾವುದೇ ಅಕ್ರಮಗಳಿಲ್ಲದೆ ಒಂದು ಸರಳ ಪರೀಕ್ಷೆಯನ್ನು ಮಾಡಲಾಗದಷ್ಟು ನಮ್ಮ ವ್ಯವಸ್ಥೆ ಅಪರಾಧಿಗಳ ಆಟದ ಮೈದಾನವಾಗಿದೆ. ಪ್ರವೇಶ ಪರೀಕ್ಷೆಗಳಲ್ಲಿ ಅಕ್ರಮ, ನೇಮಕಾತಿಗಳಲ್ಲಿ ಅಕ್ರಮ, ಕರ್ತವ್ಯದಲ್ಲಿಯೂ ಅಕ್ರಮ! ಏನೇ ಅಕ್ರಮ ಮಾಡಿದರೂ ದಕ್ಕಿಸಿಕೊಳ್ಳಬಹುದು ಎನ್ನುವ ಧೈರ್ಯವೇ ಇದಕ್ಕೆ ಕಾರಣ.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

25 ವರ್ಷಗಳ ಹಿಂದೆ

ಭಾನುವಾರ, 13-5-2001

• ಎಸ್ಸೆಸ್ಸೆಲ್ಸಿ ಫಲಿತಾಂಶ: ಮುಗಿಯದ ತಾಂತ್ರಿಕ ಗೊಂದಲ

ಬೆಂಗಳೂರು, ಮೇ 12– ಎಸ್ಸೆಸ್ಸೆಲ್ಸಿ ಫಲಿತಾಂಶಕ್ಕೆ ಸಂಬಂಧಿಸಿದಂತೆ ಗೊಂದಲ ಇಂದೂ ಮುಂದುವರಿದಿದ್ದು, ತಾಂತ್ರಿಕ ತೊಂದರೆಯಿಂದ ಉದ್ಭವಿಸಿರುವ ಸಮಸ್ಯೆ ಸರಿಪಡಿಸಲು ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಶ್ರಮಿಸುತ್ತಿರುವಂತೆಯೇ ಮೌಲ್ಯಮಾಪಕರು ಹಾಗೂ ಸಂಬಂಧಪಟ್ಟ ಸಿಬ್ಬಂದಿಯ ಕರ್ತವ್ಯಲೋಪದ ಕೆಲವು ಪ್ರಕರಣಗಳು ಬಯಲಿಗೆ ಬಂದಿವೆ.

ಫಲಿತಾಂಶ ಪ್ರಕಟವಾಗಿ ಮೂರು ದಿನಗಳಾಗಿದ್ದರೂ ವಿದ್ಯಾರ್ಥಿಗಳು ಹಾಗೂ ಪೋಷಕರ ಆತಂಕ ನಿವಾರಣೆ ಆಗಿಲ್ಲ. ಕೆಲವು ಶಾಲೆಗಳ ಶಿಕ್ಷಕರಂತೂ ಫಲಿತಾಂಶ ಪಡೆಯಲಿಕ್ಕಾಗಿ ಮಂಡಳಿ ಮುಂದೆ ಪರದಾಡುತ್ತಿದ್ದಾರೆ.

• ಬಿ.ಟಿ. ಹತ್ತಿ: ವಾಣಿಜ್ಯ ಉತ್ಪಾದನೆ ಅನುಮತಿ ನೀಡಲು ಒತ್ತಾಯ

ನವದೆಹಲಿ, ಮೇ 12 (ಯುಎನ್‌ಐ)– ರಾಜ್ಯದಲ್ಲಿ ಕುಲಾಂತರಿ ಬಿ.ಟಿ. ಹತ್ತಿಯ ವಾಣಿಜ್ಯ ಬೆಳೆಗೆ ಅನುಮತಿ ನೀಡಲು ಕರ್ನಾಟಕ ರಾಜ್ಯ ಸರ್ಕಾರವು ಕೇಂದ್ರವನ್ನು ಇಂದು ಒತ್ತಾಯಿಸಿದೆ.

ಇಲ್ಲಿ ನಡೆಯುತ್ತಿರುವ ಜೈವಿಕ–ತಂತ್ರಜ್ಞಾನ ಸಮಾವೇಶದಲ್ಲಿ ಭಾಗವಹಿಸಲು ಆಗಮಿಸಿರುವ ಕರ್ನಾಟಕದ ಕೃಷಿ ಸಚಿವ ಟಿ.ಬಿ. ಜಯಚಂದ್ರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ಬಿ.ಟಿ. ಹತ್ತಿಯು ಕೀಟ ನಿರೋಧ ಶಕ್ತಿಯನ್ನು ಹೊಂದಿದೆ. ಇದರಿಂದ ರೈತರು ಅಪಾಯಕಾರಿ ಕ್ರಿಮಿನಾಶಕಗಳನ್ನು ಸಿಂಪಡಿಸುವ ಅಗತ್ಯವಿರುವುದಿಲ್ಲ’ ಎಂದರು

75 ವರ್ಷಗಳ ಹಿಂದೆ

ಭಾನುವಾರ, 13-5-1951

• ರಾಜ್ಯಾಂಗ ವಿಧಿಗಳ ತಿದ್ದುಪಾಟು

ನವದೆಹಲಿ, ಮೇ 12– ವಾಕ್ ಸ್ವಾತಂತ್ರ್ಯ, ವೃತ್ತಿ ಮತ್ತು ವ್ಯಾಪಾರ ಸ್ವಾತಂತ್ರ್ಯಗಳ ಭರವಸೆ ನೀಡುವಂತೆ ಈಗ ರಾಜ್ಯಾಂಗದಲ್ಲಿರುವ ನಿಬಂಧನೆಗಳನ್ನು ತಿದ್ದುಪಾಟು ಮಾಡುವ ಬಗ್ಗೆ ಪ್ರಧಾನಿ ಪಂಡಿತ ನೆಹರೂ ಈ ದಿನ ಪಾರ್ಲಿಮೆಂಟಿನಲ್ಲಿ ಮಸೂದೆಯನ್ನು ಮಂಡಿಸಿದರು.

ಹಿಂದುಳಿದ ಪಂಗಡಗಳ ವಿದ್ಯೆ, ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಸೂಕ್ತ ಅವಕಾಶ ಕಲ್ಪಿಸುವ ಕಾನೂನುಗಳನ್ನು ‘ನ್ಯಾಯಾಲಯಗಳ ತಿರಸ್ಕಾರಕ್ಕೆ ಎಡೆಯಿಲ್ಲದಂತೆ’ ಮಾಡಿಕೊಳ್ಳಲು ಯಾವುದೇ ಪ್ರಾಂತ ಸರಕಾರಕ್ಕೆ ಅಧಿಕಾರ ನೀಡುವಂತೆ ರಾಜ್ಯಾಂಗದ 15ನೇ ನಿಬಂಧನೆಯನ್ನು ತಿದ್ದುವುದೂ ನೆಹರೂ ಮಂಡಿಸಿದ ಮಸೂದೆಯ ಉದ್ದೇಶಗಳಲ್ಲೊಂದಾಗಿದೆ. ಮದರಾಸಿನ ಕೋಮುವಾರು ಆಜ್ಞೆಯ ಪ್ರಸಂಗದಿಂದ ಉದ್ಭವಿಸಿರುವ ತಿದ್ದುಪಾಟದು.

ಚುರುಮುರಿ



ಕುರ್ಚಿ ಕೀಟಲೆ

• ಮಣ್ಣೆ ರಾಜು

ಮಹಾರಾಜರ ಒಡ್ಡೋಲಗ ನಡೆದಿತ್ತು.

ದೂತ ಬಂದು, ‘ಮಹಾರಾಜರಿಗೆ ನಮೋ ನಮಃ...’ ಎಂದು ನಮಸ್ಕರಿಸಿದ.

‘ದೂತರೆ, ಏನು ಸಂದೇಶ ತಂದಿದ್ದೀರಿ?’ ಮಹಾರಾಜರು ಕೇಳಿದರು.

‘ಪ್ರಭು, ಬಂಗಾಳ ಸಂಸ್ಥಾನ ಗೆದ್ದ ನಿಮ್ಮ ಶೌರ್ಯ, ಪರಾಕ್ರಮವನ್ನು ಪ್ರಜೆಗಳು ಹಾಡಿ ಹೊಗಳುತ್ತಿದ್ದಾರೆ. ಎಲ್ಲೆಡೆ ಅಭಿಮಾನಿಗಳು ವಿಜಯೋತ್ಸವ ಆಚರಿಸುತ್ತಾ ಸಂಭ್ರಮಿಸುತ್ತಿದ್ದಾರೆ’.

‘ಹೌದೆ? ಸಂತೋಷವಾಯಿತು’ ವಿಜಯದ ನಗೆ ನಕ್ಕರು.

‘ಹಸ್ತ ಸಂಸ್ಥಾನದ ಕುರ್ಚಿಗಳು ಅಲ್ಲಾಡುತ್ತಿವೆ ಎಂಬ ತಮ್ಮ ಹೇಳಿಕೆ ಸಿಕ್ಕಾಪಟ್ಟೆ ವೈರಲ್ ಆಗಿದೆ ಪ್ರಭು’.

‘ಹೌದೆ?’

‘ಹೌದು ಪ್ರಭು, ಕಂಡೋರ ಕುರ್ಚಿ ವಿಷಯದಲ್ಲಿ ಕಡ್ಡಿ ಆಡಿಸಬೇಡಿ, ನಮ್ಮ ಕುರ್ಚಿ ಅಲ್ಲಾಡಿದರೆ ನಾವೇ ಮೊಳೆ ಹೊಡೆದು ಟೈಟ್ ಮಾಡಿಕೊಳ್ಳುತ್ತೇವೆ. ನಮಗೂ ಕುರ್ಚಿಭದ್ರ ಹಿತಾಸಕ್ತಿಯಿದೆ ಎಂದು ಹಸ್ತಪ್ರತಿಗಳು ಕೆರಳಿ ಕೆಂಡವಾಗಿದ್ದಾರೆ’.

‘ಅವರು ಕೆರಳಲಿ, ನರಳಲಿ ಎನ್ನುವ ಕಾರಣಕ್ಕೆ ಅಲ್ಲವೆ ತಾವು ಅಂತಹ ಹೇಳಿಕೆ ನೀಡಿರುವುದು! ಹಹ್ಹಹ್ಹಾ’.

‘ತಾವು ಹಾಗೂ ಮಹಾಮಂತ್ರಿಗಳು ಇತ್ತೀಚೆಗೆ ದಕ್ಷಿಣ ಭಾರತ ಪ್ರವಾಸ ಕೈಗೊಳ್ಳುವುದು ಹೆಚ್ಚಾಗಿದೆ. ಕೇವಲ ಯಾತ್ರೆಯೋ ಅಥವಾ ಸಾಮ್ರಾಜ್ಯ ವಿಸ್ತರಿಸುವ ದಂಡೆಯಾತ್ರೆಯೋ ಎಂದು ಗೊತ್ತಾಗದೆ ವಿರೋಧಿಗಳು ನಡುಗಿಹೋಗಿದ್ದಾರೆ ಪ್ರಭು’.

‘ಹಹ್ಹಹ್ಹಾ...’ ಪ್ರಭುಗಳು ಮತ್ತೊಮ್ಮೆ ನಕ್ಕರು.

‘ರಾಷ್ಟ್ರೀಯ, ಪ್ರಾದೇಶಿಕ ಪಕ್ಷಗಳನ್ನು ಸದೆಬಡಿದು ಏಕ ಭಾರತ, ಏಕ ಪಕ್ಷ ಆಡಳಿತದ ಹುನ್ನಾರ ನಡೆಸಿದ್ದೀರಂತೆ...’

‘ಒಂದು ದೇಶ, ಒಂದು ಆಡಳಿತ, ಒಂದು ಧರ್ಮ, ಒಂದು ಭಾಷೆ ಇದ್ದರೆ ಬಲಿಷ್ಠ ಭಾರತ ನಿರ್ಮಾಣ ಸಾಧ್ಯವಾಗುತ್ತದೆ ದೂತರೇ...’

‘ಏಕಚಕ್ರಾಧಿಪತಿ ಆಡಳಿತವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಧಕ್ಕೆಯಾಗುವುದಿಲ್ಲವೆ? ಹೀಗಾದರೆ ಪ್ರಜಾಪ್ರಭುತ್ವ ಹೋಗಿ ರಾಜಪ್ರಭುತ್ವದ ಮರುಸ್ಥಾಪನೆ ಆಗೋದಿಲ್ವೆ ಪ್ರಭು? ಹಾಗಂತ ನಾನು ಹೇಳುತ್ತಿಲ್ಲ, ನಮಗೆ ಆಗದವರು ಹೀಗೆ ಮಾತನಾಡಿಕೊಳ್ಳುತ್ತಿದ್ದಾರೆ...’

ಪ್ರಭುಗಳು ಸಿಟ್ಟಾದರು. ‘ಅಧಿಕಪ್ರಸಂಗಿ, ತೊಲಗು ಇಲ್ಲಿಂದ...’ ಎಂದು ರೇಗಿದರು.

ಸಂಗತ

ವರದಕ್ಷಿಣೆಗೆ ವಿರೋಧ: ಬಂಜಾರ ಮಾದರಿ!

ನಾಗರಿಕ ಸಮಾಜಕ್ಕೆ ಕಳಂಕವಾದ ವರದಕ್ಷಿಣೆ ವಿರುದ್ಧ 17 ಬಂಜಾರ ತಾಂಡಾಗಳು ಠರಾವು ಹೊರಡಿಸಿವೆ. ಈ ಪ್ರತಿರೋಧ ಮಾದರಿ ನಾಡಿನ ದಾರಿಯೂ ಆಗಬೇಕು.


• ವಿಜಯಲಕ್ಷ್ಮಿ

ಸಾಮಾಜಿಕ ಪಿಡುಗುಗಳಲ್ಲೊಂದಾದ ವರದಕ್ಷಿಣೆ ಪದ್ಧತಿಯನ್ನು ಕೊನೆಗೊಳಿಸುವ ಕುರಿತು, ಗದಗ ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನ 17 ಲಂಬಾಣಿ (ಬಂಜಾರ) ತಾಂಡಾಗಳ ಹಿರಿಯರು ಇತ್ತೀಚೆಗೆ ಮಹತ್ವದ ಠರಾವು ಒಂದನ್ನು ಕೈಗೊಂಡಿದ್ದಾರೆ. ಆ ಠರಾವಿನ ಪ್ರಕಾರ, ಈ ತಾಂಡಾಗಳಲ್ಲಿ ಇನ್ನು ಮುಂದೆ ಯಾರೂ ವರದಕ್ಷಿಣೆ ಕೊಡುವಂತಿಲ್ಲ ಮತ್ತು ತೆಗೆದುಕೊಳ್ಳುವಂತಿಲ್ಲ. ವರದಕ್ಷಿಣೆ ತೆಗೆದುಕೊಂಡವರಿಗೆ ಸಮುದಾಯದಿಂದ ಬಹಿಷ್ಕಾರ!

ಬಹಿಷ್ಕಾರವನ್ನು ಹೊರತುಪಡಿಸಿದರೆ, ಲಂಬಾಣಿ ಸಮುದಾಯದ ಹಿರಿಯರು ತೆಗೆದುಕೊಂಡಿರುವ ಠರಾವು ಎಲ್ಲ ಸಮುದಾಯಗಳಿಗೂ ಮಾದರಿ ಆಗುವಂತಿದೆ. ವರದಕ್ಷಿಣೆ ಕಾರಣದಿಂದಾಗಿ ಹೆಣ್ಣು ಹೆತ್ತವರು ಶೋಷಣೆಗೆ ಒಳಗಾಗುತ್ತಿದ್ದು, ಬಡ ಸಮುದಾಯಗಳು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಿವೆ. ವರದಕ್ಷಿಣೆಯನ್ನು ಹೊಂದಿಸುವುದಕ್ಕಾಗಿ ಆಸ್ತಿ ಮಾರಿರುವ ಪೋಷಕರಿದ್ದಾರೆ. ಮಗಳ ಮದುವೆಗಾಗಿ ಜೀತಕ್ಕೆ ಸಿಲುಕಿದವರೂ ಇದ್ದಾರೆ. ದುಬಾರಿ ಬಡ್ಡಿಗೆ ಸಾಲ ಮಾಡಿ, ಆ ಸಾಲವನ್ನು ತೀರಿಸಲಿಕ್ಕಾಗದೆ ಆತ್ಮಹತ್ಯೆ ಮೂಲಕ ಬದುಕು ಕೊನೆಗೊಳಿಸಿಕೊಂಡ ನತದೃಷ್ಟರೂ ಇದ್ದಾರೆ. ವರದಕ್ಷಿಣೆ ಅನೇಕ ಕುಟುಂಬಗಳನ್ನು ಬೀದಿಪಾಲಾಗಿಸಿದೆ.

ಈ ಸಮಸ್ಯೆ ನಿರ್ದಿಷ್ಟ ಕುಟುಂಬಕ್ಕೆ ಸಂಬಂಧಿಸಿದ ಸಮಸ್ಯೆಯಷ್ಟೇ ಆಗಿರದೆ, ಮಹಿಳೆಯರ ಸುರಕ್ಷತೆ ಮತ್ತು ಸಮಾನತೆಗೆ ಸಂಬಂಧಿಸಿದ ಬಿಕ್ಕಟ್ಟೂ ಆಗಿದೆ.

ವರದಕ್ಷಿಣೆ ಕಿರುಕುಳದಿಂದ ಸಂಭವಿಸಿರುವ ಘಟನೆಗಳು ನಾಗರಿಕ ಸಮಾಜವನ್ನು ಬೆಚ್ಚಿಬೀಳಿಸುವಂತಹವು. ಇಪ್ಪತ್ತಾರು ವರ್ಷದ ನವ ವಿವಾಹಿತೆಯೊಬ್ಬರು ಕಳೆದ ವರ್ಷ ಆತ್ಮಹತ್ಯೆ ಮಾಡಿಕೊಂಡರು. ಮದುವೆ ಸಂದರ್ಭದಲ್ಲಿ ವರ ಹಾಗೂ ಆತನ ಕುಟುಂಬದವರ ಎಲ್ಲ ಬೇಡಿಕೆಗಳನ್ನು ಪೂರೈಸಿದರೂ, ಮದುವೆಯ ನಂತರ ಹೆಚ್ಚಿನ ವರದಕ್ಷಿಣೆಗೆ ಒತ್ತಾಯಿಸಿ ಆಕೆಗೆ ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡಲಾಗುತ್ತಿತ್ತು. ಆ ಹಿಂಸೆ ತಾಳಲಾಗದೆ ನತದೃಷ್ಟ ಮಹಿಳೆ ಆತ್ಮಹತ್ಯೆಗೆ ಶರಣಾದರು. ಬೈಕ್ ಹಾಗೂ ಆಭರಣಗಳ ಬೇಡಿಕೆ ಈಡೇರಿಸಲಿಲ್ಲ ಎನ್ನುವ ಕಾರಣಕ್ಕೆ ಮಹಿಳೆಗೆ ಬೆಂಕಿ ಹಚ್ಚಿದ ಪ್ರಕರಣ ಉತ್ತರ ಪ್ರದೇಶದಲ್ಲಿ ನಡೆದಿದೆ. ವರದಕ್ಷಿಣೆ ಹಣ ತಾರದ ಕಾರಣಕ್ಕಾಗಿ ಪತ್ನಿಯನ್ನು ಪತಿಯೇ ಜೀವಂತವಾಗಿ ಸುಟ್ಟ ಘಟನೆ ಗ್ರೇಟರ್ ನೋಯ್ಡಾದಿಂದ ವರದಿ ಆಗಿತ್ತು. ಆ ಅಮಾನುಷ ಘಟನೆ ಮಗು ಹಾಗೂ ಕುಟುಂಬದ ಸಮ್ಮುಖದಲ್ಲೇ ನಡೆದಿದೆ. ಇವು ಉದಾಹರಣೆಗಳಷ್ಟೇ. ವರದಕ್ಷಿಣೆ ಕಾರಣಕ್ಕಾಗಿ ಪತ್ನಿಯನ್ನು ಪೀಡಿಸುವವರು ನಮ್ಮ ಸುತ್ತಮುತ್ತಲೇ ಸಾಕಷ್ಟು ಮಂದಿಯಿದ್ದಾರೆ.



ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದ ಮಾಹಿತಿಯ ಪ್ರಕಾರ 2023ರಲ್ಲಿ ಭಾರತದಲ್ಲಿ 15,489 ವರದಕ್ಷಿಣೆ ಪ್ರಕರಣಗಳು ದಾಖಲಾಗಿವೆ. 6,156 ವರದಕ್ಷಿಣೆ ಸಾವುಗಳು ದಾಖಲಾಗಿವೆ. ಅಂದರೆ ದಿನಕ್ಕೆ 17ರಿಂದ 20 ಮಹಿಳೆಯರು ವರದಕ್ಷಿಣೆ ಸಂಬಂಧಿತ ಹಿಂಸೆ ಅಥವಾ ಕಿರುಕುಳದಿಂದ ಸಾವನ್ನಪ್ಪಿದ್ದಾರೆ. ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಹೆಚ್ಚು ಸಾವುಗಳು ದಾಖಲಾಗಿವೆ.

ಕರ್ನಾಟಕದಲ್ಲಿ 2020ರಿಂದ 2025ರ ಅವಧಿಯಲ್ಲಿ 14,636 ವರದಕ್ಷಿಣೆ ಪ್ರಕರಣಗಳು ದಾಖಲಾಗಿದ್ದು, 834 ಸಾವುಗಳು ಸಂಭವಿಸಿವೆ ಎಂದು ವರದಿಯೊಂದು ಹೇಳುತ್ತಿದೆ. ತಿಂಗಳಿಗೆ ಸರಾಸರಿ 13 ಮಹಿಳೆಯರು ಸಾವನ್ನಪ್ಪಿರುವುದಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಇತ್ತೀಚೆಗೆ ಅಧಿವೇಶನದಲ್ಲಿ ಮಾಹಿತಿ ನೀಡಿದ್ದಾರೆ. ಈ ಅಂಕಿಅಂಶಗಳು ದಾಖಲಾಗಿರುವ ಪ್ರಕರಣಗಳಿಗೆ ಸಂಬಂಧಿಸಿದವು. ಅನೇಕ ಪ್ರಕರಣಗಳು ಬೆಳಕಿಗೆ ಬಾರದೆ ಮುಚ್ಚಿಹೋಗುತ್ತವೆ.

ಭಾರತದಲ್ಲಿ 1961ರಲ್ಲಿಯೇ ವರದಕ್ಷಿಣೆ ಪದ್ಧತಿ ನಿಷೇಧಿಸಲಾಗಿದೆ. ವರದಕ್ಷಿಣೆ ನಿಷೇಧ ಕಾಯ್ದೆಯ ಪ್ರಕಾರ ತಪ್ಪಿತಸ್ಥರಿಗೆ ಕನಿಷ್ಠ 5 ವರ್ಷಗಳ ಶಿಕ್ಷೆ ಹಾಗೂ ಕನಿಷ್ಠ ₹15 ಸಾವಿರ ದಂಡ ವಿಧಿಸಬಹುದಾಗಿದೆ. ಮಹಿಳೆಯರ ಮೇಲಿನ ಶೋಷಣೆ ಮತ್ತು ಹಿಂಸೆ ತಡೆಯುವುದು ಹಾಗೂ ಸಮಾನತೆಯನ್ನು ಉತ್ತೇಜಿಸುವುದು, ಸಮಾಜದಲ್ಲಿ ಆರೋಗ್ಯಕರ ವಿವಾಹ ಪದ್ಧತಿಯನ್ನು ರೂಢಿಸುವುದಕ್ಕಾಗಿ ಈ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಮದುವೆಯ ಸಮಯದಲ್ಲಿ ವರ ಅಥವಾ ವಧುವಿನ ಕುಟುಂಬದಿಂದ ಹಣ, ಆಸ್ತಿ, ಅಥವಾ ಯಾವುದೇ ಮೌಲ್ಯಯುತ ವಸ್ತುಗಳನ್ನು ನೀಡುವುದು, ಪಡೆಯುವುದು ಅಥವಾ ಕೇಳುವುದು ಕಾನೂನುಬಾಹಿರ. ಆದರೆ, ಈ ಕಾಯ್ದೆ ಹಾಳೆಯ ಮೇಲಷ್ಟೇ ಉಳಿದಿದೆ. ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಶಿಕ್ಷಾರ್ಹ ಅಪರಾಧವಾದರೂ, ಕಾನೂನಿನ ಭಯವಿಲ್ಲದೆ ಅನಿಷ್ಟ ಪದ್ಧತಿ ಮುಂದುವರಿದಿದೆ.

ವರದಕ್ಷಿಣೆಯ ಪರಿಣಾಮಗಳು ಸಾಮಾಜಿಕ ಚಲನೆಯನ್ನು ಹಿಮ್ಮುಖವಾಗಿಸುತ್ತವೆ. ಹೆಣ್ಣು ಭ್ರೂಣಹತ್ಯೆಗೆ ವರದಕ್ಷಿಣೆಯೂ ಒಂದು ಕಾರಣವಾಗಿದೆ. ಕೆಲವು ಪೋಷಕರು ಹೆಣ್ಣುಮಕ್ಕಳ ಶಿಕ್ಷಣಕ್ಕಿಂತಲೂ ಮದುವೆಗೆ ಹೆಚ್ಚಿನ ಆದ್ಯತೆ ನೀಡುತ್ತಾರೆ. ಇದರಿಂದ ಮಹಿಳಾ ಶಿಕ್ಷಣ, ಸ್ವಾವಲಂಬನೆಗೆ ಅಡ್ಡಿಯಾಗುತ್ತದೆ. ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ.

ಮದುವೆಯ ಸಂಬಂಧ ಪರಸ್ಪರ ಪ್ರೀತಿ, ಗೌರವ ಮತ್ತು ನಂಬಿಕೆಯನ್ನು ಆಧರಿಸಿರಬೇಕೇ ಹೊರತು, ಹಣ ಅಥವಾ ಆಸ್ತಿಯನ್ನಲ್ಲ. ಅನೇಕ ವಿದ್ಯಾವಂತರು ಕೂಡ ವರದಕ್ಷಿಣೆಯನ್ನು ಪ್ರೋತ್ಸಾಹಿಸುತ್ತಿರುವುದು ದುರದೃಷ್ಟಕರ. ‘ವರದಕ್ಷಿಣೆ ಬೇಡ ಎಂದು ಸ್ಪಷ್ಟವಾಗಿ ಹೇಳುವ ಯುವಜನರ ಸಂಖ್ಯೆ ಹೆಚ್ಚಾಗುವುದೊಂದೇ ಈ ಸಮಸ್ಯೆಗೆ ಪರಿಹಾರ ಆಗಬಲ್ಲದು. ವರದಕ್ಷಿಣೆಯನ್ನು ಯುವಕರು ವಿರೋಧಿಸಬೇಕು ಹಾಗೂ ವರದಕ್ಷಿಣೆ ಬಯಸುವ ಯುವಕರನ್ನು ಮದುವೆಯಾಗಲು ತರುಣಿಯರು ನಿರಾಕರಿಸಬೇಕು. ಈ ನಿರಾಕರಣೆ ಒಂದು ಆಂದೋಲನವಾಗಿ ಬೆಳೆಯುವ ಅಗತ್ಯವಿದೆ. ಇಂಥದೊಂದು ಆಂದೋಲನಕ್ಕೆ ಗಜೇಂದ್ರಗಡ ತಾಲ್ಲೂಕಿನ ಬಂಜಾರ ಸಮುದಾಯದ ಠರಾವು ಮುನ್ನುಡಿಯಂತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಪರಿಣಾಮ

ಪ್ರಧಾನಿ ‘ಆಪತ್ಕಾಲ’ದ ಕರೆಯ ಸುತ್ತ

ಪ್ರಜಾವಾಣಿ ವಾರ್ತೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧ ಆರಂಭವಾಗಿದ್ದು ಫೆಬ್ರುವರಿ 28ರಂದು. ಅಂದಿನಿಂದಲೂ ಜಾಗತಿಕ ಮಟ್ಟದಲ್ಲಿ ಅಸ್ಥಿರತೆ ತಲೆದೋರಿತು. ಆಮದು ರಫ್ತುಗಳಲ್ಲಿ ವ್ಯತ್ಯಾಸಗಳು ಉಂಟಾದವು. ವಿವಿಧ ದೇಶಗಳಲ್ಲಿ ಇಂಧನ ತುಟ್ಟಿ ಆಯಿತು. ಕೆಲವು ದೇಶಗಳಲ್ಲಿ ಪಡಿತರ ರೀತಿಯಲ್ಲಿ ಪೆಟ್ರೋಲ್, ಡೀಸೆಲ್, ಅಡುಗೆ ಅನಿಲ ವಿತರಿಸುವ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಆದರೆ, ಭಾರತದಲ್ಲಿ ಮಾತ್ರ ಯುದ್ಧದಿಂದ ಎಲ್‌ಪಿಜಿ ಕೊರತೆ ಸೇರಿ ಸಣ್ಣಪುಟ್ಟ ಸಮಸ್ಯೆಗಳು ಬಿಟ್ಟರೆ ದೊಡ್ಡ ಪರಿಣಾಮಗಳು ಉಂಟಾಗಿಲ್ಲ ಎನ್ನುವಂಥ ವಾತಾವರಣ ಇತ್ತು. ಐದು ವಿಧಾನಸಭಾ ಚುನಾವಣಾ ಫಲಿತಾಂಶ ಪ್ರಕಟವಾದ ಕೆಲವೇ ದಿನಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರದ ಹಲವು ಸಚಿವರು ಪಶ್ಚಿಮ ಏಷ್ಯಾ ಬಿಕ್ಕಟ್ಟಿನಿಂದಾಗಿ ಎದುರಾಗಬಹುದಾದ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರಿಗೆ ಎದುರಾಗಬಹುದಾದ ಸಮಸ್ಯೆಗಳನ್ನು ಎದುರಿಸಲು ಅನುಸರಿಸಬೇಕಾದ ಕೆಲವು ಸಲಹೆಗಳನ್ನು ನೀಡಿದ್ದಾರೆ. ತೈಲ ದರ ಏರಿಕೆ ಹಾದಿಯಲ್ಲಿರುವುದು, ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿರುವುದು, ವಿದೇಶಿ ವಿನಿಮಯ ಮೀಸಲು ಸಂಗ್ರಹ ಕಡಿಮೆಯಾಗುತ್ತಿರುವುದು ಇವೇ ಮುಂತಾದ ಕಾರಣಗಳಿಂದ ಮೋದಿ ಅವರು ದೇಶದ ಜನರಿಗೆ ಕೆಲವು ಉಳಿತಾಯ ಕ್ರಮಗಳನ್ನು ಸೂಚಿಸಿದ್ದಾರೆ ಎನ್ನಲಾಗುತ್ತಿದೆ. ಅವರು ನೀಡಿರುವ ಸಲಹೆಗಳು ಹಲವು ಅನುಮಾನ, ಆತಂಕಗಳಿಗೆ ಕಾರಣವಾಗಿವೆ. ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿ ಎದುರಾಗಲಿದೆ ಎನ್ನುವ ಸೂಕ್ಷ್ಮವನ್ನು ಪ್ರಧಾನಿ ಅವರ ಮಾತುಗಳು ಧ್ವನಿಸುತ್ತಿವೆ ಎಂದೂ ಹೇಳಲಾಗುತ್ತಿದೆ.

ದೇಶದ ಹಲವೆಡೆ ಪ್ರಧಾನಿ ಮೋದಿ ಅವರ ಸಲಹೆಗಳನ್ನು ಪಾಲಿಸಲಾಗುತ್ತಿದೆ. ಹೆಚ್ಚುವರಿ ವಾಹನಗಳನ್ನು ಸರ್ಕಾರಕ್ಕೆ ವಾಪಸ್ ನೀಡುವಂತೆ ಉತ್ತರಾಖಂಡ ಮೇಯರ್ ಆದೇಶಿಸಿದ್ದಾರೆ. ಜನರನ್ನು ಮೆಟ್ರೊಗಳಲ್ಲಿ ಸಂಚರಿಸಲು ಉತ್ತೇಜಿಸಲು ಕೇಂದ್ರ ಸಚಿವ ರಾಮದಾಸ್ ಅಠವಳೆ ಮುಂಬೈನಲ್ಲಿ ಮೆಟ್ರೊದಲ್ಲಿ ಪ್ರಯಾಣಿಸಿದ್ದಾರೆ. ಛತ್ತೀಸಗಢದ ಕಬೀರ್‌ಧಾಮ್‌ನಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳು ತಮ್ಮ ಜೀಪುಗಳನ್ನು ಬಿಟ್ಟು ಸೈಕಲ್‌ಗಳಲ್ಲಿ ಕೆಲಸಕ್ಕೆ ತೆರಳಿದ್ದಾರೆ. ಆದರೆ, ಪ್ರಧಾನಿ ಮೋದಿ ಅವರ ಮಾತುಗಳು ವಿವಿಧ ವಲಯಗಳ ಒಟ್ಟಾರೆ ಸ್ಥಿತಿಯ ಮೇಲೆ ಎಂಥ ಪರಿಣಾಮ ಬೀರಲಿವೆ ಎನ್ನುವುದು ಮುಂದಿನ ದಿನಗಳಲ್ಲಿ ತಿಳಿದುಬರಲಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಫೋರ್ಬ್ಸ್, ಡಿಜಿಸಿಐಎಸ್

ಪೆಟ್ರೋಲ್, ಡೀಸೆಲ್ ತುಟ್ಟಿ?

ಭಾರತವು ಶೇ 85ರಷ್ಟು ಕಚ್ಚಾ ತೈಲ ಸೇರಿದಂತೆ ಎಲ್‌ಪಿಜಿ, ಸಿಎನ್‌ಜಿಗೆ ಆಮದನ್ನೇ ಅವಲಂಬಿಸಿದೆ. ಆದರೆ, ಹೊರ್ಮುಜ್ ಜಲಸಂಧಿ ಮುಚ್ಚಿರುವುದರಿಂದ ಅವುಗಳ ಪೂರೈಕೆಗೆ ಅಡ್ಡಿಯುಂಟಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ತೈಲ ದರ ಹೆಚ್ಚಳವಾಗಿದ್ದರೂ (ಸದ್ಯ ಬ್ಯಾರಲ್‌ಗೆ ₹107 ಡಾಲರ್) ದೇಶದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವಾಗಿಲ್ಲ. ಬೆಲೆ ಹೆಚ್ಚಳ ಮಾಡದಿರಲು ಐದು ವಿಧಾನಸಭೆಗಳ ಚುನಾವಣೆ ಕಾರಣ ಎನ್ನಲಾಗುತ್ತಿತ್ತು. ಯುದ್ಧದಿಂದಾಗಿ ಕಚ್ಚಾ ತೈಲದ ಬೆಲೆ ಏರಿಕೆಯಾದ ನಂತರ ತೈಲ ಕಂಪನಿಗಳು ದಿನಕ್ಕೆ ₹1,000 ಕೋಟಿ ನಷ್ಟ ಅನುಭವಿಸುತ್ತಿವೆ ಎಂದು ಕೇಂದ್ರ ಹೇಳಿದೆ. ಡೀಸೆಲ್, ಪೆಟ್ರೋಲ್ ಹೆಚ್ಚಳ ಅನಿವಾರ್ಯ ಎಂದು ತೈಲ ಕಂಪನಿಗಳು ಹೇಳುತ್ತಿದ್ದು, ಪ್ರತಿ ಲೀಟರ್‌ಗೆ ಕನಿಷ್ಠ ₹5ನಷ್ಟು ಹೆಚ್ಚಿಸುವಂತೆ ಒತ್ತಡ ಹಾಕುತ್ತಿವೆ. ಹೀಗಾಗಿ ಶೀಘ್ರದಲ್ಲಿಯೇ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಖಚಿತ ಎಂದು ಹೇಳಲಾಗುತ್ತಿದೆ.

ಚಿನ್ನದ ವ್ಯಾಪಾರಿಗಳ ವಿರೋಧ

ಅನಗತ್ಯವಾಗಿ ಚಿನ್ನ ಖರೀದಿಸುವುದನ್ನು ಕಡಿಮೆ ಮಾಡಿ ಎಂದು ಮೋದಿ ಅವರು ಕರೆ ನೀಡಿದ ಬೆನ್ನಲ್ಲೇ ಚಿನ್ನಾಭರಣ ವ್ಯಾಪಾರಿಗಳು ಅದಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಚಿನ್ನಾಭರಣ ತಯಾರಿಕೆಯಲ್ಲಿ ತೊಡಗಿರುವ ಕಾರ್ಮಿಕರು, ವಿನ್ಯಾಸಕಾರರು, ಕುಶಲಕರ್ಮಿಗಳು, ಸಣ್ಣ ವ್ಯಾಪಾರಸ್ಥರು ಸೇರಿದಂತೆ ಲಕ್ಷಾಂತರ ಮಂದಿಯ ಜೀವನೋಪಾಯಕ್ಕೆ ಇದರಿಂದ ಹೊಡೆತ ಬೀಳಲಿದೆ ಎಂದು ಚಿನ್ನಾಭರಣ ಮಾರಾಟಗಾರರ ಸಂಘ ಹೇಳಿದೆ. ಜೈಪುರದ ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಅವರ ಕರೆಯಿಂದ ಚಿನ್ನದ ಲಭ್ಯತೆ ಅಥವಾ ಬೇಡಿಕೆ ಕುಸಿದರೆ, ಅದರ ನೇರ ಪರಿಣಾಮವು ಚಿನ್ನಾಭರಣಗಳ ಉದ್ಯಮದ ಮೇಲೆ ಉಂಟಾಗಲಿದೆ ಎಂದಿದ್ದಾರೆ. ಪ್ರಮುಖ ಚಿನ್ನಾಭರಣ ಕಂಪನಿಗಳ ಷೇರುಗಳ ಮೌಲ್ಯ ಶೇ 6ರಿಂದ ಶೇ 11ರವರೆಗೆ ಕುಸಿದಿದೆ. ಚಿನ್ನ ಖರೀದಿಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವ ಬದಲು ಚಿನ್ನದ ಮರುಬಳಕೆಗೆ ಉತ್ತೇಜನ ನೀಡುವುದು ಹೆಚ್ಚು ಸೂಕ್ತ ಎಂದು ವರ್ತಕರು ಹೇಳಿದ್ದಾರೆ.





ಹೈಬ್ರೀಡ್ ಮಾದರಿಯ ಕೆಲಸ

ಇಂಧನ ಬಳಕೆ ಕಡಿಮೆ ಮಾಡಲು ಕೋವಿಡ್ ಕಾಲದಲ್ಲಿ ಅನುಭವಿಸಿದಂಥ ಕಠಿಣ ಕ್ರಮಗಳನ್ನು ಅನುಸರಿಸುವುದರ ಬಗ್ಗೆಯೂ ಪ್ರಧಾನಿ ಮೋದಿ ಮಾತನಾಡಿದ್ದಾರೆ. ಕಂಪನಿಗಳು ತಮ್ಮ ಸಿಬ್ಬಂದಿಗೆ ವರ್ಕ್ ಫ್ರಮ್ ಹೋಮ್ ಅವಕಾಶ ನೀಡುವುದು, ಸಾರ್ವಜನಿಕ ಸಾರಿಗೆ ಬಳಸುವುದು ಸೇರಿದಂತೆ ಹಲವು ಸಲಹೆಗಳನ್ನು ಮೋದಿ ನೀಡಿದ್ದಾರೆ. ಕಾರ್ಪೊರೇಟ್ ವಲಯದಿಂದ ಪ್ರಧಾನಿ ಸಲಹೆಗೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈಗಾಗಲೇ ದೇಶದ ಐಟಿ ಸೇರಿದಂತೆ ಹಲವು ವಲಯಗಳ ಕಂಪನಿಗಳು ತಮ್ಮ ಉದ್ಯೋಗಿಗಳಿಗೆ ವಾರಕ್ಕೆ ಸಂಪೂರ್ಣವಾಗಿ ವರ್ಕ್ ಫ್ರಮ್ ಹೋಮ್ ಅವಕಾಶದ ಬದಲಿಗೆ ಹೈಬ್ರೀಡ್ (ವಾರದಲ್ಲಿ ಕೆಲವು ದಿನ ಕಚೇರಿಯಲ್ಲಿ ಕೆಲಸ) ಮಾದರಿಯನ್ನು ಅನುಸರಿಸುತ್ತಿವೆ. ಇದೇ ವ್ಯವಸ್ಥೆಯನ್ನು ಇನ್ನಷ್ಟು ಸಮಯ ಮುಂದುವರಿಸಬಹುದು ಎನ್ನಲಾಗುತ್ತಿದೆ. ಹುದ್ದೆ ಮತ್ತು ಅಗತ್ಯಕ್ಕೆ ತಕ್ಕಂತೆ ಸಿಬ್ಬಂದಿಗೆ ಹೈಬ್ರೀಡ್ ಮತ್ತು ವರ್ಕ್ ಫ್ರಮ್ ಹೋಮ್ ಅವಕಾಶಗಳನ್ನು ನೀಡಲಾಗುವುದು ಎಂದು ಐಟಿ ಉದ್ಯಮಗಳ ಒಕ್ಕೂಟ ‘ನಾಸ್ಕಾಂ’ ಹೇಳಿದೆ. ಆದರೆ, ಕೋವಿಡ್ ಕಾಲದ ವರ್ಕ್ ಫ್ರಮ್ ಹೋಮ್ ಮಾದರಿಯಿಂದ ಈಚೆಗಷ್ಟೇ ಹೊರಬಂದಿರುವ ಹಲವು ಕಂಪನಿಗಳು, ಸಿಬ್ಬಂದಿಗೆ ಮತ್ತೆ ಪೂರ್ಣ ಪ್ರಮಾಣದಲ್ಲಿ ವರ್ಕ್ ಫ್ರಮ್ ಹೋಮ್ ಅವಕಾಶ ನೀಡುವುದು ಅನುಮಾನ ಎನ್ನಲಾಗುತ್ತಿದೆ.



ರಸಗೊಬ್ಬರದ ಬಿಕ್ಕಟ್ಟು

ಯುದ್ಧದಿಂದ ಭಾರಿ ಸಂಕಷ್ಟಕ್ಕೀಡಾಗಿರುವ ಮತ್ತೊಂದು ವಲಯ, ರಸಗೊಬ್ಬರ ಪೂರೈಕೆ ವಲಯ. ಯೂರಿಯಾ, ಡೈಅಮೋನಿಯಂ ಪಾಸ್ಫೇಟ್ (ಡಿಎಪಿ), ಅಮೋನಿಯಂ ಮುಂತಾದ ರಸಗೊಬ್ಬರಗಳ ಬೆಲೆ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿದೆ. ಭಾರತಕ್ಕೆ ಶೇ 75ರಷ್ಟು ಯೂರಿಯಾ ಕೊಲ್ಲಿ ರಾಷ್ಟ್ರಗಳಿಂದ ಆಮದಾಗುತ್ತದೆ. ಯುಎಇ, ಕತಾರ್, ಓಮನ್ ಮುಂತಾದ ದೇಶಗಳಿಂದ ಬರುತ್ತಿದ್ದ ಎಲ್‌ಎನ್‌ಜಿ ಆಧರಿಸಿದ್ದ ದೇಶೀಯ ಯೂರಿಯಾ ಉತ್ಪಾದನಾ ಘಟಕಗಳೂ ಉತ್ಪಾದನೆ ಕಡಿತಗೊಳಿಸಿವೆ. ಭಾರತಕ್ಕೆ ಮುಂಗಾರಿನಲ್ಲಿ 1.94 ಕೋಟಿ ಟನ್ ಯೂರಿಯಾ ಅಗತ್ಯವಿದ್ದು, 55 ಲಕ್ಷ ಟನ್ ಮಾತ್ರ ಲಭ್ಯವಿದೆ. ಈ ದಿಸೆಯಲ್ಲಿ ಪ್ರಧಾನಿ ಮೋದಿ ಅವರು, ರಸಗೊಬ್ಬರಗಳ ಬಳಕೆಯನ್ನು ಅರ್ಧದಷ್ಟು ಕಡಿಮೆ ಮಾಡುವಂತೆ ರೈತರಿಗೆ ಕರೆ ನೀಡಿದ್ದಾರೆ. ಆದರೆ, ದೇಶದ ರೈತರು ಇತ್ತೀಚಿನ ವರ್ಷಗಳಲ್ಲಿ ಸಾವಯವ ಗೊಬ್ಬರಗಳ ಬಳಕೆಯನ್ನು ಕಡಿಮೆ ಮಾಡಿದ್ದು, ಬಹುತೇಕ ರಸಗೊಬ್ಬರಗಳನ್ನೇ ಅವಲಂಬಿಸಿದ್ದಾರೆ. ಹೀಗಾಗಿ ರಸಗೊಬ್ಬರಗಳ ಕೊರತೆಯು ಆಹಾರ ಉತ್ಪಾದನೆ ಮೇಲೆ ಪರಿಣಾಮ ಬೀರುವ ಸಂಭವ ಇದೆ ಎನ್ನಲಾಗುತ್ತಿದೆ.

ಪರ್ಯಾಯ ಅಡುಗೆ ಎಣ್ಣೆ

ಮೋದಿ ಅವರು ಒತ್ತಿ ಹೇಳಿರುವ ಮತ್ತೊಂದು ವಿಚಾರ, ಅಡುಗೆ ಎಣ್ಣೆ ಬಳಕೆ ನಿಯಂತ್ರಣ. ಇಂಡೊನೇಷ್ಯಾ, ಮಲೇಷ್ಯಾ, ಉಕ್ರೇನ್, ರಷ್ಯಾ ಮುಂತಾದ ದೇಶಗಳಿಂದ ಅಡುಗೆ ಎಣ್ಣೆ ಆಮದು ಮಾಡಿಕೊಳ್ಳಲಾಗುತ್ತಿದ್ದು, ಅದು ವಿದೇಶಿ ವಿನಿಮಯ ಮತ್ತು ರೂಪಾಯಿ ಮೌಲ್ಯದ ಮೇಲೆ ಪರಿಣಾಮ ಬೀರುತ್ತಿದೆ. ಜನರು ಅಡುಗೆ ತಯಾರಿಗೆ ಕಡಿಮೆ ಎಣ್ಣೆ ಬಳಸಿದರೆ, ಅದು ದೇಶದ ಆರ್ಥಿಕತೆ ಮತ್ತು ಜನರ ಆರೋಗ್ಯ– ಎರಡರ ದೃಷ್ಟಿಯಿಂದಲೂ ಉತ್ತಮ ಎಂದಿದ್ದಾರೆ ಮೋದಿ. ಆಮದು ಮಾಡಿಕೊಳ್ಳುವ ಸೂರ್ಯಕಾಂತಿ, ತಾಳೆ ಎಣ್ಣೆಗಳ ಬದಲಿಗೆ ದೇಶೀಯವಾದ ಸಾಸಿವೆ ಎಣ್ಣೆ ಬಳಸುವುದು ಪರ್ಯಾಯವಾಗಬಲ್ಲದು. ಆದರೆ, ಆಮದಿಗೆ ಪರ್ಯಾಯವಾಗುವಂತೆ ತಕ್ಷಣಕ್ಕೆ ಸಾಸಿವೆ ಎಣ್ಣೆ ಉತ್ಪಾದನೆಯನ್ನು ಬೃಹತ್ ಪ್ರಮಾಣದಲ್ಲಿ ಹೆಚ್ಚಿಸುವುದು ಕಷ್ಟಸಾಧ್ಯ. ಹೀಗಾಗಿ ಇದು ಎಷ್ಟರ ಮಟ್ಟಿಗೆ ಪಾಲನೆಯಾಗಲಿದೆ ಎನ್ನುವ ಬಗ್ಗೆ ಅನುಮಾನಗಳಿವೆ.

ಭಾರತದಿಂದ ಚಿನ್ನ ಆಮದು (ಟನ್‌ಗಳಲ್ಲಿ)

(ಆವರಣದಲ್ಲಿರುವುದು ಆಮದು ಮಾಡಿದ ಚಿನ್ನದ ಮೌಲ್ಯ)

2022-23	678.3	(₹2.84 ಲಕ್ಷ ಕೋಟಿ)
2023-24	795.2	(₹3.80 ಲಕ್ಷ ಕೋಟಿ)
2024-25	757.09	(₹5.38 ಲಕ್ಷ ಕೋಟಿ)
2025-26	721.03	(₹6.68 ಲಕ್ಷ ಕೋಟಿ)

ಹಿಂದೆ ಕರೆ ನೀಡಿದ್ದ ಕಾಂಗ್ರೆಸ್ ನಾಯಕರು

2013ರಲ್ಲಿ ಯುಪಿಎ ಸರ್ಕಾರದ ಅವಧಿಯಲ್ಲಿ ಹಣಕಾಸು ಸಚಿವರಾಗಿದ್ದ ಪಿ.ಚಿದಂಬರಂ, ಪೆಟ್ರೋಲಿಯಂ, ನೈಸರ್ಗಿಕ ಅನಿಲ ಸಚಿವರಾಗಿದ್ದ ಎಂ.ವೀರಪ್ಪ ಮೊಯಿಲಿ ಅವರು ಚಿನ್ನ, ಪೆಟ್ರೋಲಿಯಂ ಉತ್ಪನ್ನಗಳ ಆಮದನ್ನು ಕಡಿಮೆಗೊಳಿಸಿ, ವಿದೇಶಿ ವಿನಿಮಯ ಮೀಸಲನ್ನು ಉಳಿಸುವ ಬಗ್ಗೆ ಮಾತನಾಡಿದ್ದರು. ರೂಪಾಯಿ ಮೌಲ್ಯವು ದಾಖಲೆ ಪ್ರಮಾಣದಲ್ಲಿ ಕುಸಿಯುತ್ತಿದ್ದಾಗ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಕೂಡ ಚಿನ್ನ ಖರೀದಿ, ಪೆಟ್ರೋಲ್ ಉತ್ಪನ್ನಗಳ ಬಳಕೆ ಕಡಿಮೆ ಮಾಡುವ ಅಗತ್ಯದ ಬಗ್ಗೆ ಪ್ರಸ್ತಾಪಿಸಿದ್ದರು.

ದೇಶದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಆರು ತಿಂಗಳುಗಳಿಂದ ಒಂದು ವರ್ಷದವರೆಗೆ ಚಿನ್ನ ಖರೀದಿಯನ್ನು ತಪ್ಪಿಸುವಂತೆ ಚಿದಂಬರಂಅವರುಮನವಿಮಾಡಿದ್ದರು.


ಎಂ.ವೀರಪ್ಪ ಮೊಯಿಲಿ ಅವರು ಪೆಟ್ರೋಲ್, ಡೀಸೆಲ್ ಬಳಕೆಯನ್ನು ಕಡಿಮೆಗೊಳಿಸುವ ಪ್ರಯತ್ನವಾಗಿ ಆರು ತಿಂಗಳು ರಾತ್ರಿ 8ಗಂಟೆಯ ಬಳಿಕ ಪೆಟ್ರೋಲ್ ಬಂಕ್‌ಗಳನ್ನು ಮುಚ್ಚುವ ಪ್ರಸ್ತಾವವನ್ನು ಮುಂದಿಟ್ಟಿದ್ದರು.

ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರು ಕೂಡ 2013ರ ಆಗಸ್ಟ್ 30ರಂದು ಸಂಸತ್ತಿನಲ್ಲಿ ಮಾತನಾಡುತ್ತಾ, ‘ಚಿನ್ನದ ಮೇಲಿಟ್ಟಿರುವ ಒಲವನ್ನು ನಾವು ಕಡಿಮೆ ಮಾಡಬೇಕು ಮತ್ತು ದೇಶವು ಪೆಟ್ರೋಲಿಯಂ ಉತ್ಪನ್ನಗಳನ್ನು ಹಿತಮಿತವಾಗಿ ಬಳಸಬೇಕು’ ಎಂದು ಸಂಸತ್ತಿನಲ್ಲೇ ಹೇಳಿದ್ದರು.

ಕಾಂಗ್ರೆಸ್ ಟೀಕೆ

ಪ್ರಧಾನಿ ನರೇಂದ್ರ ಮೋದಿ ಅವರು ಹಲವು ಕ್ರಮಗಳನ್ನು ಅನುಸರಿಸುವಂತೆ ಕರೆ ನೀಡಿರುವುದು ದೇಶವು ಆರ್ಥಿಕ ತುರ್ತುಪರಿಸ್ಥಿತಿಯತ್ತ ಸಾಗುತ್ತಿರುವುದನ್ನು ಸೂಚಿಸುತ್ತಿದೆ. ಇದು ಮೋದಿ ಅವರ ವೈಫಲ್ಯ ಎಂದು ಕಾಂಗ್ರೆಸ್ ಆರೋಪಿಸಿದೆ.

ವಿದೇಶಿ ವಿನಿಮಯ ಮೀಸಲು ಸಂಗ್ರಹ



- ವಿದೇಶಿ ವಿನಿಮಯ ಮೀಸಲು ಸಂಗ್ರಹದ ಪ್ರಮುಖ ಭಾಗವಾಗಿರುವ ವಿದೇಶಿ ಕರೆನ್ಸಿಗಳ ಒಟ್ಟಾರೆ ಮೌಲ್ಯ ಏಪ್ರಿಲ್ 24ಕ್ಕೆ ಹೋಲಿಸಿದರೆ ಮೇ 30ಗಳ ಆರಂಭದಲ್ಲಿ ₹26,756 ಕೋಟಿಯಷ್ಟು ಕಡಿಮೆಯಾಗಿ ₹52.79 ಲಕ್ಷ ಕೋಟಿಗೆ ತಲುಪಿದೆ
- ಅದೇ ರೀತಿ ಚಿನ್ನದ ಮೀಸಲು ಮೌಲ್ಯ ₹48 ಸಾವಿರ ಕೋಟಿಯಷ್ಟು ಕಡಿಮೆಯಾಗಿದೆ. ಮೇ 1ರ ಅಂಕಿ ಅಂಶಗಳ ಪ್ರಕಾರ, ದೇಶದ ವಿದೇಶಿ ವಿನಿಮಯ ಮೀಸಲಿನಲ್ಲಿ ಚಿನ್ನದ ಪಾಲು ₹11.02 ಲಕ್ಷ ಕೋಟಿ

ಆಮದಿಗೂ ವಿದೇಶಿ ವಿನಿಮಯ ಮೀಸಲಿಗೂ ಏನು ಸಂಬಂಧ?

ಯಾವುದೇ ದೇಶದ ಕೇಂದ್ರೀಯ ಬ್ಯಾಂಕುಗಳು, ವಿದೇಶಿ ಕರೆನ್ಸಿಗಳು (ಸಾಮಾನ್ಯವಾಗಿ ಡಾಲರ್), ಚಿನ್ನ ಹಾಗೂ ಬಾಂಡ್‌ಗಳು ಸೇರಿದಂತೆ ಇನ್ನಿತರ ಬಂಡವಾಳ ಮಾರುಕಟ್ಟೆಯ ಉತ್ಪನ್ನಗಳ (ಸೆಕ್ಯೂರಿಟಿಸ್) ರೂಪದಲ್ಲಿ ಹೊಂದಿರುವ ಆಸ್ತಿಯನ್ನು ವಿದೇಶಿ ವಿನಿಮಯ ಮೀಸಲು ಸಂಗ್ರಹ ಎನ್ನಲಾಗುತ್ತದೆ.

ಭಾರತದಲ್ಲಿ ಆರ್‌ಬಿಐಯು ಈ ಮೀಸಲು ಸಂಗ್ರಹವನ್ನು ಹೊಂದಿದೆ. ದೇಶದ ಕರೆನ್ಸಿ (ರೂಪಾಯಿ) ಮೌಲ್ಯ ಸ್ಥಿರವಾಗಿರುವಂತೆ ನೋಡಿಕೊಳ್ಳುವುದು, ಆರ್ಥಿಕ ಅನಿಶ್ಚಿತ ಸ್ಥಿತಿಯನ್ನು ಸಮರ್ಥವಾಗಿ ಎದುರಿಸುವ ಉದ್ದೇಶ ವಿದೇಶಿ ವಿನಿಮಯ ಮೀಸಲು ಸಂಗ್ರಹದ ಹಿಂದಿದೆ.

ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹದಲ್ಲಿ ವಿದೇಶಿ ಕರೆನ್ಸಿಗಳದ್ದು ಸಿಂಹಪಾಲು (ಶೇ 79ರಷ್ಟು). ಅದರಲ್ಲೂ ಡಾಲರ್ ಹೆಚ್ಚಿದೆ. ಶೇ 16ರಷ್ಟು ಚಿನ್ನ ಇದೆ. ಆರ್‌ಬಿಐಯು ಪ್ರತಿ ವರ್ಷ ಚಿನ್ನವನ್ನು ಖರೀದಿಸಿ, ಮೀಸಲು ಸಂಗ್ರಹವನ್ನು ಬಲಪಡಿಸುತ್ತಿರುತ್ತದೆ. ಕಳೆದ ಆರ್ಥಿಕ ವರ್ಷದಲ್ಲಿ 168 ಟನ್‌ಗಳಷ್ಟು ಖರೀದಿಸಿ, ಸಂಗ್ರಹದ ಪ್ರಮಾಣವನ್ನು 880 ಟನ್‌ಗೆ ಹೆಚ್ಚಿಸಿದೆ. ಮತ್ತು ಅಂತರರಾಷ್ಟ್ರೀಯ ಹಣಕಾಸು ನಿಧಿ ನಿರ್ವಹಿಸುವ ಸ್ಪೆಷಲ್ ಡ್ರಾಯಿಂಗ್ ರೈಟ್ಸ್ (ಎಸ್‌ಡಿಆರ್) ಎಂಬ ಪೂರಕ ವಿದೇಶಿ ವಿನಿಮಯ ಆಸ್ತಿಯನ್ನೂ ಭಾರತದ ವಿದೇಶಿ ವಿನಿಮಯ ಮೀಸಲು ಹೊಂದಿದೆ.

ಭಾರತದ ಆರ್ಥಿಕ ಪ್ರಗತಿ ವೇಗವಾಗಿ ಸಾಗುತ್ತಿದ್ದರೂ, ಕೆಲವು ವರ್ಷಗಳಿಂದೀಚೆಗೆ ಡಾಲರ್ ಎದುರು ರೂಪಾಯಿ ಮೌಲ್ಯ ಕುಸಿಯುತ್ತಿದ್ದು, ಪಶ್ಚಿಮ ಏಷ್ಯಾ ಯುದ್ಧ ಆರಂಭಗೊಂಡ ನಂತರ ರೂಪಾಯಿಯ ಮೌಲ್ಯವು ಗಣನೀಯ ಪ್ರಮಾಣದಲ್ಲಿ ಕುಸಿಯುತ್ತಿದೆ. ಅಲ್ಲದೇ ಚಾಲ್ತಿ ಖಾತೆ ಕೊರತೆ ಹೆಚ್ಚಾಗುವ ಆತಂಕವೂ ಎದುರಾಗಿದೆ. ಸಾಮಾನ್ಯವಾಗಿ ರೂಪಾಯಿ ಮೌಲ್ಯ ಕುಸಿತವಾದಾಗ, ಆರ್‌ಬಿಐ ಮಧ್ಯಪ್ರವೇಶಿಸಿ, ಮೀಸಲು ವಿನಿಮಯದಿಂದ ಡಾಲರ್ ಕರೆನ್ಸಿಗಳನ್ನು ಮಾರಾಟ ಮಾಡಿ ಮೌಲ್ಯದಲ್ಲಿ ಸ್ಥಿರತೆ ತರಲು ಯತ್ನಿಸುತ್ತಿದೆ.



ರೂಪಾಯಿ ಮೌಲ್ಯ ಕುಸಿಯುತ್ತಿರುವುದರ ಜೊತೆಗೆ, ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಹೆಚ್ಚಾಗುತ್ತಿದೆ. ಅಲ್ಲದೇ, ಚಿನ್ನದ ದರವೂ ಏರುಮುಖವಾಗಿಯೇ ಸಾಗುತ್ತಿದೆ. ಇದರಿಂದಾಗಿ ಭಾರತವು ಹೆಚ್ಚು ಹೆಚ್ಚು ಡಾಲರ್ ಖರ್ಚು ಮಾಡಬೇಕಾಗಿದ್ದು, ಇದು ವಿದೇಶಿ ವಿನಿಮಯ ಮೀಸಲಿನ ಮೇಲೆ ಒತ್ತಡ ಬೀಳುವಂತೆ ಮಾಡುತ್ತಿದೆ. ಅನವಶ್ಯಕವಾಗಿ ಭೌತಿಕ ಚಿನ್ನ ಖರೀದಿಸುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿದರೆ, ಡಾಲರ್‌ನಲ್ಲಿ ಹಣ ತೆರುವುದು ತಪ್ಪುತ್ತದೆ. ಇದರಿಂದ ವಿದೇಶಿ ವಿನಿಮಯ ಮೀಸಲನ್ನು ಉಳಿಸಬಹುದು ಎಂಬುದು ಕೇಂದ್ರ ಸರ್ಕಾರದ ಲೆಕ್ಕಾಚಾರ.

2025–26ರಲ್ಲಿ ಭಾರತವು ₹6.68 ಲಕ್ಷ ಕೋಟಿ ಮೌಲ್ಯದ 721.03 ಟನ್‌ಗಳಷ್ಟು ಚಿನ್ನ ಖರೀದಿಸಿದೆ. ಚಿನ್ನದ ಖರೀದಿಯಲ್ಲಿ ಶೇ 10–ಶೇ 15ರಷ್ಟು ಕಡಿಮೆಯಾದರೂ, ವಿದೇಶಿ ವಿನಿಮಯ ಮೀಸಲು ₹67 ಸಾವಿರ ಕೋಟಿಯಿಂದ ₹95 ಸಾವಿರ ಕೋಟಿ ಉಳಿಸಬಹುದು ಎಂದು ಹೇಳಲಾಗಿದೆ. ಭೌತಿಕ ಚಿನ್ನದ ಬದಲಿಗೆ ಗ್ರಾಹಕರು, ಡಿಜಿಟಲ್ ರೂಪದ ಅಥವಾ ಚಿನ್ನದ ಬಾಂಡ್‌ಗಳನ್ನು ಖರೀದಿಸಿದರೆ ಅಥವಾ ಮರುಬಳಕೆಯ ಚಿನ್ನವನ್ನು ಖರೀದಿಸಿದರೂ ವಿದೇಶಿ ವಿನಿಮಯ ಮೀಸಲು ಹೆಚ್ಚಿಸಲು ಅನುಕೂಲವಾಗಲಿದೆ ಎನ್ನಲಾಗುತ್ತಿದೆ.

ಅಡುಗೆ ಎಣ್ಣೆ, ಯೂರಿಯಾ ಆಮದು ವಿಚಾರದಲ್ಲೂ ಇದೇ ತತ್ವ ಅನ್ವಯವಾಗುತ್ತದೆ. ಇವುಗಳ ಆಮದು ಕಡಿಮೆಯಾದರೆ, ಮೀಸಲನ್ನು ಇನ್ನಷ್ಟು ಉಳಿಸಬಹುದು ಎಂಬುದು ಕೇಂದ್ರದ ಲೆಕ್ಕಾಚಾರ.

ಪಿವಿ ಫ್ಯಾಕ್ಟ್ ಚೆಕ್


ಪಶ್ಚಿಮ ಏಷ್ಯಾ ಬಿಕ್ಕಟ್ಟು ತೀವ್ರವಾಗುತ್ತಿರುವುದರಿಂದ, ದೇಶದ ವಿದೇಶಿ ವಿನಿಮಯ ಮೀಸಲು ಉಳಿಸುವುದಕ್ಕಾಗಿ ಪ್ರಧಾನಿ ಮೋದಿ ಅವರು ಮನೆಯಿಂದಲೇ ಕೆಲಸ ಮಾಡಿ, ಚಿನ್ನ ಖರೀದಿ ಮಾಡಬೇಡಿ, ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಳಸಿ ಎಂಬುದೂ ಸೇರಿದಂತೆ ವೆಚ್ಚ ಕಡಿಮೆ ಮಾಡಲು ವಿವಿಧ ಸಲಹೆಗಳನ್ನು ನೀಡಿದ ನಂತರ ಈ ಬಗ್ಗೆ ದೇಶದಾದ್ಯಂತ ಪರ–ವಿರೋಧ ಚರ್ಚೆಗಳು ನಡೆಯುತ್ತಿವೆ. ಹಿಂದೆಯೂ ದೇಶವು ಆರ್ಥಿಕ ಸವಾಲು ಎದುರಿಸಿದ್ದಾಗ ಕಾಂಗ್ರೆಸ್ ಮುಖಂಡರು ಕೂಡ ಇದೇ ರೀತಿಯ ಕರೆ ನೀಡಿದ್ದರು ಎಂದು ಬಿಜೆಪಿ ಮುಖಂಡರು, ಕಾರ್ಯಕರ್ತರು, ಬೆಂಬಲಿಗರು ಸಾಮಾಜಿಕ ಜಾಲತಾಣಗಳಲ್ಲಿ ವಾದಿಸುತ್ತಿದ್ದಾರೆ. 1967ರಲ್ಲಿ ದೇಶವು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾಗ, ಪ್ರಧಾನಿಯಾಗಿದ್ದ ಇಂದಿರಾಗಾಂಧಿ ಅವರು ರಾಷ್ಟ್ರೀಯ ಶಿಸ್ತು ಪಾಲಿಸುವುದಕ್ಕಾಗಿ ಚಿನ್ನ ಖರೀದಿಸಬೇಡಿ ಎಂದು ಮನವಿ ಮಾಡಿದ್ದರು ಎಂದು ಹೇಳುತ್ತಾ, ‘ದಿ ಹಿಂದೂ’ ಪತ್ರಿಕೆಯದ್ದು ಎನ್ನಲಾದ ಮುಖಪುಟದ ಚಿತ್ರವೊಂದನ್ನು ಹಂಚಿಕೊಳ್ಳುತ್ತಿದ್ದಾರೆ. ಕರ್ನಾಟಕದ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಸೇರಿದಂತೆ ಹಲವರು ಈ ಫೋಟೊವನ್ನು ಹಂಚಿಕೊಂಡು, ಕಾಂಗ್ರೆಸ್ ಮುಖಂಡರನ್ನು ಟೀಕಿಸುತ್ತಿದ್ದಾರೆ. ಮಾಧ್ಯಮಗಳು ಕೂಡ ಈ ಬಗ್ಗೆ ವರದಿ ಮಾಡಿವೆ. ಆದರೆ, ಇದು ಸುಳ್ಳು ಮಾಹಿತಿ.


THE HINDU
Don't buy gold, Indira tells people; appeals for 'national discipline'
Foreign exchange position still critical: Govt.
Gold imports to be curbed further

ಈಗ ಹಂಚಿಕೊಳ್ಳಲಾಗುತ್ತಿರುವ ಪತ್ರಿಕೆಯ ಮುಖಪುಟದ ಚಿತ್ರದಲ್ಲಿ 1967ರ ಜೂನ್ 6ರ ದಿನಾಂಕವನ್ನು ಉಲ್ಲೇಖಿಸಲಾಗಿದೆ. Don't by gold, Indira tells people: appeals for 'national discipline' ಎಂಬ ತಲೆಬರಹದ ಅಡಿಯಲ್ಲಿ ಸುದ್ದಿ ಕಾಣಿಸುತ್ತಿದೆ. ಆದರೆ, ಈ ಬಗ್ಗೆ ಸ್ವತಃ ‘ದಿ ಹಿಂದೂ’ ಪತ್ರಿಕೆ ತನ್ನ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಸ್ಪಷ್ಟನೆ ನೀಡಿದ್ದು, ಅದು 1967ರ ಜೂನ್ 6ರ ಮುಖಪುಟದ ಅಧಿಕೃತವಾದ ಚಿತ್ರ ಅಲ್ಲ. ಅದು ಡಿಜಿಟಲ್ ತಂತ್ರಜ್ಞಾನ ಬಳಸಿ ಸೃಷ್ಟಿಸಿರುವ ಚಿತ್ರ. ಓದುಗರು ಇದನ್ನು ಹಂಚಿಕೊಳ್ಳುವ ಮೊದಲು ಜಾಗ್ರತೆ ವಹಿಸಿ ಮತ್ತು ಖಚಿತಪಡಿಸಿಕೊಳ್ಳಿ ಎಂದು ಪತ್ರಿಕೆ ಸ್ಪಷ್ಟನೆಯಲ್ಲಿ ತಿಳಿಸಿದೆ.

ಪದಬಂಧ 6401

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಬರದಲ್ಲಿ ಖರೀದಿಸಿರುವ ಧಾನ್ಯ (3)
6.ಜನರಲ್ಲಿ ಹಬ್ಬಿರುವ ವಿಷಯ (5)
7.ವಾಂತಿಯಾಗುವಂತೆ ಆಗುವಿಕೆ (4)
9.ಹಲ್ಲುಗಳನ್ನು ತೊಳೆಯುವುದು (5)
13.ನದಿಯಲ್ಲಿ ವಿಳಂಬವೇ? (4)
15.ಆಶ್ರಯವನ್ನು ಬಯಸುವುದು (5)
17.ಜಳಕ ಎಂದಕ್ಕೇ ಈ ರೋಮಾಂಚನ! (3)

ಮೇಲಿಂದ ಕೆಳಕ್ಕೆ

1.ಕದಂಬರ ರಾಜಧಾನಿಯಾಗಿದ್ದ ಊರು (4)
2.ಹಳೆ ಸಾಮಾನುಗಳನ್ನು ಮಾರುವ ಅಂಗಡಿ (3)
3.ತಾಮ್ರಚೂಡ ಇಲ್ಲಿದೆ (2)
4.ಆನೆಯ ನಡಿಗೆ (5)
5.ತುಸು ಅಂತದಲ್ಲಿಯೇ ಮಾಯವಾಗುವಿಕೆ! (4)
8.ಬಿದಿರಿನ ತಟ್ಟಿ ಉಲ್ಟಾ ಆಗಿಬಿಟ್ಟಿದೆ (3)
9.ದಂಡ ಕೊಟ್ಟು ಮಾಡಿದ ಸಾಷ್ಟಂಗ ನಮಸ್ಕಾರ (5)
10.ವನದಲ್ಲಿ ಬೆಳವಣಿಗೆ! (3)
11.ಮಹೇಶ್ವರಿಯನ್ನೂ ಹೀಗೂ ಕರೆಯುತ್ತಾರೆ (4)
12.ದಾರಿಗ ಇಲ್ಲಿದ್ದಾನೆ (4)
14. ಒನಪು ತೋರಿದಾಗ ಬಂದಿರುವ ಸ್ಮರಣೆ (3)
16.ತರಾತುರಿಯಲ್ಲಿ ತಂದಿರುವ ನುಚ್ಚು! (2)

6400ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಹಕ್ಕುದಾರ 3.ಸಹವಾಸ 5.ಜಾಮಿತಿ 6.ಕುರುಬ 8.ವಿನ್ಯಾಸ 9.ದಶಕ 11.ವಲಯ 12.ಚಪ್ಪಡಿ 13.ಮಸೀದಿ 15.ಮಶಕ 17.ತರಬೇತಿ 18.ವಿದೂಷಕ

ಮೇಲಿಂದ ಕೆಳಕ್ಕೆ:
1.ಹಲಾಕು 2.ರಜಾ 3.ಸತಿ 4.ಸಮಾಸ 7.ಬದಲುನುಡಿ 8.ವಿಧಿನಿಯಮ 10.ಕಕವ 13.ಚರ್ವಿತ 14.ದಿನಾಂಕ 15.ಮತಿ 16.ಕವಿ

ಸುಡೊಕು 6784

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	9				5		6	
2			4			8		5
	4				9		3	
4	6				7			
				4		1		6
8		7	5				4	
		4			2		1	7
7			1			6		
	8	1	7			2		4

6783 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

ಸಿರಿವಂತಿಕೆಯೊಳಗಿನ ಬಡತನ

ನುಡಿ ಬೆಳಗು



ವಾಸುದೇವ ನಾಡಿಗ್

ಸುಖ ಮತ್ತು ಸಿರಿವಂತಿಕೆಗಳ ವ್ಯಾಖ್ಯಾನಗಳೇ ತೀರಾ ವೈಯಕ್ತಿಕ ಮತ್ತು ಅಪರಿಮಿತ. ಅವರವರ ದೃಷ್ಟಿಕೋನಗಳೇ ಬಾಳನ್ನು ಕಡೆದು ನಿಲ್ಲಿಸೋದು ಸತ್ಯ. ಶಹರದ ಗಲಾಟೆಯಿಂದ ಅಗಾಗ ಹಳ್ಳಿಗೆ ಹೋಗಿ ಮೋಜು ಮಾಡಿ ತಿಂದುಂಡು ಹಿಂದಿರುಗಲು ಕಟ್ಟಿಕೊಂಡ ತಾಣದ ಹೆಸರೇ ಫಾರ್ಮ್ ಹೌಸ್. ಭತ್ತ ಬೆಳೆವ ಹೊಲಗದ್ದೆಗಳನ್ನು ಕೊಂಡುಕೊಂಡು ರೆಸಾರ್ಟ್‌ಗಳನ್ನು ಸ್ಥಾಪಿಸುವುದು ಕೆಲವರಿಗೆ ಅಪಾರ ಸುಖ, ಸಿರಿತನದ ವಿಚಾರ. ಬಂಡವಾಳವಿರದೆ, ಬೆಳೆ ಬೆಳೆಯಲಾರದೆ ಅಸಹಾಯಕತೆಯಿಂದ ಜಮೀನು ಮಾರುವ ಬಡರೈತರಿಗೆ ಗರಿ ಗರಿ ನೋಟುಗಳನ್ನು ಮುಟ್ಟುವುದೇ ಸುಖ.

ಹೀಗೊಬ್ಬ ತಂದೆ ತನ್ನ ಮಗನನ್ನು ತಾನು ಕೊಂಡುಕೊಂಡ ಫಾರ್ಮ್ ಹೌಸ್ ತೋರಿಸಲಿಕ್ಕೆ ಕರೆದುಕೊಂಡು ಹೋದ. ಅಲ್ಲಿ ದುಡಿಯುತ್ತಿದ್ದ ಕೆಲಸಗಾರರ ಬಡತನ ಬವಣೆ ಬೆವರು ಶ್ರಮವನ್ನು ತೋರಿಸುತ್ತ ತನ್ನ ಶ್ರೀಮಂತ ಬಾಳನ್ನು ಕೂಡಾ ಪರಿಚಯ ಮಾಡಿಕೊಡುತ್ತಿದ್ದ.

ಮಗನಿಗೆ ತಂದೆಯ ಈ ಮಾತುಗಳ್ಯಾವುವೂ ಕಿವಿಗೆ ಹೋಗದೆ ಹಸಿರು ಸಿರಿ ಹರವಿದ ಗದ್ದೆ, ತೋಟ, ಆಕಾಶ, ಮುಸ್ಸಂಜೆ, ಸೂರ್ಯ ಮುಳುಗುವಾಗ ಕಾಣುವ ಮಿನುಗುವ ತಾರೆ ಚಂದ್ರನನ್ನೇ ಎದೆಗೆ ತುಂಬಿಕೊಂಡಿದ್ದ. ತಡರಾತ್ರಿ ಶಹರದ ಮನೆಗೆ ಹಿಂದಿರುಗಿದಾಗ ತಂದೆ ಮಗನಿಗೆ ಬಡತನವನ್ನು ಪರಿಚಯ ಮಾಡಿಕೊಟ್ಟ ಹಿನ್ನೆಲೆಯಲ್ಲಿ ಮಾತಿಗೆ ಕೂತ. ‘ನೋಡಿದೆಯಾ ಮಗನೇ, ಬಡತನದ ಬವಣೆ ಹೇಗಿದೆ ಗೊತ್ತಾಯ್ತಾ’ ಎಂದು ಪ್ರಶ್ನೆ ಮಾಡಿದ. ಅದಕ್ಕೆ ಮಗನ ವಿವರಣೆ ಅಭೂತಪೂರ್ವವಾಗಿತ್ತು:

‘ಇಷ್ಟು ಹಣ, ಕಾರು, ಬಂಗಲೆ ಇದ್ದರೂ ನಮ್ಮ ಮನೆಯಲ್ಲಿ ಒಂದೇ ನಾಯಿಮರಿ. ಅವರ ಬಳಿ ಹತ್ತಾರು ನಾಯಿಗಳು. ಇಲ್ಲಿ ಕಾಂಪೌಂಡ್ ಮಧ್ಯೆ ಸಣ್ಣ ಈಜುಕೊಳ. ಅಲ್ಲಿ ಅವರ ಗುಡಿಸಲ ಎದುರು ಹರಿವ ನಾಲೆ. ಇಲ್ಲಿ ಬೆಲೆ ಬಾಳುವ ಗಾಜಿನ ದೊಡ್ಡ ದೀಪ, ಅಲ್ಲಿ ಹೊರಗೆ ಮಲಗಿದರೆ ಸಹಸ್ರಾರು ತಾರೆಗಳು. ಇಲ್ಲಿ ಮನೆಯ ಆವರಣಕ್ಕೆ ಗೋಡೆ ಇದೆ. ಅವರ ಮನೆಯ ಎದುರು ಕಣ್ಣು ಚಾಚಿದಷ್ಟೂ ಹೊಲ ಗದ್ದೆ ಬಯಲು. ನಾವು ಸಣ್ಣ ಚೌಕಟ್ಟಿನ ಸೈಟಿನೊಳಗೆ ಬಾಳ್ತಾ ಇದೀವಿ. ಅವರು ಇಡೀ ಬಯಲಿನಲ್ಲಿ ಓಡಾಡುತ್ತಾರೆ. ನಮಗಿಂತ ಅವರು ಸಿರಿವಂತರು ಅಪ್ಪ’ ಅಂತೆಲ್ಲ ವಿವರಿಸುವ ಮಗನ ಕಂಡಾಗ ತಂದೆ ಕಕ್ಕಾಬಿಕ್ಕಿ. ತನ್ನ ಮಗನಿಗೆ ಬಡ ರೈತ ಕಾರ್ಮಿಕರ ಬಾಳನ್ನು ತೋರಿಸಲು ಹೊರಟ ತಂದೆ ಸಿರಿವಂತಿಕೆಯ ಬಗ್ಗೆ ಮಗ ನೀಡಿದ ವಿವರ, ಕೊಟ್ಟ ಹೋಲಿಕೆ ಎಲ್ಲಾ ಬಹುವಾಗಿ ಕಾಡಿತು. ತಾಯಿ ಮಾತ್ರ ಇವರಿಬ್ಬರ ಮಾತುಗಳನ್ನು ಕೇಳಿಸಿಕೊಳ್ಳುತ್ತ ತಾನೇ ತಯಾರಿಸಿದ ಅಡುಗೆಯನ್ನು ಬಡಿಸಲು ಅಣಿ ಮಾಡುತ್ತಿದ್ದಳು. ಸಿರಿತನ ಮತ್ತು ಬಡತನದ ಮಧ್ಯೆ ಇರುವ ತೆಳುಗೆರೆ ಮತ್ತು ಬೆಟ್ಟದ ಗಾತ್ರವನ್ನು ನೆನೆದು ಮುಗುಳ್ನಗುತ್ತಿದ್ದಳು. ಸಿರಿತನದ ಸ್ವರೂಪವನ್ನು ನಿವಾಳಿಸಿ ಬಿಸಾಕಿದ್ದ ಮಗ ಮಾತ್ರ ಅವಳ ಕಣ್ಣಿಗೆ ದಾರ್ಶನಿಕನ ಹಾಗೆ ಕಂಡಿದ್ದ.

ಬೇಂದ್ರೆಯವರು ‘ನಾನು ಬಡವಿ ಆತ ಬಡವ ಒಲವೇ ನಮ್ಮ ಬದುಕು’ ಕವಿತೆ ಕೂಡಾ ಸಿರಿವಂತಿಕೆಯ ಥೋರಂಗಿತನವನ್ನು ಬಣ್ಣಿಸುತ್ತದೆ. ಬಾಳಿನಲ್ಲಿ ಅದಕು ಇದಕು ಎದಕು ಬಳಸಿಕೊಂಡ ಒಲವನ್ನು ಕವಿ ಆರಾಧಿಸುತ್ತಾರೆ. ಗುಡಿಸಲಿನಲ್ಲಿ ಇರುವ ಬೆಳಕು ಮತ್ತು ಮಹಲಿನಲ್ಲಿ ಇರುವ ಕತ್ತಲು ಇಲ್ಲಿ ಮುಖಾಮುಖಿಯಾಗುತ್ತವೆ. ಆತ ಕೊಟ್ಟ ವಸ್ತು ಒಡವೆ ಅವಳಿಗೆ ಮಾತ್ರ ಗೊತ್ತು ಎಂಬಲ್ಲಿನ ಸಿರಿವಂತಿಕೆಗೆ ಬೆಲೆ ಕಟ್ಟಲಾದೀತೆ?

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

13 ಮೇ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಏಕಾದಶಿ ಗಂ. 13-30 ನಕ್ಷತ್ರ : ಉತ್ತರಾಭಾದ್ರ ಗಂ. 24-18 ಯೋಗ : ವಿಷ್ಕಂಭ ಗಂ. 20-55 ಕರಣ: ಬಾಲವ ಗಂ. 13-30, ಮೇಷ ಮಾಸದ 29 ನೇ ದಿನ. ಮಳೆ ನಕ್ಷತ್ರ : ಕೃತ್ತಿಕ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30, ಸೂರ್ಯೋದಯ : 06-09 ಸೂರ್ಯಾಸ್ತ : 06-45, ಮುಸ್ಲಿಂ ದಿನಾಂಕ : 25 ಜುಲ್ಕಾದಾ ಅದೃಷ್ಟ ಸಂಖ್ಯೆ : 3, 5

ಮೇಷ: ಅಣ್ಣ-ತಮ್ಮಂದಿರ ಅಥವಾ ಹೆಚ್ಚಿನ ಒಡನಾಟ ಹೊಂದಿರುವ ವ್ಯಕ್ತಿಗಳ ಹರಿತವಾದ ನುಡಿಗಳು ಬೇಸರ ಉಂಟುಮಾಡಬಹುದು. ಬಹುಭಾಷಾ ತಾರೆಯರಿಗೆ ಅವಕಾಶ ಲಭಿಸಲಿದೆ.

ವೃಷಭ: ಬಟ್ಟೆ ವಿನ್ಯಾಸಗಾರರಿಗೆ ರಫ್ತು ಮಾರಾಟ ಹೆಚ್ಚಲಿದೆ. ಜವಳಿಯ ಮೇಲೆ ಬಂಡವಾಳ ಹಾಕಲು ಸಕಾಲ. ನಿಮ್ಮ ಆಸ್ತಿಗಳನ್ನು ಮಾರಾಟಮಾಡಿ ಸಾಲ ಮುಕ್ತರಾಗುವ ಯೋಚನೆ ಸರಿಯಲ್ಲ.

ಮಿಥುನ: ಸಜ್ಜನರ ಸಹವಾಸದಿಂದ ಪ್ರಾಪಂಚಿಕ ಜ್ಞಾನ ವೃದ್ಧಿಯಾಗುತ್ತದೆ. ವೃತ್ತಿಗೆ ಸಂಬಂಧಿಸಿದಂತೆ ನಿಮ್ಮ ಮೇಲಿದ್ದ ಸಂಶಯ ನಿವಾರಣೆಯಾಗಲಿದೆ. ಮಹಾಲಕ್ಷ್ಮಿಯನ್ನು ಆರಾಧಿಸಿ ಶುಭವಾಗಲಿದೆ.

ಕರ್ಕಾಟಕ: ನೀವೇ ಆಶ್ರಯಕೊಟ್ಟಂತಹ ವ್ಯಕ್ತಿಗಳಿಂದ ಮೋಸ ಹೋಗುವ ಸಂಭವವಿದೆ. ಅತಿಯಾದ ನಂಬಿಕೆ ಇಂದು ಮುಳುವಾಗಬಹುದು. ಮಾರಾಟಗಾರರಿಗೆ ಲಾಭ ನಷ್ಟಗಳ ಮಿಶ್ರ ಫಲ ಸಿಗಲಿದೆ.

ಸಿಂಹ: ಅಡುಗೆ ಕೆಲಸ ಮಾಡುವವರಿಗೆ ಕೆಲಸದ ಬಿಗಿಯಿಂದ ಸ್ವಂತ ಕೆಲಸ ಮಾಡಿಕೊಳ್ಳುವುದು ದುಸ್ತರ. ಪ್ರಯಾಣದ ಸಂದರ್ಭದಲ್ಲಿ ನಾಲ್ಕು ಚಕ್ರಗಳ ವಾಹನವನ್ನು ಬಳಸುವುದು ಲೇಸು.

ಕನ್ಯಾ: ದೇಹದಲ್ಲಾಗುವ ಪ್ರತಿಯೊಂದು ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿ. ಯಾವುದೇ ಅಹಿತಕರವಾದ ಬದಲಾವಣೆ ಅನುಭವಕ್ಕೆ ಬಂದಲ್ಲಿ, ನಿರ್ಲಕ್ಷಿಸಬೇಡಿ. ಸಾಲ ತೀರಿಸಲು ಅವಕಾಶ ಸಿಗಲಿದೆ.

ತುಲಾ: ರಕ್ಷಣಾ ವ್ಯವಸ್ಥೆಯವರಿಗೆ ವೃತ್ತಿಯಲ್ಲಿ ರಾತ್ರಿ ಪಾಳಿ ತಪ್ಪಿದ ಕಾರಣದಿಂದ ಮನಸ್ಸಿಗೆ ಸಮಾಧಾನವಾಗುವುದು. ಸಮಾರಂಭಗಳಿಗಾಗಿ ಹೊಸ ಬಟ್ಟೆ ತರುವಂತೆ ಮನೆಯವರಿಂದ ಒತ್ತಾಯ ಬರಲಿದೆ.

ವೃಶ್ಚಿಕ: ಕಮಿಷನ್ ಏಜೆಂಟ್‌ಗಳಿಗೆ ಅದರಲ್ಲೂ ವಿಶೇಷವಾಗಿ ಭೂ ವ್ಯವಹಾರ ನಡೆಸುವವರಿಗೆ ಅಧಿಕ ಆದಾಯ ಉಂಟಾಗುವುದು. ಮನೆಯಲ್ಲಿ ಹಿತಕರ ವಾತಾವರಣ ಇರಲಿದೆ. ನವಗ್ರಹಪೀಡಾ ಪರಿಹಾರ ಸ್ತೋತ್ರ ಪಠಿಸಿ.


ಧನು: ಮಾನಸಿಕ ಶಕ್ತಿಗಳು ಬಲಗೊಂಡು ಯೋಚನೆಗಳನ್ನು ಶೀಘ್ರವೇ ಕಾರ್ಯರೂಪಕ್ಕೆ ಇಳಿಸುತ್ತೀರಿ. ಹೈನುಗಾರಿಕೆ ಮತ್ತು ಕೃಷಿಯಲ್ಲಿ ಪ್ರಯತ್ನ ನಡೆಸಿದರೆ ಉತ್ತಮ ಫಲ ಸಿಗುವುದು.

ಮಕರ: ಬುದ್ಧಿವಂತಿಕೆಯನ್ನು ಸರಿಯಾಗಿ ಉಪಯೋಗಿಸಿಕೊಂಡಲ್ಲಿ ಪಾಲುದಾರಿಕೆ ಮತ್ತು ಸಹಭಾಗಿತ್ವದ ವ್ಯವಹಾರಗಳಿಂದ ಉತ್ತಮ ವರಮಾನ. ಸಣ್ಣ ಕೈಗಾರಿಕೋದ್ಯಮಿಗಳಿಗೆ ರಫ್ತು ವ್ಯಾಪಾರಗಳಿಂದ ಹೇರಳ ಲಾಭವಿದೆ.

ಕುಂಭ: ಹೋಟೆಲ್ ಉದ್ದಿಮೆಯವರಿಗೆ ಕ್ಲೇಶ ಕಂಡುಬರಲಿದೆ. ಕೆಲವೊಂದು ಕೋರ್ಟಿನ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರುವುದರಿಂದ ನಿರಾಳವಾಗಿ ಮುಂದುವರಿಯಿರಿ. ಷರತ್ತುಗಳ ರೀತಿಯಲ್ಲಿ ಕಾಣಲಿದೆ.

ಮೀನ: ವಿದ್ಯಾರ್ಥಿಗಳಿಗೆ ಏಕಾಗ್ರತೆ ಹೊಂದಿದ ಶಿಸ್ತುಬದ್ಧ ಅಭ್ಯಾಸವು ಉತ್ತಮ ಫಲ ದೊರಕಿಸಿ ಕೊಡಲಿದೆ. ಇಷ್ಟು ದಿನಗಳ ಕಠಿಣ ಕೆಲಸದಿಂದ ಬಿಡುಗಡೆ ಬೇಕೆನಿಸುವುದು. ವ್ಯಾಪಾರದಲ್ಲಿ ಹಣವನ್ನು ಪಡೆಯಲು ಕಷ್ಟವಾಗಬಹುದು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	23,815
ಇಂದಿನ ಅಂತ್ಯ:	23,379
ದಿನದ ಕನಿಷ್ಠ:	23,348
	436

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹590
12 ಕ್ಕೆ	₹84
ಮೈಸೂರು: 100 ಕ್ಕೆ	₹595

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹256
ಆರ್‌ಎಸ್‌ಎಸ್-5	₹249
ಗುಡ್ ಲಾಟ್	₹217

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹402-658
ದ್ವಿತಳಿ (ಬಿ.ವಿ)	₹411-789


ಮುದ್ರಮನೆ ಕಾಫಿ (50 ಕೆಜಿಗೆ)	
ಎಪಿ	₹23500
ಎಸಿ	₹14000
ಆರ್‌ಪಿ	₹18250
ಆರ್‌ಸಿ	₹9900

ಹೂಡಿಕೆದಾರರಿಗೆ ₹16 ಲಕ್ಷ ಕೋಟಿ ನಷ್ಟ

ನಾಲ್ಕು ದಿನದಲ್ಲಿ ಸೆನ್ಸೆಕ್ಸ್ ಶೇ 4.36ರಷ್ಟು ಕುಸಿತ

• ಕಚ್ಚಾ ತೈಲ ಬೆಲೆ ಶೇ 3ರಷ್ಟು ಏರಿಕೆ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆಗಳು ನಾಲ್ಕು ದಿನಗಳಿಂದ ಕುಸಿತದ ಹಾದಿಯಲ್ಲಿವೆ. ಇದರಿಂದಾಗಿ ಹೂಡಿಕೆದಾರರ ಸಂಪತ್ತು ₹16.77 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.



ಕಚ್ಚಾ ತೈಲದ ಬೆಲೆಯು ಕಡಿಮೆ ಆಗದೆ ಇರುವುದು ಹಾಗೂ ಜಾಗತಿಕ ಸಂಘರ್ಷಗಳು ಸದ್ಯಕ್ಕೆ ಶಮನ ಆಗಲಿಕ್ಕಿಲ್ಲ ಎಂಬ ಆತಂಕವು ಮಾರುಕಟ್ಟೆಗಳ ಕುಸಿತಕ್ಕೆ ಕಾರಣವಾಗಿವೆ.

ವಿದೇಶಿ ಹೂಡಿಕೆದಾರರು ಭಾರತದ ಬಂಡವಾಳ ಮಾರುಕಟ್ಟೆಗಳಿಂದ ನಿರಂತರವಾಗಿ ಹಣ ಹಿಂಪಡೆಯುತ್ತಿರುವುದು ಹಾಗೂ ರೂಪಾಯಿ ಮೌಲ್ಯವು ಡಾಲರ್ ಎದುರು ಕುಸಿಯುತ್ತಿರುವುದು ಕೂಡ ಹೂಡಿಕೆದಾರರು ಹೊಸ ಹೂಡಿಕೆಗೆ ಹಿಂದೇಟು ಹಾಕುವಂತೆ ಮಾಡಿವೆ ಎಂದು ತಜ್ಞರು ಹೇಳಿದ್ದಾರೆ.

ಮಂಗಳವಾರದ ವಹಿವಾಟಿನಲ್ಲಿ ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,456 ಅಂಶ ಕುಸಿದಿದೆ. ಕಳೆದ ನಾಲ್ಕು ವಹಿವಾಟಿನ ದಿನಗಳಲ್ಲಿ ಸೆನ್ಸೆಕ್ಸ್ ಒಟ್ಟು ಶೇ 4.36ರಷ್ಟು ಇಳಿಕೆ ಕಂಡಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯವು ₹16.77 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ.

'ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಯಲ್ಲಿ ಪ್ರಗತಿ ಕಾಣುತ್ತಿಲ್ಲ. ಹೊರ್ಮುಜ್ ಜಲಸಂಧಿಯ ಸುತ್ತ ಅಡ್ಡಿಗಳು ಮುಂದುವರಿದಿವೆ. ಇದು ಕಚ್ಚಾ ತೈಲದ ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ರೂಪಾಯಿ ಮೌಲ್ಯವು ದಾಖಲೆಯ ಮಟ್ಟಕ್ಕೆ ಕುಸಿಯುತ್ತಿದೆ. ಐ.ಟಿ., ರಿಯಾಲ್ಟಿ ಸೇರಿದಂತೆ ವಿವಿಧ ವಲಯಗಳ ಷೇರುಗಳ ಕುಸಿತವು ಒಟ್ಟಾರೆ ಸೂಚ್ಯಂಕದ ಕುಸಿತಕ್ಕೆ ಕಾರಣವಾಗಿವೆ' ಎಂದು ಎನ್‌ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 3ರಷ್ಟು ಜಾಸ್ತಿ ಆಗಿದ್ದು ಬ್ಯಾರಲ್ ಒಂದಕ್ಕೆ 107.4 ಡಾಲರ್‌ಗೆ ತಲುಪಿದೆ.

ಬೆಳ್ಳಿ ದರ ₹12 ಸಾವಿರ ಏರಿಕೆ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ಜಾಗತಿಕ ಮಟ್ಟದಲ್ಲಿ ಮುಂದುವರಿದಿರುವ ಬಿಕ್ಕಟ್ಟಿನಿಂದ ಮಂಗಳವಾರದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಶೇ 99.9ರಷ್ಟು ಪರಿಶುದ್ಧತೆಯ 10 ಗ್ರಾಂ ಚಿನ್ನದ ದರವು ₹1,500 ಹೆಚ್ಚಳವಾಗಿ, ₹1,56,800ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹12 ಸಾವಿರ ಜಿಗಿತವಾಗಿ, ₹2.77 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ನಿಲ್ಲದ ರೂಪಾಯಿ ಕುಸಿತ

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು 40 ಪೈಸೆಯಷ್ಟು ಇಳಿಕೆ ಕಂಡಿದ್ದು, 95.68ರ ಮಟ್ಟಕ್ಕೆ ತಲುಪಿದೆ. ಇದು ಈವರೆಗಿನ ಕನಿಷ್ಠ ಮಟ್ಟವಾಗಿದೆ.

ಇರಾನ್‌ನ ಪ್ರಸ್ತಾವ ಸ್ವೀಕರಿಸಲು ಆಗದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹೇಳಿದ ನಂತರದಲ್ಲಿ ಮಾರುಕಟ್ಟೆಯಲ್ಲಿ ಆತಂಕದ ವಾತಾವರಣ ನಿರ್ಮಾಣ ಆಯಿತು ಎಂದು ವರ್ತಕರು ತಿಳಿಸಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್ ಕುಮಾರ್, ಮೈಸೂರು

• ಪ್ರಶ್ನೆ: ನಾನು ಇತ್ತೀಚಿನ ಕೆಲವು ವರ್ಷಗಳಿಂದ ಬ್ಯಾಂಕಿಂಗ್ ಹಾಗೂ ಕ್ರೆಡಿಟ್ ಕಾರ್ಡ್ ಬಳಸಿ ವ್ಯವಹರಿಸುತ್ತಿದ್ದೇನೆ. ಇಂದು ಕ್ರೆಡಿಟ್ ಕಾರ್ಡ್ ವಿತರಿಸುವ ಕಂಪನಿಗಳು ಬಹಳಷ್ಟಿವೆ. ಇದಲ್ಲದೆ ಕುಟುಂಬದ ಸದಸ್ಯರಿಗೆ ಖರ್ಚು ಮಾಡಲು ಹೆಚ್ಚುವರಿ ಕಾರ್ಡ್ ನೀಡುವ ಪದ್ಧತಿಯೂ ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಆದರೆ ಮುಖ್ಯ ಕಾರ್ಡ್‌ಧಾರಕರಿಗೆ ಖರ್ಚಿನ ನಿಯಂತ್ರಣ, ಪ್ರತ್ಯೇಕ ಮಿತಿಯ ನಿಗದಿ, ರಿವಾರ್ಡ್ ಪಾಯಿಂಟ್‌ಗಳ ಹಂಚಿಕೆ ಹಾಗೂ ಇಎಂಐ ಇತ್ಯಾದಿ ಪಾವತಿ ವಿಧಾನಗಳ ಬಗ್ಗೆ ನನಗೆ ಹಲವಾರು ಗೊಂದಲಗಳಿವೆ. ಈ ಹೆಚ್ಚುವರಿ ಕಾರ್ಡ್ ಬಳಕೆದಾರರು ಮಾಡಿದ ಖರ್ಚುಗಳಿಗೆ ಯಾರು ಕಾನೂನುಬದ್ಧವಾಗಿ ಹೊಣೆಗಾರರು? ಪ್ರತ್ಯೇಕ ಖರ್ಚಿನ ಮಿತಿ ನಿಗದಿ ಮಾಡಿದರೂ, ಕೆಲವು ಸಂದರ್ಭಗಳಲ್ಲಿ ಅದರ ಒಟ್ಟು ಮಿತಿ ದಾಟಿದಾಗ ನಾವು ದಂಡ ಪಾವತಿಸಬೇಕಾಗುತ್ತದೆಯೇ? ರಿವಾರ್ಡ್ ಪಾಯಿಂಟ್ ಹಾಗೂ ಕ್ಯಾಶ್ ಬ್ಯಾಕ್ ಮುಖ್ಯ ಕಾರ್ಡ್‌ಗೆ ಮಾತ್ರ ಸೇರುವುದೇ ಅಥವಾ ಹೆಚ್ಚುವರಿ ಬಳಕೆದಾರರಿಗೂ ಲಾಭ ಸಿಗುತ್ತದೆಯೇ? ಇದರ ಪಾವತಿ ವಿಳಂಬವಾದರೆ ಯಾರ ಕ್ರೆಡಿಟ್ ಮೌಲ್ಯಾಂಕದ (ಸಿಬಿಲ್ ಅಂಕ) ಮೇಲೆ ಪರಿಣಾಮ ಬೀಳುತ್ತದೆ? ಜವಾಬ್ದಾರಿಯುತ ಗ್ರಾಹಕರ ದೃಷ್ಟಿಯಿಂದ ಬ್ಯಾಂಕ್‌ಗಳು ನೀಡುವ ಹೆಚ್ಚುವರಿ ಕಾರ್ಡ್ ಪಡೆದುಕೊಳ್ಳುವುದು ಸೂಕ್ತವೇ ಅಥವಾ ಪ್ರತ್ಯೇಕವಾದ ಕಾರ್ಡ್ ಪಡೆಯುವುದು ಸೂಕ್ತವೇ. ಇದರ ನಿಯಂತ್ರಣಕ್ಕೆ ಕುಟುಂಬದ ಆರ್ಥಿಕ ಶಿಸ್ತಿಗೆ ಅನುಕೂಲವಾಗುವಂತೆ ಯಾವ ರೀತಿಯಲ್ಲಿ ಯೋಜನೆ ರೂಪಿಸಬೇಕು?

ಉತ್ತರ: ಕ್ರೆಡಿಟ್ ಕಾರ್ಡ್ ವ್ಯವಸ್ಥೆಯಲ್ಲಿ 'ಹೆಚ್ಚುವರಿ ಕಾರ್ಡ್' ಎಂಬುದು ಮುಖ್ಯ ಕಾರ್ಡ್‌ಧಾರಕರ ಖಾತೆಯೊಂದಿಗೆ ಸಂಪರ್ಕ ಹೊಂದಿರುವ ಒಂದು ಸೌಲಭ್ಯ. ಸಾಮಾನ್ಯವಾಗಿ ಕುಟುಂಬದ ಸದಸ್ಯರು, ಪತಿ-ಪತ್ನಿ, ಮಕ್ಕಳು ಅಥವಾ ಪೋಷಕರು ಪ್ರತ್ಯೇಕವಾಗಿ ಹೊಸ ಕ್ರೆಡಿಟ್ ಕಾರ್ಡ್ ಪಡೆಯದೆ, ಮುಖ್ಯ ಕಾರ್ಡ್‌ನ ಮಿತಿಯೊಳಗೆಯೇ ಖರ್ಚು ಮಾಡಲು ಈ ವ್ಯವಸ್ಥೆಯನ್ನು ಬಳಸುತ್ತಾರೆ. ಆದರೆ ಇಲ್ಲಿ ಒಂದು ಮುಖ್ಯ ವಿಷಯವೆಂದರೆ, ಹೆಚ್ಚುವರಿ ಕಾರ್ಡ್ ಬಳಕೆದಾರರು ಮಾಡಿದ ಎಲ್ಲಾ ಖರ್ಚುಗಳ ಅಂತಿಮ ಕಾನೂನುಬದ್ಧ ಹೊಣೆಗಾರಿಕೆ ಮುಖ್ಯ ಕಾರ್ಡ್‌ಧಾರಕರ ಮೇಲೆಯೇ ಇರುತ್ತದೆ. ಅಂದರೆ ಬ್ಯಾಂಕ್ ಅಥವಾ ಕಾರ್ಡ್ ಕಂಪನಿ ಹಣ ವಸೂಲಾತಿಗೆ ಮುಖ್ಯ ಖಾತೆದಾರರನ್ನೇ ಸಂಪರ್ಕಿಸುತ್ತದೆ. ಆದ್ದರಿಂದ ಹೆಚ್ಚುವರಿ ಕಾರ್ಡನ್ನು ಆರ್ಥಿಕ ಶಿಸ್ತು, ಜವಾಬ್ದಾರಿ ಹಾಗೂ ಖರ್ಚಿನ ಅರಿವು ಇರುವ ಸದಸ್ಯರಿಗೆ ಮಾತ್ರ ನೀಡುವುದು ಉತ್ತಮ. ಒಂದು ವೇಳೆ ಕೊಡುವುದು ಅನಿವಾರ್ಯವಾದಾಗ ಈ ಮಾಹಿತಿಯ ತಿಳಿವಳಿಕೆ ಮೂಡಿಸಬೇಕು.

ಬಹುತೇಕ ಬ್ಯಾಂಕ್‌ಗಳು ಹೆಚ್ಚುವರಿ ಕಾರ್ಡ್‌ಗಳಿಗೆ ಪ್ರತ್ಯೇಕ ಮಿತಿ ನಿಗದಿ ಮಾಡುವ ಅವಕಾಶವನ್ನು ಕಾರ್ಡ್ ವಿತರಿಸುವ ಸಂಸ್ಥೆಗೆ ಹಾಗೂ ಮುಖ್ಯ ಕಾರ್ಡ್‌ದಾರರಿಗೆ ನೀಡುತ್ತವೆ. ಉದಾಹರಣೆಗೆ ಒಟ್ಟು ಕಾರ್ಡ್ ಮಿತಿ ₹5 ಲಕ್ಷ ಇದ್ದರೂ, ಹೆಚ್ಚುವರಿ ಕಾರ್ಡ್‌ಗೆ ₹50,000 ಅಥವಾ ₹1 ಲಕ್ಷದವರೆಗೆ ಮಾತ್ರ ಖರ್ಚು ಮಿತಿ ಹಾಕಬಹುದು.

ಬಿಲ್ ಪಾವತಿಯನ್ನು ನಿಗದಿತ ದಿನಾಂಕದೊಳಗೆ ಮಾಡದಿದ್ದರೆ ವಿಳಂಬ ಶುಲ್ಕ, ಹಣಕಾಸು ಶುಲ್ಕ ಹಾಗೂ ಬಡ್ಡಿ ಸಹಜವಾಗಿ ವಿಧಿಸಲಾಗುತ್ತದೆ. ಕೆಲವು ಸಂದರ್ಭಗಳಲ್ಲಿ ನಿಗದಿತ ಮಿತಿಗಿಂತ ಹೆಚ್ಚು ಖರ್ಚಾದರೆ ಹೆಚ್ಚುವರಿ ಮಿತಿ ಬಳಕೆ ಶುಲ್ಕವನ್ನೂ ಬ್ಯಾಂಕ್ ವಿಧಿಸಬಹುದು. ಆದ್ದರಿಂದ ಮುಖ್ಯ ಕಾರ್ಡ್‌ಧಾರಕರಾಗಿ ನಿಮ್ಮ ಮಾಸಿಕ ಸ್ಟೇಟ್‌ಮೆಂಟ್, ಮೊಬೈಲ್ ಅಪ್ಲಿಕೇಶನ್ ಸೂಚನೆಗಳು ಹಾಗೂ ಖರ್ಚಿನ ವಿವರಗಳನ್ನು ನಿಯಮಿತವಾಗಿ ಪರಿಶೀಲಿಸುವುದು ಅತ್ಯಂತ ಅಗತ್ಯ. ಇಂತಹ ಮಾಹಿತಿಯ ಬಗ್ಗೆ ನಿಗಾ ಇಡುವುದು ಮತ್ತು ಕಾರ್ಡ್ ದುರ್ಬಳಕೆ ಆಗದ ರೀತಿ ಇತರ ಕಾರ್ಡ್‌ದಾರರಿಗೂ ಅರಿವು ಮೂಡಿಸುವುದು ಆದ್ಯ ಕರ್ತವ್ಯ.

ರಿವಾರ್ಡ್ ಅಂಕಗಳು, ಕ್ಯಾಶ್ ಬ್ಯಾಕ್ ಸೌಲಭ್ಯಗಳು ಹಾಗೂ ಪ್ರವಾಸ ಸಂಬಂಧಿತ ಸೌಲಭ್ಯಗಳ ವಿಷಯದಲ್ಲಿ ಪ್ರತಿ ಬ್ಯಾಂಕ್‌ನ ನಿಯಮಗಳು ಭಿನ್ನವಾಗಿರುತ್ತವೆ. ಸಾಮಾನ್ಯವಾಗಿ ಹೆಚ್ಚುವರಿ ಕಾರ್ಡ್ ಮೂಲಕ ಮಾಡಿದ ಖರ್ಚಿನಿಂದ ಲಭಿಸುವ ರಿವಾರ್ಡ್ ಅಂಕಗಳನ್ನು ಮುಖ್ಯ ಕಾರ್ಡ್ ಖಾತೆಗೆ ಸೇರಿಸಲಾಗುತ್ತದೆ. ಆದರೆ ಕೆಲವು ಕಾರ್ಡ್‌ಗಳಲ್ಲಿ ಹೆಚ್ಚುವರಿ ಕಾರ್ಡ್ ಬಳಕೆದಾರರಿಗೂ ವಿಮಾನ ನಿಲ್ದಾಣಗಳ ವಿಶ್ರಾಂತಿ ಕೊಠಡಿ ಪ್ರವೇಶ, ವಿಮಾ ರಕ್ಷಣೆ ಅಥವಾ ನಿರ್ದಿಷ್ಟ ಮಟ್ಟದ ಖರ್ಚು ಪೂರ್ಣಗೊಳಿಸಿದ ನಂತರ ದೊರೆಯುವ ವಿಶೇಷ ಸೌಲಭ್ಯಗಳನ್ನು ನೀಡುವ ವ್ಯವಸ್ಥೆಯೂ ಇರುತ್ತದೆ. ಆದ್ದರಿಂದ ಯಾವುದೇ ಹೆಚ್ಚುವರಿ ಕಾರ್ಡ್ ಪಡೆಯುವ ಮೊದಲು ಅದರ ಸೌಲಭ್ಯಗಳು, ನಿಯಮಗಳು ಹಾಗೂ ಸೌಲಭ್ಯಗಳ ಕುರಿತು ಸಂಪೂರ್ಣ ಮಾಹಿತಿಯನ್ನು ಸ್ಪಷ್ಟವಾಗಿ ಪರಿಶೀಲಿಸುವುದು ಅತ್ಯಂತ ಅಗತ್ಯ. ಗ್ರಾಹಕರಿಗೆ ಇಂತಹ ಸೌಲಭ್ಯಗಳ ಮೂಲ ಹಾಗೂ ಅವುಗಳನ್ನು ನೀಡುವ ವಿಧಾನ ಸ್ಪಷ್ಟವಾಗಿರಬೇಕು. ಆರ್‌ಬಿಐ ಹೊರಡಿಸಿರುವ ಸುತ್ತೋಲೆಗಳ ಮಾಹಿತಿಯಂತೆ, ಈ ಸೌಲಭ್ಯಗಳಿಗೆ ಸಂಬಂಧಿಸಿದ ಲೆಕ್ಕಪತ್ರ ಪ್ರಕ್ರಿಯೆಯನ್ನು ಕಾರ್ಡ್ ನೀಡುವ ಸಂಸ್ಥೆಯ ಲೆಕ್ಕ ಪುಸ್ತಕಗಳಲ್ಲಿ ಪರಿಶೀಲಿಸಬಹುದಾದ ರೀತಿಯಲ್ಲಿ ನಿರ್ವಹಿಸಬೇಕು. ಈ ಎಲ್ಲಾ ಪ್ರಯೋಜನಗಳಿಗೆ ಸಂಬಂಧಿಸಿದ ವಿವರವಾದ ಮಾಹಿತಿಯನ್ನು ಕಾರ್ಡ್ ನೀಡುವ ಸಂಸ್ಥೆಯ ಜಾಲತಾಣದಲ್ಲಿ ಪ್ರಕಟಿಸಬೇಕು ಹಾಗೂ ಅದರ ಪ್ರತಿಯನ್ನು ಕಾರ್ಡ್‌ಧಾರಕರಿಗೂ ಒದಗಿಸಬೇಕು. ಹೀಗಾಗಿ ಇಂತಹ ನಿರ್ದಿಷ್ಟ ಮಾಹಿತಿಯನ್ನು ನೀವು ವೆಬ್‌ಸೈಟ್‌ನಲ್ಲಿ ನೋಡಿ ಖಾತರಿಪಡಿಸಿಕೊಳ್ಳಬಹುದು.

ಪಾವತಿ ವಿಳಂಬವಾದರೆ ಅದರ ನೇರ ಪರಿಣಾಮ ಮುಖ್ಯ ಕಾರ್ಡ್‌ಧಾರಕರ ಕ್ರೆಡಿಟ್ ರೇಟಿಂಗ್ ಮೇಲೆ ಬೀಳುತ್ತದೆ. ಹೆಚ್ಚುವರಿ ಕಾರ್ಡ್ ಬಳಕೆದಾರರ ಹೆಸರಿನಲ್ಲಿ ಪ್ರತ್ಯೇಕ ಆರ್ಥಿಕ ಹೊಣೆಗಾರಿಕೆ ಸಾಮಾನ್ಯವಾಗಿ ಇರುವುದಿಲ್ಲ. ಆದ್ದರಿಂದ ಮುಖ್ಯ ಕಾರ್ಡ್‌ಧಾರಕರೇ ತಮ್ಮ ಹಣಕಾಸು ವಿಶ್ವಾಸಾರ್ಹತೆಯನ್ನು ಕಾಪಾಡಿಕೊಳ್ಳಲು ವಿಶೇಷ ಜಾಗ್ರತೆ ವಹಿಸಬೇಕು. ಕುಟುಂಬದ ಆರ್ಥಿಕ ಶಿಸ್ತಿನ ದೃಷ್ಟಿಯಿಂದ, ಕಡಿಮೆ ಆದಾಯ ಹೊಂದಿರುವ ಅಥವಾ ವಿದ್ಯಾರ್ಥಿ ಹಂತದಲ್ಲಿರುವ ಸದಸ್ಯರಿಗೆ ಹೆಚ್ಚುವರಿ ಕಾರ್ಡ್ ಉಪಯುಕ್ತವಾಗಬಹುದು. ಆದರೆ ಸ್ವಂತ ಆದಾಯ, ಸ್ವತಂತ್ರ ಖರ್ಚು ವೆಚ್ಚಗಳ ಬಗ್ಗೆ ಅರಿವು ಇದ್ದವರು ಅವರ ವೈಯಕ್ತಿಕ ಹೆಸರಲ್ಲೇ ಪ್ರತ್ಯೇಕ ಕಾರ್ಡ್ ಹೊಂದುವುದು ಉತ್ತಮ ಆಯ್ಕೆ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಧಾರಣೆ (ಶೇಂಗಾ) 12-05-2026	
ಜಾವಾ 70/80(ಹೊಸ)	11100-11200
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9300-9400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1620 (1620)
ಒಂದು ವಾರದ ಡೆಲಿವರಿ	1615 (1615)
ಪಾಮ್ ವಾರದ ಡೆಲಿವರಿ	1473 (1478)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1530)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,51,000 (1,51,500)
ಬೆಳ್ಳಿ ಕೆ.ಜಿಗೆ	2,68,000 (2,64,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಚಿಲ್ಲರೆ ಹಣದುಬ್ಬರ ಸ್ವಲ್ಪ ಏರಿಕೆ

ನವದೆಹಲಿ (ಪಿಟಿಐ): ಆಹಾರ ಪದಾರ್ಥಗಳ ಬೆಲೆ ಏರಿಕೆಯ ಕಾರಣದಿಂದಾಗಿ ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರ ಪ್ರಮಾಣವು ಏಪ್ರಿಲ್ ತಿಂಗಳಿನಲ್ಲಿ ಶೇ 3.48ಕ್ಕೆ ಏರಿಕೆಯಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಮಂಗಳವಾರ ತಿಳಿಸಿದೆ.



ಮಾರ್ಚ್‌ನಲ್ಲಿ ಚಿಲ್ಲರೆ ಹಣದುಬ್ಬರವು ಶೇ 3.40ರಷ್ಟು ದಾಖಲಾಗಿತ್ತು. ಮಾರ್ಚ್ ತಿಂಗಳಿನಲ್ಲಿ ಆಹಾರ ಪದಾರ್ಥಗಳ ಬೆಲೆ ಏರಿಕೆಯು ಶೇ 3.87ರಷ್ಟಿತ್ತು. ಇದು ಏಪ್ರಿಲ್‌ನಲ್ಲಿ ಶೇ 4.2ಕ್ಕೆ ಹೆಚ್ಚಳವಾಗಿದೆ.

ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಹಣದುಬ್ಬರವು ಕ್ರಮವಾಗಿ ಶೇ 3.74 ಮತ್ತು ಶೇ 3.16ರಷ್ಟಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.6ರಷ್ಟಾಗಲಿದೆ ಮತ್ತು ಮೊದಲ ತ್ರೈಮಾಸಿಕದಲ್ಲಿ ಶೇ 4ರಷ್ಟಿರಲಿದೆ ಎಂದು ಕಳೆದ ತಿಂಗಳು ಆರ್‌ಬಿಐ ಅಂದಾಜಿಸಿತ್ತು.

ಪಶ್ಚಿಮ ಏಷ್ಯಾ ಸಂಘರ್ಷದಿಂದ ಇಂಧನ ಬೆಲೆ ಮತ್ತು ಎಲ್ ನಿನೊದಿಂದ ಹಣದುಬ್ಬರವು ಹೆಚ್ಚಳವಾಗಲಿದೆ ಎಂದು ಸಹ ಅದು ಹೇಳಿದೆ.

'ಭೂಮಾಪಕರ ಕಾಯಂ ಸಾಧ್ಯವಿಲ್ಲ'

ತುಮಕೂರು: ಸರ್ಕಾರದ ಪರವಾನಗಿ ಪಡೆದ ಭೂಮಾಪಕರ ಸೇವೆ ಕಾಯಂ ಮಾಡಲು ಸಾಧ್ಯವಿಲ್ಲ. ಅವರ ಉಳಿದ ಎಲ್ಲ ಬೇಡಿಕೆ ಈಡೇರಿಸಲು ಸರ್ಕಾರ ಸಿದ್ಧವಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸ್ಪಷ್ಟಪಡಿಸಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಕಳೆದ ವಾರ ಭೂಮಾಪಕರ ಜತೆಗೆ ಮಾತುಕತೆ ನಡೆಸಿದ್ದಾಗಲೇ ಈ ವಿಷಯ ಅವರ ಗಮನಕ್ಕೆ ತರಲಾಗಿದೆ' ಎಂದರು.

ಸೇವೆ ಕಾಯಂ ಅಥವಾ ವೇತನ ನಿಗದಿಪಡಿಸುವಂತೆ ಪರವಾನಗಿ ಭೂಮಾಪಕರು ಪಟ್ಟು ಹಿಡಿದಿದ್ದಾರೆ. ಸೇವೆ ಕಾಯಂ ಮಾಡುವ ಆಯ್ಕೆ ಸರ್ಕಾರದ ಮುಂದಿಲ್ಲ. ಅವರ ಆದಾಯಕ್ಕೆ ಯಾವುದೇ ಕೊರತೆ ಆಗುತ್ತಿಲ್ಲ. ಎಂದರು. ಭೂಮಾಪಕರು ಮೂರು ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿದ್ದಾರೆ. ಅದರಿಂದ ಕಂದಾಯ ಇಲಾಖೆ ಕೆಲಸಗಳು ನಿಧಾನಗತಿಯಲ್ಲಿ ಸಾಗುತ್ತಿವೆ. ಅವರ ಮನವೊಲಿಸುವ ಕೆಲಸ ಮಾಡಲಾಗುತ್ತಿದೆ ಎಂದು ಸಚಿವರು ಪ್ರತಿಕ್ರಿಯಿಸಿದರು.

ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಸರ್ಕಾರ ಕ್ರಮ ತೆಗೆದುಕೊಂಡು ಅಮಾನತು ಮಾಡಿದರೆ, ಐದು ನಿಮಿಷಕ್ಕೆ ತಡೆ ಕೊಡುವುದಕ್ಕೆ ಬೇರೆಯವರು ಕಾಯುತ್ತಾ ಇರುತ್ತಾರೆ. ಅಧಿಕಾರಿ ಮತ್ತೆ ವಾಪಸ್ ಬಂದು ಅದೇ ಜಾಗದಲ್ಲಿ ಕುಳಿತು, ಮತ್ತಷ್ಟು ರಾಜಾರೋಷವಾಗಿ ಇರುತ್ತಾರೆ ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಪಿಎಂ–ಇ ಡ್ರೈವ್ ಯೋಜನೆ ಮೂಲಸೌಕರ್ಯ ಅಭಿವೃದ್ಧಿ ಕುರಿತ ಸಮ್ಮೇಳನದಲ್ಲಿ ಎಚ್‌ಡಿಕೆ

'ಇ.ವಿ ಚಾರ್ಜಿಂಗ್ ಘಟಕ; ರಾಜ್ಯಕ್ಕೆ ₹123 ಕೋಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಿಎಂ–ಇ ಡ್ರೈವ್ ಯೋಜನೆಯಡಿ ಕರ್ನಾಟಕದಲ್ಲಿ ವಿದ್ಯುತ್ ಚಾಲಿತ ವಾಹನಗಳ (ಇ.ವಿ) 1,243 ಚಾರ್ಜಿಂಗ್ ಘಟಕಗಳ ಸ್ಥಾಪನೆಗೆ ಬೇಕಾದ ₹123.26 ಕೋಟಿ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ತಿಳಿಸಿದರು.

ಕೇಂದ್ರ ಬೃಹತ್ ಕೈಗಾರಿಕೆ ಸಚಿವಾಲಯ ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಪಿಎಂ–ಇ ಡ್ರೈವ್ ಯೋಜನೆ ಅಡಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಮೂಲಸೌಕರ್ಯ ಅಭಿವೃದ್ಧಿ ಸಮ್ಮೇಳನ ಉದ್ಘಾಟಿಸಿ ಅವರು ಮಾತನಾಡಿದರು.



ಸಮ್ಮೇಳನದಲ್ಲಿ ತೆಲಂಗಾಣದ ಇಂಧನ ಇಲಾಖೆಯ ವಿಶೇಷ ಮುಖ್ಯ ಕಾರ್ಯದರ್ಶಿ ನವೀನ್ ಮಿತ್ತಲ್, ಕೇರಳದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ವಿದ್ಯುತ್ ಇಲಾಖೆ ಪುನೀತ್ ಕುಮಾರ್, ಕೇಂದ್ರ ಬೃಹತ್ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್‌ಡಿ. ಕುಮಾರಸ್ವಾಮಿ, ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ ಹಾಗೂ ಕೇಂದ್ರದ ಭಾರೀ ಕೈಗಾರಿಕಾ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಹನೀಫ್ ಖುರೇಷಿ ಪಾಲ್ಗೊಂಡರು

ಪ್ರಜಾವಾಣಿ ಚಿತ್ರ

'ವಿವಿಧ ರಾಜ್ಯಗಳು ಮತ್ತು ಕೇಂದ್ರ ಸರ್ಕಾರಿ ಸಾರ್ವಜನಿಕ ವಲಯದ ಉದ್ಯಮಗಳಲ್ಲಿ 4,874 ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಈವರೆಗೆ ₹503.86 ಕೋಟಿ ಮೌಲ್ಯದ ಪ್ರಸ್ತಾವಗಳಿಗೆ ಅನುಮತಿ ನೀಡಿದ್ದು, ವಿದ್ಯುತ್ ಚಾಲಿತ ವಾಹನ ಬಳಕೆಗೆ ಒತ್ತು ನೀಡಲಾಗಿದೆ. ವಿಶೇಷವಾಗಿ ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್ ಹಬ್ ಆಗಿ ಬೆಂಗಳೂರು ಹೊರಹೊಮ್ಮಿದೆ. ಇದೇ ಮಾದರಿಯಲ್ಲಿ ಇತರೆ ರಾಜ್ಯಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕರ್ನಾಟಕ ಕಳುಹಿಸುವ ಪ್ರಸ್ತಾವಗಳಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಲಿದೆ' ಎಂದರು.

'ದೇಶಾದ್ಯಂತ ಇವಿ ಸಾರ್ವಜನಿಕ ಚಾರ್ಜಿಂಗ್ ಮೂಲಸೌಕರ್ಯಕ್ಕಾಗಿ ₹2,000 ಕೋಟಿ ಮೀಸಲಿಡಲಾಗಿದೆ. ಇದಲ್ಲದೇ ಬ್ಯಾಟರಿ ಸೆಲ್ ತಯಾರಿಕೆಗೆ ₹18,100 ಕೋಟಿ ಹೈಡ್ರೋಜನ್ ಚಾಲಿತ ವಾಹನಗಳ ಉತ್ಪಾದನೆ ಉತ್ತೇಜಿಸುವ ಪಿಎಲ್‌ಐ ಆಟೊ ಯೋಜನೆಗೆ ₹25,938 ಕೋಟಿ, ಭೂಮಿಯಲ್ಲಿನ ಅಪರೂಪದ ಮ್ಯಾಗ್ನೆಟ್ ಉತ್ಪಾದನೆಗೆ ₹7,280 ಕೋಟಿ ವೆಚ್ಚದ ಆರ್‌ಇಪಿಎಂ ಯೋಜನೆ ಆರಂಭಿಸಲಾಗಿದೆ. ಕೇಂದ್ರ ಸರ್ಕಾರವು ಇಂಗಾಲದ ಡೈ ಆಕ್ಸೈಡ್ ತಗ್ಗಿಸಿ ಹಸಿರು ವಾಹನ ವ್ಯವಸ್ಥೆ ರೂಪಿಸಲು ಬದ್ಧವಾಗಿದೆ' ಎಂದರು.

'ವಿದ್ಯುತ್ ಚಾಲಿತ ವಾಹನಗಳ ಚಾರ್ಜಿಂಗ್‌ಗೆ ಯೂನಿಫೈಡ್ ಭಾರತ್ ಇ ಚಾರ್ಜ್ (ಯುಬಿಸಿ) ಆ್ಯಪ್ ಸಿದ್ಧಪಡಿಸಲಾಗುತ್ತಿದೆ. ಇದು ಬಳಕೆಗೆ ಬಂದರೆ ಭಾರತದಲ್ಲಿ ಇ.ವಿ ಚಾರ್ಜಿಂಗ್ ವಲಯದಲ್ಲಿ ಕ್ರಾಂತಿಯೇ ಆಗಲಿದೆ' ಎಂದರು.

ಇದಕ್ಕೂ ಮೊದಲು ನಡೆದ ಗೋಷ್ಠಿಯಲ್ಲಿ ಮಾತನಾಡಿದ ಭಾರತ ತೈಲ ಕಂಪನಿಗಳ ಪ್ರಮುಖರು, ಉದ್ಯಮ ವಲಯದ ಪ್ರತಿನಿಧಿಗಳು, 'ಭಾರತದ ಹೆದ್ದಾರಿಗಳಲ್ಲಿ ಇವಿ ಚಾರ್ಜಿಂಗ್ ಕೇಂದ್ರಗಳ ಸ್ಥಾಪನೆಗೆ ಇನ್ನಿಲ್ಲದ ಒತ್ತು ಸಿಗುತ್ತಿದೆ. ಈ ಕ್ಷೇತ್ರದಲ್ಲಿ ಸಾಕಷ್ಟು ಕೆಲಸವೂ ನಡೆದಿದೆ. ವಿದ್ಯುತ್ ಚಾಲಿತ ವಾಹನ ಬಳಸುವವರು ಸಾರ್ವಜನಿಕ ಸ್ಥಳಗಳಲ್ಲಿ ಚಾರ್ಜಿಂಗ್ ಕೇಂದ್ರ ಬಳಸುವ ಜತೆಗೆ ಮನೆ ಹಾಗೂ ಕಚೇರಿಯಲ್ಲೂ ವ್ಯವಸ್ಥೆ ಬಲಪಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಇ.ವಿ ವಾಹನ ಖರೀದಿ ಹೆಚ್ಚಳ

'ಕರ್ನಾಟಕದಲ್ಲಿ 8,600 ಇವಿ ಚಾರ್ಜಿಂಗ್ ಕೇಂದ್ರ ಸ್ಥಾಪಿಸಲಾಗಿದ್ದು, ಇನ್ನೂ 1,250 ಕೇಂದ್ರ ಸ್ಥಾಪಿಸುವ ಗುರಿ ಹೊಂದಿದೆ. ಇದಕ್ಕಾಗಿ ₹777.75 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಕೇಂದ್ರ ಸರ್ಕಾರದಿಂದ ₹325.41 ಕೋಟಿ ಸಹಾಯಧನ ಸಿಗಲಿದೆ' ಎಂದು ಕರ್ನಾಟಕದ ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ ತಿಳಿಸಿದರು.

ಸಮ್ಮೇಳನದಲ್ಲಿ ವಿಚಾರ ಮಂಡಿಸಿದ ಅವರು, 'ನಮ್ಮಲ್ಲಿ ಸದ್ಯ 2.25 ಲಕ್ಷ ಇವಿ ವಾಹನಗಳು ಬಳಕೆಯಲ್ಲಿವೆ. 100ರಲ್ಲಿ 11 ಇವಿ ವಾಹನಗಳು. ಖರೀದಿ ಸಂಖ್ಯೆಯೂ ಹೆಚ್ಚುತ್ತಿದ್ದು, ಇದಕ್ಕೆ ಪೂರಕವಾಗಿ ನೀತಿ, ಮೂಲಸೌಕರ್ಯ ಒದಗಿಸಲಾಗುತ್ತಿದೆ. ಮುಂದಿನ ತಿಂಗಳು ಬೆಸ್ಕಾಂ ಇವಿ ವಲಯದ ಸಮ್ಮೇಳನ ಆಯೋಜಿಸುತ್ತಿದೆ' ಎಂದರು. ಕೇರಳ, ತೆಲಂಗಾಣ, ಒಡಿಶಾ ರಾಜ್ಯಗಳ ಅಧಿಕಾರಿಗಳು ಇವಿ ಬಳಕೆ ವಿವರ ಮಂಡಿಸಿದರು.

> **ದೇಶದಲ್ಲಿ ವಿವಿಧ ರೀತಿಯ ಇ.ವಿ ವಾಹನಗಳ ಬಳಕೆ ಹೆಚ್ಚಿದ್ದು, ಚಾರ್ಜಿಂಗ್ ಮೂಲಸೌಕರ್ಯವನ್ನು ದೇಶೀಯವಾಗಿ ನಿರ್ಮಿಸಲು ಒತ್ತು ನೀಡುತ್ತಿದ್ದೇವೆ**
> **ಹನೀಫ್ ಖುರೇಷಿ,** ಹೆಚ್ಚುವರಿ ಕಾರ್ಯದರ್ಶಿ, ಕೇಂದ್ರ ಬೃಹತ್ ಕೈಗಾರಿಕೆ ಇಲಾಖೆ

'ಪ್ರಸ್ತಾವ ಒಪ್ಪಿಕೊಳ್ಳಿ ಇಲ್ಲವೇ ಸೋಲು ಸ್ವೀಕರಿಸಿ'

ಟೆಹರಾನ್ (ಎಎಫ್‌ಪಿ): 'ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳಿಸುವುದಕ್ಕೆ ಸಂಬಂಧಿಸಿದಂತೆ ನಾವು ಮುಂದಿಟ್ಟಿರುವ 14 ಅಂಶಗಳ ಪ್ರಸ್ತಾವವನ್ನು ಒಪ್ಪಿಕೊಳ್ಳಿ ಅಥವಾ ಸೋಲು ಸ್ವೀಕರಿಸಿ' ಎಂದು ಇರಾನ್ ಅಮೆರಿಕಕ್ಕೆ ಎಚ್ಚರಿಕೆ ನೀಡಿದೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎದುರು ಇರಾನ್ ಮುಂದಿಟ್ಟಿರುವ 9 ಅಂಶಗಳ ಪ್ರಸ್ತಾವಕ್ಕೆ ಪ್ರತಿಯಾಗಿ, ಇರಾನ್ ಮಧ್ಯಸ್ಥಿಕೆದಾರರು ಈ ಪ್ರತಿಕ್ರಿಯೆ ನೀಡಿದ್ದಾರೆ.

'ಅಮೆರಿಕ–ಇರಾನ್ ನಡುವೆ ಕಳೆದ ತಿಂಗಳು ನಡೆದ ಆರಂಭಿಕ ಸುತ್ತಿನ ಮಾತುಕತೆಯು ಯಾವುದೇ ಪ್ರಗತಿ ಸಾಧಿಸುವಲ್ಲಿ ವಿಫಲವಾಗಿದೆ. ಹಾಗಾಗಿ, ಎರಡು ತಿಂಗಳಿಂದ ಮುಂದುವರಿದಿರುವ ಸಂಘರ್ಷ ಕೊನೆಗೊಳ್ಳಬೇಕಾದರೆ, ಅಮೆರಿಕದ ಮುಂದೆ ಇರಾನ್ ಇಟ್ಟಿರುವ ಪ್ರಸ್ತಾವವನ್ನು ಒಪ್ಪದೆ ಪರ್ಯಾಯ ಆಯ್ಕೆಗಳಿಲ್ಲ' ಎಂದು ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಹೇಳಿದ್ದಾರೆ.

ಇರಾನ್ ಸಲ್ಲಿಸಿರುವ ಪ್ರಸ್ತಾವವನ್ನು ತಿರಸ್ಕರಿಸುವ ಟ್ರಂಪ್, 'ಅಮೆರಿಕ–ಇರಾನ್ ನಡುವೆ ಏಪ್ರಿಲ್ 8ರಿಂದ ದುರ್ಬಲ ಕದನ ವಿರಾಮ ಜಾರಿಯಲ್ಲಿದ್ದು, ಸದ್ಯ 'ಜೀವ ರಕ್ಷಕ ವ್ಯವಸ್ಥೆಯ ಬೆಂಬಲದಲ್ಲಿದೆ' ಎಂದು ಹೇಳಿದ್ದಾರೆ.

'ಇರಾನ್ ಪ್ರಸ್ತಾವವನ್ನು ಒಪ್ಪದೆ ಬೇರೆ ಯಾವುದೇ ವಿಧಾನವು ಸಂಘರ್ಷಕ್ಕೆ ತೆರೆ ಎಳೆಯುವುದಿಲ್ಲ. ಅಮೆರಿಕವು ಬೇರೊಂದು ಪ್ರಯತ್ನಕ್ಕೆ ಮುಂದಾದರೆ, ಅದು ಮತ್ತೊಂದು ವೈಫಲ್ಯವಲ್ಲದೆ ಮತ್ತೇನೂ ಅಲ್ಲ' ಎಂದು ಮೊಹಮ್ಮದ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಅಮೆರಿಕದ ಪ್ರಸ್ತಾವಕ್ಕೆ ಒಪ್ಪದಿದ್ದರೆ, ಯಾವುದೇ ಕ್ಷಣದಲ್ಲಿ ಬೇಕಾದರೂ ಭಾರಿ ದಾಳಿ ನಿರೀಕ್ಷಿಸಬಹುದು' ಎಂಬ ಅಮೆರಿಕದ ಬೆದರಿಕೆಗೆ ಇರಾನ್ ಮಣಿದಿಲ್ಲ. ಬದಲಿಗೆ, 'ಯುದ್ಧವನ್ನು ಅಮೆರಿಕದ ಎಷ್ಟು ದಿನ ಮುಂದುವರಿಸುತ್ತದೆಯೋ, ಅಲ್ಲಿಯವರೆಗೆ ಅಮೆರಿಕದ ತೆರಿಗೆದಾರರು ದಂಡ ತೆರಬೇಕಾಗುತ್ತದೆ' ಎಂದು ಹೇಳಿದೆ.

ಪ್ರಸ್ತಾವ ಒಪ್ಪದ ಇರಾನ್

ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ಸಂಚಾರಕ್ಕೆ ಇರಾನ್ ನಿರ್ಬಂಧವನ್ನು ಮತ್ತಷ್ಟು ಬಿಗಿಗೊಳಿಸಿದೆ. ಅಮೆರಿಕವೂ ಇರಾನ್‌ನ ಬಂದರಿನ ಮೇಲೆ ಹೇರಿರುವ ದಿಗ್ಬಂಧನವನ್ನು ತೆರವುಗೊಳಿಸುವುದಿಲ್ಲ ಎಂದು ಹೇಳಿದೆ. ಮಧ್ಯಸ್ಥಿಕೆ ವಹಿಸಿರುವ ಪಾಕಿಸ್ತಾನದ ಮೂಲಕ ಅಮೆರಿಕ ಸಲ್ಲಿಸಿರುವ ಒಂದು ಪುಟದ ತಿಳಿವಳಿಕೆ ಪತ್ರದಲ್ಲಿನ ವಿವರಗಳು ಅಸ್ಪಷ್ಟವಾಗಿದ್ದು, ಮಿತಿ ಹೇರುವಂತಿವೆ ಎಂದು ಇರಾನ್ ಆಕ್ಷೇಪಿಸಿದೆ. ಮುಖ್ಯವಾಗಿ ಯುರೇನಿಯಂ ಸಮೃದ್ಧೀಕರಣದ ವಿಷಯವಾಗಿ ಅಮೆರಿಕ ಮುಂದಿಟ್ಟಿರುವ ಅಂಶವನ್ನು ಒಪ್ಪಿಕೊಳ್ಳಲು ಇರಾನ್ ನಿರಾಕರಿಸಿದೆ ಎಂದು ಮೂಲಗಳು ಹೇಳಿವೆ.

ಅಮೆರಿಕವು ಈ ಅಂಶಗಳಿಗೆ ಒಪ್ಪಿಕೊಂಡರೆ, ಪ್ರತಿಯಾಗಿ ಇರಾನ್, ಅಮೆರಿಕದ ಯಾವೆಲ್ಲ ಬೇಡಿಕೆಗೆ ಒಪ್ಪಿಕೊಳ್ಳಲಿದೆ ಎನ್ನುವುದನ್ನು ಇರಾನ್‌ನ ವಿದೇಶಾಂಗ ಇಲಾಖೆ ಸ್ಪಷ್ಟಪಡಿಸಿಲ್ಲ.

ಇರಾನ್ ಪ್ರಸ್ತಾವದ ಪ್ರಮುಖ ಅಂಶಗಳು

- ಇರಾನ್ ಬಂದರಿನ ಮೇಲೆ ಅಮೆರಿಕ ಹೇರಿರುವ ದಿಗ್ಬಂಧನವನ್ನು ತೆರವುಗೊಳಸಬೇಕು
- ಲೆಬನಾನ್ ಮೇಲಿನ ಯುದ್ಧ ನಿಲ್ಲಿಸಬೇಕು ಹಾಗೂ ಇರಾನ್ ದಾಳಿಗೆ ನಿಯೋಜಿಸಿರುವ ಅಮೆರಿಕದ ಸೇನೆಯನ್ನು ವಾಪಸ್ ಕರೆಯಿಸಿಕೊಳ್ಳಬೇಕು
- ಇರಾನ್‌ನ ಯುರೇನಿಯಂ ಸಮೃದ್ಧೀಕರಣ ಹಕ್ಕನ್ನು ಖಾತರಿಪಡಿಸಬೇಕು
- ದೀರ್ಘಕಾಲದ ನಿರ್ಬಂಧಗಳ ಅಡಿಯಲ್ಲಿ ವಿದೇಶಗಳಲ್ಲಿ ಸ್ಥಗಿತಗೊಳಿಸಲಾದ ಇರಾನ್ ಆಸ್ತಿಯನ್ನು ಮುಕ್ತಗೊಳಿಸಬೇಕು.

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-34500	ಬೆಟ್ಟೆ	54899-63530	ಬಿಳಿಗೋಟು	25109-37900
ಹೊಸತು	30000-47500	ರಾಶಿ	44129-56059	ಚಾಲಿ	44099-48689
		ಗೊರಬಲು	19010-44889	ಕೆಂಪುಗೋಟು	28499-41089
ಸಾಗರ		**ಸಿದ್ದಾಪುರ**		ರಾಶಿ	51600-54010
ಬಿಳಿಗೋಟು	30666-32200	ಬಿಳಿಗೋಟು	26199-35699	**ಯಲ್ಲಾಪುರ**	
ಚಾಲಿ	40699-41300	ಚಾಲಿ	39599-47839	ಆಪಿ	60419-60419
ಕೋಕ	32999-32999	ಕೋಕ	23319-33689	ಬಿಳಿಗೋಟು	20000-38068
ಕೆಂಪುಗೋಟು	33099-36699	ಕೆಂಪುಗೋಟು	32689-37111	ಚಾಲಿ	38399-48555
ರಾಶಿ	45099-54119	ರಾಶಿ	46089-53699	ಕೋಕ	16000-34899
ಸಿಪ್ಪೆಗೋಟು	18099-22465	ತಟ್ಟಿಬೆಟ್ಟೆ	41089-52089	ಕೆಂಪುಗೋಟು	22119-38306
ಶಿವಮೊಗ್ಗ		**ಶಿರಸಿ**		ರಾಶಿ	50199-57869
ಸರಕು	50009-94196	ಬೆಟ್ಟೆ	41899-51200	ತಟ್ಟಿಬೆಟ್ಟೆ	37899-50400

ಕಬ್ಬಿನ ಬಾಕಿ: ₹50 ಜಮೆಗೆ ಸಿ.ಎಂ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿ ಟನ್ ಕಬ್ಬಿಗೆ ದಕ್ಷಿಣ ಕರ್ನಾಟಕ ಭಾಗದ ಕಾರ್ಖಾನೆಗಳು ನೀಡಬೇಕಿರುವ ಪ್ರೋತ್ಸಾಹ ಧನದ ಬಾಕಿ ₹50 ಅನ್ನು ಬೆಳೆಗಾರರ ಖಾತೆಗೆ ಜಮೆ ಮಾಡಲು ತಕ್ಷಣ ಕ್ರಮ ಕೈಗೊಳ್ಳುವಂತೆ ಸಕ್ಕರೆ ನಿರ್ದೇಶನಾಲಯದ ಆಯುಕ್ತರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.

ಸಕ್ಕರೆ ಕಾರ್ಖಾನೆಗಳಿಂದ ಕಬ್ಬು ಬೆಳೆಗಾರರಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಅವರು ಸಲ್ಲಿಸಿದ್ದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿ ಈ ಸೂಚನೆ ನೀಡಿದ್ದಾರೆ.

'ಈಗಾಗಲೇ ಏಳು ಸಕ್ಕರೆ ಕಾರ್ಖಾನೆಗಳು ರೈತರ ಖಾತೆಯ ವಿವರವನ್ನು ನೀಡಿವೆ. ಶೀಘ್ರದಲ್ಲೇ ರೈತರಿಗೆ ಪ್ರೋತ್ಸಾಹಧನ ಜಮೆಯಾಗಲಿದೆ. ತೆಗೆದುಕೊಂಡ ಕ್ರಮದ ಬಗ್ಗೆ ವರದಿ ನೀಡಲು ಮುಖ್ಯಮಂತ್ರಿ ನಿರ್ದೇಶನ ನೀಡಿದ್ದಾರೆ' ಎಂದು ದಿನೇಶ್ ತಿಳಿಸಿದ್ದಾರೆ.

2025-26ನೇ ಹಂಗಾಮಿನ ಕಬ್ಬು ಬೆಳೆಗಾರರ ಬಾಕಿ ಪ್ರೋತ್ಸಾಹಧನ ಪಾವತಿ, ರೈತರ ಬ್ಯಾಂಕ್ ಖಾತೆ ವಿವರಗಳನ್ನು ನೀಡಲು ನಿರಾಕರಿಸುತ್ತಿರುವ ಹಾಗೂ ಸರ್ಕಾರದ ಆದೇಶ ಉಲ್ಲಂಘಿಸುತ್ತಿರುವ ದಕ್ಷಿಣ ಕರ್ನಾಟಕದ ಏಳು ಸಕ್ಕರೆ ಕಾರ್ಖಾನೆಗಳ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸುವಂತೆ ದಿನೇಶ್ ಗೂಳಿಗೌಡ ಅವರು ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದರು.

ರೈತರಿಗೆ ಬಾಕಿ ನೀಡದ, ನಿಯಮ ಪಾಲಿಸದ ಕಾರ್ಖಾನೆಗಳ ಕಬ್ಬು ಅರೆಯುವಿಕೆ ಪರವಾನಗಿಯನ್ನು ಮುಂಬರುವ ಹಂಗಾಮಿಗೆ ನವೀಕರಿಸಬಾರದು. ಹೈಕೋರ್ಟ್‌ನಲ್ಲಿರುವ ತಡೆಯಾಜ್ಞೆ ತೆರವುಗೊಳಿಸಲು ಅಡ್ವೊಕೇಟ್ ಜನರಲ್ ಮೂಲಕ ಪ್ರಬಲ ವಾದ ಮಂಡಿಸಬೇಕು. ಮುಂಗಾರು ಹಂಗಾಮು ಆರಂಭವಾಗುವ ಮುನ್ನ ಕಾರ್ಖಾನೆ ಮಾಲೀಕರ ಸಭೆ ಕರೆದು, ಕಾರ್ಖಾನೆಗಳನ್ನು ಸರ್ಕಾರದ ವಶಕ್ಕೆ ಪಡೆಯುವ ಎಚ್ಚರಿಕೆ ನೀಡಬೇಕು ಎಂದು ಮನವಿ ಮಾಡಿದ್ದರು.


ಪ್ರಜಾವಾಣಿ ಸಿನಿ ಸಮ್ಮಾನ 4ನೇ ಆವೃತ್ತಿ ಶೀಘ್ರದಲ್ಲಿ

ಸ್ಯಾಂಡಲ್‌ವುಡ್‌ನ ಪ್ರತಿಭೆಗಳನ್ನು ಗುರುತಿಸುವ ಹಾಗೂ ಇಲ್ಲಿನ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭ ಶೀಘ್ರದಲ್ಲಿ ನಡೆಯಲಿದೆ. ಈಗಾಗಲೇ ಮೂರು ಆವೃತ್ತಿಗಳು ಅದ್ದೂರಿಯಾಗಿ ನಡೆದಿವೆ. ಅಲ್ಪ ಅವಧಿಯಲ್ಲೇ ಕನ್ನಡ ಚಿತ್ರರಂಗದ ಉತ್ಕೃಷ್ಟ ಪ್ರಶಸ್ತಿಯಾಗಿ 'ಪ್ರಜಾವಾಣಿ ಸಿನಿ ಸಮ್ಮಾನ' ಗುರುತಿಸಿಕೊಂಡಿದೆ. ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕಿಂತಲೂ ಅಧಿಕ ಸಿನಿಮಾಗಳು ಪ್ರಶಸ್ತಿಗಾಗಿ ಸ್ಪರ್ಧಿಸಿವೆ. ಶೀಘ್ರದಲ್ಲೇ ನಾಮನಿರ್ದೇಶನಗಳು ಪ್ರಕಟವಾಗಲಿವೆ. ಕಳೆದ ಮೂರು ಆವೃತ್ತಿಯ ಸಿನಿ ಸಮ್ಮಾನದ ಝಲಕ್‌ಗಳು...





ಮೂರನೇ ಆವೃತ್ತಿಯಲ್ಲಿ ರಾಧಿಕಾ ನಾರಾಯಣ್ ಹೆಜ್ಜೆ...



ಮೊದಲ ಆವೃತ್ತಿಯಲ್ಲಿ ಪುನೀತ್ ರಾಜ್‌ಕುಮಾರ್ ನೆನಪು...

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ



ಸಾನ್ವಿ ಶ್ರೀವಾತ್ಸವ ನೃತ್ಯದ ಮೋಡಿ...



ಎರಡನೇ ಆವೃತ್ತಿಗೆ ಆಶಿಕಾ ರಂಗನಾಥ್ ನೃತ್ಯದ ಮೆರುಗು



ಸೂರ್ಯ

ಕೆವಿಎನ್ ವಿತರಿಸಲಿದೆ 'ಕರುಪ್ಪು'

ತಮಿಳಿನ ಖ್ಯಾತ ನಟ ಸೂರ್ಯ ಹಾಗೂ ತ್ರಿಷಾ ಕೃಷ್ಣನ್ ಅಭಿನಯದ 'ಕರುಪ್ಪು' ಸಿನಿಮಾ ಮೇ 14 ರಂದು ತೆರೆಕಾಣುತ್ತಿದ್ದು, ಕರ್ನಾಟಕದಲ್ಲಿ ಸಿನಿಮಾವನ್ನು 'ಕೆವಿಎನ್' ನಿರ್ಮಾಣ ಸಂಸ್ಥೆಯು ವಿತರಣೆ ಮಾಡಲಿದೆ.

ಆರ್.ಜೆ ಬಾಲಾಜಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದು, ಡ್ರೀಮ್ ವಾರಿಯರ್ ಪಿಕ್ಚರ್ಸ್ ಅಡಿಯಲ್ಲಿ ಪ್ರಕಾಶ್ ಬಾಬು ಹಾಗೂ ಎಸ್.ಆರ್. ಪ್ರಭು ನಿರ್ಮಿಸಿದ್ದಾರೆ. ಅಶ್ವಿನ್ ರವಿಚಂದ್ರನ್, ರಾಹುಲ್ ರಾಜ್, ಗೋಪಿ ಕೃಷ್ಣನ್ ಮೊದಲಾದವರು ಸಿನಿಮಾಗೆ ಚಿತ್ರಕಥೆ ಬರೆದಿದ್ದಾರೆ. ಸೂರ್ಯ, ತ್ರಿಷಾ ಜೊತೆಗೆ ಇಂದ್ರನ್ಸ್, ನಟ್ಟಿ, ಸ್ವಾಸಿಕಾ ವಿಜಯ್, ಶ್ರಿವಧ ನಾಯರ್, ಅನಘ ಮಾಯಾ ರವಿ, ಸುಪ್ರೀತ್ ರೆಡ್ಡಿ ಮುಂತಾದವರು ನಟಿಸಿದ್ದಾರೆ. ಸಾಯಿ ಅಭಯಂಕರ್ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡಿದ್ದಾರೆ.


ಮೇ 15ಕ್ಕೆ 'ಶೇರ್' ತೆರೆಗೆ

'ಕನ್ನಡತಿ' ಧಾರಾವಾಹಿ ಖ್ಯಾತಿಯ ಕಿರಣ್ ರಾಜ್ ನಟನೆಯ 'ಶೇರ್' ಸಿನಿಮಾ ಮೇ 15ರಂದು ತೆರೆಕಾಣಲಿದೆ.

ಪ್ರಸಿದ್ಧ್ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬಂದಿದ್ದು, ಗ್ರೇಸ್ ರಾಜ್ ಪ್ರೊಡಕ್ಷನ್ ಲಾಂಛನದಲ್ಲಿ ಸುದರ್ಶನ್ ಸುಂದರರಾಜ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಕಿರಣ್ ರಾಜ್ ಹಾಗೂ ಕ್ರಿಸ್ (ಗಿಲ್ಲಿ) ಪ್ರಮುಖ ಪಾತ್ರದಲ್ಲಿ ನಟಿಸಿರುವ ಈ ಸಿನಿಮಾವು ಆ್ಯಕ್ಷನ್ ಥ್ರಿಲ್ಲರ್ ಜಾನರ್‌ನಲ್ಲಿದೆ. ಐದು ಅದ್ದೂರಿಯಾದ ಸಾಹಸ ಸನ್ನಿವೇಶಗಳು ಚಿತ್ರದಲ್ಲಿದ್ದು, ಕಿಟ್ಟಿ ಕೌಶಿಕ್ ಛಾಯಾಚಿತ್ರಗ್ರಹಣ, ವೆಂಕಿ ಯುಡಿವಿ ಸಂಕಲನ ಹಾಗೂ ಗುಮ್ಮಿನೇನಿ ವಿಜಯ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ಸುರೇಖಾ, ತನೀಷಾ ಕುಪ್ಪಂಡ, ಯಶ್ ಶೆಟ್ಟಿ, ಶೋಭರಾಜ್, ಬಲ ರಾಜವಾಡಿ, ವೀಣಾ ಸುಂದರ್ ಮುಂತಾದವರು ತಾರಾಬಳಗದಲ್ಲಿದ್ದಾರೆ.



ಕಿರಣ್‌ರಾಜ್



ಜೂನ್ 19ಕ್ಕೆ ಬಾಲನ್ ದಿ ಬಾಯ್

2024ರಲ್ಲಿ ತೆರೆಕಂಡ ಮಲಯಾಳದ ಹಿಟ್ ಸಿನಿಮಾ 'ಮಂಜುಮ್ಮೆಲ್ ಬಾಯ್ಸ್'ನ ನಿರ್ದೇಶಕ ಚಿದಂಬರಂ ನಿರ್ದೇಶನದ 'ಬಾಲನ್ ದಿ ಬಾಯ್' ಸಿನಿಮಾ ಜೂನ್ 19ಕ್ಕೆ ತೆರೆಕಾಣಲಿದೆ. ಸಿನಿಮಾವನ್ನು ಕೆವಿಎನ್ ನಿರ್ಮಾಣ ಸಂಸ್ಥೆಯ ವೆಂಕಟ್ ಕೆ.ನಾರಾಯಣ್ ಹಾಗೂ ಶೈಲಜಾ ದೇಸಾಯಿ ಫೆನ್ ನಿರ್ಮಾಣ ಮಾಡಿದ್ದಾರೆ. ಚಿತ್ರವು ಮಲಯಾಳ, ಹಿಂದಿ, ತೆಲುಗು, ತಮಿಳು ಹಾಗೂ ಕನ್ನಡದಲ್ಲಿ ತೆರೆಗೆ ಬರಲಿದೆ. ಸಿನಿಮಾವನ್ನು ಅಂತರರಾಷ್ಟ್ರೀಯ ವೇದಿಕೆಗೂ ತೆಗೆದುಕೊಂಡು ಹೋಗಲಾಗಿದ್ದು, ಇದೇ 14ರಂದು ಆರಂಭವಾಗಲಿರುವ ಕಾನ್ಸ್ ಸಿನಿಮೋತ್ಸವದಲ್ಲಿ ಚಿತ್ರವು ಪ್ರದರ್ಶನಗೊಳ್ಳಲಿದೆ.

'ಆವೇಶಂ' ನಿರ್ದೇಶಿಸಿದ್ದ ಜಿತು ಮಾಧವನ್ 'ಬಾಲನ್' ಕಥೆ ಬರೆದಿದ್ದಾರೆ.

ಆರ್‌ಸಿಬಿ ಬ್ಯಾಟರ್‌ಗಳಿಗೆ ಸವಾಲು

ಬೌಲಿಂಗ್‌ನಲ್ಲಿ ಸುಧಾರಣೆ ಕಾಣುತ್ತಿರುವ ಕೋಲ್ಕತ್ತ ನೈಟ್‌ರೈಡರ್ಸ್

ಇಂಡಿಯನ್ ಪ್ರೀಮಿಯರ್ ಲೀಗ್

ರಾಯಪುರ (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಬೌಲಿಂಗ್ ಇತ್ತೀಚೆಗೆ ಸಾಕಷ್ಟು ಸುಧಾರಣೆ ಕಂಡಿದೆ. ಈ ತಂಡವನ್ನು ಬುಧವಾರ ಐಪಿಎಲ್ ಪಂದ್ಯದಲ್ಲಿ ಎದುರಿಸಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಪ್ಲೇಆಫ್ ಸ್ಥಾನವನ್ನು ಗಟ್ಟಿಗೊಳಿಸಲು ಇನ್ನಷ್ಟು ಆಕ್ರಮಣಕಾರಿಯಾಗಿ ಆಡಬೇಕಾಗಿದೆ.

ಹಾಲಿ ಚಾಂಪಿಯನ್ ತಂಡವು ಋತುವಿನ ಆರಂಭದ ಪಂದ್ಯಗಳಲ್ಲಿ ಸ್ಫೋಟಕ ಆಟದಿಂದ ಎದುರಾಳಿ ತಂಡಗಳ ಮೇಲೆ ಸವಾರಿ ಮಾಡಿತ್ತು. ಆದರೆ ಇತ್ತೀಚಿನ ಪಂದ್ಯಗಳಲ್ಲಿ ಆ 'ಆವೇಶ' ಕಾಣುತ್ತಿಲ್ಲ. ಮುಂಬೈ ವಿರುದ್ಧ ಸ್ವಲ್ಪ ನಿಧಾನಗತಿಯ ಪಿಚ್‌ನಲ್ಲಿ 167 ರನ್‌ಗಳ ಗುರಿ ಯಶಸ್ವಿಯಾಗಿ ಬೆನ್ನಟ್ಟಿದರೂ ಆ ಹಾದಿಯಲ್ಲಿ ಏದುಸಿರುಬಿಟ್ಟಿತ್ತು.

ಕೃಣಾಲ್ ಪಾಂಡ್ಯ ಅವರ ದಿಟ್ಟ ಅರ್ಧ ಶತಕ ಮತ್ತು ಕೊನೆಯ ಓವರಿನಲ್ಲಿ ಭುವನೇಶ್ವರ್ ಕುಮಾರ್ ಅವರ ಸಕಾಲಿಕ ಸಿಕ್ಸರ್ ಗೆಲುವಿಗೆ ನೆರವಾಗಿದ್ದವು.

ತಂಡವು ಮೊದಲಿನ ಕೆಲವು ಪಂದ್ಯಗಳಲ್ಲಿ ತೋರಿದ ವೈಭವ ಕಾಣಬೇಕಾದರೆ ನಾಯಕ ರಜತ್ ಪಾಟೀದಾರ್ ಅವರ ಕಾಣಿಕೆ ಮಹತ್ವದ್ದಾಗಿದೆ. ಸಿಕ್ಸರ್‌ಗಳ ಸುರಿಮಳೆಗೈದಿದ್ದ ಪಾಟೀದಾರ್ ಅವರ ಆಟ ನಂತರ ಕಳೆಗುಂದಿತು. ಕೊನೆಯ ಆರು ಇನಿಂಗ್ಸ್‌ಗಳಲ್ಲಿ ಅವರು ಒಂದು ಅರ್ಧ ಶತಕ ಮಾತ್ರ ಗಳಿಸಿದ್ದಾರೆ. ಇದರಿಂದಾಗಿ ಮಧ್ಯಮ ಕ್ರಮಾಂಕ ಪರದಾಡತೊಡಗಿತು.

ವಿರಾಟ್ ಕೊಹ್ಲಿ ಕೂಡ ಎರಡು ಪಂದ್ಯಗಳಲ್ಲಿ ಬೇಗ ನಿರ್ಗಮಿಸಿದ್ದರು. ದೇವದತ್ತ ಪಡಿಕ್ಕಲ್ ಮತ್ತು ಟಿಮ್ ಡೇವಿಡ್ ಅವರಿಂದ ಸ್ಥಿರ ಪ್ರದರ್ಶನ ಬರಬೇಕಾಗಿದೆ.

ಆರ್‌ಸಿಬಿ ಬ್ಯಾಟಿಂಗ್ ಪಡೆಗೆ ನೈಟ್‌ರೈಡರ್ಸ್‌ನ ಪರಿಣಾಮಕಾರಿ ಬೌಲಿಂಗ್ ಸವಾಲು ಎದುರಾಗಲಿದೆ. ವಿಸ್ಮಯಕಾರಿ ಸ್ಪಿನ್ನರ್ ಸುನೀಲ್ ನಾರಾಯಣ್ ಮತ್ತು ವರುಣ್ ಚಕ್ರವರ್ತಿ ಲಯಕ್ಕೆ ಮರಳಿದ್ದಾರೆ. ದೇಶಿ ಕ್ರಿಕೆಟ್‌ನ ವೇಗಿಗಳಾದ ಕಾರ್ತಿಕ್ ತ್ಯಾಗಿ, ವೈಭವ್ ಅರೋರ ಮತ್ತು ಅನುಕೂಲ್ ರಾಯ್ ಅವರ ಬೆಂಬಲಕ್ಕಿದ್ದಾರೆ.



ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ ಹಾಗೂ ಜೇಕಬ್ ಬೆಥೆಲ್ ಅಭ್ಯಾಸದ ವೇಳೆ ಮಾತುಕತೆ ನಡೆಸಿದರು 'ಎಕ್ಸ್' ಚಿತ್ರ

ಮೊದಲಾರ್ಧದಲ್ಲಿ ಹಣಿಸಿಕೊಳ್ಳುತ್ತಿದ್ದ ನೈಟ್‌ರೈಡರ್ಸ್ ಈಗ ಸತತ ನಾಲ್ಕು ಪಂದ್ಯಗಳಲ್ಲಿ ಜಯಗಳಿಸಿದೆ. ಆದರೂ ತಂಡ ಎಂಟನೇ ಸ್ಥಾನದಲ್ಲೇ ಉಳಿದಿದೆ. ಇನ್ನೊಂದು ಪಂದ್ಯ ಸೋತರೆ ಪ್ಲೇಆಫ್ ಕನಸು ನುಚ್ಚುನೂರಾಗಲಿದೆ. ಇದಕ್ಕಾಗಿ ನೈಟ್‌ರೈಡರ್ಸ್ ಬ್ಯಾಟರ್‌ಗಳಿಂದ ಸುಧಾರಿತ ಆಟ ಬರಬೇಕಾಗಿದೆ. ಅಮೋಘ ಲಯದಲ್ಲಿರುವ ಭುವಿ ಮತ್ತು ಜೋಶ್ ಹೇಜಲ್‌ವುಡ್ ಅವರ ದಾಳಿಯನ್ನು ನಿಭಾಯಿಸಬೇಕಾಗುತ್ತದೆ.

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು V/s ಕೋಲ್ಕತ್ತ ನೈಟ್ ರೈಡರ್ಸ್
ತಾಣ: ರಾಯಪುರ
ಆರಂಭ: ರಾತ್ರಿ 7.30
ಲೈವ್ ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ನಾಯಕ ಅಜಿಂಕ್ಯ ರಹಾನೆ ಇನ್ನೂ ತಮ್ಮ ನೈಜ ಆಟ ಕಂಡುಕೊಂಡಿಲ್ಲ. ಕೊನೆಯ ಕೆಲವು ಪಂದ್ಯಗಳಲ್ಲಿ, ಉಪನಾಯಕ ರಿಂಕು ಸಿಂಗ್, ಫಿನ್ ಅಲೆನ್, ಅಂಗ್‌ಕ್ರಿಷ್ ರಘುವಂಶಿ ಬ್ಯಾಟಿಂಗ್ ಕೌಶಲ ತೋರಿದ್ದಾರೆ. ಆಸ್ಟ್ರೇಲಿಯಾದ ಅಜಾನುಬಾಹು ಕ್ಯಾಮರೂನ್ ಗ್ರೀನ್ ಸಹ ಸಾಕಷ್ಟು ಸುಧಾರಿತ ಆಟವಾಡುತ್ತಿರುವ ಕಾರಣ ಕೆಕೆಆರ್ ಬ್ಯಾಟಿಂಗ್‌ಗೆ ಬಲ ಬಂದಿದೆ.

ಇದು ಎರಡನೇ ತವರು ರಾಯಪುರದಲ್ಲಿ ಆರ್‌ಸಿಬಿಗೆ ಈ ಸಾಲಿನ ಎರಡನೇ ಹಾಗೂ ಕೊನೆಯ ಪಂದ್ಯ. ಪಿಚ್ ಮೊದಲ ಪಂದ್ಯದ ರೀತಿಯೇ ವರ್ತಿಸಿದರೆ ಆರ್‌ಸಿಬಿ ಬ್ಯಾಟರ್‌ಗಳಿಗೆ ಕಠಿಣ ಸವಾಲು ಎದುರಾಗಬಹುದು.

ಟೈಟನ್ಸ್ ವೇಗಕ್ಕೆ ನಲುಗಿದ 'ಸನ್'

ಅಹಮದಾಬಾದ್ (ಪಿಟಿಐ): ವೇಗಿಗಳಾದ ಕಗಿಸೊ ರಬಾಡ ಮತ್ತು ಜೇಸನ್ ಹೋಲ್ಡರ್ ಅವರ ಬಿಗಿದಾಳಿಯಿಂದಾಗಿ ಗುಜರಾತ್ ಟೈಟನ್ಸ್ ತಂಡವು ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು 82 ರನ್‌ಗಳಿಂದ ಸುಲಭವಾಗಿ ಮಣಿಸಿತು. ಇದರೊಂದಿಗೆ ಅಂಕಪಟ್ಟಿಯಲ್ಲಿ ಅಗ್ರಸ್ಥಾನಕ್ಕೆ ಜಿಗಿಯಿತು.


ಶುಭಮನ್ ಗಿಲ್ ಪಡೆಯು ಹಾಲಿ ಆವೃತ್ತಿಯಲ್ಲಿ ಸತತ ಐದನೇ ಗೆಲುವು ದಾಖಲಿಸಿ, ಪ್ಲೇ ಆಫ್‌ಗೆ ಮತ್ತಷ್ಟು ಹತ್ತಿರವಾಯಿತು. ರನ್ ಆಧಾರದಲ್ಲಿ ಟೈಟನ್ಸ್ ತಂಡಕ್ಕೆ ಇದು ಅತಿ ದೊಡ್ಡ ಗೆಲುವಾದರೆ, ಸನ್‌ರೈಸರ್ಸ್ ತಂಡಕ್ಕೆ ಅತಿ ದೊಡ್ಡ ಅಂತರದ ಸೋಲಾಗಿದೆ. ಈ ಪಂದ್ಯವನ್ನು ಗೆದ್ದು ಅಗ್ರಸ್ಥಾನಕ್ಕೇರುವ ಕನಸು ಕಂಡಿದ್ದ ಪ್ಯಾಟ್ ಕಮಿನ್ಸ್ ಪಡೆಗೆ ನಿರಾಸೆಯಾಯಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭಿಕ ಆಟಗಾರ ಸಾಯಿ ಸುದರ್ಶನ್ (61;44ಎ, 4x5, 6x2) ಮತ್ತು ವಾಷಿಂಗ್ಟನ್ ಸುಂದರ್ (50;33ಎ, 4x7, 6x1) ಅವರ ಅರ್ಧ ಶತಕಗಳ ನೆರವಿನಿಂದ ಆತಿಥೇಯ ತಂಡವು 5 ವಿಕೆಟ್‌ಗೆ 168 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಹೈದರಾಬಾದ್ ತಂಡವು ವೇಗಿಗಳಾದ ಮೊಹಮ್ಮದ್ ಸಿರಾಜ್ (3-1-11-1), ರಬಾಡ (28ಕ್ಕೆ 3), ಹೋಲ್ಡರ್ (20ಕ್ಕೆ 3), ಪ್ರಸಿದ್ಧ ಕೃಷ್ಣ (23ಕ್ಕೆ 2) ಅವರ ಪರಿಣಾಮಕಾರಿ ದಾಳಿಗೆ ನಲುಗಿತು. ಹೀಗಾಗಿ, 14.5 ಓವರ್‌ಗಳಲ್ಲಿ 86 ರನ್ ಗಳಿಸಿ ಹೋರಾಟ ಮುಗಿಸಿತು. ಇದು ಐಪಿಎಲ್ ಇತಿಹಾಸದಲ್ಲಿ ಸನ್‌ರೈಸರ್ಸ್ ತಂಡದ ಕನಿಷ್ಠ ಮೊತ್ತ.

ಆಕ್ರಮಣಕಾರಿ ಸ್ವಭಾವದ ಆಟವಾಡುವ ಸನ್‌ರೈಸರ್ಸ್ ಬ್ಯಾಟರ್‌ಗಳು ಸಹನೆ, ಸಂಯಮದಿಂದ ಆಡಬೇಕಿದ್ದ ಈ ಪಿಚ್‌ನಲ್ಲಿ ವಿಫಲರಾದರು.

ಸ್ಫೋಟಕ ಆಟಗಾರ ಟ್ರಾವಿಸ್ ಹೆಡ್ ಅವರು ಸಿರಾಜ್ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನಲ್ಲೇ ಖಾತೆ ತೆರೆಯದೆ ಪೆವಿಲಿಯನ್ ಸೇರಿದರು. ಅವರ ಬೆನ್ನಲ್ಲೇ ಅಭಿಷೇಕ್ ಶರ್ಮಾ (6), ಇಶಾನ್ ಕಿಶನ್ (11), ಕನ್ನಡಿಗ ಆರ್.ಸ್ಮರಣ್ (9) ವಿಕೆಟ್ ಒಪ್ಪಿಸಿದರು. ಉತ್ತಮ ಲಯದಲ್ಲಿರುವ ಹೆನ್ರಿಚ್ ಕ್ಲಾಸೆನ್ (14) ಮತ್ತು ಸಾಹಿಲ್ ಅರೋರಾ (16) ಅವರೂ ನಿರಾಸೆ ಮೂಡಿಸಿದರು. 19 ರನ್ ಗಳಿಸಿದ ಕಮಿನ್ಸ್ ತಂಡದ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ನಾಲ್ಕು ಬ್ಯಾಟರ್‌ಗಳು ಮಾತ್ರ ಒಂದಂಕಿ ದಾಟಿದರು.



ವಿಕೆಟ್ ಗಳಿಸಿದ ಕಗಿಸೊ ರಬಾಡ (ಎಡ) ಅವರನ್ನು ಮೊಹಮ್ಮದ್ ಸಿರಾಜ್ ಅಭಿನಂದಿಸಿದರು ಪಿಟಿಐ ಚಿತ್ರ

ಇದಕ್ಕೂ ಮೊದಲು ಟಾಸ್ ಗೆದ್ದ ಹೈದರಾಬಾದ್ ತಂಡವು ಫೀಲ್ಡಿಂಗ್ ಆಯ್ದುಕೊಂಡಿತು. ಪ್ರಫುಲ್ ಹಿಂಗೆ ಅವರು ಪವರ್‌ಪ್ಲೇ ಅವಧಿಯೊಳಗೇ ನಾಯಕ ಶುಭಮನ್ ಗಿಲ್ (5) ಮತ್ತು ವಿಕೆಟ್ ಕೀಪರ್ ಜೋಸ್ ಬಟ್ಲರ್ (7) ಅವರ ವಿಕೆಟ್‌ಗಳನ್ನು ಪಡೆದು ಆತಿಥೇಯರಿಗೆ ಆಘಾತ ನೀಡಿದರು. 6 ಓವರ್ ಮುಗಿದಾಗ ಸ್ಕೋರ್ 2 ವಿಕೆಟ್‌ಗೆ 34 ರನ್‌ಗಳಷ್ಟೇ ದಾಖಲಾಗಿದ್ದವು.

ಸಂಯಮದಿಂದ ಆಡಿದ ಎಡಗೈ ಬ್ಯಾಟರ್ 'ಹ್ಯಾಟ್ರಿಕ್' ಅರ್ಧಶತಕಗಳನ್ನು ಪೂರೈಸಿದರು. ಈ ಬಾರಿ 1 ಶತಕ ಮತ್ತು 4 ಅರ್ಧಶತಕ ದಾಖಲಿಸಿರುವ ಅವರು ಸತತ ಮೂರನೇ ಆವೃತ್ತಿಯಲ್ಲಿ '500' ರನ್ ಗಡಿ ದಾಟಿದ ಸಾಧನೆ ಮೆರೆದರು.

ಎಡಗೈ ಬ್ಯಾಟರ್ ನಿಶಾಂತ್ ಸಿಂಧು (22, 14ಎ) ಉತ್ತಮ ಆರಂಭ ಮಾಡಿದರೂ ಹೆಚ್ಚು ಕಾಲ ನಿಲ್ಲಲಿಲ್ಲ. ಈ ಹಂತದಲ್ಲಿ ಸಾಯಿ ಜೊತೆಗೂಡಿದ ವಾಷಿಂಗ್ಟನ್ ಒತ್ತಡ ನಿವಾರಿಸಲು ಮುಂದಾದರು. ಈ ಜೋಡಿ ನಾಲ್ಕನೇ ವಿಕೆಟ್‌ಗೆ ಉಪಯುಕ್ತ 60 ರನ್ ಸೇರಿಸಿತು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಟೈಟನ್ಸ್: 20 ಓವರುಗಳಲ್ಲಿ 5 ವಿಕೆಟ್‌ಗೆ 168 (ಸಾಯಿ ಸುದರ್ಶನ್ 61, ವಾಷಿಂಗ್ಟನ್ ಸುಂದರ್ 50; ಪ್ರಫುಲ್ ಹಿಂಗೆ 17ಕ್ಕೆ2, ಸಕಿಬ್ ಹುಸೇನ್ 37ಕ್ಕೆ2). ಸನ್‌ರೈಸರ್ಸ್ ಹೈದರಾಬಾದ್: 14.5 ಓವರ್‌ಗಳಲ್ಲಿ 86 (ಸಲೀಲ್ ಅರೋರಾ 16, ಪ್ಯಾಟ್ ಕಮಿನ್ಸ್ 19; ಕಗಿಸೊ ರಬಾಡ 28ಕ್ಕೆ3, ಜೇಸನ್ ಹೋಲ್ಡರ್ 20ಕ್ಕೆ3, ಪ್ರಸಿದ್ಧ ಕೃಷ್ಣ 23ಕ್ಕೆ2). **ಪಂದ್ಯದ ಆಟಗಾರ:** ಕಗಿಸೊ ರಬಾಡ.

ಐಪಿಎಲ್ 2026: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ಎನ್‌ಆರ್‌ಆರ್
ಜಿ ಟಿ	12	8	4	0	16	0.551
ಆರ್‌ಸಿಬಿ	11	7	4	0	14	1.103
ಎಸ್‌ಆರ್‌ಎಚ್	12	7	5	0	14	0.331
ಪಿಬಿಕೆಎಸ್	11	6	4	1	13	0.428
ಸಿಎಸ್‌ಕೆ	11	6	5	0	12	0.185
ಆರ್ ಆರ್	11	6	5	0	12	0.082
ಡಿ ಸಿ	12	5	7	0	10	- 0.993
ಕೆಕೆಆರ್	10	4	5	1	9	- 0.169
ಎಂ ಐ	11	3	8	0	6	- 0.585
ಎಲ್‌ಎಸ್‌ಜಿ	11	3	8	0	6	- 0.907

ಆರೆಂಜ್ ಕ್ಯಾಪ್: ಹೆನ್ರಿಚ್ ಕ್ಲಾಸೆನ್, ಎಸ್‌ಆರ್‌ಎಚ್ (508 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್, ಆರ್‌ಸಿಬಿ (21 ವಿಕೆಟ್)

ನೀಟ್ ರದ್ದು: ಮರು ಪರೀಕ್ಷೆ

ಒಂದನೇ ಪುಟದಿಂದ...

'ವಿದ್ಯಾರ್ಥಿಗಳ ಹಿತಕ್ಕಾಗಿ ಈ ನಿರ್ಧಾರ': 'ವಿದ್ಯಾರ್ಥಿಗಳ ಹಿತದೃಷ್ಟಿ, ರಾಷ್ಟ್ರೀಯ ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ ಮತ್ತು ವಿಶ್ವಾಸವನ್ನು ಕಾಯ್ದುಕೊಳ್ಳುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಎನ್‌ಟಿಎ 'ಎಕ್ಸ್'ನಲ್ಲಿ ತಿಳಿಸಿದೆ.

'ಕಾನೂನು ಜಾರಿ ಸಂಸ್ಥೆಗಳು ಹಂಚಿಕೊಂಡ ತನಿಖಾ ವರದಿಗಳ ಆಧಾರದ ಮೇಲೆ, ಕೇಂದ್ರ ಸರ್ಕಾರದ ಒಪ್ಪಿಗೆ ಪಡೆದು ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ಅದು ಪೋಸ್ಟ್‌ನಲ್ಲಿ ಉಲ್ಲೇಖಿಸಿದೆ.

ಮೇ 3ರಂದು ದೇಶದ 551 ನಗರಗಳಲ್ಲಿ ಮತ್ತು ವಿದೇಶಗಳ 14 ನಗರಗಳಲ್ಲಿ 'ನೀಟ್-ಯುಜಿ' ಪರೀಕ್ಷೆ ನಡೆದಿತ್ತು. ಸುಮಾರು 23 ಲಕ್ಷ ಅಭ್ಯರ್ಥಿಗಳು ಹೆಸರು ನೋಂದಾಯಿಸಿದ್ದರು.

ಮರು ಪರೀಕ್ಷೆಗೆ ಶುಲ್ಕವಿಲ್ಲ: 'ಮರು ಪರೀಕ್ಷೆಯನ್ನು ನ್ಯಾಯಸಮ್ಮತ ರೀತಿಯಲ್ಲಿ ನಡೆಸುತ್ತೇವೆ. ಅದಕ್ಕೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸುವುದಿಲ್ಲ. ಅಲ್ಲದೆ ಮೊದಲ ಪರೀಕ್ಷೆಯಲ್ಲಿ ವಿಧಿಸಿದ್ದ ಶುಲ್ಕವನ್ನೂ ಮರುಪಾವತಿಸುತ್ತೇವೆ' ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

2026ರ ಮೇ 3ರಂದು ನಡೆದ ಪರೀಕ್ಷೆಗೆ ನೋಂದಾಯಿಸಿದ್ದ ಅಭ್ಯರ್ಥಿಗಳು, ಅವರ ದತ್ತಾಂಶ, ಪರೀಕ್ಷಾ ಕೇಂದ್ರಗಳನ್ನು ಮರು ಪರೀಕ್ಷೆಗೂ ಪರಿಗಣಿಸಲಾಗುತ್ತದೆ. ಎನ್‌ಟಿಎ ತನ್ನ ಆಂತರಿಕ ಸಂಪನ್ಮೂಲ ಬಳಸಿಕೊಂಡು ಮರು ಪರೀಕ್ಷೆ ನಡೆಸುತ್ತದೆ ಎಂದು ಅವರು ವಿವರಿಸಿದರು.

ಮರು ಪರೀಕ್ಷೆಯ ವೇಳಾಪಟ್ಟಿಯನ್ನು ಶೀಘ್ರ ಪ್ರಕಟಿಸುತ್ತೇವೆ ಎಂದರು.

ಹಿಂದಿನ ಪ್ರಕರಣಗಳು

ಈ ಹಿಂದೆಯೂ ನೀಟ್–ಯುಜಿ ಪರೀಕ್ಷೆಯ ಪ್ರಶ್ನೆ ಪತ್ರಿಕೆಗಳ ಸೋರಿಕೆ ಮತ್ತು ಅಕ್ರಮಗಳ ಕುರಿತು ಪ್ರಕರಣಗಳು ದಾಖಲಾಗಿದ್ದಿದೆ. 2024ರಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ, 1563 ವಿದ್ಯಾರ್ಥಿಗಳಿಗೆ ತಪ್ಪಾಗಿ 'ಗ್ರೇಸ್ ಅಂಕ'ಗಳನ್ನು ನೀಡಿದ ಆರೋಪ ವ್ಯಕ್ತವಾಗಿತ್ತು. ಅಲ್ಲದೆ ನಿರ್ದಿಷ್ಟ ಕೇಂದ್ರವೊಂದರ ಕೊಠಡಿಯಲ್ಲಿನ ಕೆಲವು ಅಭ್ಯರ್ಥಿಗಳು ಅತ್ಯಧಿಕ ಅಂಕಗಳನ್ನು ಪಡೆದಿದ್ದರು. ಇದು ವಿದ್ಯಾರ್ಥಿಗಳ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು. ಬಳಿಕ ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಮರು ಪರೀಕ್ಷೆ ನಡೆಸಲಾಗಿತ್ತು. 2020 ಮತ್ತು 2021ರ ನೀಟ್ ಯುಜಿ ಪರೀಕ್ಷೆಗಳಲ್ಲೂ ಹಲವು ದೋಷಗಳು ಕಂಡು ಬಂದಿದ್ದವು.

ದುಷ್ಕೃತ್ಯದ ಮಾಹಿತಿ: 'ನೀಟ್-ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಆಪಾದಿತ ದುಷ್ಕೃತ್ಯ ಚಟುವಟಿಕೆ ಕುರಿತ ಮಾಹಿತಿಯು ಪರೀಕ್ಷೆ ನಡೆದ ನಾಲ್ಕು ದಿನಗಳ ಬಳಿಕ, ಅಂದರೆ ಮೇ 7ರ ರಾತ್ರಿ ತಲುಪಿತು. ಅದನ್ನು ನಾವು ಪರಿಶೀಲಿಸಿದೆವು. ಆರಂಭಿಕ ತನಿಖೆಯ ಪ್ರಕಾರ, ಕೆಲವು ಪ್ರಶ್ನೆಗಳು ಅಧಿಕೃತ ಪ್ರಶ್ನೆ ಪತ್ರಿಕೆಯಲ್ಲಿ ಕೇಳಿದ ಪ್ರಶ್ನೆಗಳಿಗೆ ಹೊಂದಿಕೆಯಾಗುತ್ತಿದ್ದವು. ಅಲ್ಲದೆ, ಪರೀಕ್ಷೆಗೂ ಹಿಂದಿನ ದಿನಗಳಾದ ಮೇ 1 ಮತ್ತು 2ರಂದು ಕೆಲ ವ್ಯಕ್ತಿಗಳ ಫೋನ್‌ಗಳಲ್ಲಿ ಈ ಪ್ರಶ್ನೆಗಳು ಕಂಡುಬಂದಿವೆ ಎಂಬುದನ್ನು ನಮ್ಮ ಅಧಿಕಾರಿಗಳು ಕಂಡುಕೊಂಡಿದ್ದಾರೆ. ಹೀಗಾಗಿ ಈ ಕುರಿತು ಸ್ವತಂತ್ರ ಪರಿಶೀಲನೆ ಮತ್ತು ಅಗತ್ಯ ಕ್ರಮಕ್ಕಾಗಿ ಮೇ 8ರ ಬೆಳಿಗ್ಗೆ ಕೇಂದ್ರ ಸಂಸ್ಥೆಗಳಿಗೆ ಮಾಹಿತಿ ರವಾನಿಸಲಾಯಿತು' ಎಂದು ಅಭಿಷೇಕ್ ಸಿಂಗ್ ಮಾಹಿತಿ ನೀಡಿದರು.

ಸಿಬಿಐ ತನಿಖೆಗೆ ಪೂರ್ಣ ಸಹಕಾರ: 'ನೀಟ್-ಯುಜಿಯಲ್ಲಿ ನಡೆದಿರುವ ಪರೀಕ್ಷಾ ಅಕ್ರಮಗಳ ಕುರಿತು ಸಮಗ್ರ ತನಿಖೆ ನಡೆಸಲು ಸಿಬಿಐಗೆ ತಿಳಿಸಲಾಗಿದೆ. ಸಿಬಿಐಗೆ ಪೂರ್ಣ ಸಹಕಾರವನ್ನು ಏಜೆನ್ಸಿ ನೀಡಲಿದೆ. ಅಲ್ಲದೆ ತನಿಖೆಗೆ ಅಗತ್ಯವಿರುವ ಎಲ್ಲ ಸಾಮಗ್ರಿಗಳು, ದಾಖಲೆ, ದತ್ತಾಂಶಗಳು ಸೇರಿದಂತೆ ಇತರ ನೆರವನ್ನು ಏಜೆನ್ಸಿ ಒದಗಿಸಲಿದೆ' ಎಂದರು.

'ಸಂಭಾವ್ಯ ಪ್ರಶ್ನೆಪತ್ರಿಕೆ' ಹೆಸರಲ್ಲಿ ಸೋರಿಕೆ: 'ಸಂಭಾವ್ಯ ಪ್ರಶ್ನೆಪತ್ರಿಕೆ' ಹೆಸರಿನಲ್ಲಿ ನೀಟ್-ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವುದನ್ನು ರಾಜಸ್ಥಾನದ ಪೊಲೀಸರು ಕಂಡುಕೊಂಡಿದ್ದಾರೆ. ಈ ಸಂಭಾವ್ಯ ಪಶ್ನೆಪತ್ರಿಕೆಯನ್ನು ಕೇಂದ್ರೀಕರಿಸಿಯೇ ತನಿಖೆ ನಡೆಸಲಾಗುತ್ತಿದೆ ಎಂದು ರಾಜಸ್ಥಾನ ಪೊಲೀಸರ ವಿಶೇಷ ಕಾರ್ಯಪಡೆಯ (ಎಸ್‌ಒಜಿ) ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ವಿಶಾಲ್ ಬನ್ಸಲ್ ತಿಳಿಸಿದರು.

'ಸುಮಾರು 410 ಪ್ರಶ್ನೆಗಳನ್ನು ಹೊಂದಿರುವ ಒಂದು 'ಸಂಭಾವ್ಯ' ಪ್ರಶ್ನೆ ಪತ್ರಿಕೆ ವಿದ್ಯಾರ್ಥಿಗಳಲ್ಲಿ ಹಂಚಿಕೆಯಾಗಿದೆ. ಅದರಲ್ಲಿನ ಪ್ರಶ್ನೆಗಳ ಪೈಕಿ ರಸಾಯನ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ 120 ಪ್ರಶ್ನೆಗಳು ಕಾಣಿಸಿಕೊಂಡಿವೆ ಎಂಬ ಆರೋಪವಿದೆ' ಎಂದರು.

ಜವಾಬ್ದಾರಿ ಹೊರುತ್ತೇವೆ: ಸಿಂಗ್

'ಅಧಿಕೃತ ಪ್ರಶ್ನೆ ಪತ್ರಿಕೆಯಲ್ಲಿನ ಒಂದೇ ಒಂದು ಪ್ರಶ್ನೆ ಸೋರಿಕೆಯಾಗಿದ್ದರೂ, ಅದು ಶೂನ್ಯ ಸಹಿಷ್ಣುತೆ ಮತ್ತು ಶೂನ್ಯ ದೋಷಕ್ಕೆ ಸಂಬಂಧಿಸಿದಂತೆ ನಮ್ಮ ಬದ್ಧತೆಯನ್ನು ಉಲ್ಲಂಘಿಸುತ್ತದೆ. ಅದು, ನಮ್ಮ ಸಂಪೂರ್ಣ ಪ್ರಕ್ರಿಯೆ ರಾಜಿ ಮಾಡಿಕೊಂಡಿದೆ ಎಂಬುದಾಗಿಯೇ ಭಾವಿಸುತ್ತೇವೆ ಮತ್ತು ಅದರ ಜವಾಬ್ದಾರಿಯನ್ನು ಹೊರುತ್ತೇವೆ. ಅದಕ್ಕೆ ಅನುಗುಣವಾಗಿ ಕಠಿಣ ಕ್ರಮಗಳನ್ನೂ ಕೈಗೊಳ್ಳುತ್ತೇವೆ' ಎಂದು ಎನ್‌ಟಿಎ ಮಹಾನಿರ್ದೇಶಕ ಅಭಿಷೇಕ್ ಸಿಂಗ್ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಮೇ 3ರಂದು ನಡೆದ ಪರೀಕ್ಷೆಯಲ್ಲಿ ಪ್ರಶ್ನೆ ಪತ್ರಿಕೆಯು ನಾಲ್ಕು ಕೋಡ್ ಆವೃತ್ತಿಗಳನ್ನು ಹೊಂದಿತ್ತು. ಇವ್ಯಾವೂ ಸೋರಿಕೆಯಾಗಿಲ್ಲ. ಆದರೆ, ಕೆಲವರಲ್ಲಿ ಹಂಚಿಕೆಯಾಗಿರುವ ಪಿಡಿಎಫ್ ಪ್ರತಿಯಲ್ಲಿನ ಕೆಲವು ಪ್ರಶ್ನೆಗಳು ಅಧಿಕೃತ ಪ್ರಶ್ನೆ ಪತ್ರಿಕೆಯಲ್ಲೂ ಕಂಡುಬಂದಿವೆ' ಎಂದು ಅವರು ಮಾಹಿತಿ ನೀಡಿದರು.

ದುಃಖಕರ ಘಟನೆ: 'ಇದು ಅತ್ಯಂತ ದುಃಖಕರ ಘಟನೆ. ನಾವು ಈ ಹಂತಕ್ಕೆ ಬಂದು ನಿಂತಿರುವುದು ದುರದೃಷ್ಟಕರ ಮತ್ತು ಕಳವಳಕಾರಿ. ಪ್ರಶ್ನೆ ಪತ್ರಿಕೆ ಸೋರಿಕೆ ತಕ್ಷಣದಿಂದಲೇ ಕೊನೆಗೊಳ್ಳಬೇಕು' ಎಂದು ಅವರು ಹೇಳಿದರು.

ನೀಟ್–ಯುಜಿ ರದ್ದುಗೊಳಿಸಿದ ಕುರಿತ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಲು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನಿರಾಕರಿಸಿದರು.

ಆದಾಗ್ಯೂ ಪ್ರಶ್ನೆಪತ್ರಿಕೆಯು ರಸಾಯನ ವಿಜ್ಞಾನ, ಜೀವವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿ ವಿಜ್ಞಾನಕ್ಕೆ ಸಂಬಂಧಿಸಿದ ತಲಾ 45 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ.

'ಈ ಸಂಭಾವ್ಯ ಪತ್ರಿಕೆಯು ಪರೀಕ್ಷೆಗೂ 15ರಿಂದ 30 ದಿನಗಳ ಮೊದಲೇ ಕೆಲ ಅಭ್ಯರ್ಥಿಗಳಿಗೆ ತಲುಪಿವೆ. ನಮ್ಮ ತನಿಖೆಯು ಈ ಸಂಭಾವ್ಯ ಪತ್ರಿಕೆಯನ್ನೇ ಕೇಂದ್ರೀಕರಿಸಿದೆ' ಎಂದು ಬನ್ಸಲ್ ಪ್ರತಿಕ್ರಿಯಿಸಿದರು.

ಕೈಬರಹದಲ್ಲಿದ್ದ ಪ್ರಶ್ನೆಗಳು: ಕೈಬರಹದಲ್ಲಿದ್ದ 'ಸಂಭಾವ್ಯ ಪ್ರಶ್ನೆಪತ್ರಿಕೆ'ಯನ್ನು ರಾಜಸ್ಥಾನದ ಸಿಕರ್‌ನ ವೃತ್ತಿ ಸಲಹೆಗಾರ ರಾಕೇಶ್ ಮಾಂಡವರಿಯಾ ಎಂಬುವರು ಹಂಚಿಕೆ ಮಾಡುತ್ತಿದ್ದರು ಮತ್ತು ಅದನ್ನು ಅವರು ಕೇರಳದಲ್ಲಿ ವೈದ್ಯಕೀಯ ತರಬೇತಿ ಪಡೆಯುತ್ತಿದ್ದ ವ್ಯಕ್ತಿಗಳಿಂದ ಪಡೆದಿದ್ದರು' ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ರಾಜಸ್ಥಾನದ ಪೊಲೀಸರು ಹೇಳಿದ್ದಾರೆ.

ವಾಟ್ಸ್‌ಆ್ಯಪ್ ಗುಂಪುಗಳು, ಪಿ.ಜಿಗಳು ಮತ್ತು ತರಬೇತುದಾರರ ಮೂಲಕ ಈ ಸಂಭಾವ್ಯ ಪತ್ರಿಕೆ ವ್ಯಾಪಕವಾಗಿ ಹಂಚಿಕೆಯಾಗಿತ್ತು. ಆರಂಭದಲ್ಲಿ ಈ ಪತ್ರಿಕೆಯು ₹5 ಲಕ್ಷಕ್ಕೆ ಮಾರಾಟವಾಗಿದ್ದರೆ, ಕ್ರಮೇಣ ಅದು ₹30,000ಕ್ಕೆ ಮಾರಾಟವಾಗಿದೆ ಎಂದು ಮೂಲಗಳು ತಿಳಿಸಿವೆ. ಸಂಭಾವ್ಯ ಪ್ರಶ್ನೆಪತ್ರಿಕೆ ಮತ್ತು ಅಧಿಕೃತ ಪ್ರಶ್ನೆಪತ್ರಿಕೆಯಲ್ಲಿದ್ದ ಹಲವು ಆಯ್ಕೆಗಳು ಸಾಮ್ಯತೆ ಹೊಂದಿದ್ದವು ಎಂಬುದೂ ಗೊತ್ತಾಗಿದೆ.

'ವೈದ್ಯನಿಗೆ ಪ್ರಶ್ನೆಪತ್ರಿಕೆ' (ಗುರುಗ್ರಾಮ ವರದಿ): 'ನಾಸಿಕ್‌ನ ಪ್ರಿಂಟಿಂಗ್ ಪ್ರೆಸ್‌ವೊಂದರಿಂದ ಸೋರಿಕೆಯಾಗಿದೆ ಎನ್ನಲಾದ ನೀಟ್–ಯುಜಿ ಪ್ರಶ್ನೆಪತ್ರಿಕೆಯ ಪ್ರತಿಯನ್ನು ಗುರುಗ್ರಾಮದ ವೈದ್ಯರೊಬ್ಬರಿಗೆ ತಲುಪಿಸಲಾಗಿದೆ ಎಂದು ಹೇಳಲಾಗುತ್ತಿದೆ. ಈ ಕುರಿತು ತನಿಖೆ ನಡೆಯುತ್ತಿದೆ' ಎಂದು ಗುರುಗ್ರಾಮದ ಪೊಲೀಸರು ಹೇಳಿದ್ದಾರೆ.

'ಬೀದಿಗಿಳಿದು ಹೋರಾಡಿ'

ನವದೆಹಲಿ (ಪಿಟಿಐ): ನೀಟ್ ಪರೀಕ್ಷೆ ರದ್ದುಗೊಳಿಸಿದ ಎನ್‌ಟಿಎ ಕ್ರಮದ ವಿರುದ್ಧ ಕಿಡಿ ಕಾರಿರುವ ಎಎಪಿ ರಾಷ್ಟ್ರೀಯ ಸಂಚಾಲಕ ಅರವಿಂದ ಕೇಜ್ರಿವಾಲ್ ಅವರು, 'ಇದರಿಂದ ಬಾಧಿತರಾದ ವಿದ್ಯಾರ್ಥಿಗಳು ಸಾಮೂಹಿಕವಾಗಿ ರಸ್ತೆಗಿಳಿದು ಹೋರಾಟ ನಡೆಸಬೇಕು. ಏಕೆಂದರೆ ಸರ್ಕಾರ ಪ್ರತಿಭಟನೆ ಭಾಷೆಗಳನ್ನು ಮಾತ್ರ ಅರ್ಥಮಾಡಿಕೊಳ್ಳುತ್ತದೆ' ಎಂದು ಹೇಳಿದರು.

'ಬಿಜೆಪಿ ಆಡಳಿತಾವಧಿಯಲ್ಲಿ 9 ವರ್ಷಗಳಲ್ಲಿ ನಾಲ್ಕು ಬಾರಿ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಆದರೆ ಯಾವುದೇ ಆರೋಪಿಗಳಿಗೆ ಶಿಕ್ಷೆಯಾಗಿಲ್ಲ' ಎಂದು ಕೇಜ್ರಿವಾಲ್ ಸುದ್ದಿಗೋಷ್ಠಿಯಲ್ಲಿ ದೂರಿದರು.

ನಿಧನ ವಾರ್ತೆ

ವಿನಯ್ ಬಾದಾಮಿ




ಬೆಂಗಳೂರು: ರಾಜ್ಯ ಜೂನಿಯರ್ ತಂಡಗಳಲ್ಲಿ ಆಡಿದ್ದ ಕ್ರಿಕೆಟ್ ಆಟಗಾರ, ಐ.ಟಿ. ತಂತ್ರಜ್ಞ ವಿನಯ್ ಎಸ್.ಬಾದಾಮಿ (56) ಅವರು ಹೃದಯಾಘಾತದಿಂದ ಸೋಮವಾರ ನಗರದ ಅಪೊಲೊ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಪುತ್ರ ಇದ್ದಾರೆ.

ಅವರು ಅಂತರರಾಷ್ಟ್ರೀಯ ಕ್ರಿಕೆಟ್ ಅಂಪೈರ್ ಬಿ.ಸತ್ಯಾಜಿ ರಾವ್ ಮತ್ತು ಹಿರಿಯ ಪತ್ರಕರ್ತೆ ನಾಗಮಣಿ ಎಸ್. ರಾವ್ ಅವರ ಪುತ್ರ. ಅವರು 17, 19 ಮತ್ತು 21 ವರ್ಷದೊಳಗಿನವರ ರಾಜ್ಯ ತಂಡದಲ್ಲಿ ಆಡಿದ್ದರು. ವಿಕೆಟ್ ಕೀಪರ್–ಬ್ಯಾಟರ್ ಆಗಿದ್ದ ಅವರು ಅನಿಲ್ ಕುಂಬ್ಳೆ ಮತ್ತು ವೆಂಕಟೇಶ ಪ್ರಸಾದ್ ಮೊದಲಾದ ಆಟಗಾರರ ಜೊತೆ ಆಡಿದ್ದರು.

ಸಿ.ಪಿ.ಜಾನಿ



ಬೆಂಗಳೂರು: ಕರ್ನಾಟಕ ಫುಟ್‌ಬಾಲ್ ತಂಡದ ಮಾಜಿ ಆಟಗಾರ ಸಿ.ಪಿ.ಜಾನಿ (72) ಅವರು ವಯೋಸಹಜ ಕಾರಣದಿಂದಾಗಿ ಹಲಸೂರಿನ ನಿವಾಸದಲ್ಲಿ ಸೋಮವಾರ ರಾತ್ರಿ ಮೃತಪಟ್ಟರು. ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ.

ಜಾನಿ ಅವರು 1980ರ ದಶಕದಲ್ಲಿ ಜೂನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿದ್ದರು. ಜಾರ್ಜ್ ಹೂವರ್ ಕಪ್ ಹಾಗೂ ಸಿಪಿಎಂ ಟ್ರೋಫಿ ಗೆದ್ದ ಬಿಇಎಲ್ ಎಫ್‌ಸಿ ತಂಡದಲ್ಲಿ ಆಡಿದ್ದರು. ನಿಜಾಂ ಗೋಲ್ಡ್ ಕಪ್ ಟೂರ್ನಿ ಸೇರಿ ಹಲವು ರಾಷ್ಟ್ರೀಯ ಟೂರ್ನಿಗಳಲ್ಲಿ ರಾಜ್ಯ ತಂಡದ ಪರ ಕಣಕ್ಕಿಳಿದಿದ್ದರು.

ಡೆರಿಕ್ ಬ್ರೌನ್



ಬೆಂಗಳೂರು: ರಾಜ್ಯ ಬ್ಯಾಸ್ಕೆಟ್‌ಬಾಲ್ ತಂಡದ ಮಾಜಿ ಆಟಗಾರ ಹಾಗೂ ಕೋಚ್ ಡೆರಿಕ್ ಬ್ರೌನ್ (85) ಅವರು ದೀರ್ಘಕಾಲೀನ ಅನಾರೋಗ್ಯದಿಂದಾಗಿ ಬೆಂಗಳೂರಿನಲ್ಲಿ ಶನಿವಾರ ನಿಧನರಾದರು. ಸೋಮವಾರ ಅಂತ್ಯಕ್ರಿಯೆ ನೆರವೇರಿತು.

ಡೆರಿಕ್ ಅವರು 1960 ಮತ್ತು 70ರ ದಶಕದಲ್ಲಿ ದೇವಾಂಗ ಯೂನಿಯನ್ ಹಾಗೂ ಎಂಇಜಿ ಬ್ಯಾಸ್ಕೆಟ್‌ಬಾಲ್ ಕ್ಲಬ್ ತಂಡಗಳ ಪರ ಆಡಿದ್ದರು. ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗಳಲ್ಲಿ ಕರ್ನಾಟಕ ಹಾಗೂ ಸರ್ವಿಸಸ್ ತಂಡಗಳನ್ನು ಪ್ರತಿನಿಧಿಸಿದ್ದರು. ನಿವೃತ್ತಿಯ ನಂತರ ರಾಜ್ಯ ಮಹಿಳಾ ತಂಡದ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

ಒಂದೇ ದಿನ ಏಳು ಕೂಟ ದಾಖಲೆ

ಕೆಎಸ್‌ಎ ರಾಜ್ಯ ಸೀನಿಯರ್ ಈಜು: ಅನೀಶ್, ಲಕ್ಷ್ಯಾ, ನೈಶಾ, ತನಿಶಿ ಮಿಂಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರದಲ್ಲಿ ನಡೆಯುತ್ತಿರುವ ಕೆಎಸ್‌ಎ ರಾಜ್ಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಮಂಗಳವಾರ ಒಟ್ಟು ಏಳು ಕೂಟ ದಾಖಲೆಗಳು ನಿರ್ಮಾಣವಾದವು.

ಆತಿಥೇಯ ಬಿಎಸಿಯ ಅನೀಶ್ ಎಸ್.ಗೌಡ, ಎಸ್.ಲಕ್ಷ್ಯಾ, ನೈಶಾ, ಶೋನ್ ಗಂಗೂಲಿ, ಡಾಲ್ಫಿನ್ ಈಜು ಕೇಂದ್ರದ ತನಿಶಿ ಗುಪ್ತಾ ಮತ್ತು ಜೆಐಆರ್‌ಎಸ್‌ನ ತಾನ್ಯಾ ಎಸ್. ಅವರು ಕೂಟ ದಾಖಲೆಯೊಂದಿಗೆ ಚಿನ್ನಕ್ಕೆ ಕೊರಳೊಡ್ಡಿದರು. ಈ ಪೈಕಿ ತನಿಶಿ ಎರಡು ಸ್ಪರ್ಧೆಗಳಲ್ಲಿ ದಾಖಲೆ ಬರೆದರು.

ಪುರುಷರ 200 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಅನೀಶ್ 1 ನಿಮಿಷ 51.87 ಸೆಕೆಂಡ್‌ಗಳಲ್ಲಿ ಗುರಿ ತಲುಪಿ, ತಮ್ಮದೇ (1:52.41) ದಾಖಲೆಯನ್ನು ಉತ್ತಮಪಡಿಸಿಕೊಂಡರು. ಲಕ್ಷ್ಯಾ ಅವರು ಮಹಿಳೆಯರ 100 ಮೀ. ಬ್ರೆಸ್ಟ್‌ಸ್ಟ್ರೋಕ್ ಸ್ಪರ್ಧೆಯಲ್ಲಿ 1 ನಿಮಿಷ 13.67 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. 2023ರಲ್ಲಿ ಮಾನವಿ ವರ್ಮಾ (1:14.92) ನಿರ್ಮಿಸಿದ್ದ ದಾಖಲೆ ಮುಳುಗಿಸಿದರು.

ಮಹಿಳೆಯರ 200 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ನೈಶಾ 2ನಿ.23.92ಸೆ. ಸಮಯದಲ್ಲಿ ಸ್ಪರ್ಧೆ ಮುಗಿಸಿದರು. ಅವರು ರಿಧಿಮಾ ವೀರೇಂದ್ರಕುಮಾರ್ (2:24.54) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು.

ತನಿಶಿ ಅವರು ಮಹಿಳೆಯರ 100 ಮೀಟರ್ ಬಟರ್‌ಫ್ಲೈ ಸ್ಪರ್ಧೆಯಲ್ಲಿ (1:00.49) ಮಿಂಚಿದರು. ನೀನಾ ವೆಂಕಟೇಶ್ (1:03.45) ಹೆಸರಿನಲ್ಲಿದ್ದ ದಾಖಲೆಯನ್ನು ತನ್ನಮ್ಮ ಹೆಸರಿಗೆ ವರ್ಗಾಯಿಸಿಕೊಂಡರು. 100 ಮೀಟರ್ ಬ್ಯಾಕ್‌ಸ್ಟ್ರೋಕ್‌ನಲ್ಲೂ ದಾಖಲೆ ಬರೆದರು.

ಪುರುಷರ 400 ಮೀ. ವೈಯಕ್ತಿಕ ಮೆಡ್ಲೆ ಸ್ಪರ್ಧೆಯಲ್ಲಿ ಶೋನ್ ಮತ್ತು ಮಹಿಳೆಯರ ವಿಭಾಗದಲ್ಲಿ ತಾನ್ಯಾ ದಾಖಲೆ ನಿರ್ಮಿಸಿದರು.

ಫಲಿತಾಂಶ: ಪುರುಷರು: 200 ಮೀ. ಫ್ರೀಸ್ಟೈಲ್: ಅನೀಶ್ ಎಸ್. ಗೌಡ (ಕಾಲ: 1ನಿ.51.87ಸೆ)–1, ದರ್ಶನ್ ಎಸ್.–2, ದಕ್ಷಣ್ ಎಸ್. (ಮೂವರೂ ಬಿಎಸಿ)–3; 1500 ಮೀ.ಫ್ರೀಸ್ಟೈಲ್: ದರ್ಶನ್ ಎಸ್ (ಕಾಲ: 16ನಿ.15.79ಸೆ)–1, ಪವನ್ ಧನಂಜಯ–2, ದಕ್ಷಣ್ ಎಸ್. (ಮೂವರೂ ಬಿಎಸಿ)–3; 100 ಮೀ.ಬಟರ್‌ಫ್ಲೈ: ಚಿಂತನ್ ಎಸ್.ಶೆಟ್ಟಿ (ಎಲ್‌ಎಎಸ್, ಕಾಲ: 56.38ಸೆ)–1, ಶ್ರೀವರ್ಧನ್ ರಾಜಾರಾಮ್ ಪಾಟೀಲ (ಬಿಎಸಿ)–2, ಆರ್.ನವನೀತ್ ಗೌಡ (ಡಾಲ್ಫಿನ್)–3; 400 ಮೀ. ಮೆಡ್ಲೆ: ಶೋನ್ ಗಂಗೂಲಿ (ಬಿಎಸಿ, ಕಾಲ: 4ನಿ.31.99ಸೆ)–1, ಶಿವಾಂಕ್ ವಿಶ್ವನಾಥ್ (ಬಿಎಸಿ)–2, ಪವನ್ ಧನಂಜಯ–3; 4X100 ಮೆಡ್ಲೆ ರಿಲೇ: ಬಿಎಸಿ–ಎ (ಕಾಲ: 4ನಿ.00.72ಸೆ)–1, ಬಿಎಸಿ–ಬಿ (ಕಾಲ: 4ನಿ.01.76ಸೆ)–2, ಡಾಲ್ಫಿನ್ (4ನಿ.08.34ಸೆ)–3

ಮಹಿಳೆಯರು: 100 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಕಾಲ: 58.41ಸೆ)–1, ತನಿಶಿ ಗುಪ್ತಾ–2, ನೀನಾ ವೆಂಕಟೇಶ್ (ಮೂವರೂ ಡಾಲ್ಫಿನ್)–3; 400 ಮೀ. ಫ್ರೀಸ್ಟೈಲ್: ದಿನಿಧಿ ದೇಸಿಂಗು (ಕಾಲ: 4ನಿ.32.67ಸೆ)–1, ಶ್ರೀಚರಣಿ ತುಮು (ಜೆಐಆರ್‌ಎಸ್)–2, ಅದಿತಿ ವಿನಾಯಕ್ (ಬಿಎಸಿ)–3; 100 ಮೀ. ಬ್ಯಾಕ್‌ಸ್ಟ್ರೋಕ್: ತನಿಶಿ ಗುಪ್ತಾ (ಕಾಲ: 1ನಿ.05.16ಸೆ)–1, ನೀನಾ ವೆಂಕಟೇಶ್–2, ಪ್ರಿಯಾಂಶಿ ಮಿಶ್ರಾ (ಬಿಎಸಿ)–3; 200 ಮೀ. ಬ್ಯಾಕ್‌ಸ್ಟ್ರೋಕ್: ನೈಶಾ (ಕಾಲ: 2ನಿ.23.92ಸೆ)–1, ವಿಹಿತಾ ನಯನಾ (ಬಿಎಸಿ)–2, ಸುನಿಧಿ ಎಸ್. ಹಲ್ಕರೆ (ಎಸ್‌ಸಿಬಿ)–3; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಎಸ್.ಲಕ್ಷ್ಯಾ (ಬಿಎಸಿ, ಕಾಲ: 1ನಿ.13.67ಸೆ)–1, ಲಿನೇಷಾ ಎ.ಕೆ. (ಡಾಲ್ಫಿನ್)–2, ಮಾನವಿ ವರ್ಮಾ (ಡಾಲ್ಫಿನ್)–3; 100 ಮೀ. ಬಟರ್‌ಫ್ಲೈ: ತನಿಶಿ (ಕಾಲ: 1ನಿ.00.49ಸೆ)–1, ನೀನಾ ವೆಂಕಟೇಶ್–2, ನೈಶಾ ಶೆಟ್ಟಿ (ಎಸ್‌ಎಲ್‌ಎಸ್‌ಎ)–3; 400 ಮೀ. ಮೆಡ್ಲೆ: ತಾನ್ಯಾ ಎಸ್. (ಜೆಐಆರ್‌ಎಸ್, ಕಾಲ: 5ನಿ.08.65ಸೆ)–1, ಎಸ್.ಲಕ್ಷ್ಯಾ–2, ಅದಿತಿ ಎನ್.ಮುಲ್ಯೆ–3; 4x100 ಮಿಶ್ರ ಮೆಡ್ಲೆ ರಿಲೇ: ಬಿಎಸಿ (ಕಾಲ: 4ನಿ.09.49ಸೆ)–1, ಡಾಲ್ಫಿನ್–ಎ (4ನಿ.15.11ಸೆ)–2, ಡಾಲ್ಫಿನ್–ಬಿ (4ನಿ.16.21ಸೆ)–3.



ಕೂಟ ದಾಖಲೆ ನಿರ್ಮಿಸಿದ ಸಂಭ್ರಮದಲ್ಲಿ ಅನೀಶ್ ಎಸ್‌. ಗೌಡ ಚಿತ್ರ: ಪುಷ್ಕರ್ ವಿ.

ಟೆಸ್ಟ್ ಕ್ರಿಕೆಟ್: ಬಾಂಗ್ಲಾಕ್ಕೆ ಮಣಿದ ಪಾಕ್

ಢಾಕಾ (ಬಾಂಗ್ಲಾದೇಶ) (ಎಪಿ): ವೇಗಿ ನಹೀದ್ ರಾಣಾ ಅವರ ಐದು ವಿಕೆಟ್ ಗೊಂಚಲಿನ ನೆರವಿನಿಂದ ಬಾಂಗ್ಲಾದೇಶ ತಂಡವು ಮಂಗಳವಾರ ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಪಾಕಿಸ್ತಾನವನ್ನು 104 ರನ್‌ಗಳಿಂದ ಮಣಿಸಿತು. ಇದರೊಂದಿಗೆ ಎರಡು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಗೆಲುವಿಗೆ 268 ರನ್‌ಗಳ ಗುರಿ ಪಡೆದ ಪಾಕಿಸ್ತಾನ ತಂಡವು ನಹೀದ್ (40ಕ್ಕೆ 5) ದಾಳಿಗೆ ಸಿಲುಕಿ 163 ರನ್ ಗಳಿಸಿ ಹೋರಾಟ ಮುಗಿಸಿತು. ಇದು 24 ವರ್ಷದ ನಹೀದ್ ಅವರ ವೈಯಕ್ತಿಕ ಶ್ರೇಷ್ಠ ಬೌಲಿಂಗ್ ಸಾಧನೆಯಾಗಿದೆ.

ಎಡಗೈ ಬ್ಯಾಟರ್ ಅಬ್ದುಲ್ಲಾ ಫಜಲ್ (66;113ಎ) ಪದಾರ್ಪಣೆ ಪಂದ್ಯದಲ್ಲಿ ಪಾಕ್ ಪರ ಏಕಾಂಗಿ ಹೋರಾಟ ನಡೆಸಿದರು. ಅವರು ಎರಡೂ ಇನಿಂಗ್ಸ್‌ನಲ್ಲಿ ಅರ್ಧಶತಕ ದಾಖಲಿಸಿದರು.

ಮೊದಲ ಇನಿಂಗ್ಸ್‌ನಲ್ಲಿ 27 ರನ್‌ಗಳ ಮುನ್ನಡೆ ಪಡೆದಿದ್ದ ಬಾಂಗ್ಲಾ ತಂಡವು ಎರಡನೇ ಇನಿಂಗ್ಸ್‌ನಲ್ಲಿ 70.30 ಓವರ್‌ಗಳಲ್ಲಿ 9 ವಿಕೆಟ್‌ಗೆ 240 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತ್ತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 117.1 ಓವರ್‌ಗಳಲ್ಲಿ 413. ಪಾಕಿಸ್ತಾನ: 100.3 ಓವರ್‌ಗಳಲ್ಲಿ 386. ಎರಡನೇ ಇನಿಂಗ್ಸ್: ಬಾಂಗ್ಲಾದೇಶ: 70.3 ಓವರ್‌ಗಳಲ್ಲಿ 9ಕ್ಕೆ 240 ಡಿಕ್ಲೇರ್ಡ್. ಪಾಕಿಸ್ತಾನ: 52.5 ಓವರ್‌ಗಳಲ್ಲಿ 163 (ಅಬ್ದುಲ್ಲಾ ಫಜಲ್ 66; ನಹೀದ್ ರಾಣಾ 40ಕ್ಕೆ 5).

ಕರಣ್, ಪ್ರಜ್ವಲ್ ನಿರ್ಗಮನ

ಕರ್ನಾಟಕ ಓಪನ್ ಟೆನಿಸ್: ಕ್ರಿಶ್, ಮುಕುಂದ್ ಮುನ್ನಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪರ್ಧಾ ಕಣದಲ್ಲಿದ್ದ ಭಾರತದ ಅಗ್ರ ಕ್ರಮಾಂಕದ ಆಟಗಾರ ಕರಣ್ ಸಿಂಗ್ ಮತ್ತು ಮೈಸೂರಿನ ಎಸ್.ಡಿ. ಪ್ರಜ್ವಲ್ ದೇವ್ ಅವರು ಮಂಗಳವಾರ ಕರ್ನಾಟಕ ಓಪನ್ ಎಟಿಪಿ 50 ಚಾಲೆಂಜರ್ ಟೆನಿಸ್ ಟೂರ್ನಿಯ ಮೊದಲ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.

ಭರವಸೆಯ ಆಟಗಾರರಾದ ಕ್ರಿಶ್ ತ್ಯಾಗಿ, ಮುಕುಂದ್ ಶಶಿಕುಮಾರ್ ಮತ್ತು ಮನೀಶ್ ಸುರೇಶ್‌ಕುಮಾರ್ ಅವರು ಗೆಲುವಿನೊಂದಿಗೆ ಸಿಂಗಲ್ಸ್‌ನಲ್ಲಿ ಪ್ರಿಕ್ವಾರ್ಟರ್‌ಫೈನಲ್ ತಲುಪಿದರು.

ಕಬ್ಬನ್ ಪಾರ್ಕ್‌ನ ಎಸ್.ಎಂ. ಕ್ರಿಶ್ಣ ಟೆನಿಸ್ ಕ್ರೀಡಾಂಗಣದಲ್ಲಿ ನಡೆದ 32ರ ಘಟ್ಟದ ಪಂದ್ಯದಲ್ಲಿ ಜಪಾನ್‌ನ ಕೊಕೊರೊ ಐಸೊಮುರಾ 7–6 (6), 6–3 ರಿಂದ ಆರನೇ ಶ್ರೇಯಾಂಕದ ಕರಣ್ ಅವರಿಗೆ ಆಘಾತ ನೀಡಿದರು. ಹರಿಯಾಣದ ಆಟಗಾರ ಕರಣ್, ಮೊದಲ ಸೆಟ್‌ನಲ್ಲಿ ತೀವ್ರ ಪೈಪೋಟಿ ನೀಡಿ, ಟೈಬ್ರೇಕರ್‌ನಲ್ಲಿ ಸೋತರು. ಎರಡನೇ ಸೆಟ್‌ನಲ್ಲಿ ಕೊಕೊರೊ ನಿರಾಯಾಸವಾಗಿ ಗೆದ್ದು, ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ವೈಲ್ಡ್ ಕಾರ್ಡ್ ಪ್ರವೇಶ ಪಡೆದ ಕ್ರಿಶ್ 6–2, 7–5ರಿಂದ ಕ್ವಾಲಿಫೈಯರ್ ಆಟಗಾರ ತೈಯೊ ಯಮನಕಾ (ಜಪಾನ್) ಅವರನ್ನು ಮಣಿಸಿದರು. ಸ್ಥಳೀಯ ನೆಚ್ಚಿನ ಆಟಗಾರ ಮುಂದಿನ ಸುತ್ತಿನಲ್ಲಿ ಜಪಾನ್‌ನ ಯುತಾ ಕವಾಹಶಿ ಅವರನ್ನು ಎದುರಿಸಲಿದ್ದಾರೆ.

ಮುಕುಂದ್ 6–3, 7–6 (1) ರಿಂದ ಮಲೇಷ್ಯಾದ ಮಿತ್ಸುಕಿ ವೀ ಕಾಂಗ್ ಲಿಯಾಂಗ್ ಅವರನ್ನು ಸೋಲಿಸಿದರು. ಹೈದರಾಬಾದ್‌ನ ಈ ಆಟಗಾರ ಮುಂದಿನ ಸುತ್ತಿನಲ್ಲಿ ಎರಡನೇ ಶ್ರೇಯಾಂಕದ ಹ್ಯಾಮಿಶ್ ಸ್ಟೀವರ್ಟ್ (ಬ್ರಿಟನ್) ಅವರನ್ನು ಎದುರಿಸಲಿದ್ದಾರೆ.

ಮನೀಶ್ 6–4, 7–6 (7) ರಿಂದ ಅಮೆರಿಕದ ಕ್ವಾಲಿಫೈಯರ್ ಆಟಗಾರ ರೋನಿತ್ ಕರ್ಕಿ ಅವರನ್ನು ಹಿಮ್ಮೆಟ್ಟಿಸಿದರು. ತಮಿಳುನಾಡಿನ ಮನೀಶ್ 16ರ ಘಟ್ಟದ ಪಂದ್ಯದಲ್ಲಿ ಬ್ರಿಟನ್‌ನ ಕ್ವಾಲಿಫೈಯರ್ ಸ್ಪರ್ಧಿ ಅಲಾಸ್ಟೇರ್ ಗ್ರೇ ಅವರೊಂದಿಗೆ ಸೆಣಸಲಿದ್ದಾರೆ.

ಆದರೆ, ಅನುಭವಿ ಆಟಗಾರ ಪ್ರಜ್ವಲ್ ದೇವ್ ಅವರು ತವರಿನಂಗಳದ ಲಾಭ ಪಡೆಯಲು ವಿಫಲರಾದರು. ಅವರು 1–6, 4–6ರಿಂದ ಆಸ್ಟ್ರೇಲಿಯಾದ ಜೋಶುವಾ ಚಾರ್ಟನ್ ಅವರಿಗೆ ಸೋತರು. ನಾಲ್ಕನೇ ಶ್ರೇಯಾಂಕದ ಆಟಗಾರ, ಆಸ್ಟ್ರೇಲಿಯಾದ ಫಿಲಿಪ್ ಸೆಕುಲಿಕ್ ಅವರು 7–6 (5), 7–6 (5) ರಿಂದ ದಿಗ್ವಿಜಯ್ ಪ್ರತಾಪ್ ಸಿಂಗ್ ಅವರನ್ನು ಹಿಮ್ಮೆಟ್ಟಿಸಿದರು.



ಭಾರತದ ಕ್ರಿಶ್ ತ್ಯಾಗಿ 'ಎಕ್ಸ್' ಚಿತ್ರ

ಸಾತ್ವಿಕ್– ಚಿರಾಗ್ ಶುಭಾರಂಭ

ಬ್ಯಾಂಕಾಕ್ (ಪಿಟಿಐ): ಅಗ್ರಶ್ರೇಯಾಂಕದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿಯು ಮಂಗಳವಾರ ಥಾಯ್ಲೆಂಡ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ವಿಶ್ವದ ನಾಲ್ಕನೇ ಕ್ರಮಾಂಕದ ಭಾರತದ ಆಟಗಾರರು ಪುರುಷರ ಸಿಂಗಲ್ಸ್‌ನಲ್ಲಿ 21-19, 21-23, 21-10ರಿಂದ ಇಂಡೊನೇಷ್ಯಾದ ಮುಹಪುತ್ರ ಎರ್ವಿಯಾನ್ಸ್ಯಾ ಮತ್ತು ಬಾಗಸ್ ಮೌಲಾನಾ ಅವರ ಕಠಿಣ ಸವಾಲನ್ನು ಹಿಮ್ಮೆಟ್ಟಿಸಿ ಪ್ರಿಕ್ವಾರ್ಟರ್ ಫೈನಲ್ ತಲುಪಿದರು.

ಭಾರತದ ಜೋಡಿಯು ಮುಂದಿನ ಸುತ್ತಿನಲ್ಲಿ ಮಲೇಷ್ಯಾದ ಬ್ರಿಯಾನ್ ಜೆರೆಮಿ ಗೂಂಟಿಂಗ್ ಮತ್ತು ಮುಹಮ್ಮದ್ ಹೈಕಲ್ ಅವರನ್ನು ಎದುರಿಸಲಿದೆ. ಆ ಜೋಡಿಯು ಆರಂಭಿಕ ಸುತ್ತಿನಲ್ಲಿ 22–20, 21–13ರಿಂದ ಹಾಂಗ್‌ಕಾಂಗ್‌ನ ಹಂಗ್ ಕುಯಿ ಚುನ್ ಮತ್ತು ಲುಯಿ ಚುನ್ ವಾಯ್ ಅವರನ್ನು ಸೋಲಿಸಿತು.

ಪುರುಷರ ಸಿಂಗಲ್ಸ್ ಕ್ವಾಲಿಫೈಯರ್ ಪಂದ್ಯದಲ್ಲಿ ಮಾನವ್ ಚೌಧರಿ ನಿರಾಸೆ ಅನುಭವಿಸಿದರು.